ಹುಬ್ಬಳ್ಳಿ
ಬುಧವಾರ, 15 ಏಪ್ರಿಲ್ 2026
ಸಂಪುಟ 16, ಸಂಚಿಕೆ 21, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎಲ್ಲರಿಗೂ ನ್ಯಾಯ ಒದಗಿಸಲು ಬದ್ಧ | 02 ಗೋರ್ಖಾ ಸಮಸ್ಯೆಗೆ ಪರಿಹಾರ: ಶಾ | 02 ಬಿಹಾರಕ್ಕೆ ಬಿಜೆಪಿ ಸಿಎಂ ಸಾಮ್ರಾಟ್ | 02

2029ರ ಲೋಕಸಭೆ, ವಿಧಾನಸಭೆ ಕದನದಲ್ಲಿ ಮಹಿಳಾ ಮೀಸಲು

ಪ್ರಜಾಪ್ರಭುತ್ವಕ್ಕೆ ನಾರೀಶಕ್ತಿ

ದೇಶದ ಮಹಿಳೆಯರಿಗೆ ಪ್ರಧಾನಿ ಮೋದಿ ಪತ್ರ

ಹೊಸದಿಲ್ಲಿ: 2029ರ ಲೋಕಸಭೆ ಹಾಗೂ ವಿವಿಧ ವಿಧಾನಸಭೆಗಳ ಚುನಾವಣೆಯಲ್ಲಿ ಮಹಿಳಾ ಮೀಸಲು ಸಂಪೂರ್ಣವಾಗಿ ಜಾರಿಗೆ ಬಂದರೆ ಭಾರತೀಯ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಚೈತನ್ಯಮಯ ವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ದೇಶದ ಮಹಿಳೆಯರಿಗೆ ಬರೆದ ಪತ್ರದಲ್ಲಿ ಮೋದಿ ಅವರು, ಮಹಿಳೆಯರು ನೀತಿ ರೂಪಣೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ವಿಕಸಿತ ಭಾರತದತ್ತ ಸಾಗುವ ಪಯಣ ಇನ್ನಷ್ಟು ಬಲ ಪಡೆಯುತ್ತದೆ ಎಂದಿದ್ದಾರೆ. ಹೀಗಾಗಿ, ನಮ್ಮ ಅಭಿವೃದ್ಧಿಯ ಗತಿಗೆ ಮತ್ತಷ್ಟು ಶಕ್ತಿ ತುಂಬಲುಸಾಧ್ಯವಾದಎಲ್ಲವನ್ನೂ ಮಾಡುವುದು ಅಗತ್ಯವಾಗಿದೆ. ಅದಕ್ಕಾಗಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಸಂಪೂರ್ಣ ಅನಿವಾರ್ಯ ಎಂದು ಅವರು ಹೇಳಿದ್ದಾರೆ. ಈ ತತ್ವವೇ 2023ರಲ್ಲಿ 2023ರಲ್ಲಿ ನಾರೀಶಕ್ತಿ ವಂದನ್ ಅಧಿನಿಯಮ್ ಮಸೂದೆ ಅಂಗೀಕಾರಕ್ಕೆ ಕಾರಣ ವಾಯಿತು ಎಂದು ಅವರು ಹೇಳಿದರು. ಇದೇ ತತ್ವ ಈ ಸಂವಿಧಾನ ತಿದ್ದುಪಡಿಯ ಅಗತ್ಯತೆಯನ್ನು ತೋರಿಸುತ್ತದೆ ಎಂದರು.



ನಾರೀಶಕ್ತಿ ವಂದನ ಅಧಿನಿಯಮ

ಮತ್ತಷ್ಟು ವಿಳಂಬ ಬೇಡ: ಏ.16ರಿಂದ ಆರಂಭವಾಗುವ 3 ದಿನಗಳ ವಿಶೇಷ ಸಂಸತ್ ಅಧಿವೇಶನಗಳಲ್ಲಿ ಈ ಕಾನೂನು ತಿದ್ದುಪಡಿಗಳನ್ನು ಅಂಗೀಕರಿಸಬೇಕು ಎಂದು ಮೋದಿ ಹೇಳಿದರು. ಮತ್ತಷ್ಟು ವಿಳಂಬವು ದುರಾದೃಷ್ಟ ಕರವಾಗಿದ್ದು, ಭಾರತದ ಮಹಿಳೆಯರಿಗೆ ಅನ್ಯಾಯ ವಾಗುತ್ತದೆ ಎಂದರು. 2029ರ ಲೋಕಸಭೆ ಮತ್ತು ಆ ವರ್ಷ ನಡೆಯುವ ವಿವಿಧ ವಿಧಾನಸಭಾ ಚುನಾವಣೆಗಳು ಮಹಿಳಾ ಮೀಸಲು ಸಂಪೂರ್ಣ ಜಾರಿಗೆ ಬಂದು ನಡೆದರೆ, ನಮ್ಮ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಚೈತನ್ಯಮಯವಾಗುತ್ತದೆಎಂದುಅವರುತಮ್ಮಎಕ್ಸ್‌ಖಾತೆ ಯಲ್ಲಿ ಹಂಚಿಕೊಂಡ ಪತ್ರದಲ್ಲಿ ಹೇಳಿದ್ದಾರೆ. ➡ಪುಟ ೪

ಲೋಕಸಭೆ ಸ್ಥಾನ ಸಂಖ್ಯೆ 850ಕ್ಕೆ ಹೆಚ್ಚಳ ಶೀಘ್ರ

ಹೊಸದಿಲ್ಲಿ: ಮಹಿಳೆಯರಿಗೆ 33% ಮೀಸಲಾತಿ ನೀಡುವ ಉದ್ದೇಶದಿಂದ ನಾರೀಶಕ್ತಿ ವಂದನ್ ಅಧಿನಿಯಮ್‌ಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದ್ದು, ಈ ಮಸೂದೆಯ ಪ್ರತಿಯನ್ನು ಎಲ್ಲ ಸಂಸದರಿಗೂ ಕಳುಹಿಸಿರುವ ಪ್ರಧಾನಿ ಮೋದಿ ಬೆಂಬಲ ಕೋರಿದ್ದಾರೆ. ಈ ತಿದ್ದುಪಡಿಯ ಪ್ರಕಾರ, 2029ರ ಲೋಕಸಭಾ ಚುನಾವಣೆಗೆ ಮುನ್ನವೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಇಂದಿನ 543ರಿಂದ ಸುಮಾರು 850ರವರೆಗೆ ಹೆಚ್ಚಿಸಲಾಗುತ್ತದೆ. ಹೊಸ ಮಸೂದೆ ಪ್ರಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲೂ ಸ್ಥಾನಗಳನ್ನು ಹೆಚ್ಚಿಸಿ, ಒಟ್ಟು ಸ್ಥಾನಗಳಲ್ಲಿ 33% ಮಹಿಳೆಯರಿಗೆ ಮೀಸಲಿಡಲಾಗುತ್ತದೆ. ಈ ಮೀಸಲಾದ ಕ್ಷೇತ್ರಗಳನ್ನು ಪ್ರತಿ ಚುನಾವಣೆಯಲ್ಲೂ ವಿಭಿನ್ನ ಕ್ಷೇತ್ರಗಳಿಗೆ ಪರ್ಯಾಯವಾಗಿ ಹಂಚಿಕೆ ಮಾಡುವ ವ್ಯವಸ್ಥೆ ಇರಲಿದೆ. ಮಸೂದೆಯು ಸಂವಿಧಾನದ 81 ವಿಧಿಗೆ ತಿದ್ದುಪಡಿ ಮಾಡುವುದನ್ನು ಉದ್ದೇಶಿಸಿದೆ. ಅದರ ಪ್ರಕಾರ, ಲೋಕಸಭೆಯಲ್ಲಿ ರಾಜ್ಯಗಳಿಂದ ಗರಿಷ್ಠ 815 ಸದಸ್ಯರು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಗರಿಷ್ಠ 35 ಸದಸ್ಯರು ಇರಬಹುದು ಎಂದು ನಿರ್ಧರಿಸಲಾಗುತ್ತದೆ. ಜನಸಂಖ್ಯೆಯ ಆಧಾರವಾಗಿ ಕ್ಷೇತ್ರಗಳ ಮರುಹಂಚಿಕೆ ನಡೆಸಲಾಗುತ್ತದೆ. ➡ಪುಟ ೪



ಬೆಂಬಲಿಸಲು ಎಲ್ಲಾ ಪಕ್ಷಗಳಿಗೆ ಮೋದಿ ಮನವಿ

ನಾಳೆಯಿಂದ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನ

ಡೆಹ್ರಾಡೂನ್: ಮಹಿಳಾ ಮೀಸಲು ಕಾಯ್ದೆ ದೀರ್ಘಕಾಲದ ನಿರೀಕ್ಷೆಯ ನಂತರ ಎಲ್ಲಾ ಪಕ್ಷಗಳ ಬೆಂಬಲದೊಂದಿಗೆ ಅಂಗೀಕರಿಸಲ್ಪಟ್ಟಿದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿಯವರು, 2029ರ ಲೋಕಸಭೆ ಚುನಾವಣೆಯಲ್ಲಿ ಇದರ ಜಾರಿ ಖಚಿತಪಡಿಸಲು ಕಾನೂನು ತಿದ್ದುಪಡಿಗಳಿಗೆ ಬೆಂಬಲ ನೀಡುವಂತೆ ಎಲ್ಲ ಪಕ್ಷಗಳಿಗೆ ಮನವಿ ಮಾಡಿದ್ದಾರೆ. ದೇಶದ ಸಹೋದರಿಯರು ಮತ್ತು ಪುತ್ರಿಯರ ಹಕ್ಕುಗಳಿಗೆ ಸಂಬಂಧಿಸಿದ ಈ ಉಪಕ್ರಮವನ್ನು ಏಕಮತದಿಂದ ಮುಂದಕ್ಕೆ ತೆಗೆದುಕೊಂಡು ಹೋಗಲು ಎಲ್ಲಾ ರಾಜಕೀಯ ಪಕ್ಷಗಳು ಒಗ್ಗೂಡಲಿ ಎಂದು ಅವರು ಏ.16ರಿಂದ ಆರಂಭವಾಗುವ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನಗಳ ಮುನ್ನ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಭೈರವೈಕ್ಯ ಮಂದಿರ ಉದ್ಘಾಟನೆ ಇಂದು

ಪ್ರಧಾನಿ ಮೋದಿ ಸ್ವಾಗತಕ್ಕೆ ಜಿಲ್ಲಾಡಳಿತ ಸಿದ್ಧತೆ





ನಾಗಮಂಗಲ: ತಾಲೂಕಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ದ್ರಾವಿಡ-ಹೊಯ್ಸಳ ಶೈಲಿಯ ಶಿಲ್ಪಕಲೆಯಿಂದ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನೆಗೆ ಸಕಲ ರೀತಿಯಲ್ಲೂ ಸಜ್ಜಾಗಿದೆ. ಶ್ರೀಕ್ಷೇತ್ರದ ಪವಾಡ ಪುರುಷ ಡಾ.ಬಾಲಗಂಗಾಧರನಾಥ ಶ್ರೀಗಳ ಶ್ರೀ ಗುರು ಭೈರವೈಕ್ಯ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿಯವರು ಬುಧವಾರ ಲೋಕಾರ್ಪಣೆ ಮಾಡಲಿದ್ದಾರೆ.



ಸಾವಿರದ ಐನೂರು ವರ್ಷಗಳಿಗೂ ಮಿಗಿಲಾದ ಇತಿಹಾಸ ಹೊಂದಿರುವ ನಾಥಪರಂಪರೆಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಣ್ಯ ಕ್ಷೇತ್ರವಾಗಿರುವ ಆದಿಚುಂಚನಗಿರಿ ಮಠಕ್ಕೆ ಪ್ರಧಾನಿ ಮೋದಿ ಮೊದಲ ಬಾರಿಗೆ ಭೇಟಿ ನೀಡುತ್ತಿದ್ದಾರೆ. ಮೋದಿಯವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ಶ್ರೀಮಠ ಹಾಗೂ ಜಿಲ್ಲಾಡಳಿತ ಸಜ್ಜಾಗಿ ನಿಂತಿದೆ.

ಬೆಳಗ್ಗೆ 11ಕ್ಕೆ ಶ್ರೀಕ್ಷೇತ್ರಕ್ಕೆ ಪ್ರಧಾನಿ: ಬುಧವಾರ ಬೆಳಗ್ಗೆ 7.15ಕ್ಕೆ ದಿಲ್ಲಿ ವಿಮಾನ ನಿಲ್ದಾಣದಿಂದ ವಾಯುಪಡೆಯ ವಿಮಾನದಲ್ಲಿ ಬರಲಿರುವ ಮೋದಿ ಅವರು ಬೆಳಗ್ಗೆ 10.05ಕ್ಕೆ ಬೆಂಗಳೂರಿನ ಎಚ್‌ಎಎಲ್ ವಿಮಾನನಿಲ್ದಾಣತಲುಪಲಿದ್ದಾರೆ. ಬಳಿಕ ಹೆಲಿಕಾಪ್ಟರ್ ಮೂಲಕ ತೆರಳಿ ಬೆ.10.55ಕ್ಕೆ ಆದಿಚುಂಚನಗಿರಿ ಕ್ಷೇತ್ರದ ತಪೋವನದ ಆವರಣದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ. ➡ಪುಟ ೪

ಕಂಗೊಳಿಸುತ್ತಿರುವ ಆದಿಚುಂಚನಗಿರಿ ಮಠ

ಭೈರವೈಕ್ಯ ಡಾ.ಬಾಲಗಂಗಾಧರನಾಥ ಶ್ರೀ, ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಶ್ರೀ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರವುಳ್ಳ ಬೃಹತ್ ಕಟೌಟ್‌ಗಳು, ಓಂ ಚಿತ್ರವುಳ್ಳ ಕೇಸರಿ ಬಾವುಟಗಳು ಕ್ಷೇತ್ರದ ತುಂಬೆಲ್ಲಾ ರಾರಾಜಿಸುತ್ತಿವೆ. ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರದಿಂದ ಸಿಂಗಾರಗೊಂಡಿರುವ ಶ್ರೀಮಠ ವಿಶೇಷ ರೀತಿಯಲ್ಲಿ ಕಂಗೊಳಿಸುತ್ತಿದೆ.

ಭಾರೀ ಭದ್ರತೆ

ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನಲೆ ಶ್ರೀಮಠಕ್ಕೆ ಪ್ರವೇಶಿಸುವ ಎಲ್ಲಾ ಮಾರ್ಗಗಳನ್ನು ಮಂಗಳವಾರ ಬೆಳಗ್ಗಿಯಿಂದಲೇ ಬಂದ್ ಮಾಡಿ ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ. ಆದಿಚುಂಚನಗಿರಿ ಕ್ಷೇತ್ರದಾದ್ಯಂತ ಹಿಂದೆಂದೂ ಕಾಣದ ರೀತಿಯಲ್ಲಿ 2 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನೊಳಗೊಂಡ ಭದ್ರತೆ ಒದಗಿಸಲಾಗಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಸುಖೀ ಸಂಸಾರ ಎಂದರೆ, ಇಬ್ಬರು ಬುದ್ಧಿವಂತರ, ಸಹನಶೀಲರ ಸಮಾಗಮ.

▲ಸುಭಾಷಿತ

ಏಕಾತ್ಮತೆಯ ಸೂತ್ರದಿಂದ ಸಮನ್ವಯ ಸಾಧಿಸಿದ ಶಂಕರರು

ಪದ ಸಂಚಲನ

• ಡಾ.ವಿಶ್ವನಾಥ ಸುಂಕಸಾಳ

• ಪುಟ ೬

ಕಿರುಸುದ್ದಿ

ರಷ್ಯಾದ ಸೇನಾ ನೆಲೆ ವಶಕ್ಕೆ ಪಡೆದ ಉಕ್ರೇನ್ ರೋಬೋ

ಕೈವ್: ಉಕ್ರೇನ್ ತನ್ನ ಸೈನಿಕರನ್ನು ಬಳಸದೆ ಮತ್ತು ಯಾವುದೇ ಪ್ರಾಣಾಪಾಯವಿಲ್ಲದೆ, ಕೇವಲ ಮಾನವರಹಿತ ಭೂದಳ ಮತ್ತು ರೋಬೋಟ್‌ಗಳನ್ನು ಬಳಸಿಕೊಂಡು ರಷ್ಯಾದ ಸೇನಾ ನೆಲೆಯನ್ನು ಯಶಸ್ವಿಯಾಗಿ ವಶಪಡಿಸಿಕೊಂಡಿದೆ. ಈ ಕಾರ್ಯಾಚರಣೆಯ ನಂತರ ಶತ್ರು ಸೈನಿಕರು ಶರಣಾಗಿದ್ದಾರೆ ಎಂದು ಉಕ್ರೇನ್ ಹೇಳಿಕೊಂಡಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನೀಡಿರುವ ಮಾಹಿತಿಯಂತೆ, ಕಳೆದ ಮೂರು ತಿಂಗಳಲ್ಲಿ ರೇಟಲ್, ಟರ್ಮಿಟ್ ಮತ್ತು ಪ್ರೊಟೆಕ್ಟರ್ ಸೇರಿದಂತೆ ಉಕ್ರೇನ್‌ನ ಭೂದಳದ ರೋಬೋಟಿಕ್ ವ್ಯವಸ್ಥೆಗಳು 22,000 ಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿವೆ. ಸೈನಿಕರ ಬದಲಿಗೆ ರೋಬೋಟ್‌ಗಳನ್ನು ಅಪಾಯಕಾರಿ ಪ್ರದೇಶಗಳಿಗೆ ಕಳುಹಿಸುವ ಮೂಲಕ ಮಾನವ ಜೀವಗಳನ್ನು ಉಳಿಸಲು ಆದ್ಯತೆ ನೀಡಲಾಗುತ್ತಿದೆ ಎಂದಿದ್ದಾರೆ. ➡ಪುಟ ೪

30ರಿಂದ ಪಿಯು ಪರೀಕ್ಷೆ-2

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣಗೊಂಡಿರುವ ಅಥವಾ ಪರೀಕ್ಷೆಗೆ ಗೈರಾದ ಅಭ್ಯರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸದೇ ಏ.30 ರಿಂದ ಆರಂಭವಾಗಲಿರುವ ಪರೀಕ್ಷೆ-2ಕ್ಕೆ ಹಾಜರಾಗಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.

• ಪುಟ ೫

ಹಿಂದುಗಳ ವಿವಾಹವಾಗಿ, ಮತಾಂತರಕ್ಕೆ ಸಂಚು

• ಪುಟ ೭

ಸಿರಿಂಜ್ ಮರುಬಳಕೆ: 331 ಪಾಕ್ ಮಕ್ಕಳಿಗೆ ಎಚ್‌ಐವಿ!

• ಪುಟ ೭

ಛತ್ತೀಸ್‌ಗಢದಲ್ಲಿ ಬಾಯ್ಲರ್ ಸ್ಫೋಟಕ್ಕೆ 9 ಮಂದಿ ಸಾವು

• ಪುಟ ೭

ಆಸ್ಟ್ರೇಲಿಯಾ ಸೇನೆಗೆ ಮೊದಲ ಮಹಿಳಾ ಮುಖ್ಯಸ್ಥೆ

• ಪುಟ ೭

ಜಾತಿ ವಿಮುಕ್ತಿಗೆ ಶಿಕ್ಷಣ ಅಸ್ತ್ರ

• ಪುಟ ೫



ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಅಂಗವಾಗಿ ವಿಧಾನಸೌಧದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಚಿವ ಕೆ.ಎಚ್. ಮುನಿಯಪ್ಪ, ಶಾಸಕ ರಿಜ್ವಾನ್ ಅರ್ಷದ್ ಮೊದಲಾದವರಿದ್ದರು.

ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪ

ಸಿಎಂ ರಾಜಕೀಯ ಕಾರ್ಯದರ್ಶಿ ವಜಾ

ಬೆಂಗಳೂರು: ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪ ಹಿನ್ನೆಲೆಮುಖ್ಯಮಂತ್ರಿಗಳರಾಜಕೀಯಕಾರ್ಯದರ್ಶಿ ಹುದ್ದೆಯಿಂದ ವಿಧಾನಪರಿಷತ್ ಸದಸ್ಯ ನಜೀರ್ ಅಹಮದ್ ಅವರನ್ನು ವಜಾ ಮಾಡಲಾಗಿದೆ. ಈ ಸಂಬಂಧ ಸೋಮವಾರ ಆದೇಶ ಹೊರಡಿಸಲಾಗಿದ್ದು, 2023, ಜೂನ್ 1ರಂದು ನಜೀರ್ ಅಹಮದ್ ಅವರನ್ನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದ್ದು, ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸಚಿವರಾದ ಜಮೀರ್ ಅಹ್ಮದ್‌ಖಾನ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಜೀರ್ ಅಹ್ಮದ್, ಅಬ್ದುಲ್ ಜಬ್ಬಾರ್ ಪಕ್ಷದ ಪರ ಕೆಲಸ ಮಾಡಿಲ್ಲ. ➡ಪುಟ ೪

ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡದವರ ವಿರುದ್ಧ ಕ್ರಮ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಜೀರ್ ಅಹ್ಮದ್ ಅವರನ್ನು ಬಿಡುಗಡೆ ಮಾಡಿರುವ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ದಾವಣಗೆರೆ ಉಪಚುನಾವಣೆಯಲ್ಲಿ ನಜೀರ್ ಅಹಮದ್ ಅವರಿಗೆ ದಾವಣಗೆರೆಗೆ ತೆರಳಿ ಕೆಲಸ ಮಾಡುವಂತೆ ಸೂಚಿಸಲಾಗಿತ್ತು. ಹಾಗೆಯೇ ಎಲ್ಲರೂ ಸೇರಿ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿತ್ತು. ಇಷ್ಟಾದರೂ ಅವರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿಲ್ಲ ಎಂಬ ದೂರುಗಳು ಇದ್ದವು. ➡ಪುಟ ೪

ಎಲ್ಲರ ಸಾರ್ವಭೌಮತ್ವ ಗೌರವಿಸಿ

ಬೀಜಿಂಗ್: ಪಶ್ಚಿಮ ಏಷ್ಯಾ ಮತ್ತು ಗಲ್ಫ್ ಪ್ರದೇಶದ ಎಲ್ಲಾ ರಾಷ್ಟ್ರಗಳ ಸಾರ್ವಭೌಮತ್ವ, ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕೆಂದು ಯುಎಇ ರಾಜಕುಮಾರನ ಜತೆಗಿನ ಭೇಟಿ ವೇಳೆ ಒಗ್ಗಟ್ಟಿನ ಕರೆ ನೀಡಿದ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಅಮೆರಿಕ ಅಧ್ಯಕ್ಷರಿಗೆ ತಿರುಗೇಟು ನೀಡಿದ್ದಾರೆ. ಅಬುಧಾಬಿಯ(ಯುಎಇ) ರಾಜಕುಮಾರ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಅವರನ್ನು ಮಂಗಳವಾರ ಜಿನ್‌ಪಿಂಗ್ ಭೇಟಿಯಾದರು. ➡ಪುಟ ೪




ಹಿಂಸಾತ್ಮಕ ಪ್ರತಿಭಟನೆ ಹಿಂದೆ ಸಿಂಡಿಕೇಟ್ ಕೈವಾಡ ಶಂಕೆ

ನೋಯ್ಡಾ ಹಿಂಸೆ ಯೋಜಿತ ಕೃತ್ಯ

ಹೊಸದಿಲ್ಲಿ: ನೋಯ್ಡಾದೆಲ್ಲೆಡೆ ವೇತನ ಹೆಚ್ಚಳಕ್ಕಾಗಿ ಕಾರ್ಖಾನೆ ಕಾರ್ಮಿಕರು ಸೋಮವಾರ ನಡೆಸಿದ್ದ ಹಿಂಸಾತ್ಮಕ ಪ್ರತಿಭಟನೆಯು ಪೂರ್ವನಿಯೋಜಿತ ಕೃತ್ಯ ಮತ್ತು ಇದರ ಹಿಂದೆ ಸುಸಜ್ಜಿತ ಸಿಂಡಿಕೇಟ್ (ಸಂಘಟನೆ) ಕೈವಾಡದ ಸಾಧ್ಯತೆಯಿದೆ. ಪ್ರಕರಣದಲ್ಲಿ ಪಾಕಿಸ್ತಾನದ ಸಂಪರ್ಕ ಕುರಿತು ತನಿಖೆ ನಡೆಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತೆ ಲಕ್ಷ್ಮಿ ಸಿಂಗ್ ತಿಳಿಸಿದ್ದಾರೆ.

ವೇತನ ಹೆಚ್ಚಳಕ್ಕೆ ಒತ್ತಾಯಿಸಿ ಕಾರ್ಖಾನೆ ಕಾರ್ಮಿಕರು ಸೋಮವಾರ ನಡೆಸಿದ ಪ್ರತಿಭಟನೆ ಹಿಂಸಾತ್ಮಕ ರೂಪ ತಾಳಿತ್ತು. ಈ ವೇಳೆ ನೋಯ್ಡಾದ ಸೆಕ್ಟರ್-84, ಫೇಸ್-2ರಲ್ಲಿ ಪ್ರತಿಭಟನಾಕಾರರು ಹಿಂಸಾತ್ಮಕವಾಗಿ ವರ್ತಿಸಿದ್ದರು.

ಭಾರೀ ಕಲ್ಲು ತೂರಾಟ ನಡೆಸಿದ್ದು, ವಾಹನಗಳಿಗೆ ಬೆಂಕಿಹಚ್ಚಿ ಆಕ್ರೋಶ ಹೊರಹಾಕಿದ್ದರು. ಇಲ್ಲಿಯವರೆಗೆ 7 ಎಫ್‌ಐಆರ್ ಗಳನ್ನು ಪೊಲೀಸರು ದಾಖಲಿಸಿದ್ದು, ಸುಮಾರು 400 ಪ್ರತಿಭಟನಾಕಾರರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರತಿಭಟನೆ ನೆಪದಲ್ಲಿ ಹಿಂಸಾಚಾರ ನಡೆಸಲು ವ್ಯವಸ್ಥಿತ ಸಂಚು ರೂಪಿಸಿದ್ದು, ಇದಕ್ಕೆ ವಾಟ್ಸ್ಯಾಪ್ ಗ್ರೂಪ್‌ಗಳು ಮತ್ತು ಕಾಲ್ ಸೆಂಟರ್‌ನಂತಹ ವ್ಯವಸ್ಥೆ ಬಳಸಲಾಗಿತ್ತು. ➡ಪುಟ ೪



ವಾಟ್ಸ್ಯಾಪ್ ಗ್ರೂಪ್ ರಚನೆ

ನಗರದಲ್ಲಿ ಮಂಗಳವಾರ ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡ ಪೊಲೀಸ್ ಆಯುಕ್ತೆ, ಕಳೆದೆರಡು ದಿನಗಳಿಂದ ಕ್ಯೂಆರ್ ಕೋಡ್‌ಗಳನ್ನು ಬಳಸಿಕೊಂಡು ಹಲವು ವಾಟ್ಸ್ಯಾಪ್ ಗ್ರೂಪ್ ಗಳನ್ನು ರಚಿಸಲಾಗಿತ್ತು. ಈ ವಾಟ್ಸ್ಯಾಪ್ ಗ್ರೂಪ್ ಗಳನ್ನು ನೌಕರರನ್ನು ಸೇರಿಸಿಕೊಂಡಿದ್ದು, ಅವರ ಪಾತ್ರ ಮತ್ತು ಸಂಪರ್ಕಜಾಲ ಆಯೋಜಿಸಲು ಯೋಜನೆ ರೂಪಿಸಲಾಗಿತ್ತು. ಕೃತ್ಯದ ಹಿಂದೆ ಸುಸಜ್ಜಿತ ಸಂಘಟನೆಯೊಂದು ಸಕ್ರಿಯವಾಗಿತ್ತೆಂಬ ಸ್ಪಷ್ಟತೆ ಇಲ್ಲಿ ಸಿಗುತ್ತದೆ.

ಹಣಕಾಸಿನ ಮೂಲದ ತನಿಖೆ

■ 7 ಎಫ್‌ಐಆರ್ ದಾಖಲು
■ 400 ಪ್ರತಿಭಟನಾಕಾರರ ಸೆರೆ

ಹಿಂಸಾತ್ಮಕ ಪ್ರತಿಭಟನೆಗೆ ಯಾವ ಹೊರರಾಜ್ಯ ಅಥವಾ ರಾಷ್ಟ್ರಗಳಿಂದ ಹಣಕಾಸಿನ ನೆರವು ಪಡೆದಿದ್ದನ್ನು ತಿಳಿದುಕೊಳ್ಳಲು ಹಣಕಾಸಿನ ನೆರವಿನ ಮೂಲಗಳ ತನಿಖೆ ನಡೆಸಲಾಗುವುದು ಎಂದು ಪೊಲೀಸ್ ಆಯುಕ್ತೆ ಲಕ್ಷ್ಮಿ ಸಿಂಗ್ ತಿಳಿಸಿದ್ದಾರೆ.

ಮೋದಿಗೆ ಕರೆ ಮಾಡಿ 40 ನಿಮಿಷ ಟ್ರಂಪ್ ಚರ್ಚೆ

ಹೊಸದಿಲ್ಲಿ: ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಅಮೆರಿಕ-ಇರಾನ್ ಕದನ ವಿರಾಮ ಒಪ್ಪಂದ ವಿಫಲವಾದ ನಂತರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ಮೋದಿ ಅವರಿಗೆ ಮಂಗಳವಾರ ದೂರವಾಣಿ ಕರೆ ಮಾಡಿದ್ದಾರೆ. ಮೋದಿ ಜತೆ ಟ್ರಂಪ್ 40 ನಿಮಿಷ ಸುದೀರ್ಘ ಚರ್ಚೆ ನಡೆಸಿದ್ದಾರೆ. ಸ್ನೇಹಿತರಾದ ಅಧ್ಯಕ್ಷ ಟ್ರಂಪ್ ಅವರಿಂದ ಕರೆ ಸ್ವೀಕರಿಸಿದ್ದೆ. ವಿವಿಧ ಕ್ಷೇತ್ರಗಳಲ್ಲಿ ನಮ್ಮ ದ್ವಿಪಕ್ಷೀಯ ಸಹಕಾರದಲ್ಲಿನ ಸುಸ್ಥಿರ ಪ್ರಗತಿ ಪರಾಮರ್ಶೆ ನಡೆಸಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ ಸಮಗ್ರ ಜಾಗತಿಕ ಕಾರ್ಯತಾಂತ್ರಿಕ ಪಾಲುದಾರಿಕೆ ಬಲಗೊಳಿಸುವಲ್ಲಿ ನಾವು ಬದ್ಧರಾಗಿದ್ದೇವೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,55,000**(2,55,000) ಅಪರಂಜಿ ಚಿನ್ನ: **1,53,930**(1,52,460) ಆಭರಣ ಚಿನ್ನ: **1,41,100**(1,39,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹92.74

ಕಿರುಸುದ್ದಿ



ಕುಂದಗೋಳ : ಪಟ್ಟಣದಲ್ಲಿರುವ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಪುತ್ಥಳಿಗೆ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಿ ಅಂಬೇಡ್ಕರ್‌ರವರ 135ನೇ ಜಯಂತಿ ಆಚರಿಸಿದರು. ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಗುರು ಚಲವಾದಿ, ಬಸವರಾಜ ಮಾದರ, ರಾಮಣ್ಣ ಪೂಜಾರ, ಸಲಿಂ ಕ್ಯಾಲಕೊಂಡ, ಪರಶುರಾಮ ಚಲವಾದಿ, ಬಸವರಾಜ ದೊಡ್ಡಮನಿ, ಕೋಟೆಪ್ಪ ಕಡೆಮನಿ, ಮಂಜು ಸಣಘಪ್ಪನವರ, ಈರಪ್ಪ ನಾಗಣ್ಣವರ, ಮಂಜುನಾಥ ತಳಗೇರಿ, ದೇವಪ್ಪ ಕಾಳೆ, ಕಾಡಪ್ಪ ಮಾದರ ಮಂಜುನಾಥ ಹಿರೇಮಠ ಇದ್ದರು.

ಅಂಬೇಡ್ಕರ್‌ರ ಜೀವನ ಎಲ್ಲರಿಗೂ ಪ್ರೇರಣೆ



ನವಲಗುಂದ: ನಗರದ ತಾಪಂ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂರ್ತಿಗೆ 135ನೇ ಜಯಂತಿಯ ಅಂಗವಾಗಿ ಶಾಸಕ ಎನ್. ಎಚ್. ಕೋನರಡ್ಡಿ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ನಂತರ ನಗರದ ಕಾಂಗ್ರೆಸ್ ಭವನದಲ್ಲಿ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ, ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳಿಗಾಗಿ ಹೋರಾಡಿದ ಅವರ ಜೀವನ ನಮ್ಮೆಲ್ಲರಿಗೂ ಸದಾ ಪ್ರೇರಣೆಯಾಗಲಿ ಎಂದು ಅವರ ಆದರ್ಶಗಳನ್ನು ಸ್ಮರಿಸಿದರು. ಈ ಸಂದರ್ಭದಲ್ಲಿ ಸಿಪಿಐ ರವಿಕುಮಾರ ಕಪ್ಪತ್ತನವರ, ವರ್ಧಮಾನಗೌಡ ಹಿರೇಗೌಡ್ರ, ಉಸ್ಮಾನ ಬಬರ್ಚಿ, ರಾಜು ಹಳಿಯಾಳ, ಪ್ರೇಮಾ ನಾಯ್ಕರ, ಕುಮಾರ ಮಾದರ, ಶಿವು ಪೂಜಾರ, ಆನಂದ ಹವಳಕೋಡ, ನಂದಿನಿ ಹಾದಿಮನಿ, ಕಸ್ತೂರೆವ್ವ ರಾಯನಾಯ್ಕರ, ಕೃಷ್ಣ ಮಾದರ, ನಜೀರಾಬೇಗಂ ದಿವಾನಸಾಬನವರ, ಮಲ್ಲಿಕಾರ್ಜುನ ಕುರ್ತಕೋಟಿ, ಫಾರೂಕ್ ಮಶಾಯಿಕ, ಅಶ್ಫಕ್ ಚಾಮುಸೇನ್, ಬಸವರಾಜ ಹಿರಿಯನ್ನವರ, ಚೆನ್ನಯ್ಯ ಹೊಸಮಠ, ವೀರನಗೌಡ ಕಾಶಪ್ಪನವರ, ಉಮೇಶ ಹೊಸಮಠ, ಚೆನ್ನಬಸು ಹೊಸಕೇರಿ, ಶಿವಾನಂದ ಮಾದರ್, ವಾಸು ದೊಡಮನಿ, ಶಿವಪುತ್ರಪ್ಪ ಕೆಳಗೇರಿ, ಮಲ್ಲರಡ್ಡಿ ಕುರಹಟ್ಟಿ, ರಾಜಣ್ಣ ಹಳ್ಯಾಳ, ಶೇಷರಡ್ಡಿ, ಪಾಂಡುರಂಗ ಕುರಹಟ್ಟಿ, ಮಲ್ಲಿಕಾರ್ಜುನ ಕುರ್ತಕೋಟಿ, ಶಿವಾನಂದ ಹೂಗಾರ ಮುಂತಾದವರು ಉಪಸ್ಥಿತರಿದ್ದರು.



ಉಪ್ಪಿನ ಬೆಟಗೇರಿ: ಸ್ಥಳೀಯ ಸಾರ್ವಜನಿಕ ಗ್ರಂಥಾಲಯದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ 135ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಮೋಜಣಿದಾರ ಮಂಜುನಾಥ ಕೊಟಗಿ, ನನ್ನೆಸಾಬ ದೊಡವಾಡ ಮೇಲ್ವಿಚಾರಕ ಶ್ರೀಧರ್ ದೊಡಮನಿ, ಬಸವರಾಜ ದೊಡಮನಿ, ರವಿ ದೊಡಮನಿ, ಕಾಶೀನಾಥ್ ದೊಡಮನಿ ಇದ್ದರು.

ಪ್ರೀತಮ್ ಯಡಳ್ಳಿಗೆ ಶೇ.95.67ರಷ್ಟು ಅಂಕ

ಧಾರವಾಡ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅರ್ಜುನ ಪಿಯು ಕಾಲೇಜಿನ ಪ್ರೀತಮ್ ಉಮೇಶ ಯಡಳ್ಳಿ ಶೇ.95.67ರಷ್ಟು ಅಂಕ ಪಡೆದಿದ್ದಾನೆ. ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯದಲ್ಲಿ ನೂರರಷ್ಟು ಅಂಕ ಗಳಿಸಿ, ಕಾಲೇಜಿಗೆ ಕೀರ್ತಿ ತಂದಿದ್ದಾನೆ. ಐಐಟಿಯ ಅಧ್ಯಯನ ಮಹದಾಸೆ ಹೊತ್ತ ಈ ವಿದ್ಯಾರ್ಥಿ ಅಗತ್ಯ ತಯಾರಿ ನಡೆಸಿದ್ದಾನೆ. ಇತನಿಗೆ ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕರು ಅಭಿನಂದಿಸಿದ್ದಾರೆ.





ಹುಬ್ಬಳ್ಳಿ: ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನದ ಅಂಗವಾಗಿ ಬಿಜೆಪಿ ಧಾರವಾಡ ವಿಭಾಗೀಯ ಪ್ರಭಾರಿಯಾದ ಜಯತೀರ್ಥ ಕಟ್ಟಿ ಅವರು ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ತೈಲ ಸಮಸ್ಯೆ ಇತ್ಯರ್ಥಕ್ಕೆ ಆಗ್ರಹ

ಧಾರವಾಡ: ಅಡುಗೆ ಅನಿಲ ಸಮಸ್ಯೆ ಕುರಿತು ರಾಜ್ಯ ಸರ್ಕಾರ ಗಂಭೀರವಾಗಿ ಪರಿಣಿಸಿಲ್ಲ, ಏನೇ ಕೇಳಿದರೂ, ಪ್ರಧಾನಿ ನರೇಂದ್ರ ಮೋದಿ ಕಡೆಗೆ ಬೊಟ್ಟು ಮಾಡುವುದು ಸರಿಯಲ್ಲ ಎಂದು ಬಿಜೆಪಿ ಮುಖಂಡ ಪಿ.ಎಚ್.ನೀರಲಕೇರಿ ಕಿಡಿಕಾರಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಅಡುಗೆ ಅನಿಲ ವಿಷಯದಲ್ಲಿ ಕೇಂದ್ರ ಅಥವಾ ಸಂಬಂಧಿಸಿದ ಸಂಸ್ಥೆಗಳ ಜೊತೆಗೆ ರಾಜ್ಯ ಸರ್ಕಾರ ಸಮನ್ವಯ ಸಾಧಿಸಿಲ್ಲ, ವಿನಾಃಕಾರಣ ಕೇಂದ್ರ ಸರ್ಕಾರವನ್ನು ದೂಷಿಸುವುದು ಸರಿಯಲ್ಲ ಎಂದಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಅಡುಗೆ ಅನಿಲ ದಾಸ್ತಾನು ಇಲ್ಲ, ಪೂರೈಕೆಯೂ ಇಲ್ಲ ಎಂಬ ಮಾಹಿತಿ ಇದೆ. ಆದರೆ, ಅದೇ ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾರಾಟವಾಗುತ್ತಿವೆ ಎಂದು ಆಪಾದನೆ ಮಾಡಿದ್ದಾರೆ. ಗೃಹ ಬಳಕೆ ಸಿಲಿಂಡರ್ ಸಾವಿರ, ವಾಣಿಜ್ಯ ಬಳಕೆ ಸಿಲಿಂಡರ್ ರೂ.3500ರಂತೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣನಾ ಅಥವಾ ಕೇಂದ್ರ ಸರ್ಕಾರ ಕಾರಣವಾ? ಎಂದು ಬಹಿರಂಗಪಡಿಸಲು ಆಗ್ರಹಿಸಿದ್ದಾರೆ. ಉಭಯ ಸರ್ಕಾರಗಳು ಸಿಲಿಂಡರ್ ಕೊರತೆ ಇಲ್ಲ ಎನ್ನುತ್ತಿವೆ. ಆದರೆ, ರಾಜ್ಯದ ಬಹುತೇಕ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅನ್ನ-ಸಾಂಬರರ್ ಮಾತ್ರವೇ ನೀಡಲಾಗುತ್ತಿದೆ. ಹೀಗಾಗಿ ಈ ಸಮಸ್ಯೆ ಪರಿಹರಿಸುವಂತೆ ನೀರಲಕೇರಿ ಆಗ್ರಹ ಮಾಡಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ನಮ್ಮ ರಾಜ್ಯದಲ್ಲಿ ಆಗುತ್ತಿರುವ ಸಮಸ್ಯೆ ಗಂಭೀರತೆ ಅರಿತು ಈ ಬಗ್ಗೆ ಸತ್ಯಾಸತ್ಯೆ ಏನಿಂದು ತನಿಖೆಗೆ ಒಳಪಡಿಸಿ, ಸಮಸ್ಯೆ ಇತ್ಯರ್ಥಪಡಿಸುವಂತೆಯೂ ಒತ್ತಾಯಿಸಿದ್ದಾರೆ.



ಹುಬ್ಬಳ್ಳಿ: ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನದ ನಿಮಿತ್ತ ಇಲ್ಲಿಯ ಸ್ಟೇಶನ್ ರಸ್ತೆಯಲ್ಲಿರುವ ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಹು-ಧಾ ಮಹಾನಗರ ಪಾಲಿಕೆಯ ಉಪಮೇಯರ್ ಸಂತೋಷ ಚವ್ಹಾಣ ಮಾಲಾರ್ಪಣೆ ಮಾಡಿದರು. ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ, ಪಾಲಿಕೆ ಆಯುಕ್ತ ರುದ್ರೇಶ್ ಘಾಳಿ, ಉಪ ಆಯುಕ್ತ ವಿಜಯ್ ಕುಮಾರ್ ಆರ್. ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿ ಶಂಕರಾನಂದ ಬನಶಂಕರಿ, ಸಾರ್ವಜನಿಕ ಸಂಪರ್ಕಾಧಿಕಾರಿ (ಶಿಷ್ಟಾಚಾರ) ಉಮೇಶ ಸವಣೂರು, ಸಾರ್ವಜನಿಕ ಸಂಪರ್ಕಾಧಿಕಾರಿ ಗೀರಿಶ ತಳವಾರ ಇದ್ದರು.

ಡಾ.ಅಂಬೇಡ್ಕರ್‌ರ 135ನೇ ಜಯಂತಿ | ಸಚಿವ ಲಾಡ್ ಅಭಿಮತ

ಸಾಮಾಜಿಕ ನ್ಯಾಯಕ್ಕೆ ಮೀಸಲಾತಿ ಅಗತ್ಯ

ಧಾರವಾಡ: ಸಾಮಾಜಿಕ ನ್ಯಾಯ ಸಾಧಿಸಲು ಮೀಸಲಾತಿ ಅಗತ್ಯ. ಸಂವಿಧಾನ ರಚನೆ ಮೂಲಕ ಸಮಾನತೆ ಮತ್ತು ನ್ಯಾಯ ವ್ಯವಸ್ಥೆಗೆ ಅಡಿಪಾಯ ಹಾಕಿದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ್‌ಗೆ ಸಲ್ಲುತ್ತದೆ ಎಂದು ಸಚಿವ ಸಂತೋಷ ಲಾಡ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹು-ಧಾ ಮಹಾನಗರ ಪಾಲಿಕೆ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಭವನದಲ್ಲಿ ಮಂಗಳವಾರ ಹಮ್ಮಿಕೊಂಡ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಬಹುವರ್ಷಗಳ ಹಿಂದೆಯೇ ಭಾರತದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧ ಧ್ವನಿ ಎತ್ತಿದ ಡಾ.ಅಂಬೇಡ್ಕರ್, ಹಿಂದುಳಿದ ವರ್ಗಗಳ ಹಕ್ಕುಗಳಿಗೆ ಹೋರಾಡಿದರು. ಸಂವಿಧಾನ ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ, ಎಲ್ಲ ನಾಗರಿಕರ ಹಿತಕ್ಕಾಗಿದೆ ಎಂದರು.

ಮೀಸಲಾತಿ ಬರೀ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ವಿವಿಧ ದೇಶಗಳಲ್ಲಿ ವಿವಿಧ ರೂಪದಲ್ಲಿ ಜಾರಿಯಲ್ಲಿದೆ. ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಅವಕಾಶವನ್ನು ಕಲ್ಪಿಸಿ, ಮುಖ್ಯ ವಾಹಿನಿಗೆ ಕರೆತರುವುದು ಮೀಸಲಾತಿ ಉದ್ದೇಶವಾಗಿದೆ ಎಂದು ತಿಳಿಸಿದರು.

ಹೆಣ್ಣುಮಕ್ಕಳ ಹಕ್ಕುಗಳ ವಿಷಯದಲ್ಲಿ ಅಂಬೇಡ್ಕರ್ ಅವರ ಕೊಡುಗೆ ದೊಡ್ಡದಿದೆ. ಮಹಿಳೆಯರ ಆಸ್ತಿ ಹಕ್ಕು, ಮರು ವಿವಾಹ ಹಕ್ಕು, ಸಮಾನ ಅವಕಾಶ ನೀಡುವಲ್ಲಿ ಡಾ. ಅಂಬೇಡ್ಕರ್ ಅವರ ಪಾತ್ರ ಸ್ಮರಿಸಬೇಕಾಗಿದೆ ಎಂದು ಲಾಡ್ ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಸ್ನೇಹಲ್ ಮಾತನಾಡಿ, ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯ ಸ್ಥಾಪನೆಗೆ ಯುವ ಜನಾಂಗ ಹಕ್ಕುಗಳ ಜೊತೆ ಜವಾಬ್ದಾರಿಗಳನ್ನು ಅರಿಯಬೇಕು. ಶಿಕ್ಷಣ ದೊಡ್ಡ ಶಕ್ತಿ. ಹೀಗಾಗಿ ಅಡತಡೆಗಳು ದಾಟಿ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆ ಕುರಿತು ಉಪನ್ಯಾಸಕಿ ಮಲ್ಲಮ್ಮ ಯಾಟಗಲ್ ಉಪನ್ಯಾಸ ನೀಡಿದರು. ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ವೇದಿಕೆಯಲ್ಲಿ ವಿವಿಧ ನಿಗಮ ಮಂಡಳಿ ಅಧ್ಯಕ್ಷರಾದ ಶಾಕೀರ ಸನದಿ, ಅಡಿವೇಶ ಇಟಗಿ, ಎಸ್.ಆರ್.ಪಾಟೀಲ, ಪ್ರಕಾಶ ಹಳಿಯಾಳ, ಮಾಜಿ ಸಂಸದ ಐ.ಜಿ.ಸನದಿ, ಜಿಪಂ ಸಿಇಒ ಭುವನೇಶ ಪಾಟೀಲ, ವಿವಿಧ ಇಲಾಖೆ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.



ಭಾವಚಿತ್ರ ಮೆರವಣಿಗೆ

ಜಿಲ್ಲಾಧಿಕಾರಿ ಕಚೇರಿಯಿಂದ ಕವಿಸಂನ ಪಾಪು ಭವನವರೆಗೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಸಕಲ ವಾದ್ಯ ಮೇಳದೊಂದಿಗೆ ಜರುಗಿತು. ನಂತರ ಸಚಿವ ಸಂತೋಷ ಲಾಡ್, ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.



ಉಪ್ಪಿನ ಬೆಟಗೇರಿ: ಧಾರವಾಡ ತಾಲೂಕಿನ ಹನುಮನಹಾಳ ಗ್ರಾಮಸ್ಥರು ಮಂಗಳವಾರ ಡಾ. ಬಿ.ಆರ್ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ 135ನೇ ಜನ್ಮ ದಿನಾಚರಣೆ ಆಚರಿಸಿದರು. ಕರೇಪ್ಪ ಹುಲ್ಲೇನವರ, ಫಕ್ಕೀರಪ್ಪ ಸನದಿ, ರುದ್ರಗೌಡ ಹೊನ್ನಣ್ಣವರ, ಬಸವರಾಜ ಹೊಲ್ಲೇನ್ನವರ, ಸದಾನಂದ ಹಿರೇಮಠ, ಸಂತೋಷ ಮಾದರ, ಮಹೇಶ ಹುಲ್ಲೇನ್ನವರ ಇತರರಿದ್ದರು.

ಅಂಬೇಡ್ಕರ್ ನೀಡಿದ ಸಂವಿಧಾನ ಜಗತ್ತಿನಲ್ಲಿಯೇ ಶ್ರೇಷ್ಠ: ಮಹೇಶ

ಹುಬ್ಬಳ್ಳಿ: ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಇಡೀ ಜಗತ್ತಿನಲ್ಲಿಯೇ ಶ್ರೇಷ್ಠವಾಗಿದೆ. ಸಂವಿಧಾನದಿಂದಲೇ ಬುಡಕಟ್ಟು ಜನಾಂಗದ ಮಹಿಳೆ ರಾಷ್ಟ್ರಪತಿ ಹಾಗೂ ಚಾ ಮಾರುವ ವ್ಯಕ್ತಿ ಪ್ರಧಾನಿ ಮಂತ್ರಿಯಾಗಲು ಸಾಧ್ಯವಾಗಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ನಿಮಿತ್ತ ಇಲ್ಲಿಯ ಸ್ಟೇಶನ್ ರಸ್ತೆಯಲ್ಲಿರುವ ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಪ್ರಧಾನಿ ನರೇಂದ್ರ ಮೋದಿ ನಡೆಯುತ್ತಿದ್ದಾರೆ. ಕಾಂಗ್ರೆಸ್ ಬಿ.ಆರ್. ಅಂಬೇಡ್ಕರ್ ಅವರನ್ನು ಮತ ಬ್ಯಾಂಕ್ ಆಗಿ ಬಳಸಿಕೊಳ್ಳು ಪ್ರಯತ್ನ ಮಾಡುತ್ತಿದೆ. ಬಿಜೆಪಿ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ 5 ಸ್ಥಳಗಳ ಅಭಿವೃದ್ಧಿ ಮಾಡಿದೆ. ಅಂಬೇಡ್ಕರ್ ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ಆಡಳಿತ ಮಾಡುತ್ತಿದ್ದಾರೆ ಎಂದರು.

ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತ ಹರಿವಾಣ, ಮಂಜುನಾಥ ಬಿಜವಾಡ, ಸುಭಾಸ ಅಂಕಲಕೋಟ, ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ಲಕ್ಷ್ಮಣ ಬಿಳಗಿ, ಮಂಜುನಾಥ ಕಾಟಕರ, ರಾಜು ಜರತಾರಘರ, ರಾಜು ಕೋರ್ಯಾಣಮಠ, ಕಿಟ್ಟು ಬಿಜವಾಡ. ವೆಂಕಟೇಶ ಕಾಟವೆ, ಅರುಣ ಹುದಲಿ, ನಾಗರಾಜ ಟಗರಗುಂಟಿ, ಡಾ. ರವೀಂದ್ರ ಯಲಕಾನ, ರೇಣುಕಪ್ಪ ಕೆಲೂರ, ಪ್ರಮೋದ ಬಿಜವಾಡ ಇದ್ದರು.

ಬಿಜೆಪಿ ಕಚೇರಿಯಲ್ಲಿ: ಇಲ್ಲಿಯ ಕಾರವಾರ ರಸ್ತೆ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಶಾಸಕ ಮಹೇಶ ಟೆಂಗಿನಕಾಯಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮಾತನಾಡಿದ ಅವರು, ಸಮಾಜದಲ್ಲಿ ಎಲ್ಲರೂ ಸಮಾನತೆಯಿಂದ ಬದುಕುವಂತೆ ಮಾಡಿ ಸಮಾನತೆ ಹರಿಕಾರ ಡಾ. ಬಿ.ಆರ್. ಅಂಬೇಡ್ಕರ್. ಶೋಷಿತ ಜನಾಂಗ ಮುಂದೆ ತರಬೇಕು ಎಂದು ನಿರಂತರ ಹೋರಾಟ ಮಾಡಿದ್ದು, ಅವರೊಬ್ಬ ಮಹಾನ ವ್ಯಕ್ತಿ ಎಂದರು.

ಬಿಜೆಪಿ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತ ಹರಿವಾಣ, ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿ ಜಯತೀರ್ಥ ಕಟ್ಟಿ, ವಸಂತ ನಾಡ ಜೋಶಿ, ಶಿವ ಮೆಣಸಿನಕಾಯಿ, ಮುಖಂಡರಾದ ರವಿ ನಾಯಕ, ರಾಜು ಕೊರಿಯಾನ ಮಠ, ವೆಂಕಟೇಶ ಕಾಟವೆ ಸೇರಿದಂತೆ ಅನೇಕರಿದ್ದರು.



ಪ್ರತಿಭೆ, ಪರಿಶ್ರಮದ ತಿರಸ್ಕಾರ ಖೇದಕರ

ಹುಬ್ಬಳ್ಳಿ: ಇತ್ತೀಚೆಗೆ ಜಾತಿ, ಮತ, ಧರ್ಮದ ಹೆಸರಿನಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಾಗಿಯೂ ಪ್ರತಿಭೆ, ಪರಿಶ್ರಮದ ತಿರಸ್ಕಾರ ಮಾಡುತ್ತಿರುವುದು ಹೆಚ್ಚಿದ್ದು ಖೇದಕರ ಎಂದು ಸಾಹಿತಿ ಶ್ಯಾಮಸುಂದರ ಬಿದರಕುಂದಿ ಅಭಿಪ್ರಾಯಪಟ್ಟರು.

ಟಿ ಎಸ್ ಆರ್ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಸುರೇಂದ್ರ ದಾನಿ ಜನ್ಮಶತಮಾನೋತ್ಸವ ಸಮಿತಿ ವತಿಯಿಂದ ನಗರದ ಅರುಣ ದಾನಿ ಅವರ ನಿವಾಸದಲ್ಲಿ ನಡೆದ ಅವಲೋಕನ ಹಾಗೂ ಸಮಿತಿ ಸದಸ್ಯರ ಸಭೆಯಲ್ಲಿ ಮಾತನಾಡಿ, ಬಹುಮುಖಿ ವ್ಯಕ್ತಿತ್ವ ಹೊಂದಿದ್ದ ಸುರೇಂದ್ರ ದಾನಿ ಅವರ ನೆನಪಿನಲ್ಲಿ ಶತಮಾನೋತ್ಸವ ಕಾರ್ಯಕ್ರಮ ಯಶಸ್ವಿಯಾಗಿದ್ದು, ದಾನಿ ಅವರ ಹೆಸರು ಅಜರಾಮರವಾಗಿ ಇರಲು ಒಂದಿಷ್ಟು ಕೆಲಸ ಕಾರ್ಯ ಮಾಡಬೇಕು ಎಂದರು.

ಗದುಗಿನ ವೀರ ನಾರಾಯಣ ದೇಗುಲ ಆವಾರದಲ್ಲಿ ಒಂದು ಕುಮಾರ ವ್ಯಾಸನ ಸ್ಮಾರಕ, ಅವನ ಕೃತಿ ಪ್ರದರ್ಶನ, ಹಾಗೆಯೇ ಗಳಗನಾಥರ ಸ್ಮಾರಕ, ಧಾರವಾಡದ ಇತಿಹಾಸ ಮಂದಿರದಲ್ಲಿ ನಾ. ಶ್ರೀ. ರಾಜಪುರೋಹಿತ ಅವರ ಭಾವಚಿತ್ರ ಅಳವಡಿಕೆ ಮತ್ತು ವರ್ಷಕ್ಕೊಮ್ಮೆ ಆದರೂ ಗಮಕ ಸಮ್ಮೇಳನ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು.

ಬೇಂದ್ರೆ ಸ್ಮಾರಕ ಟ್ರಸ್ಟ್ ಸೇರಿದಂತೆ ಅನೇಕ ಸರ್ಕಾರಿ ಕೃಪಾ ಪೋಷಿತ ಟ್ರಸ್ಟ್ ಗಳು ಹೆಸರಿಗೆ ಮಾತ್ರ ಇದ್ದು, ರಚನಾತ್ಮಕ ಕಾರ್ಯ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಹಿರಿಯ ಪತ್ರಕರ್ತರಾದ ನಾರಾಯಣ ಗಳಗಿ, ಅರುಣಕುಮಾರ ಹಬ್ಬು, ಗೋಪಾಲ ಕೃಷ್ಣ ಹೆಗಡೆ, ಗಣೇಶ ಜೋಶಿ, ಶ್ರೀಪಾದ ಜೋಶಿ, ಮಲ್ಲಿಕಾರ್ಜುನ ಸಿದ್ದಣ್ಣವರ, ಕೆಯುಡಿ ಪತ್ರಿಕೋದ್ಯಮ ವಿಭಾಗದ ಚಂದೂನವರ, ಗಮಕಿ ಗಳಾದ ವಿಶ್ವನಾಥ ಕುಲಕರ್ಣಿ, ಮುಖಂಡರಾಧ ಸುಧೀಂದ್ರ ದೇಶಪಾಂಡೆ, ನರಸಿಂಹ ರಾವ್ ಸೋಮಲಪುರ, ಅರವಿಂದ ಕುರ್ತಕೋಟಿ, ಶಂಕರ ಪಾಟೀಲ್, ಸಿ. ಆರ್. ಜೋಶಿ ಸುರೇಂದ್ರ ದಾನಿ ಜನ್ಮ ಶತಮಾನೋತ್ಸವ ಕುರಿತು ಮಾತನಾಡಿದರು.

ಅಶೋಕ ದಾನಿ, ಶಶಿಕಲಾ ದಾನಿ, ವಕೀಲರಾದ ವಾರಂಗ, ರಮಾದೇವಿ ಸೇರಿದಂತೆ ಇನ್ನಿತರರು ಇದ್ದರು.

ಕೀರ್ತಿ ಕ್ಷೀರಸಾಗರ ಪ್ರಾರ್ಥಿಸಿದರು. ಶ್ರೀಕೃಷ್ಣ ಸಂಪಗಾಂವಕರ್ ಸ್ವಾಗತಿಸಿದರು. ಅಂಬರೀಷ ಹಾನಗಲ್ ಕಾರ್ಯಕ್ರಮದ ಲೆಕ್ಕಪತ್ರ ವರದಿ ವಾಚಿಸಿ, ಕಾರ್ಯಕ್ರಮ ನಿರೂಪಿಸಿದರು. ಅರುಣ ದಾನಿ ವಂದಿಸಿದರು.



ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು

ಕುಂದಗೋಳ: ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ರೈತರು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಇದೇ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ನೂತನ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ ಎಂದು ಶಾಸಕ ಎಂ.ಆರ್.ಪಾಟೀಲ ಹೇಳಿದರು.

ಮಂಗಳವಾರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಸುಮಾರು 30 ಲಕ್ಷ ರೂ.ಗಳ ಅನುದಾನದಲ್ಲಿ ನಿರ್ಮಾಣಗೊಳ್ಳುತ್ತಿರುವ ನೀರಿನ ಟ್ಯಾಂಕ್ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಮಾರುಕಟ್ಟೆಗೆ ದಿನನಿತ್ಯ ಆಗಮಿಸುವ ರೈತರು, ವ್ಯಾಪಾರಸ್ಥರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅತ್ಯಂತ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಹತ್ವದ್ದಾಗಿದೆ. ಮಾರುಕಟ್ಟೆ ಆವರಣವು ಸ್ವಚ್ಛವಾಗಿರುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಸಾರ್ವಜನಿಕರು, ವ್ಯಾಪಾರಸ್ಥರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಒದಗಿಸುತ್ತಿರುವ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ರೈತರ ಅನುಕೂಲಕ್ಕಾಗಿ ಮಾರುಕಟ್ಟೆ ಆವರಣದಲ್ಲಿ ಬ್ರಿಡ್ಜ್ ನಿರ್ಮಾಣ ಹಾಗೂ ಕೃಷಿ ಉತ್ಪನ್ನಗಳ ಸಂಗ್ರಹಣೆಗಾಗಿ ಶೈತ್ಯಾಗಾರ (ಕೋಲ್ಡ್ ಸ್ಟೋರೇಜ್) ಘಟಕ ಸ್ಥಾಪನೆಗೆ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಶೀಘ್ರದಲ್ಲೇ ಮನವಿ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಶಾಸಕ ಎಂ.ಆರ್. ಪಾಟೀಲ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾರುಕಟ್ಟೆ ವ್ಯವಸ್ಥಾಪಕ ವಿನಾಯಕ ಸೇರಿದಂತೆ ವ್ಯಾಪಾರಸ್ಥರಾದ ಶರಣಪ್ಪ ಅಂಗಡಿ, ಸಿರಾಜ್ ಕಡ್ಡಿ, ಗಣೇಶ ಕೋಕಾಟೆ, ಸತೀಶ ಪಾಟೀಲ, ಮಂಜುನಾಥ ಹಿರೇಮಠ, ವಾಗೀಶ ಮಣಕಟ್ಟಿಮಠ, ರಮೇಶ್ ಗದಗಿನ, ಸಿದ್ದು ಧಾರವಾಡಶೆಟ್ಟರ, ಗಿರೀಶ ಗದಗಿನ, ನಿಖಿಲ್ ಗಂಗಾಯಿ, ಗಣ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.



ಅಂಬೇಡ್ಕರ್ ಸಾಮಾಜಿಕ ನ್ಯಾಯದ ಹರಿಕಾರ ಡಾ. ಪ್ರಸಾದ

ಧಾರವಾಡ: ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ತೊಲಗಿಸಲು ಶ್ರಮಿಸಿದ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಸಾಮಾಜಿಕ ನ್ಯಾಯ ಹರಿಕಾರರು. ಶ್ರೇಷ್ಠ ಅರ್ಥಶಾಸ್ತ್ರಜ್ಞ ಹಾಗೂ ಸಮಾಜ ಸುಧಾರಕರು ಎಂದು ಜೆಎಸ್ಎಸ್ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಹೇಳಿದರು.

ನಗರದ ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ನಡೆದ ಡಾ. ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ ಉದ್ಘಾಟಿಸಿ, ದಮನಿತರ ಧ್ವನಿಯಾಗಿ ಅಂಬೇಡ್ಕರ್ ಸಾಕಷ್ಟು ಕೆಲಸ ಮಾಡಿದ್ದಾಗಿ ತಿಳಿಸಿದರು.

ಬಹಿಷ್ಕೃತ ಭಾರತ, ಹಿತಕಾರಿಣಿ ಸಭಾ ಸ್ಥಾನೆ ಹಾಗೂ ಮೂಕನಾಯಕ ಪತ್ರಿಕೆಗಳ ಮೂಲಕ ದಲಿತರ ಧ್ವನಿಯಾದವರು. ಕಾರ್ಮಿಕರ ಕೆಲಸದ ಅವಧಿ ಕಡಿತ, ಹೆರಿಗೆ ರಜೆ, ಮಹಿಳಾ ಹಕ್ಕುಗಳು ಹೀಗೆ ಸಮಾಜಕ್ಕೆ ಅಂಬೇಡ್ಕರ್ ಚಿಂತನೆಗಳು ದಾರಿದೀಪ ಎಂದರು.

ಉಪನ್ಯಾಸ ನೀಡಿದ ಡಾ. ಆರ್.ವಿ.ಚಿಟಗುಪ್ಪಿ, ಬಡತದಲ್ಲಿ ಜನಿಸಿದ ಅಂಬೇಡ್ಕರ್ ಅನೇಕ ಸವಾಲುಗಳು ಎದುರಿಸಿ, ಶಿಕ್ಷಣ ಪಡೆದು ಶ್ರೇಷ್ಠ ಸಂವಿಧಾನ ರಚಿಸಿದರು. ಸಮಾಜದಲ್ಲಿ ಸಮಾನತೆ ಬರಲು ಎಲ್ಲರಿಗೂ ಶಿಕ್ಷಣ ದೊರೆಯಬೇಕು ಎಂದು ಹೇಳಿದರು.

ಸರ್ವರಿಗೂ ಶಿಕ್ಷಣ, ಆರ್ಥಿಕ ಸುಧಾರಣೆಗೆ ಹೋರಾಡಿದರು. ಅಂಬೇಡ್ಕರ್ ಚಿಂತನೆಗಳು ದೇಶದ ಅಭಿವೃದ್ಧಿಗೆ ಪೂರಕ. ಸತತ ಪ್ರಯತ್ನ, ಸರಿಯಾದ ಯೋಜನೆ ಮೂಲಕ ಅಧ್ಯಯನ ಮಾಡಿದರೆ ವಿದ್ಯಾರ್ಥಿಗಳಿಗೆ ಯಶಸ್ಸು ಕಟ್ಟಿಟ್ಟಬುತ್ತಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜ್ಯೋತಿ ಅಕ್ಕಿ, ಶ್ರುತಿ ಶೆಟ್ಟಿ, ರೋನಿಲ್ ಮನೋಹರ್, ಶಿಲ್ಪಾ ನಾಯಕ, ಮುರುಳಿಧರ್ ಹೆಗಡೆ ಇದ್ದರು. ಮಹಾವೀರ ಉಪಾಧ್ಯೆ ನಿರೂಪಿಸಿ, ವಂದಿಸಿದರು.



ಡಾ. ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ

ಹುಬ್ಬಳ್ಳಿ: ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತೋತ್ಸವದ ಅಂಗವಾಗಿ ಶ್ರೀ ಸಮಗಾರ ಹರಳಯ್ಯ ಸಮಾಜ ಸುಧಾರಣಾ ಸಮಿತಿ (ರಿ), ಆನಂದನಗರ ಹುಬ್ಬಳ್ಳಿ ಇವರ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ್ ಟೆಂಗಿನಕಾಯಿ, ಮುಖಂಡ ಜಯತೀರ್ಥ ಕಟ್ಟಿ, ವೆಂಕಟೇಶ್ ಕಾಟವೆ, ನಾಗರಾಜ ಗೌರಿ, ಬಸವರಾಜ ಬಾಗಲಕೋಟಿ ಇಮ್ರಾನ ಎಲಿಗಾರ ಪುಷ್ಪ ನಮನ ಸಲ್ಲಿಸಿ ಗೌರವ ಸಲ್ಲಿಸಿದರು.

ಈ ಪವಿತ್ರ ಸಂದರ್ಭದಲ್ಲಿ ವೆಂಕಟೇಶ್ ಅಶೋಕ ಕಾಟವೆ ಅವರ ಫೌಂಡೇಶನ್ ವತಿಯಿಂದ ಸುಮಾರು ಐದು ನೂರು ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಮತ್ತು ಪರೀಕ್ಷಾ ಕಿಟ್‌ಗಳನ್ನು ವಿತರಿಸುವ ಮೂಲಕ, ಡಾ. ಅಂಬೇಡ್ಕರ್ ಅವರ ಶಿಕ್ಷಣದ ಮಹತ್ವದ ಸಂದೇಶವನ್ನು ಸಮಾಜಕ್ಕೆ ಮತ್ತೊಮ್ಮೆ ನೆನಪಿಸಲಾಯಿತು.

''ಶಿಕ್ಷಣ, ಸಂಘಟನೆ ಮತ್ತು ಹೋರಾಟ'' ಎಂಬ ಮಹಾನ್ ದಾರಿದೀಪವನ್ನು ನೀಡಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಸ್ಮರಣಾರ್ಥವಾಗಿ ನಡೆದ ಈ ಸೇವಾ ಕಾರ್ಯಗಳು, ಅವರ ಆದರ್ಶಗಳಿಗೆ ಸಲ್ಲಿಸಿದ ನಿಜವಾದ ಗೌರವವಾಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಶ್ರೀ ಸಮಗಾರ ಹರಳಯ್ಯ ಮಹಾಮಂಡಳ ಅಧ್ಯಕ್ಷ ರಾಜಶೇಖರ ಸಾಂಬ್ರಾಣಿ, ಆಡಳಿತ ಮಂಡಳಿಯ ಗೌರವ ಅಧ್ಯಕ್ಷರಾದ ಖಿಳಿ ಬ್ಯಾಹಟ್ಟಿ, ಬಸವರಾಜ ಬಾಗಲಕೋಟಿ, ಮುಖಂಡರಾದ ಪ್ರಭು ನವಲಗುಂದಮಠ, ಮಂಜುನಾಥ ಉಳ್ಳಿಕಾಶಿ, ಮಂಜುನಾಥ ಶಿರಹಟ್ಟಿ ಸೇರಿದಂತೆ ಶಾಲೆಯ ಮಕ್ಕಳು, ಪಾಲಕರು ಹಾಗೂ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



ನಗರದ ವಿವಿಧೆಡೆ ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ

ಹುಬ್ಬಳ್ಳಿ: ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನವನ್ನು ನಗರದ ವಿವಿಧ ಸಂಘ, ಸಂಸ್ಥೆಗಳು ಹಾಗೂ ಸರ್ಕಾರಿ ಕಚೇರಿಯಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ತಹಶೀಲ್ದಾರ ಕಚೇರಿ: ನಗರದ ಮಿನಿ ವಿಧಾನ ಸೌಧದ ತಹಶೀಲ್ದಾರ ಕಚೇರಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹುಬ್ಬಳ್ಳಿ ಶಹರ ತಹಶೀಲ್ದಾರ ಮಹೇಶ ಭಗವಂತ ಗಸ್ತೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಮುಖಂಡರಿಗೆ ಸನ್ಮಾನ ಮಾಡಲಾಯಿತು. ಹುಬ್ಬಳ್ಳಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಡಾ.ರಾಮಚಂದ್ರ ಹೊಸಮನಿ, ಗ್ರೇಡ್ 2 ತಹಶೀಲ್ದಾರ ಶಿವಾನಂದ ಹೆಬ್ಬಳ್ಳಿ, ಕನಕಪ್ಪ ದೊಡ್ಡಮನಿ, ಪ್ರಹ್ಲಾದ್ ಗೆಜ್ಜಿ, ನಿವೃತ್ತ ಪ್ರಾಧ್ಯಾಪಕ ಶಿವಾನಂದ ಕಲ್ಲೊಳ್ಳಿಕರ್, ಸಮಾಜದ ಮುಖಂಡರಾದ ಗುರುನಾಥ ಉಳ್ಳಿಕಾಶಿ, ಶೋಭಾ ವಂದಾಲ್, ಬಸವರಾಜ್ ದುಂದೂರು, ಶಿವಶಂಕರ್ ಭಂಡಾರಿ, ಮೇಘರಾಜ್ ಹಿರೇಮನಿ, ಗಂಗಾಧರ್ ಪೆರೂರು ಇದ್ದರು.

ಕಾಂಗ್ರೆಸ್ ವತಿಯಿಂದ: ಕಾಂಗ್ರೆಸ್ ಧಾರವಾಡ ಮಹಾನಗರ ಜಿಲ್ಲಾ ಎಸ್‌ಸಿ ಘಟಕದಿಂದ ಇಲ್ಲಿಯ ಸ್ಟೇಶನ್ ರಸ್ತೆಯಲ್ಲಿರುವ ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷ ಅಲ್ತಾಫ್ ಹಳ್ಳೂರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸದಾನಂದ ಡಂಗಣವರ್, ಸೇವಾದಳ ಅಧ್ಯಕ್ಷ ದೊಡ್ಡರಾಮಪ್ಪ ದೊಡ್ಡಮನಿ, ಗುರುನಾಥ್ ಉಪ್ಪಲದಡ್ಡಿ, ಅನಿಲ ಬುನಿಯೆನ್, ಶಾರುಖ್ ಮುಲ್ಲಾ ಇದ್ದರು.

ವಾಣಿಜ್ಯೋದ್ಯಮ ಸಂಸ್ಥೆ: ಇಲ್ಲಿಯ ಜೆ.ಸಿ. ನಗರದ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಉಪಾಧ್ಯಕ್ಷ ಪ್ರವೀಣ ಅಗಡಿ, ಸಿದ್ದೇಶ್ವರ ಜಿ. ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಇದ್ದರು.

ಆಮ್ ಆದ್ಮಿ ಪಾರ್ಟಿ: ಧಾರವಾಡ ಜಿಲ್ಲಾ ಆಮ್ ಆದ್ಮಿ ಪಾರ್ಟಿಯಿಂದ ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಇಲ್ಲಿಯ ಸ್ಟೇಶನ್ ರಸ್ತೆಯಲ್ಲಿರುವ ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಲಾಯಿತು.

ಜಿಲ್ಲಾಧ್ಯಕ್ಷರಾದ ಬಸವರಾಜ ತೇರದಾಳ, ಮಲ್ಲಪ್ಪ ತಡಸದ. ಕಿಶೋರ್ ಶೆಟ್ಟಿ, ಸಂಜು ಬೆಳಗೆರೆ ಇದ್ದರು.

ಡಾ. ಆರ್.ಬಿ. ಪಾಟೀಲ ಕಾಲೇಜ್: ಸಂವಿಧಾನಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿಯನ್ನು ನಗರದ ಡಾ. ಆರ್. ಬಿ. ಪಾಟೀಲ ಮಹೇಶ ಪಪೂ ಕಾಲೇಜಿನಲ್ಲಿ ಆಚರಿಸಲಾಯಿತು. ಪ್ರಾಚಾರ್ಯ ರಾಮಮೋಹನ್ ಹೆಚ್. ಕೆ., ಕನ್ನಡ ವಿಭಾಗದ ಪ್ರಾಧ್ಯಾಪಕ ದ್ಯಾಮಣ್ಣ ಚೌಡಾಳ, ಉಪಪ್ರಾಚಾರ್ಯ ರಮೇಶ ಹೊಂಬಾಳಿ ಇದ್ದರು.

ರಾಜ್ಯ ಹಿಂದೂ ಸೇನಾ ಸಂಘಟನೆ: ಇಲ್ಲಿಯ ಗೋಕುಲ ರಸ್ತೆ ಅಕ್ಷಯ ಪಾರ್ಕ ವೃತ್ತದಲ್ಲಿ ರಾಜ್ಯ ಹಿಂದು ಸೇನಾ ಸಂಘಟನೆ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನ ಆಚರಿಸಲಾಯಿತು. ಬೈಕ್ ರ್‍ಯಾಲಿಗೆ ಸರ್ ಸಿದ್ದಪ್ಪ ಕಂಬಳಿ ಮೆಮೋರಿಯಲ್ ಟ್ರಸ್ಟ್ ಕಾರ್ಯದರ್ಶಿ ಲಿಂಗರಾಜ ಕಂಬಳಿ ಚಾಲನೆ ನೀಡಿದರು. ವಿನಾಯಕ ಮಾಲದಕರ, ರಾಜಶೇಖರ ಮೆಣಸಿನಕಾಯಿ ಇದ್ದರು.

ಕಾಡಸಿದ್ದೇಶ್ವರ ಕಾಲೇಜನಲ್ಲಿ: ಇಲ್ಲಿಯ ವಿದ್ಯಾನಗರ ಕೆಎಲ್‌ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್.ಕೊತಂಬರಿ ವಿಜ್ಞಾನ ಸಂಸ್ಥೆಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು.

ಜೆಡಿಎಸ್ ವತಿಯಿಂದ: ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ಜನತಾದಳ ಜಾತ್ಯತೀತ ಪಕ್ಷದ ಧಾರವಾಡ ಜಿಲ್ಲಾ ಗ್ರಾಮೀಣ ಘಟಕದ ಎಸ್.ಸಿ ವಿಭಾಗದ ವತಿಯಿಂದ ಹುಬ್ಬಳ್ಳಿ ನಗರದಲ್ಲಿರುವ ಡಾ. ಬಿ ಆರ್ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ ಆಚರಿಸಲಾಯಿತು.

ಧಾರವಾಡ ಜಿಲ್ಲಾ ಗ್ರಾಮೀಣ ಜೆಡಿಎಸ್ ಪರಿಶಿಷ್ಟ ಜಾತಿ (ಎಸ್‌ಸಿ) ವಿಭಾಗದ ಅಧ್ಯಕ್ಷ ವಿನಾಯಕ ಗಾಡಿವಡ್ಡರ, ಧಾರವಾಡ ಜಿಲ್ಲಾ ಗ್ರಾಮೀಣ ಜೆಡಿಎಸ್ ಮಹಾಪ್ರಧಾನಕಾರ್ಯದರ್ಶಿ ನವೀನಕುಮಾರ ಮಡಿವಾಳರ, ಗೋಪಾಲ ನಿರಣಕಿ ಇದ್ದರು.



ಪ್ರಾಣಿ-ಪಕ್ಷಿಗಳಿಗೆ ನೀರು | ರೋಟರಿ ಕ್ಲಬ್, ಪಾರಿಕ್ ಪ್ರಸೆಂಟೇಷನ್ ಕಾರ್ಯಕ್ಕೆ ಮೆಚ್ಚುಗೆ

ಅರಣ್ಯ ಪ್ರದೇಶದ ವಿವಿಧೆಡೆ ಸಿಮೆಂಟ್ ತೊಟ್ಟಿ ಅಳವಡಿಕೆ

ದಾಂಡೇಲಿ: ನಗರದ ರೋಟರಿ ಕ್ಲಬ್ ಮತ್ತು ಪಾರಿಕ್ ಪ್ರಸೆಂಟೇಷನ್ ಸಹಯೋಗದೊಂದಿಗೆ ಅರಣ್ಯ ಇಲಾಖೆಯ ಸಹಕಾರದಲ್ಲಿ ಬೇಸಿಗೆಯಲ್ಲಿ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ಕುಡಿಯುವ ನೀರಿಗಾಗಿ ದಾಂಡೇಲಿ ಹಾಗೂ ಸುತ್ತಮುತ್ತಲ ಅರಣ್ಯ ಪ್ರದೇಶದ ವಿವಿದೆಡೆ ಕುಡಿಯುವ ನೀರಿನ ಸಿಮೆಂಟ್ ತೊಟ್ಟಿಗಳನ್ನು ಅಳವಡಿಸಿ, ನೀರು ತುಂಬಿಸಿಡುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಒಂದೆಡೆ ದಿನದಿಂದ ದಿನಕ್ಕೆ ಏರುತ್ತಿರುವ ತಾಪ, ಬಿಸಿಲಿನ ಬೇಗೆಗೆ ಪ್ರಾಣಿ ಪಕ್ಷಿಗಳಿಗೆ ಕುಡಿಯುವ ನೀರಿನ ತೊಂದರೆಯಾಗಬಾರದೆಂಬ ಸದುದ್ದೇಶದಿಂದ ಕುಡಿಯುವ ನೀರಿನ ಸಿಮೆಂಟ್ ತೊಟ್ಟಿಗಳನ್ನು ನಿರ್ಮಿಸಿ, ಕಾಲಕಾಲಕ್ಕೆ ನೀರನ್ನು ತುಂಬಿಸಿಡುವ ಮೂಲಕ ಪರಿಸರ ಕಾಳಜಿಯನ್ನು ಅತ್ಯಂತ ಬದ್ಧತೆಯಿಂದ ಮಾಡುವ ನಿಟ್ಟಿನಲ್ಲಿ ರೋಟರಿ ಕ್ಲಬ್ ಮತ್ತು ಪಾರಿಕ್ ಪ್ರಸೆಂಟೇಷನ್ ಮುಂದಡಿಯಿಟ್ಟಿರುವುದಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ದಾಂಡೇಲಿಯ ಬರ್ಚಿ, ಸೋಮಾನಿ ವೃತ್ತ, ರುದ್ರಭೂಮಿ, ಮೋಹಿನಿ ವೃತ್ತ, ಕೇರವಾಡ ಕ್ರಾಸ್ ಮತ್ತು ಅಂಬಿಕಾನಗರ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬಾಳಿಕೆ ಬರುವ ಸಿಮೆಂಟ್ ತೊಟ್ಟಿಗಳನ್ನು ಇರಿಸಲಾಯಿತು.



ಈ ವಿನೂತನ ಮಾನವೀಯ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ಆಶುತೋಷ್ ಕುಮಾರ್ ರಾಯ್, ಕಾರ್ಯದರ್ಶಿ ಮಿಥುನ್ ನಾಯಕ, ರೋಟರಿ ಪ್ರಮುಖರಾದ ಡಾ. ಜ್ಞಾನದೀಪ್ ಗಾಂವಕರ, ರಾಜೇಶ್ ತಿವಾರಿ, ಪ್ರಕಾಶ ಕನ್ನೆಹಳ್ಳಿ, ವೆಂಕಟೇಶ ಪಾಂಡೆ ಮತ್ತು ರಾಧೇಶ್ಯಾಮ್ ರಾಠಿ, ಪಾರೀಕ್ ಪ್ರಸೆಂಟೇಶನಿನ ಗೋವಿಂದ ಪಾರೀಕ್ ಹಾಗೂ ಸಹದ್ಯೋಗಿಗಳು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸ್ಥಳೀಯ ಸಾರ್ವಜನಿಕರು ಉಪಸ್ಥಿತರಿದ್ದರು.

ಕಿರುಸುದ್ದಿ

ರಾಷ್ಟ್ರ ಮಟ್ಟಕ್ಕೆ ಆಯ್ಕೆ

ಮಹಾಲಿಂಗಪುರ: ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಏ.13ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಗ-20 ಆಯ್ಕೆ ಪ್ರಕ್ರಿಯೆಯ ಕ್ರೀಡಾಕೂಟದ 400 ಮೀ.ಹರ್ಡಲ್ಸ್ ಓಟದಲ್ಲಿ ಸ್ಥಳೀಯ ಅಕ್ಷರ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ,ಅಕ್ಷರ ಸ್ಪೋರ್ಟ್ಸ್ ಅಕಾಡೆಮಿಯ ಕ್ರೀಡಾಪಟು ಪ್ರಜ್ವಲ್



ಧರೆಪ್ಪ ಬ್ಯಾಕೋಡ ಇವರು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇದೇ ತಿಂಗಳು 24 ರಿಂದ 26ರವರೆಗೆ ತುಮಕೂರು ಜಿಲ್ಲೆಯ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವರು. ಸಮೀಪದ ಕೆಸರಗೊಪ್ಪ ಗ್ರಾಮದ ಶಿಕ್ಷಕ ದಂಪತಿಗಳಾದ ಧರೆಪ್ಪ ಬ್ಯಾಕೋಡ ಮತ್ತು ಸವಿತಾ ಬ್ಯಾಕೋಡ ಅವರ ಪುತ್ರ.

ಮೂರು ಅನಾಥ ಶವ ಪತ್ತೆ

ಧಾರವಾಡ: ತಾಲೂಕಿನ ಪ್ರತ್ಯೇಕ ಸ್ಥಳಗಳಲ್ಲಿ ಮಂಗಳವಾರ ಎರಡು ಹಾಗೂ ಒಂದು ನಗರ ಪ್ರದೇಶ ಸೇರಿ ಒಟ್ಟು ಮೂರು ಅನಾಥ ಶವ ಪತ್ತೆಯಾಗಿವೆ. ಒಂದು ಶವ ನರೇಂದ್ರ ಬೈಪಾಸ್ ಹತ್ತಿರ, ಮತ್ತೊಂದು ಹಾರೋಬೆಳವಡಿ ಹತ್ತಿರ, ಮಗದೊಂದು ಧಾರವಾಡ ಸಿಬಿಟಿ ಹತ್ತಿರ ಪತ್ತೆಯಾಗಿವೆ. ಈ ಕುರಿತು ಧಾರವಾಡ ಗ್ರಾಮೀಣ ಮತ್ತು ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಸಿಂಧನೂರು: ವ್ಯಕ್ತಿಯೋರ್ವ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಚೆನ್ನಳ್ಳಿ ಗ್ರಾಮದ ಹೊರವಲಯದಲ್ಲಿ ನಡೆದಿದೆ.ಕಾರಟಗಿ ಪಕ್ಕದ ರಾಘವೇಂದ್ರ ಕ್ಯಾಂಪಿನ ನಿವಾಸಿ ವೆಂಕಟೇಶ್ವರರಾವ್ (55) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಈತ ಬೇರೆಯವರ ಹೊಲ, ಗದ್ದೆಗಳನ್ನು ಗುತ್ತಿಗೆ ಪಡೆದು ಕೃಷಿ ಮಾಡುತ್ತಿದ್ದ ಎಂದು ತಿಳಿದು ಬಂದಿದ್ದು, ಖಾಸಗಿಯವರ ಬಳಿ ಸಾಲ ಮಾಡಿಕೊಂಡು ಸಾಲಬಾಧೆಯಿಂದ ಖಿನ್ನತೆಗೊಳಗಾಗಿ ಆತ್ಮಹತ್ಯೆ ಗೆ ಶರಣಾಗಿದ್ದಾನೆ ಎನ್ನಲಾಗಿದೆ. ಈ ಘಟನಾ ಸ್ಥಳಕ್ಕೆ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್ಐ ಮೌನೇಶ ರಾಠೋಡ್ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಾಲಕ ಸಾವು

ಸಿರುಗುಪ್ಪ: ಸ್ಕಾರ್ಪಿಯೋ ವಾಹನ ಡಿಕ್ಕಿ ಹೊಡೆದ ಪರಿಣಾಮ 12 ವರ್ಷದ ಬಾಲಕ ಮೃತಪಟ್ಟ ಘಟನೆ ತಾಲೂ ಕಿನ ಚಿಕ್ಕಬಳ್ಳಾರಿ ಕ್ರಾಸ್‌ನಲ್ಲಿ ಸೋಮ ವಾರ ಮಧ್ಯಾಹ್ನ ನಡೆದಿದೆ. ಚಿಕ್ಕ ಬಳ್ಳಾರಿ ಗ್ರಾಮದ ಶೇಖಣ್ಣ ಅವರ ಪುತ್ರ ಸುಭಾಸ್‌ಚಂದ್ರ ಬೋಸ್ (12) ಮೃತಪಟ್ಟ ಮಗು. ಅಘಾತದ ಬಳಿಕ ಆಸ್ಪತ್ರೆಗೆ ಸಾಗಿಸುವ ಮಾರ್ಗ



ಮಧ್ಯದಲ್ಲೇ ಮಗು ಮೃತಪಟ್ಟಿದೆ. ಈ ಕುರಿತು ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಶದಲ್ಲೇ ಮೊದಲ ಪ್ರಯೋಗ | ಸಚಿವ ಜಾರಕಿಹೊಳಿ ಮಾಹಿತಿ

₹20 ಕೋಟಿ ಅನುದಾನದಲ್ಲಿ ಬಡಾವಣೆ

ಬೆಳಗಾವಿ: ಸುಮಾರು 20 ವರ್ಷಗಳಿಂದ ಎಸ್‌ಸಿ,ಎಸ್‌ಟಿ ಸಮುದಾಯದವರಿಗೆ ನಿವೇಶನ ಮಂಜೂರು ಮಾಡಲಾಗುತ್ತಿದೆ. ಆದರೆ, ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುತ್ತಿರಲಿಲ್ಲ. ಹಾಗಾಗಿ ರಸ್ತೆ, ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಸಕಲ ಮೂಲಸೌಕರ್ಯ ಹೊಂದಿರುವ ಬಡಾವಣೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಅಭಿವೃದ್ಧಿ ಪಡಿಸುವಂತಹ ಯೋಜನೆ ದೇಶದಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸಚಿವ ಜಾರಕಿಹೊಳಿ ತಿಳಿಸಿದರು.

ಡಾ.ಬಾಬಾಸಾಹೇಬ್ ಜನ್ಮದಿನಾಚರಣೆ ಅಂಗವಾಗಿ ನಗರದ ಡಾ.ಅಂಬೇಡ್ಕರ್ ಉದ್ಯಾನದಲ್ಲಿ ಡಾ.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಿಂದ ಸುಮಾರು 20 ಕೋಟಿ ರೂ. ಅನುದಾನ ಬಳಕೆ ಮಾಡಿಕೊಂಡು ಬುದ್ಧ ಬಸವ ಅಂಬೇಡ್ಕರ್ ನಿವೇಶನ ಹಂಚಿಕೆ ಯೋಜನೆ ಖಾಸಗಿ ಮಾದರಿಯಲ್ಲಿ ಬಡಾವಣೆ ನಿರ್ಮಾಣ ಮಾಡಲಾಗುವುದು ಎಂದರು.

ಫಲಾನುಭವಿಗಳ ಆಯ್ಕೆ ಮತ್ತು ನಿವೇಶನ ಹಂಚಿಕೆಯು ಸದ್ಯಕ್ಕೆ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಆಯಾ ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸಲಿದ್ದು, ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿದ ಜಾಗದಲ್ಲಿ ಕೇವಲ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ಸಂಬಂಧಿಸಿದ ಪಂಚಾಯತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಿದೆ. ಫಲಾನುಭವಿಗಳ ಆಯ್ಕೆ ಅಥವಾ ಹಂಚಿಕೆಯಲ್ಲಿ ಲೋಕೋಪಯೋಗಿ ಇಲಾಖೆಯ ಪಾತ್ರವಿರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ರಾಜ್ಯದ ಪರಿಶಿಷ್ಟ ಜಾತಿ, ಪಂಗಡಗಳ ಜನರಿಗೆ ಖಾಸಗಿ ಬಡಾವಣೆ ಮಾದರಿಯಲ್ಲಿ ಸಕಲ ಮೂಲಸೌಕರ್ಯ ಹೊಂದಿರುವ ಬಡಾವಣೆ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಹಂಚಿಕೆ ಮಾಡಲು ಬುದ್ಧ, ಬಸವ, ಅಂಬೇಡ್ಕರ್ ನಿವೇಶನ ಹಂಚಿಕೆ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದರು.



> ನಗರಸಭೆ, ಪಟ್ಟಣ ಪಂಚಾಯತಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ. ಸದ್ಯದಲ್ಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು.
> ■ ಸತೀಶ ಜಾರಕಿಹೊಳಿ, ಸಚಿವ

ಒಂದು ಸಾವಿರ ಎಕರೆ ಅಭಿವೃದ್ಧಿ: ಪ್ರಾಯೋಗಿಕವಾಗಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಸಾಧಕ-ಬಾಧಕಗಳನ್ನು ಪರಿಶೀಲಿಸಿ ರಾಜ್ಯದಾದ್ಯಂತ ಒಂದು ಸಾವಿರ ಎಕರೆ ಜಾಗೆಯಲ್ಲಿ ಬಡಾವಣೆ ಅಭಿವೃದ್ಧಿ ಪಡಿಸಲಾಗುವುದು. ಸದ್ಯಕ್ಕೆ ಮೊದಲ ಹಂತದಲ್ಲಿ ಸುಮಾರು 42 ಎಕರೆಯಲ್ಲಿ ಮೈಸೂರು, ಬೆಳಗಾವಿ ಜಿಲ್ಲೆಯ ಪಾಶ್ಚಾಪುರ ಗ್ರಾಮ ಪಂಚಾಯಿತಿಯ ಗುಮಚನಮರಡಿ, ಹುಕ್ಕೇರಿ ತಾಲೂಕಿನ ಹರಗಾಪುರ, ಮೂಡಲಗಿ ತಾಲೂಕಿನ ಅರಬಾವಿ, ಸವದತ್ತಿ, ಬಳ್ಳಾರಿ ಜಿಲ್ಲೆಯ ಕುರುಗೋಡು ಹಾಗೂ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹುಳಿಮಾವು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೊಕ್ಕಹಳ್ಳಿಯಲ್ಲಿ ಬಡಾವಣೆ ನಿರ್ಮಾಣದ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಬಡಾವಣೆ ನಿರ್ಮಾಣದ ಯೋಜನಾ ಪ್ರದೇಶದ ವಿಸ್ತೀರ್ಣಕ್ಕೆ ಅನುಗುಣವಾಗಿ ನಿವೇಶನ, ರಸ್ತೆ, ಚರಂಡಿ, ಓವರ್ ಹೆಡ್ ಟ್ಯಾಂಕ್, ಬೀದಿ ದೀಪ, ಕುಡಿಯುವ ನೀರು ಸರಬರಾಜು, ಪಾರ್ಕಿಂಗ್‌ಗಳಿಗೆ ನಕ್ಷೆ ತಯಾರಿಸಿಕೊಂಡು ನಿವೇಶನ ರಚನೆಗೆ ಅವಶ್ಯವಿರುವ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದುಕೊಳ್ಳಲಾಗುವುದು.

ಸದ್ಯ ಬಡಾವಣೆ ನಿರ್ಮಾಣ ಯೋಜನೆ ಯಶಸ್ವಿಗೊಂಡ ಬಳಿಕ ರಾಜ್ಯದಲ್ಲಿ ವಿವಿಧೆಡೆ ಅಂದಾಜು ಸಾವಿರ ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು. ಸರ್ಕಾರ ಈಗಾಗಲೇ ನಿವೇಶನಗಳನ್ನು ನೀಡಿದ್ದು, ಎರಡನೇ ಹಂತದಲ್ಲಿ ಅಗತ್ಯಕ್ಕೆ ತಕ್ಕಂತೆ ಖಾಸಗಿ ಜಮೀನು ಖರೀದಿಸಿ ಬಡಾವಣೆ ನಿರ್ಮಾಣ ಮಾಡಲಾಗುವುದು ಎಂದರು.

ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಆಸೀಫ್ ಸೇಠ್, ಜಿಪಂ ಸಿಇಒ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮತ್ತಿತರರು ಹಾಜರಿದ್ದರು.

ಬೋರ್‌ವೆಲ್‌ಗೂ ತಟ್ಟಿದ ಯುದ್ಧದ ಬಿಸಿ

▸ ಮಲ್ಲಿಕಾರ್ಜುನ ತುಂಗಳ

ರಬಕವಿ-ಬನಹಟ್ಟಿ: ಇರಾನ್ -ಇಸ್ರೇಲ್ ನಡೆಯುತ್ತಿರುವ ಯುದ್ಧದ ಪರಿಣಾಮ ಬೋರವೆಲ್ ಉದ್ಯಮಕ್ಕೂ ತಟ್ಟಿದೆ. ಡೀಸೆಲ್ ಬೆಲೆ ಏರಿಕೆ ಮತ್ತು ಬಿಟ್, ಹ್ಯಾಮರ್‌ನಂತರ ಬಿಡಿಭಾಗಗಳ ದರ ಗಗನಕ್ಕೇರಿರುವದರಿಂದ ಬೋರವೆಲ್ ಕೊರೆಯಿಸುವ ದರ ಹೆಚ್ಚಾಗಿದೆ.



ಪೂರೈಕೆಯ ಸರಪಳಿ ಅಡಚಣೆಯಿಂದಾಗಿ ಬೋರವೆಲ್ ಮಾಲೀಕರು ಮತ್ತು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿ ಅಡಿಗೆ 90ರಿಂದ 100 ರೂ.ಗಳಿಗೆ ಕೊರೆಯುವ ಬೋರವೆಲ್ ಇದೀಗ 130 ರಿಂದ 150 ರೂ.ಗಳವರೆಗೆ ಏರಿಕೆ ಕಂಡಿದೆ.

ಬೋರವೆಲ್ ಕೊರೆಯಲು ಬಳಸುವ ಬಿಟ್ ದರ 25 ಸಾವಿರದಿಂದ 75 ಸಾವಿರ ರೂ.ಗೆ ಏರಿಕೆ ಕಂಡಿದೆ. ಡೀಸೆಲ್ ದರ ಏರಿಕೆ ಮತ್ತು ಸರಬರಾಜಿನಲ್ಲಿ ವ್ಯತ್ಯಯದಿಂದಾಗಿ ಬೊರವೆಲ್ ಲಾರಿಗಳು ಕಾರ್ಯನಿರ್ವಹಿಸದಂತಾಗಿದೆ. ಹ್ಯಾಮರ್, ಬಿಟ್‌ಗಳಂತಹ ಬಿಡಿ ಭಾಗಗಳ ಕೊರತೆ ಹಾಗೂ ಬೆಲೆ ಏರಿಕೆಯಿಂದಾಗಿ ಹೊಸ ಬೋರವೆಲ್ ಕೊರೆಯುವಿಕೆ ಸ್ಥಗಿತಗೊಳ್ಳುವ ಭೀತಿ ಎದುರಾಗಿದೆ. ರಬಕವಿ -ಬನಹಟ್ಟಿ ತಾಲೂಕಿನಾದ್ಯಂತ ರೈತರು ನಿರಂತರ ಬೋರವೆಲ್‌ಗಳ ಮೊರೆ ಹೋಗುತ್ತಿದ್ದರು. ಇದೀಗ ಬೆಲೆ ಏರಿಕೆಯಿಂದ ಬೋರವೆಲ್‌ಗಳ ಕಾರ್ಯ ತಾತ್ಕಾಲಿಕ ಸ್ಥಗಿತಗೊಳ್ಳುವಲ್ಲಿ ಕಾರಣವಾಗಿದೆ.

ದಿಗಂತ ವಿಶೇಷ

ಕೃಷಿ ಮಾಡಲು ಕೊಳವೆ ಬಾವಿ ಅವಶ್ಯ. ಇದೀಗ ಬೋರವೆಲ್ ಕೊರೆಸಲು ಹೆಚ್ಚಿನ ಬೆಲೆ ಕೊಟ್ಟು ಕೊರೆಸಬೇಕಾದ ಅನಿವಾರ್ಯತೆಯಾಗಿದೆ. ಇದರ ಮೇಲೆ ನಿಯಂತ್ರಣ ಹೇರಿದಾಗ ರೈತರ ಗೋಳು ತಪ್ಪುವುದು ಬನಹಟ್ಟಿ ರೈತ ತುಕಾರಾಮ ಕಾಂಬಳೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಲು ಜಾರಿ ಬಾವಿಗೆಗೆ ಬಿದ್ದು ಬಾಲಕಿ ಸಾವು

ಹುಣಸಗಿ: ಇತ್ತೀಚೆಗೆಷ್ಟೆ ಯಾದಗಿರಿ, ವಡಗೇರಾ, ನಗನೂರು ಗ್ರಾಮಗಳಲ್ಲಿ ನೀರಲ್ಲಿ ಮುಳುಗಿ ಬಾಲಕರ ಸಾವು ಸಂಭವಿಸಿದ ಘಟನೆಗಳು ಮಾಸುವ ಮುನ್ನವೇ ಬಾಲಕಿಯೊಬ್ಬಳು ಬಾವಿಗೆ ನೀರು ಕುಡಿಯಲು ಹೋಗಿ ಕಾಲು ಜಾರಿ ಬಾವಿಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲೂಕಿನ ಮಂಜಲಾಪೂರ ಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಲ್ಲಪ್ಪ ಗುರಿಕಾರ ಇವರ ಸುಪುತ್ರಿ ಮೃತ ರಂಜಿಂತಾ (9) ವರ್ಷ ಎಂದು ಗುರುತಿಸಲಾಗಿದ್ದು, ಮಂಗಳವಾರ ಮಧ್ಯಾಹ್ನ ಆಡು ಕಾಯಲು ಹೋದ ರಂಜಿತಾ ಹಾಗೂ ಅವಳ ತಮ್ಮ ನೀರು ಕುಡಿಯಲು ಬಾವಿಯಲ್ಲಿ ಇಳಿದಾಗ ಕಾಲು ಜಾರಿ ಬಾವಿಯಲ್ಲಿ ಮುಳುಗಿದ್ದಾಳೆ. ಇದನ್ನು ಕಂಡ ತಮ್ಮ ಘಟನಾ ಸ್ಥಳದಿಂದ ಒಂದು ಕಿ.ಮಿ ದೂರದ ಊರಿಗೆ ಬಂದು ಭಯದಿಂದ ವಿಷಯ ತಿಳಿಸಿದ್ದಾನೆ.

ಮಲ್ಲಪ್ಪ, ಪಾರ್ವತಿ ಗುರಿಕಾರ ದಂಪತಿಗಳಿಗೆ ನಾಲ್ಕು ಜನ ಮಕ್ಕಳು ಹೊಲದಲ್ಲಿ ವಾಸ ಮಾಡುವ ಇವರು, ಶಾಲೆಗೆ ರಜೆಯ ಕಾರಣ ಆಡು ಕಾಯುತ್ತಿರುವಾಗ ಭಾವಿಯಲ್ಲಿ ನೀರು ಕುಡಿಯುವ ಸಂದರ್ಭದಲ್ಲಿ ಘಟನೆ ಸಂಭವಿಸಿದೆ.

ಸುಮಾರು 15 ಅಡಿ ಆಳ ನೀರಿದ್ದು, ಗ್ರಾಮದ ಹಲವರು ಅನೇಕ ಬಾರಿ ಪ್ರಯತ್ನಸಿದರು ಕೂಡಾ ಬಾಲಕಿ ಶವ ಪತ್ತೆಯಾಗದ ಕಾರಣ, ಸುರಪುರ ಅಗ್ನಿ ಶಾಮಕದಳ ಸಿಬ್ಬಂದಿಗೆ ಕರೆ ಮಾಡಿದ್ದಾರೆ. ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ, ಬಾಲಕಿ ರಂಜಿತಾಳ ಶವ ಹೊರತೆಗೆದಿದ್ದಾರೆ. ಕುಟುಂಬಸ್ಥರ ರೋದನ ಮುಗಿಲು ಮುಟ್ಟಿತ್ತು.

ತುರ್ತು ಸಂದರ್ಭದಲ್ಲಿ ಸುರಪುರ ಅಗ್ನಿ ಶಾಮಕದಳದ ಅಧಿಕಾರಿಗಳಾದ ಎಎಸ್‌ಐ ಸೋಮಶೇಖರ ವನಿಕ್ಯಾಳ, ಚಾಲಕ ಸುರೇಶ ಹೂಗಾರ, ಗ್ಯಾನಪ್ಪ, ಕೃಷ್ಣ ಕೊಟ್ರೇಷ, ಖಾಜಾ ಮೊಹಿನುದ್ದಿನ್ ಅವರುಗಳ ತುರ್ತು ಸೇವೆಯಿಂದ ಮಗುವಿನ ದೇಹ ಪತ್ತೆಯಾಗಿದೆ. ಹುಣಸಗಿ ಠಾಣೆಯ ಪಿಎಸ್‌ಐ ರಾಹುಲ್,ಪರಮಣ್ಣ ನೀಲಗಲ್ ಇದ್ದರು.

ಸ್ನೇಹಿತರ ಕುಚೇಷ್ಟೆಗೆ ಹೆತ್ತ ಮಗನನ್ನೇ ನದಿಗೆ ಎಸೆದ ತಂದೆ

ವಿಜಯಪುರ: ತನ್ನ ಮಗ ತನ್ನಂತಿಲ್ಲ ಎಂದು ಹೇಳುತ್ತಿದ್ದ ಸ್ನೇಹಿತರ ಕುಚೇಷ್ಟೆಗೆ ರೋಷಿಹೋಗಿ ಹೆತ್ತ ಮಗನ್ನೇ ಕೃಷ್ಣಾ ನದಿಗೆ ಎಸೆದು ಹತ್ಯೆ ಮಾಡಿದ ಅಮಾನವೀಯ ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.



ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಅರಕೇರಿ ಬಂಧಿತ ಆರೋಪಿ.

ಮಲ್ಲಿಕಾರ್ಜುನ ಅರಕೇರಿ ತನ್ನ ಹೆತ್ತ ಮಗ ಸಿದ್ದಾರ್ಥ (6) ತನ್ನ ಮುಖದ ಹೋಲಿಕೆ ಹೊಂದಿಲ್ಲ ಎಂದು ಆತನ ಸ್ನೇಹಿತರು ಚೇಡಿಸುತ್ತಿದ್ದರು. ಈ ರೀತಿ ದಿನ ನಿತ್ಯ ಕುಚೇಷ್ಟೆ ಮಾಡುತ್ತಿದ್ದ ಸ್ನೇಹಿತರ ಮಾತಿಗೆ ರೋಸಿ ಹೋದ ಮಲ್ಲಿಕಾರ್ಜುನ ಅರಕೇರಿ, ತಾನು ಜನ್ಮ ನೀಡಿದ ಮುಗ್ಧ ಮಗುವನ್ನು ಹತ್ಯೆ ಮಾಡಲು ಸಂಚು ರೂಪಿಸಿ, ಮಾ.16ರಂದು ಮಗನನ್ನು ಕೋಚಿಂಗ್ ಸೆಂಟರ್‌ಗೆ ಸೇರಿಸಲು ಸಿಂದಗಿಗೆ ಕರೆದುಕೊಂಡು ಹೋಗುವೆ ಎಂದು ಮನೆಯವರಿಗೆ ಹೇಳಿ, ಮಗುವನ್ನು ಮನೆಯಿಂದ ಕರೆದುಕೊಂಡು ಹೋಗಿದ್ದಾನೆ.

ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ಬಳಿ ಕೃಷ್ಣಾ ನದಿಗೆ ಮಗುವನ್ನು ಎಸೆದು ವಾಪಸ್ ಊರಿಗೆ ಬಂದು, ಏನೂ ಆಗಿಲ್ಲವೆಂಬಂತೆ ನಟನೆ ಮಾಡಿದ್ದಾನೆ. ಇನ್ನೂ ಮಗನಿಗೆ ಕರೆ ಮಾಡಿ ಮಾತಾಡಿಸಿ ಎಂದು ತಾಯಿ ಭಾಗ್ಯಶ್ರೀ ಕೇಳಿದಾಗ ಯಾರೊ ಒಬ್ಬರಿಗೆ ಕರೆ ಮಾಡಿದ ಮಲ್ಲಿಕಾರ್ಜುನ, ಫೋನ್ ರಿಸೀವ್ ಮಾಡಿದ ವ್ಯಕ್ತಿ ಇಲ್ಲ ಮಗ ಮಾತನಾಡಲು ಒಪ್ಪುತ್ತಿಲ್ಲ, ಆತ ಆಟದಲ್ಲಿ ಬ್ಯೂಜಿ ಇದ್ದಾನೆ ಎಂದು ಭಾಗ್ಯಶ್ರೀ ಮುಂದೆ ಹೇಳಿದ್ದಾರೆ.

ಬಳಿಕ ಏ.1ರಂದು ಸಿದ್ದಾರ್ಥನ ಬರ್ತಡೇ ಇರುವ ಕಾರಣ ಮಾ.31 ರಂದು ಮಗನಿಗೆ ಭೇಟಿ ಮಾಡಿಸುತ್ತೇನೆ ಎಂದು ಮಲ್ಲಿಕಾರ್ಜುನ ಹೆಂಡತಿಯನ್ನು ಕರೆದುಕೊಂಡು ಜಿಲ್ಲೆಯ ಸಿಂದಗಿಗೆ ಹೋಗಿ ಇಡೀ ದಿನ ಅಲ್ಲಿ ಸುತ್ತಾಡಿಸಿ ಕೊನೆಗೆ ಮಗನಿಗೆ ಭೇಟಿಯೇ ಮಾಡಿಸಿಲ್ಲ. ಇದರಿಂದ ಆತಂಕಗೊಂಡು ಹಿರಿಯರನ್ನು ಸೇರಿಸಿ ಭಾಗ್ಯಶ್ರೀ ಕೇಳಿದ್ದಾಳೆ. ಆಗಲು ಅತ ಏನನ್ನು ಹೇಳಿಲ್ಲ, ಕೊನೆಗೆ ಹೆಂಡತಿ ಮುಂದೆ ಮಗನನ್ನು ಮರೆತು ಬಿಡು ಎಂದು ಹೇಳಿ ಮನೆಯಿಂದ ಹೋಗಿದ್ದಾನೆ.



ಬಳಿಕ ಮಗ ಹಾಗೂ ಪತಿ ಕಾಣೆಯಾದ ಕುರಿತು ವಿಜಯಪುರ ಗ್ರಾಮೀಣ ಠಾಣೆಯಲ್ಲಿ ದೂರನ್ನು ನೀಡಲಾಗಿದೆ. ಬಳಿಕ ಮಲಿಕಾರ್ಜುನನ್ನು ಕರೆ ತಂದ ಪೊಲೀಸರು ವಿಚಾರಣೆ ನಡೆಸಿದಾಗ ಮಗನನ್ನು ಕೃಷ್ಣಾ ನದಿಗೆ ಬೀಸಾಕಿದ ಘಟನೆ ಬೆಳಕಿಗೆ ಬಂದಿದೆ. ಆರೋಪಿ ಮಲ್ಲಿಕಾರ್ಜುನ ಅರಕೇರಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ.

ಬಣವೆಗಳಿಗೆ ಆಕಸ್ಮಿಕ ಬೆಂಕಿ: ಅಪಾರ ಹಾನಿ

ನವಲಗುಂದ: ಪಟ್ಟಣದ ಕಳ್ಳಿಮಠ ಓಣಿಯ ಮೆಹಬೂಬ ನಗರದಲ್ಲಿ ಆಕಸ್ಮಿಕ ಬೆಂಕಿ ಅವಘಡದಿಂದ ಸುಮಾರು 1.5-2ಲಕ್ಷ ರೂ ಮೌಲ್ಯದ 3 ಮೇವಿನ ಬಣವಿ, 2ಹೊಟ್ಟಿನ ಬಣವಿಗಳು ಸುಟ್ಟ ಕರಕಲಾದ ಘಟನೆ ಮಂಗಳವಾರ ನಡೆದಿದೆ.

ಇಲ್ಲಿನ ನಿವಾಸಿಗಳಾದ ಮಲ್ಲಪ್ಪ ಹಳ್ಳದ, ನಾಗಪ್ಪ ಹಳ್ಳದ ಮತ್ತು ಸಿದ್ದಪ್ಪ ಹಳ್ಳದ ಎಂಬುವರಿಗೆ ಸೇರಿದ ಬಣವೆಗಳು ಇವು ತಮ್ಮ ಸ್ವಂತ ಜಾಗದಲ್ಲಿ ಹೊಲದಿಂದ ಹಾಗೂ ಬೇರೆ ಕಡೆಗಳಿಂದ ಹೊಟ್ಟು ಮೇವು ಖರೀದಿಸಿ ತಂದು ಬಣವೆಗಳನ್ನು ಒಟ್ಟಿದ್ದರು.

10 ಟ್ರ್ಯಾಕ್ಟರ್ ಮೇವು ಹಾಗೂ 20 ಟ್ರ್ಯಾಕ್ಟರ್‌ಗೂ ಹೆಚ್ಚು ಹೊಟ್ಟು ಸುಟ್ಟಿದೆ. ಇದರಿಂದ ನಮಗೆ ಅಪಾರ ನಷ್ಟ ಉಂಟಾಗಿದೆ ಎಂದು ರೈತ ನಾಗಪ್ಪ ಹಳ್ಳದ ಮಾಧ್ಯಮದವರ ಮುಂದೆ ಕಣ್ಣೀರು ಇಟ್ಟರು. ಸಂಬಂಧಿಸಿದ ಅಧಿಕಾರಿಗಳು ಹಾಗೂ ಶಾಸಕರು ಸೂಕ್ತ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪುರಸಭೆ ಸಿಬ್ಬಂದಿ, ಸ್ಥಳೀಯರು ಸುಮಾರು



4-5 ತಾಸು ಕಾರ್ಯಾಚರಣೆ ಮಾಡಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಇದರಿಂದ ಸುತ್ತಮುತ್ತಲಿನ ಜನವಸತಿ ಪ್ರದೇಶಗಳಲ್ಲಿ ಯಾವುದೇ ಅವಘಡ ಸಂಭವಿಸಲಿಲ್ಲ. ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಶಾಸಕ ಎನ್.ಎಚ್.ಕೋನರಡ್ಡಿ ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ಸಮಾಧಾನ ಪಡಿಸಿ ಆಕಸ್ಮಿಕ ಬೆಂಕಿಗೆ ನಷ್ಟದ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ತಹಶೀಲ್ದಾರ್ ಸುಧೀರ ಸಾವುಕಾರ, ಸಿಪಿಐ ರವಿ ಕಪ್ಪತ್ತನವರ, ಪಿಎಸ್‌ಐ ಜನಾರ್ಧನ ಭಟ್ರಳ್ಳಿ, ಕೆಪಿಸಿಸಿ ಸದಸ್ಯ ವಿನೋದ ಅಸೂಟಿ, ಬಿಜೆಪಿ ಮುಖಂಡ ದೇವರಾಜ ದಾಡಿಬಾವಿ ಸ್ಥಳಕ್ಕೆ ಭೇಟಿ ನೀಡಿದರು. ಈ ವೇಳೆ ಅಗ್ನಿಶಾಮಕ ದಳದ ಠಾಣಾಧಿಕಾರಿ ಜಿ.ವೈ.ರಾಯಬಾಗಿ, ಸಿಬ್ಬಂದಿ ಯಲ್ಲಪ್ಪ ಗರಸಂಗಿ, ಇಮಾಮಸಾಬ ನದಾಫ, ವಿಜಯಕುಮಾರ ಹುಲಕೋಟಿ, ಸಚಿನ ಜಾಧವ, ಮೌನೇಶ ಜಕ್ಕನ್ನವರ ಪಾಲ್ಗೊಂಡಿದ್ದರು.

ಯುವತಿ ರಕ್ಷಣೆ: ಮೂವರ ಬಂಧನ







ಸಿಂಧನೂರು: ತಾಲೂಕಿನ ವಿರುಪಾಪೂರು ಸೀಮಾದ ನ್ಯಾಷನಲ್ ಲೇಔಟ್‌ನ ಶೆಡ್‌ವೊಂದರಲ್ಲಿ ನಡೆಸಲಾಗುತ್ತಿದ್ದ ವೇಶ್ಯಾವಾಟಿಕೆ ಅಡ್ಡೆ ಮೇಲೆ ಗ್ರಾಮೀಣ ಪೊಲೀಸರು ದಾಳಿ ನಡೆಸಿ,ಓರ್ವ ಯುವತಿಯನ್ನ ರಕ್ಷಿಸಿ, ಮೂವರನ್ನು ಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಿರುಪಾಪೂರು ಸೀಮಾದ ನ್ಯಾಷನಲ್ ಲೇಔಟ್‌ನ ಶೆಡ್ ವೊಂದರಲ್ಲಿಗೆ ಬೇರೆ ಬೇರೆ ಜಿಲ್ಲೆಗಳಿಂದ ಹುಡುಗಿಯರನ್ನು ಕರೆಸಿ ವೇಶ್ಯಾವಾಟಿಕೆ ದಂಧೆ ನಡೆಯುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಮೇರೆಗೆ ಎಸ್‌ಪಿ ಅರುಣಾಂಕ್ಷು ಗಿರಿ ಅವರ ಮಾರ್ಗದರ್ಶನದ ಮೇರೆಗೆ ಸೋಮವಾರ ಸಂಜೆ 7-30ರ ಸುಮಾರಿಗೆ ಡಿವೈಎಸ್‌ಪಿ ಚಂದ್ರಶೇಖರ, ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ವಿನಾಯಕ, ಪಿಎಸ್‌ಐ ಮೌನೇಶ ರಾಠೋಡ್ ನೇತೃತ್ವದ ತಂಡ ದಾಳಿ ನಡೆಸಿದ್ದು, ಈ ವೇಳೆ ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಯುವತಿಯನ್ನು ರಕ್ಷಣೆ ಮಾಡಲಾಗಿದ್ದು, ಗಂಗಾನಗರದ ವಿಜಯಕುಮಾರ, ಗಂಗಾಧರ್ ಹಾಗೂ ಮಹಿಬೂಬಿಯಾ ಕಾಲೋನಿ ಶ್ಯಾಮಣ್ಣ ಎನ್ನುವವರನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಾಳಿಯಲ್ಲಿ ಸಿಕ್ಕ ಆರೋಪಿ ವಿಜಯ ಕುಮಾರ ಪಂಪಣ್ಣ ಎನ್ನುವ ವ್ಯಕ್ತಿ, ಸ್ವಂತ ವಾಸಕ್ಕೆಂದು ಶೆಡ್‌ನ್ನು ಬಾಡಿಗೆ ಪಡೆದು ಲಾಭಕ್ಕಾಗಿ ಬಡತನದಲ್ಲಿರುವ ಮಹಿಳೆಯರನ್ನು ಉದ್ಯೋಗ ಕೊಡಿಸುವುದಾಗಿ ಹೇಳಿ, ಹಣದ ಆಮಿಷ ತೋರಿಸಿ ವೇಶ್ಯಾವಾಟಿಕೆ ಬಯಸುವ ತನ್ನ ಪರಿಚಯದ ಪುರುಷರಿಗೆ ಮಹಿಳೆಯರ ಫೋಟೋಗಳನ್ನು ಕಳುಹಿಸಿ, ವೇಶ್ಯಾವಾಟಿಕೆ ನಡೆಸುತ್ತಿದ್ದ ಎಂದು ತಿಳಿದು ಬಂದಿದೆ.


ದಿನಪತ್ರಿಕೆ ಎಡವಟ್ಟು: ತೀವ್ರಗೊಂಡ ಪ್ರತಿಭಟನೆ



•ಬೆಳಗಾವಿ: ಮಹಾಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಎನ್ನುವುದು ಜನಜನಿತ. ಆದರೆ, ಬೆಳಗಾವಿಯ ಅನ್ಯಭಾಷಿಕ ಸ್ಥಳೀಯ ದಿನಪತ್ರಿಕೆಯೊಂದು ಮಾಡಿದ ಗಂಭೀರ ಲೋಪದಿಂದ ಪ್ರತಿಭಟನೆ ನಡೆಸಲು ಕಾರಣವಾಗಿದೆ.

ಮಂಗಳವಾರ ನಗರದ ಮರಾಠಿ ಭಾಷಿಕ ಪತ್ರಿಕೆ ತನ್ನ ಬರಹದಲ್ಲಿ ಡಾ.ಅಂಬೇಡ್ಕರ್ ಜಯಂತಿ ಬದಲಾಗಿ ಬೇರೆ ಅರ್ಥ ಹೊಲುವ ಪದ ಬಳಕೆ ಮಾಡಿ ಬರೆದಿರುವುದರಿಂದ ಇಡೀ ದಲಿತ ಸಮಾಜ ದಿನಪತ್ರಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಮರಾಠಿ ಭಾಷಿಕರಲ್ಲಿ ಹೆಚ್ಚಿನ ಪ್ರಸರಣ ಹೊಂದಿರುವ ದಿನಪತ್ರಿಕೆ ಮಾಡಿರುವ ಈ ಎಡವಟ್ಟು ಪೊಲೀಸರಿಗೆ ಪೀಕಲಾಟ ತಂದಿದೆ. ನಗರದ ಖಡೇಬಜಾರ್ ಪೊಲೀಸ್ ಠಾಣೆಯ ಎದುರಲ್ಲೇ ಇರುವ ಪತ್ರಿಕಾ ಮುಖ್ಯ ಕಾರ್ಯಾಲಯ ರಣರಂಗವಾಗಿ ಏರ್ಪಟ್ಟಿತು. ಸ್ಥಳಕ್ಕೆ ಪೊಲೀಸ್ ಆಯುಕ್ತ ಭೂಷಣ ಭೊರಸೆ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪ್ರತಿಭಟನಾಕಾರರನ್ನು ಶಾಂತಗೊಳಿಸುವ ಪ್ರಯತ್ನಿಸಿದರು.

ರಾಮ ಬಾಣ



ರಷ್ಯಾದ ಸೇನಾ ನೆಲೆ ವಶಕ್ಕೆ ಪಡೆದ ಉಕ್ರೇನ್ ರೋಬೋಟಿಕ್ ವ್ಯವಸ್ಥೆ

ಪುಟ ೧➔ ಉಕ್ರೇನ್ ರಕ್ಷಣಾ ಉದ್ಯಮ ಪ್ರಸ್ತುತ ಲಕ್ಷಾಂತರ ಫಸ್ಟ್-ಪರ್ಸನ್ ವ್ಯೂ (ಎಫ್‌ಪಿವಿ) ಡ್ರೋನ್‌ಗಳನ್ನು ಮತ್ತು ನೆಪ್ಚೂನ್ ಹಾಗೂ ಪಾಲಿಯಾನಿತ್ಸಿಯಾನಂತಹ ದೂರಗಾಮಿ ಕ್ಷಿಪಣಿಗಳನ್ನು ಉತ್ಪಾದಿಸುತ್ತಿದೆ. ಕೆಲವು ಡ್ರೋನ್‌ಗಳು ಈಗ 1,750 ಕಿಮೀ ದೂರದವರೆಗೆ ದಾಳಿ ಮಾಡುವ ಸಾಮರ್ಥ್ಯ ಹೊಂದಿವೆ. ಇದರೊಂದಿಗೆ, ಕಪ್ಪು ಸಮುದ್ರದಲ್ಲಿನ ಯಶಸ್ವಿ ಕಾರ್ಯಾಚರಣೆಗಳ ನಂತರ, ಉಕ್ರೇನ್ ತನ್ನ ಸೀ ಬೇಬಿ ಮತ್ತು ಮಗುರಾ ನೌಕಾ ಡ್ರೋನ್ ತಂತ್ರಜ್ಞಾನವನ್ನು ರಫ್ತು ಮಾಡಲು ಮತ್ತು ಅಂತಾರಾಷ್ಟ್ರೀಯ ಕಡಲ ಭದ್ರತಾ ಸಹಕಾರಕ್ಕಾಗಿ ನೀಡಲು ಮುಂದಾಗಿದೆ.

ಹೆತ್ತ ಮಗನನ್ನೇ ನದಿಗೆ ಎಸೆದ ತಂದೆ

•ವಿಜಯಪುರ: ತನ್ನ ಮಗ ತನ್ನಂತಿಲ್ಲ ಎಂದು ಹೇಳುತ್ತಿದ್ದ ಸ್ನೇಹಿತರ ಕುಚೇಷ್ಟೆಗೆ ರೋಷಿಹೋಗಿ ಹೆತ್ತ ಮಗನ್ನೇ ಕೃಷ್ಣಾ ನದಿಗೆ ಎಸೆದು ಹತ್ಯೆ ಮಾಡಿದ ಅಮಾನವೀಯ ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಅರಕೇರಿ ಬಂಧಿತ ಆರೋಪಿ.

ಮಲ್ಲಿಕಾರ್ಜುನ ಅರಕೇರಿ ತನ್ನ ಹೆತ್ತ ಮಗ ಸಿದ್ದಾರ್ಥ (6) ತನ್ನ ಮುಖದ ಹೋಲಿಕೆ ಹೊಂದಿಲ್ಲ ಎಂದು ಆತನ ಸ್ನೇಹಿತರು ಚೇಡಿಸುತ್ತಿದ್ದರು. ಈ ರೀತಿ ದಿನ ನಿತ್ಯ ಕುಚೇಷ್ಟೆ ಮಾಡುತ್ತಿದ್ದ ಸ್ನೇಹಿತರ ಮಾತಿಗೆ ರೋಸಿ ಹೋದ ಮಲ್ಲಿಕಾರ್ಜುನ ಅರಕೇರಿ, ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ಬಳಿ ಕೃಷ್ಣಾ ನದಿಗೆ ಮಗುವನ್ನು ಎಸೆದಿದ್ದಾನೆ. ಆರೋಪಿ ಮಲ್ಲಿಕಾರ್ಜುನ ಅರಕೇರಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕನೇಜಿ

◈ ಸಂಪುಟ ಪುನಾರಚನೆ ಸಂಬಂಧ ಅನಗತ್ಯ ಹೇಳಿಕೆಗಳನ್ನು ನೀಡಿದರೆ ಶಿಸ್ತು ಕ್ರಮ ಜರಗಿಸಲಾಗುವುದು
– ಶಾಸಕರಿಗೆ ಡಿಕೆಶಿ ಎಚ್ಚರಿಕೆ

-ಒಬ್ಬರಿಗೆ ಅಗತ್ಯ ಅಂತ ಕಂಡದ್ದು ಇನ್ನೊಬ್ಬರಿಗೆ ಅನಗತ್ಯ ಅಂತ ಅನಿಸಬಹುದು. ಹಾಗಾಗಿ ಅನಗತ್ಯ ಎಂದರೆ ಏನು ಅರ್ಥ ಎಂಬುದರ ವಿವರಣೆಯನ್ನು ಅಗತ್ಯವಾಗಿ ವಿವರಿಸುವುದು ಒಳ್ಳೆಯದು!

ದಿನ ಭವಿಷ್ಯ

ಮೇಷ
ದೈಹಿಕವಾಗಿ, ಮಾನಸಿಕವಾಗಿ ಇಂದು ಬಳಲುವಷ್ಟು ಕೆಲಸ. ಆತ್ಮೀಯರ ಸಂಗ ನೆಮ್ಮದಿ ತರಲಿದೆ. ಧನವ್ಯಯ ಅಧಿಕ. ಉಳಿತಾಯ ಹೆಚ್ಚಿಸಿ.

ವೃಷಭ
ನಿಮ್ಮ ಸಾಧನೆ ಕೆಲವರಿಗೆ ಹೊಟ್ಟೆಯುರಿ ತರಲಿದೆ. ನೀವು ತಲೆ ಕೆಡಿಸಿಕೊಳ್ಳದಿರಿ. ಪ್ರೀತಿಯ ವಿಷಯದಲ್ಲಿ ಪ್ರಮುಖ ಬೆಳವಣಿಗೆ ಆದೀತು.

ಮಿಥುನ
ಇತ್ತೀಚಿನ ಕೆಲ ಕೆಲಸಗಳ ಪರಾಮರ್ಶೆ ನಡೆಸಿ. ತಪ್ಪಿದ್ದರೆ ತಿದ್ದಿಕೊಳ್ಳಿ. ಟೀಕೆಗಳಿಗೆ ನೋಯದಿರಿ. ಕೌಟುಂಬಿಕ ಬಿಕ್ಕಟ್ಟು ಜಾಣ್ಮೆಯಿಂದ ಪರಿಹರಿಸಿ.

ಕಟಕ
ಅಧಿಕ ಕೆಲಸದ ಒತ್ತಡ. ಸಂಗಾತಿ ಜತೆ ವಿರಸ. ಮನಸ್ಸು ಅಶಾಂತ. ಸ್ವಂತ ಉದ್ದಿಮೆಯಲ್ಲಿ ಹಿನ್ನಡೆ ಉಂಟಾದೀತು. ಈ ದಿನ ಆದಷ್ಟು ತಣ್ಣಗಿರಿ.

ಸಿಂಹ
ವೃತ್ತಿ ಕ್ಷೇತ್ರದಲ್ಲಿ ಎಲ್ಲರನ್ನು ಪೂರ್ಣವಾಗಿ ನಂಬದಿರಿ. ಹರಿತ ವಸ್ತು ಬಳಕೆಯಲ್ಲಿ ಎಚ್ಚರವಿರಲಿ. ಆಧ್ಯಾತ್ಮಿಕ ಚಿಂತನೆ ಆವರಿಸಬಹುದು.

ಕನ್ಯಾ
ಸಾಮಾಜಿಕ, ಖಾಸಗಿ ಬದ್ಧತೆ ಈಡೇರಿಸಬೇಕಾದ ಒತ್ತಡ. ಎಡೆಬಿಡದ ಕೆಲಸದಿಂದ ವಿರಾಮ ಸಿಗದು. ಕೌಟುಂಬಿಕ ಶಾಂತಿಗೆ ಭಂಗ ಬಂದೀತು.

ತುಲಾ
ನಿಮ್ಮ ಇಂದಿನ ನಿರ್ಧಾರ ದೀರ್ಘಾವಧಿ ಪರಿಣಾಮ ಬೀರಬಹುದು. ಯೋಚಿಸಿ ನಿರ್ಧರಿಸಿ. ಸಣ್ಣ ವಿಷಯವೊಂದು ಮನಸ್ಸಿಗೆ ಕಿರಿಕಿರಿ ಸೃಷ್ಟಿಸಲಿದೆ.

ವೃಶ್ಚಿಕ
ಗ್ರಹಗತಿ ನಿಮಗೆ ಪೂರಕ. ವೃತ್ತಿಯಲ್ಲಿ ಉನ್ನತಿ. ವೈಯಕ್ತಿಕ ಚಿಂತೆಗೆ ಪರಿಹಾರದ ಲಕ್ಷಣ ತೋರುತ್ತಿದೆ. ಮುನಿಸು ದೂರ, ಸಂಬಂಧ ಹತ್ತಿರ.

ಧನು
ಅಂತಃಪ್ರೇರಣೆ ಪ್ರಕಾರ ನಡಕೊಳ್ಳಿ. ಅದು ನಿಮ್ಮನ್ನು ಉನ್ನತಿಗೆ ಕೊಂಡೊಯ್ಯಲಿದೆ. ಸಣ್ಣ ವಿಷಯಕ್ಕೆ ಜಗಳ ಕಾಯಲು ಹೋಗಬೇಡಿ.

ಮಕರ
ಭಾವನಾತ್ಮಕ ಸವಾಲು ಎದುರಿಸುವಿರಿ. ಮನೋನಿಗ್ರಹ ಅವಶ್ಯ. ಬಹುಮುಖ್ಯ ಬಯಕೆ ಈಡೇರುವ ಕಾಲ ಬಂದಿದೆ. ಧನಪ್ರಾಪ್ತಿ.

ಕುಂಭ
ಹೊಸತಾದುದನ್ನು ಅಳವಡಿಸಲು ಸಕಾಲ. ಕೆಲ ವಿಚಾರಗಳಲ್ಲಿ ಬದಲಾವಣೆ ತಂದುಕೊಳ್ಳಿ. ಸಂಘರ್ಷದ ಮನೋಭಾವ ಬಿಡಿ. ಹೊಂದಾಣಿಕೆ ಒಳಿತು.

ಮೀನ
ಇಂದು ತಾಳ್ಮೆ ಮುಖ್ಯ. ಪ್ರತಿಕೂಲ ಸನ್ನಿವೇಶ ಎದುರಾದರೂ ಧೃತಿಗೆಡದಿರಿ. ಬಳಿಕ ಎಲ್ಲವೂ ತಾನಾಗಿ ಸರಿಹೋಗಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00
ಅದೃಷ್ಟ ಸಂಖ್ಯೆ : 0,6,1,7

ಮೋದಿ ಇಚ್ಛಾಶಕ್ತಿಯಿಂದ ಮಹಿಳಾ ಮೀಸಲಾತಿ: ಬಿವೈವಿ

ಆಡಳಿತ ಯಂತ್ರ ಕುಸಿತ

•ಶಿವಮೊಗ್ಗ: ಮುಖ್ಯಮಂತ್ರಿ ಕುರ್ಚಿಗಾಗಿ ರಾಜ್ಯದಲ್ಲಿ ನಡೆಯುತ್ತಿರುವ ಬಡದಾಟದಿಂದ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ಬೆಂಗಳೂರು ಸಂಪೂರ್ಣವಾಗಿ ಬಣಗುಡುತ್ತಿದೆ. ಮುಖ್ಯಮಂತ್ರಿಗಳೂ ಇಲ್ಲ, ಉಪಮುಖ್ಯಮಂತ್ರಿಗಳೂ ಇಲ್ಲ. ಅವರ ಕುರ್ಚಿ ಬಡಿದಾಟ ಹೆಚ್ಚಾಗಿದೆ. ಅವರಿಬ್ಬರ ಬಡಿದಾಟದಲ್ಲಿ ಜನ ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರಕ್ಕೆ ಮಾನ ಮರ್ಯಾದೆ ಅದರ ಅರ್ಥನೂ ಗೊತ್ತಿಲ್ಲ. ಉಪಚುನಾವಣೆ ಬಂದಾಗ ಮುಖ್ಯಮಂತ್ರಿಗಳು ಬಾಗಲಕೋಟೆಯಲ್ಲಿ ಬೀಡು ಬಿಟ್ಟಿದ್ದನ್ನು ನೋಡಿದ್ದೀರಿ. ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಬಿದ್ದಿದೆ. 30 ಶಾಸಕರು ದೆಹಲಿಗೆ ಹೋಗಿ ಕುಳಿತು ಲಾಭಿ ಮಾಡುತ್ತಿದ್ದಾರೆ ಎಂದರು.

ಮಹಿಳಾ ಮೀಸಲಾತಿ ...: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಇಚ್ಛಾಶಕ್ತಿ ಹಾಗೂ ಸಂಕಲ್ಪದಿಂದ ಮಹಿಳಾ ಮೀಸಲಾತಿ ತರಲು ಮುಂದಾಗಿದ್ದಾರೆ. ಎಲ್ಲಾ ಕಡೆಯಿಂದಲೂ ಅವರಿಗೆ ಶೇ.33 ಸ್ಥಾನಗಳನ್ನು ನೀಡಬೇಕು ಎಂಬ ಸದುದ್ದೇಶ ಇಟ್ಟುಕೊಂಡು ಲೋಕಸಭಾ ಅಧಿವೇಶನದಲ್ಲಿ ಮಂಡನೆ ಮಾಡಲಿದ್ದಾರೆ. ಅದನ್ನು ಅನುಷ್ಠಾನಗೊಳಿಸುವ ದಿಟ್ಟ ನಿರ್ಧಾರದೊಂದಿಗೆ ದಾಪುಗಾಲು ಹಾಕುತ್ತಿದ್ದಾರೆ ಎಂದರು.

ಮೊಸರಲ್ಲಿ ಕಲ್ಲು ಹುಡುಕಬೇಡಿ: ಭಾರತ 2047ರಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ ಮಹಿಳೆಯರ ಪಾತ್ರ ಮುಖ್ಯವಾಗಿದೆ ಎಂದು ಪ್ರಧಾನಮಂತ್ರಿಗಳು ನಂಬಿದ್ದಾರೆ. ಹಾಗಾಗಿ ಅವರಿಗೆ ರಾಜಕೀಯ ಶಕ್ತಿಯನ್ನು ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ. ಕಾಂಗ್ರೆಸ್‌ನವರು ಮಲ್ಲಿಕಾರ್ಜುನ ಖರ್ಗೆ ಆದಿಯಾಗಿ ಇದೊಂದು ರಾಜಕೀಯ ಗಿಮಿಕ್ ಎಂದು ಹೇಳುತ್ತಿದ್ದಾರೆ. ಈ ರೀತಿ ಹೇಳಿಕೆ ಕೊಡುವುದರ ಮುಖಾಂತರ ದೇಶದ ತಾಯಂದಿರಿಗೆ ಅಪಚಾರ ಎಸಗಿದ್ದಾರೆ ಎಂದು ಆರೋಪಿಸಿದರು.

ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು: ವಿಜಯೇಂದ್ರ

•ಬೆಂಗಳೂರು: ಕಾಂಗ್ರೆಸ್ ಸರಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುವ ಮತ್ತು ಹಿಂದುಗಳ ಅಪಮಾನ ಮಾಡುವ ಕೆಲಸ ಮಾಡುತ್ತಿದೆ. ಇವೆಲ್ಲದರ ಪರಿಣಾಮವಾಗಿ ಜನರು ಬಿಜೆಪಿಗೆ ಆಶೀರ್ವಾದ ಮಾಡಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ಸಿನವರ ಮತ್ತು ಸಿದ್ದರಾಮಯ್ಯ ಅವರು ಎಷ್ಟೇ ಪುಂಗಿ ಬಾರಿಸಿದರೂ ಉಪ ಚುನಾವಣೆ ನಡೆದ ರಾಜ್ಯದ ಎರಡೂ ಕ್ಷೇತ್ರಗಳಲ್ಲಿ ಅವರು ಗೆಲುವು ಸಾಧಿಸಲು ಸಾಧ್ಯವಿಲ್ಲ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದೇ ಗೆಲ್ಲಲಿದೆ ಎಂದರು. ಕಾಂಗ್ರೆಸ್ ಸರ್ಕಾರದ ಬಗ್ಗೆ ಜನರು ಇವತ್ತು ಬೇಸತ್ತಿದ್ದಾರೆ. ಆಡಳಿತ ಯಂತ್ರ ಕುಸಿದಿದೆ. ಮುಖ್ಯಮಂತ್ರಿ ಕುರ್ಚಿಗೆ ಬೀದಿಕಾಳಗ ನಡೆಯುತ್ತಿದೆ. ಅಭಿವೃದ್ಧಿ ಇಲ್ಲವಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಮತ್ತು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಶಿವಮೊಗ್ಗ ಜಿಲ್ಲೆಯಲ್ಲಾದ ಅಭಿವೃದ್ಧಿ ಕಾರ್ಯ ಹಾಗೂ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಏನೇನು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂಬ ಕುರಿತು ಬಹಿರಂಗ ಚರ್ಚೆ ಮಾಡಲಿ ಎಂದು ಸವಾಲು ಹಾಕಿದರು. ಮೈಸೂರಿನಲ್ಲಿ ಮೈಸೂರು ರೇಷ್ಮೆ ಸೀರೆ ಎಂಎಸ್ ಐಎಲ್ ಅನ್ನು ಉಳಿಸಿಕೊಳ್ಳುವ ಯೋಗ್ಯತೆಯೂ ಕಾಂಗ್ರೆಸ್ ಸರ್ಕಾರಕ್ಕಿಲ್ಲ. ಎಂಎಸ್‌ಐಎಲ್ ಅನ್ನು ಮುಚ್ಚಿ ಹಾಕಿ ಅದನ್ನು ಸ್ಟೇಡಿಯಂ ಮಾಡಲು ಹುನ್ನಾರ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಇವರೇನೇ ಭಾಷಣ ಬಿಗಿದರೂ ಮೇ 4ರಂದು ಮತ ಎಣಿಕೆ ಆಗಲಿದೆ. ಜನರು ಏನು ಉತ್ತರ ನೀಡಿದ್ದಾರೆಂಬುದು ಗೊತ್ತಾಗಲಿದೆ ಎಂದು ತಿಳಿಸಿದರು.

ಎಲ್ಲರ ಸಾರ್ವಭೌಮತ್ವ ಗೌರವಿಸಿ

ಪುಟ ೧➔ ಪಶ್ಚಿಮ ಏಷ್ಯಾದಲ್ಲಿ ಉತ್ತಮ ವಾತಾವರಣ ನಿರ್ಮಾಣಕ್ಕಾಗಿ ಎಲ್ಲಾ ರಾಷ್ಟ್ರಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದಿದ್ದಾರೆ.

ಹಾರ್ಮುಜ್ ಸೇರಿದಂತೆ ಇರಾನ್ ಬಂದರುಗಳು ಮತ್ತು ವ್ಯಾಪಾರ ಮಾರ್ಗಗಳ ಮೇಲೆ ಅಧ್ಯಕ್ಷ ಟ್ರಂಪ್ ದಿಗ್ಬಂಧನ ಘೋಷಿಸಿದ ಬೆನ್ನಲ್ಲೇ ಜಿನ್‌ಪಿಂಗ್ ತೂಕದ ಮಾತನ್ನಾಡಿದ್ದಾರೆ. ಯುಎಇ ರಾಜಕುಮಾರ, ಅಮೆರಿಕ-ಇಸ್ರೇಲ್ ಮತ್ತು ಇರಾನ್ ಯುದ್ಧ ಬಳಿಕ ಚೀನಾಗೆ ಭೇಟಿ ನೀಡಿದ ಮೊದಲ ಮಧ್ಯಪ್ರಾಚ್ಯದ ನಾಯಕರೆನಿಸಿದ್ದಾರೆ.

ಅಮೆರಿಕ ಮೂಗು ತೂರಿಸಬೇಕಿಲ್ಲ: ಹಾರ್ಮುಜ್ ಜಲಸಂಧಿಯಲ್ಲಿ ಚೀನಾ ಹಡಗುಗಳ ಮೇಲೆ ಅಮೆರಿಕ ಹೇರಿದ್ದ ನಿರ್ಬಂಧ ಕುರಿತು ಚೀನಾ ರಕ್ಷಣಾ ಸಚಿವ ಅಡ್ಮಿರಲ್ ಡೊಂಗ್ ಜೂನ್ ಖಾರ ಪ್ರತಿಕ್ರಿಯೆ ನೀಡಿದ್ದಾರೆ. ಇರಾನ್-ಚೀನಾ ದ್ವಿಪಕ್ಷೀಯ ಸಂಬಂಧದಲ್ಲಿ ಅಮೆರಿಕ ಮಧ್ಯಪ್ರವೇಶ ಸರಿಯಲ್ಲ. ನಾವು ಇರಾನ್‌ನೊಂದಿಗೆ ತೈಲ ಮತ್ತು ವಿದ್ಯುತ್ ಒಪ್ಪಂದಗಳನ್ನು ಹೊಂದಿದ್ದೇವೆ. ನಮ್ಮ ವಿಚಾರದಲ್ಲಿ ಇನ್ಯಾವುದೇ ರಾಷ್ಟ್ರಗಳು ಮೂಗು ತೂರಿಸಬೇಕಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಅಮೆರಿಕ ನೌಕಾ ದಿಗ್ಬಂಧನ ಲೆಕ್ಕಿಸದ ಚೀನಾ ತೈಲ ನೌಕೆ!

•ಟೆಹ್ರಾನ್: ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ಅಮೆರಿಕ ನೌಕಾ ದಿಗ್ಬಂಧನದ ಹೊರತಾಗಿಯೂ ಅಮೆರಿಕ ನಿರ್ಬಂಧ ಹೇರಲ್ಪಟ್ಟಿದ್ದ ಚೀನಾ ಮಾಲೀಕತ್ವದ ತೈಲ ಹಡಗು ಸೋಮವಾರ ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಅಮೆರಿಕ ನಿರ್ಬಂಧ ಹೇರಲ್ಪಟ್ಟಿದ್ದ ಶಾಂಘೈ ಕುವಾನ್‌ರನ್ ಶಿಪ್ಪಿಂಗ್ ಕಂಪನಿ ಒಡೆತನದ ರಿಚ್ ಸ್ಟಾರಿ ತೈಲ ಹಡಗು ಸೋಮವಾರ ಹಾರ್ಮುಜ್ ದಾಟಿದೆ ಎಂದು ಕೆಪ್ಲರ್ ಮತ್ತು ಮರೈನ್‌ಟ್ರಾಫಿಕ್ ಮಾಹಿತಿ ಆಧಾರದಲ್ಲಿ ರಾಯ್ಟರ್ಸ್ ವರದಿ ಮಾಡಿದೆ. ಸುಮಾರು 2,50,000 ಬ್ಯಾರೆಲ್‌ನಷ್ಟು ಮೆಥನಾಲ್ ಅನ್ನು ಚೀನಾ ತೈಲ ಹಡಗು ಹೊತ್ತೊಯ್ದಿದೆ.

ಇರಾನ್ ಬಂದರುಗಳಲ್ಲೆಡೆ ಅಮೆರಿಕ ಸೇನೆ ವಿಧಿಸಿದ್ದ ನೌಕಾ ದಿಗ್ಬಂಧನದ ಹೊರತಾಗಿಯೂ ಹಾರ್ಮುಜ್ ಮೂಲಕ ಲಕ್ಷಗಟ್ಟಲೆ ಬ್ಯಾರೆಲ್ ತೈಲವನ್ನು ಹೊತ್ತೊಯ್ದಿದೆ. ಇರಾನ್ ಕಚ್ಚಾ ತೈಲವನ್ನು ಸಾಗಣೆ ಮಾಡುತ್ತಿದ್ದ ಕಾರಣಕ್ಕಾಗಿ ಚೀನಾ ತೈಲ ಹಡಗನ್ನು ಗುರಿಯಾಗಿಸಿ ಅಮೆರಿಕ ನಿರ್ಬಂಧವನ್ನು ಹೇರಿತ್ತು. ಇದಲ್ಲದೆ ಇನ್ನೊಂದು ಹಡಗು ಮುರಲಿಕಿಶನ್ ಇರಾನ್‌ನಿಂದ ಇರಾಕ್‌ನತ್ತ ತೈಲ ಸಾಗಿಸಲು ಹೊರಟಿದ್ದರೂ ಅದರ ಮೇಲೆ ಅಮೆರಿಕ ಸೇನೆ ಯಾವುದೇ ನಿರ್ಬಂಧ ಹೇರಿರಲಿಲ್ಲ. ಈ ಹಿಂದೆ ಮುರಳಿಕಿಶನ್ ಹಡಗು ಇರಾನಿ ಮತ್ತು ರಷ್ಯಾ ತೈಲ ಸಾಗಣೆ ಮಾಡುತ್ತಿತ್ತು.

ಅರಬ್ಬಿ ಸಮುದ್ರ ಮತ್ತು ಗಲ್ಫ್ ಒಮಾನ್ ನಡುವಿನ ಎಲ್ಲಾ ಇರಾನಿ ಬಂದರುಗಳ ಸಹಿತ ಇರಾನ್ ಬಂದರುಗಳು ಅಥವಾ ಇರಾನ್ ಕರಾವಳಿ ಪ್ರದೇಶದತ್ತ ಸಾಗುವ ಎಲ್ಲಾ ರಾಷ್ಟ್ರಗಳ ತೈಲ ಹಡಗುಗಳ ಮೇಲೆ ಯಾವುದೇ ನಿಷ್ಪಕ್ಷಪಾತವಿಲ್ಲದೆ ನಿರ್ಬಂಧ ಹೇರುತ್ತಿದ್ದೇವೆ ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಎಕ್ಸ್ ಪೋಸ್ಟ್ ಮಾಡಿತ್ತು.

ಭೈರವೈಕ್ಯ ಮಂದಿರ ಉದ್ಘಾಟನೆ ಇಂದು

ಪುಟ ೧➔ ನಂತರ 1.5 ಕಿ.ಮೀ. ದೂರದವರೆಗೆ ವಿಶೇಷ ಭದ್ರತಾ ಪಡೆಯ(ಎಸ್‌ಪಿಜಿ) ಬಿಗಿ ಭದ್ರತೆಯಲ್ಲಿ ರಸ್ತೆ ಮಾರ್ಗವಾಗಿ ಕಾರಿನಲ್ಲಿ ಬಂದು ಶ್ರೀ ಕ್ಷೇತ್ರದ ಕಾಲಭೈರವೇಶ್ವರ ಸ್ವಾಮಿ ದೇವಾಲಯದ ಪಕ್ಕದಲ್ಲಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರವನ್ನು ಉದ್ಘಾಟಿಸಲಿದ್ದಾರೆ.

ಮಂದಿರ ಉದ್ಘಾಟನೆ ನಂತರ ಭೈರವೈಕ್ಯ ಡಾ.ಬಾಲಗಂಗಾಧರನಾಥ ಶ್ರೀಗಳ ಪಾದುಕೆಗೆ ನಮಸ್ಕರಿಸಿ ಪುತ್ಥಳಿ ಇರುವ ಭವ್ಯ ಧ್ಯಾನ ಮಂದಿರ ಹಾಗೂ ನೆಲಮಹಡಿಯಲ್ಲಿರುವ ಗರ್ಭಗುಡಿಯಲ್ಲಿ ಪೂಜೆ ಸಲ್ಲಿಸಿ ಪ್ರದಕ್ಷಿಣೆ ಹಾಕಿದ ನಂತರ ಕ್ಷೇತ್ರದ ಅಧಿದೇವರು ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ಕೊಟ್ಟು ವಿಶೇಷ ಪೂಜೆ ಸಲ್ಲಿಸಿ ಕ್ಷೇತ್ರಾಧಿದೇವತೆಗಳ ದರ್ಶನಾಶೀರ್ವಾದ ಪಡೆದುಕೊಳ್ಳುವರು. ಬಳಿಕ ಶ್ರೀಕ್ಷೇತ್ರದ ಆದಿಚುಂಚನಗಿರಿ ಕ್ರೀಡಾಂಗಣದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಾರ್ಗದ ಪ್ರಾಯೋಗಿಕ ಸಂಚಾರ: ಪ್ರಧಾನಿ ನರೇಂದ್ರ ಮೋದಿ ಅವರು ರಸ್ತೆ ಮೂಲಕ ಕಾರಿನಲ್ಲಿ ಸಂಚರಿಸುವ ಶ್ರೀಗುರು ಭೈರವೈಕ್ಯ ಮಂದಿರ, ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಾಲಯ ಸೇರಿದಂತೆ ಆದಿಚುಂಚನಗಿರಿ ಕ್ರೀಡಾಂಗಣದ ವೇದಿಕೆವರೆಗಿನ ರಸ್ತೆಯಲ್ಲಿ ಭದ್ರತಾ ವಾಹನಗಳೊಂದಿಗೆ ಎಸ್‌ಪಿಜಿ ತಂಡ ಮತ್ತು ಹಿರಿಯ ಅಧಿಕಾರಿಗಳು ಎರಡು ಸುತ್ತು ಪ್ರಾಯೋಗಿಕ ಸಂಚಾರ ನಡೆಸಿದರು.

ಎಸ್‌ಪಿಜಿ ಹಿಡಿತದಲ್ಲಿ ಶ್ರೀಮಠ: ಪ್ರಧಾನಿ ನರೇಂದ್ರ ಮೋದಿ ಅವರು ಬಂದು ಹೋಗುವವರೆಗೆ ಶ್ರೀಮಠವನ್ನು ಮಂಗಳವಾರವೇ ಹಿಡಿತಕ್ಕೆ ತೆಗೆದುಕೊಂಡಿರುವ ಎಸ್‌ಪಿಜಿ ತಂಡ ಶ್ರೀಕ್ಷೇತ್ರದೆಲ್ಲೆಡೆ ಹದ್ದಿನ ಕಣ್ಣಿಟ್ಟಿದೆ. ಐಜಿ, ಡಿಐಜಿ, ಎಸ್‌ಪಿ ದರ್ಜೆಯ ಅಧಿಕಾರಿಗಳನ್ನೊಳಗೊಂಡ ಎಸ್‌ಪಿಜಿ ಮೋದಿ ಸಂಚರಿಸುವ ಮಾರ್ಗದಲ್ಲಿ ಎಡೆಬಿಡದೆ ಗಸ್ತು ನಡೆಸುತ್ತಿದೆ.

ಆರ್.ಅಶೋಕ ಭೇಟಿ, ಪರಿಶೀಲನೆ: ಪ್ರಧಾನಿ ನರೇಂದ್ರ ಮೋದಿ ಅವರು ಆದಿಚುಂಚನಗಿರಿಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ವಿಪಕ್ಷ ನಾಯಕ ಆರ್. ಅಶೋಕ ಮಂಗಳವಾರ ಬೆಳಗ್ಗೆ ಕ್ಷೇತ್ರಕ್ಕೆ ಭೇಟಿ ಕೊಟ್ಟು ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಶ್ರೀಗಳೊಂದಿಗೆ ಮಂದಿರ ಹಾಗೂ ವೇದಿಕೆಗೆ ತೆರಳಿ ಪರಿಶೀಲನೆ ನಡೆಸಿದರು.

ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಶ್ರೀ ಮಠದ ಸ್ತಂಭಗಳ ಮಾದರಿಯಲ್ಲಿಯೇ ವೇದಿಕೆ ನಿರ್ಮಾಣ ಮಾಡಲಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತಿದೆ ಎಂದು ಬಣ್ಣಿಸಿದರು.

ಪ್ರಜಾಪ್ರಭುತ್ವಕ್ಕೆ ನಾರೀಶಕ್ತಿ

ಪುಟ ೧➔ ಈ ಮುಂದಿನ ಕೆಲವು ದಿನಗಳಲ್ಲಿ ಸಂವಿಧಾನ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ಅಂಗೀಕಾರವಾಗುವ ನಿರೀಕ್ಷೆಯಲ್ಲಿ ದೇಶದ ಮಹಿಳೆಯರು ಇದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಶಾಸಕಾಂಗಗಳಲ್ಲಿ ಮಹಿಳೆಯರ ಪ್ರತಿನಿಧಿತ್ವವನ್ನು ಶೀಘ್ರದಲ್ಲೇ ಪೂರ್ಣವಾಗಿ ಜಾರಿಗೆ ತರಲು ನಾವು ಎಲ್ಲರೂ ಒಗ್ಗೂಡಬೇಕು. ಶಾಸಕಾಂಗಗಳಲ್ಲಿ ಮಹಿಳೆಯರ ಧ್ವನಿ ಬಲವಾಗುವಾಗ, ಪ್ರಜಾಪ್ರಭುತ್ವದ ಧ್ವನಿಯೇ ಇನ್ನಷ್ಟು ಬಲವಾಗುತ್ತದೆ ಎಂದು ಅವರು ಹೇಳಿದ್ದಾರೆ. ಸಂಸತ್ ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿ ಮಾಡಿ, 2029ರ ಲೋಕಸಭೆ ಚುನಾವಣೆ ಮತ್ತು ವಿವಿಧ ವಿಧಾನಸಭೆ ಚುನಾವಣೆಗಳು ನಡೆದಲ್ಲಿ, ಭಾರತೀಯ ಪ್ರಜಾಸತ್ತೆ ಬಲಿಷ್ಠವಾಗಬಲ್ಲದು ಮತ್ತು ಅತ್ಯಂತ ಸ್ಪಂದನಶೀಲವಾಗಬಲ್ಲದು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರತಿಪಾದಿಸಿದ್ದಾರೆ.

ಲೋಕಸಭೆ ಸ್ಥಾನ ಸಂಖ್ಯೆ 850ಕ್ಕೆ ಹೆಚ್ಚಳ ಶೀಘ್ರ

ಪುಟ ೧➔ ಪ್ರಸ್ತುತ 2011ರ ಜನಗಣತಿ ಅಂಕಿ-ಅಂಶಗಳು ಲಭ್ಯವಿದ್ದು, 2027ರ ಜನಗಣತಿ ಪ್ರಕ್ರಿಯೆ ಆರಂಭವಾಗಿದೆ. ಹೊಸ ಅಂಕಿ-ಅಂಶಗಳ ಆಧಾರದ ಮೇಲೆ ಕ್ಷೇತ್ರಗಳ ಮರುರಚನೆ ನಡೆಯಲಿದೆ. ಈ ಕಾನೂನು ಜಾರಿಗೆ ಬಂದ ನಂತರ ಮಹಿಳಾ ಮೀಸಲಾತಿ 15 ವರ್ಷಗಳ ಕಾಲ ಮಾನ್ಯವಾಗಿದ್ದು, ನಂತರ ಸಂಸತ್ತು ಅಗತ್ಯವಿದ್ದರೆ ಅವಧಿಯನ್ನು ವಿಸ್ತರಿಸಬಹುದು. ಈ ತಿದ್ದುಪಡಿಯಿಂದ ಲೋಕಸಭೆಯಲ್ಲಿ ಸುಮಾರು 273 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುವ ಸಾಧ್ಯತೆ ಇದೆ. ಒಟ್ಟಾರೆ, ಈ ಕ್ರಮವು ಮಹಿಳೆಯರ ರಾಜಕೀಯ ಪ್ರತಿನಿಧಿತ್ವವನ್ನು ವೇಗವಾಗಿ ಹೆಚ್ಚಿಸಲು ಮತ್ತು 2029ರ ಚುನಾವಣೆಗೆ ಮುನ್ನ ಸಮಾನ ಅವಕಾಶಗಳನ್ನು ಕಲ್ಪಿಸಲು ಮಹತ್ವದ ಹೆಜ್ಜೆಯಾಗಿದೆ.

ಸಿಎಂ ರಾಜಕೀಯ ಕಾರ್ಯದರ್ಶಿ ವಜಾ

ಪುಟ ೧➔ ಪಕ್ಷದ ಅಭ್ಯರ್ಥಿಯನ್ನೇ ಸೋಲಿಸಲು ಷಡ್ಯಂತ್ರ ಮಾಡಿದ್ದರು ಎಂದು ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರುಗಳೇ ಆರೋಪಿಸಿ, ಈ ಬಗ್ಗೆ ಹೈಕಮಾಂಡ್‌ಗೆ ದೂರು ನೀಡಿದ್ದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡದ ಆರೋಪ ನಜೀರ್ ಅಹ್ಮದ್ ಮೇಲೆ ಇತ್ತು. ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ನಜೀರ್ ಅಹ್ಮದ್‌ಗೆ ರಾಜೀನಾಮೆ ನೀಡುವಂತೆ ಎರಡು ದಿನಗಳ ಹಿಂದೆಯೇ ಸೂಚಿಸಿದ್ದರೂ ಅವರು ರಾಜೀನಾಮೆ ನೀಡಿರಲಿಲ್ಲ. ಈಗ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡದವರ ವಿರುದ್ಧ ಕ್ರಮ

ಪುಟ ೧➔ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಈ ಬಗ್ಗೆ ಮಾಹಿತಿ ಇತ್ತು ಹಾಗಾಗಿ ಅವರನ್ನು ವಜಾಗೊಳಿಸುವ ತೀರ್ಮಾನ ಕೈಗೊಂಡಿದ್ದಾರೆ ಎಂದು ಹೇಳಿದರು.

❝ ಯಾವುದೇ ಶಾಸಕರು ಹೈಕಮಾಂಡ್ ಭೇಟಿ ಮಾಡುವುದು ತಪ್ಪಲ್ಲ. ಆದರೆ, ಮಾಧ್ಯಮದವರ ಮುಂದೆ ಏನೇನೋ ಮಾತನಾಡಿ ಅವರ ಪ್ರಶ್ನೆಗೆ ಬಲಿಯಾಗಬೇಡಿ ಎಂದು ನಾನು ಹೇಳಿದ್ದೇನೆ. ಯಾವುದೇ ಪಕ್ಷಕ್ಕೆ ಶಿಸ್ತು ಮುಖ್ಯ. ಶಿಸ್ತು ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲೇಬೇಕಾಗುತ್ತದೆ.
■ **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ನೋಯ್ಡಾ ಹಿಂಸೆ ಯೋಜಿತ ಕೃತ್ಯ

ಪುಟ ೧➔ ಮೇಲ್ನೋಟಕ್ಕೆ ಇದೊಂದು ಪೂರ್ವನಿಯೋಜಿತ ಕೃತ್ಯವಾಗಿ ಕಾಣಿಸುತ್ತದೆ ಎಂದು ಗೌತಮ ಬುದ್ಧ ನಗರ ಪೊಲೀಸ್ ಆಯುಕ್ತೆ ಲಕ್ಷ್ಮಿ ಸಿಂಗ್ ತಿಳಿಸಿದ್ದಾರೆ.

ಇನ್ನಷ್ಟು ಬಂಧನ ಸಾಧ್ಯತೆ: ಬೆಳಗ್ಗೆ 5 ಗಂಟೆ ವೇಳೆಗೆ ಮೂರು ವಿಭಿನ್ನ ಸ್ಥಳಗಳಲ್ಲಿ ಗುಂಪುಗಳು ಸಂಶಯಾಸ್ಪದ ರೀತಿಯಲ್ಲಿ ಸೇರಿಕೊಂಡಿದ್ದವು. ತುಸು ಹೊತ್ತು ಮಾತುಕತೆ ನಡೆಸಿದ ನಂತರ ಮೂರು ಗುಂಪುಗಳು 15 ನಿಮಿಷಗಳಲ್ಲಿ ಶಾಂತಿಯುತವಾಗಿ ಜಾಗ ಖಾಲಿ ಮಾಡಿದ್ದವು. ಕಾರ್ಮಿಕರ ಗುಂಪಲ್ಲಿದ್ದ ಸಂಶಯಾಸ್ಪದ ವ್ಯಕ್ತಿಗಳನ್ನು ವಶಕ್ಕೆ ತೆಗೆದುಕೊಂಡಿದ್ದು, ಪ್ರಕರಣದಲ್ಲಿ ಇನ್ನಷ್ಟು ಬಂಧನವಾಗುವ ಸಾಧ್ಯತೆಯಿದೆ.

ರಾಜ್ಯದಲ್ಲೇ ಬೀದರ್‌ನಲ್ಲಿ ಅತಿ ಹೆಚ್ಚು | ಏ.17ರವರೆಗೆ ಆರೆಂಜ್ ಅಲರ್ಟ್ ಘೋಷಣೆ


ಬಿಸಿಲಿಗೆ ಬಸವ ಕಲ್ಯಾಣದ ಮಂದಿ ಹೈರಾಣ

▸ ರಾಚಪ್ಪಾ ಜಂಬಗಿ

•ಕಲಬುರಗಿ: ಬಿಸಿಲು ನಾಡು ಎಂದು ಖ್ಯಾತಿ ಪಡೆದಿರುವ ಕಲ್ಯಾಣ ಕರ್ನಾಟಕ ಭಾಗದ ಹೆಬ್ಬಾಗಿಲು ಬೀದರ್ ಜಿಲ್ಲೆಯಲ್ಲೇ ರಾಜ್ಯದ ಅತಿ ಹೆಚ್ಚು ತಾಪಮಾನ ಅಂದರೆ ಗರಿಷ್ಠ 43.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಸೇರಿದಂತೆ ಭಾಗದ ಮಂದಿ ಬಿಸಿಲಿನ ತಾಪಮಾನಕ್ಕೆ ಅಕ್ಷರಶಃ ಹೈರಾಣಾಗಿದ್ದಾರೆ.

ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದರೆ, ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಈಗಾಗಲೇ 40ರ ಗಡಿ ದಾಟಿದ್ದು, ಮುಂಬರುವ ದಿನಗಳಲ್ಲಿ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಾಖದ ಅಲೆ: ಆರೆಂಜ್ ಅಲರ್ಟ್: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಕಲಬುರಗಿ



ಸೇರಿದಂತೆ ರಾಜ್ಯದ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಕಲಬುರಗಿ, ವಿಜಯಪುರ, ಬೀದರ್ ಜಿಲ್ಲೆ ಸೇರಿದಂತೆ ವಿವಿಧೆಡೆ ಏ.15ರಿಂದ 17ರವರೆಗೆ ಶಾಖದ ಅಲೆಗಳು (ಹೀಟ್‌ವೇವ್) ಹೆಚ್ಚಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಅಗತ್ಯ ಸಲಹೆಗಳನ್ನು ನೀಡಿದೆ.

ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ತಾಪಮಾನ: ಕಲ್ಯಾಣ ಕರ್ನಾಟಕದ ಭಾಗದ ಹೆಬ್ಬಾಗಿಲು ಬೀದರ್ ಜಿಲ್ಲೆಯ ಕಮಲನಗರ ತಾಲೂಕಿನ ದಬಕಾ ಹೋಬಳಿಯಲ್ಲಿ ಸೋಮವಾರ ರಾಜ್ಯದಲ್ಲೇ ಹೆಚ್ಚು ಗರಿಷ್ಠ 43.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದರೇ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ 42 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಜೊತೆಗೆ ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ 42 ಸೆಲ್ಸಿಯಸ್‌ದಿಂದ 43.6 ಸೆಲ್ಸಿಯಸ್ ನಡುವೆ ಗರಿಷ್ಠ ತಾಪಮಾನ ದಾಖಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ಮಾಹಿತಿಯನ್ವಯ ರಾಯಚೂರಿನ 16, ಕಲಬುರಗಿಯ 9, ಬೀದರ್ ಮತ್ತು ಯಾದಗಿರಿಯ ತಲಾ 6 ವಿಜಯಪುರಿನ 3, ಬಾಗಲಕೋಟೆಯ 2 ಹಾಗೂ ಕೊಪ್ಪಳದಲ್ಲಿ 1 ಸ್ಥಳದಲ್ಲಿ 42 ಸೆಲ್ಸಿಯಸ್ ಗಿಂತ ಹೆಚ್ಚು ತಾಪಮಾನ ದಾಖಲಾಗಿದೆ.

ರಾಜ್ಯದ ತುಮಕೂರು, ವಿಜಯಪುರ, ಬೆಳಗಾವಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಂಗಳವಾರ ಏ.14ರಂದು ಗರಿಷ್ಠ ತಾಪಮಾನ 42ರಿಂದ 44.30 ಡಿಗ್ರಿ ಸೆಲ್ಸಿಯಸ್ ನಡುವೆ ತಾಪಮಾನ ದಾಖಲಾಗಿದೆ.

ಏನು ಮಾಡಬಾರದು?

ಸಾರ್ವಜನಿಕರು ಬಿಸಿಲಿನ ಅವಧಿಯಲ್ಲಿ ಕೊಡೆ ಇಲ್ಲದೆ ಹೊರ ಹೋಗದಿರಿ. ಸಿಂಥೆಟಿಕ್ ಉಡುಪು ಧರಿಸಿ, ಹೆಚ್ಚೆಚ್ಚು ನೀರು ಸೇವಿಸಿ ಶ್ರಮದಾಯಕ ಕೆಲಸ ಮಾಡದಿರಿ. ಬಿಸಿಲಿನಿಂದ ರಕ್ಷಿಸಿಕೊಳ್ಳಿ.

ಏ.13ರಂದು 42 ಡಿಗ್ರಿ ಮೇಲ್ಪಟ್ಟ ತಾಪಮಾನ ದಾಖಲಾಗಿರುವ ರಾಜ್ಯದ ಪ್ರಮುಖ ಸ್ಥಳ

ಬೀದರ್-ಕಮಲನಗರ	43.6 ಡಿಗ್ರಿ ಸೆಲ್ಸಿಯಸ್
ಕಲಬುರಗಿ-ಔರಾದ್	43 ಡಿಗ್ರಿ ಸೆಲ್ಸಿಯಸ್
ಬೀದರ್-ಔರಾದ್	42.3 ಡಿಗ್ರಿ ಸೆಲ್ಸಿಯಸ್
ಬಾಗಲಕೋಟೆ- ಮುಧೋಳ	42.7 ಡಿಗ್ರಿ ಸೆಲ್ಸಿಯಸ್
ಬೀದರ್-(ಜನವಾಡಾ)	42.0 ಡಿಗ್ರಿ ಸೆಲ್ಸಿಯಸ್
ಬೀದರ್- ಔರಾದ್ (ಸಂತಪುರ)	42.5 ಡಿಗ್ರಿ ಸೆಲ್ಸಿಯಸ್

❝ ಏ.15 ರಿಂದ 17ರ ವರೆಗೆ ಶಾಖ ಅಲೇ ಹಿನ್ನೆಲೆ ಆರೆಂಜ್ ಅಲರ್ಟ್ ಘೋಷಣೆಯಾಗಿದ್ದು, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಸಾರ್ವಜನಿಕರು ಮಧ್ಯಾಹ್ನ 12ರಿಂದ ಸಂಜೆ 4 ಗಂಟೆ ವರೆಗೆ ಮನೆಯಿಂದ ಹೊರ ಹೋಗುವುದು ಸಾಧ್ಯವಾದಷ್ಟು ತಪ್ಪಿಸಬೇಕು. ಛತ್ರಿ, ಟೋಪಿ ಬಳಸಲು ಸೂಚಿಸಲಾಗಿದೆ. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕೆಂದು ಸಾರ್ವಜನಿಕರಿಗೆ ಈಗಾಗಲೇ ಸಲಹೆ ನೀಡಲಾಗಿದೆ.
■ **ಫೌಜಿಯಾ ತರನ್ನುಮ್,** ಜಿಲ್ಲಾಧಿಕಾರಿ, ಕಲಬುರಗಿ

ಮೋದಿಗೆ ಕರೆ ಮಾಡಿ 40 ನಿಮಿಷ ಟ್ರಂಪ್ ಚರ್ಚೆ



ಪುಟ ೧➔ ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿ ತೆರೆಯುವ ಪ್ರಾಮುಖ್ಯತೆ ಕುರಿತು ಚರ್ಚಿಸಿದ್ದೇವೆ ಎಂದು ಮೋದಿ ಎಕ್ಸ್‌ನಲ್ಲಿ ಹೇಳಿಕೊಂಡಿದ್ದಾರೆ.

ಮೋದಿ ಜತೆ ಧನಾತ್ಮಕ, ಫಲಪ್ರದ ಕರೆ: ಪ್ರಧಾನಿ ಮೋದಿ ಅವರೊಂದಿಗಿನ ಅಧ್ಯಕ್ಷ ಟ್ರಂಪ್ ಅವರ ದೂರವಾಣಿ ಕರೆ ಬಹಳ ಧನಾತ್ಮಕ ಮತ್ತು ಫಲಪ್ರದವಾಗಿತ್ತೆಂದು ಅಮೆರಿಕ ರಾಯಭಾರಿ ಸರ್ಜಿಯೊ ಗೊರ್ ಬಣ್ಣಿಸಿದ್ದಾರೆ. ಮಧ್ಯಪ್ರಾಚ್ಯದ ಪರಿಸ್ಥಿತಿಯ ಬಗ್ಗೆ ಇಬ್ಬರು ನಾಯಕರು ಮಾತುಕತೆ ನಡೆಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಗೊಳಿಸುವಲ್ಲಿ ಭಾರತವೂ ಪ್ರಮುಖ ಪಾತ್ರ ವಹಿಸುತ್ತಿದೆ. ಅಮೆರಿಕವೂ ಭಾರತದ ಭಾಗವಹಿಸುವಿಕೆ ಬಯಸುತ್ತದೆ. ಮಾತುಕತೆ ವೇಳೆ, ನಾವೆಲ್ಲರೂ (ಟ್ರಂಪ್ ಆಡಳಿತ) ನಿಮ್ಮನ್ನು ಪ್ರೀತಿಸುತ್ತೇವೆಂದು ಮೋದಿಯವರಿಗೆ ಟ್ರಂಪ್ ಹೇಳಿರುವುದಾಗಿ ಸರ್ಜಿಯೊ ತಿಳಿಸಿದ್ದಾರೆ.



ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಆಚರಿಸಲಾಯಿತು.

ಹಿಂದುಗಳ ಸಹನೆ ಪರೀಕ್ಷೆ ಮಾಡಬೇಡಿ

ಹುಬ್ಬಳ್ಳಿ: ಲವ್ ಜಿಹಾದ್ ನಡೆಯುತ್ತಿದ್ದವು. ಈಗ ಜಿಮ್ ಜಿಹಾದ್ ಸಹ ನಡೆಯುತ್ತಿವೆ. ಕಾಲೇಜ್‌ಗಳಲ್ಲಿ ಇಂತಹ ಘಟನೆಗೆ ಹೆಚ್ಚಾಗಿವೆ. ಡ್ರಗ್ಸ್ ಮಾರಾಟ ಅವ್ಯಾಹತವಾಗಿ ನಡೆಯುತ್ತಿದೆ. ಈಗಲಾದರೂ ಜನ ಹಾಗೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಹಾಗೂ ಇಲಾಖೆ ಯಾರನ್ನು ರಕ್ಷಿಸಲು ಹೋಗಿ ಅಮಾಯಕರು ಬಲಿಯಾಗಬಾರದು. ಹಿಂದು ಸಮಾಜದ ಸಹನೆ ಪರೀಕ್ಷೆ ಮಾಡಬಾರದು. ಮುಂದೆ ಆಗುವ ಅನಾಹುತಕ್ಕೆ ಸರ್ಕಾರ ಹೊಣೆಯಾಗಲಿದೆ ಎಂದು ಎಚ್ಚರಿಕೆ ನೀಡಿದರು. ಸರ್ಕಾರದಲ್ಲಿ ಮುಖ್ಯಮಂತ್ರಿ, ಸಚಿವರ ಈ ಬಗ್ಗೆ ಮಾತನಾಡುತ್ತಿಲ್ಲ. ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ, ತುಷ್ಟೀಕರಣ ನೀತಿ ಅನುಸರಿಸುತ್ತಿದ್ದಾರೆ. ಇಂತಹ ಘಟನೆಗಳು ಸಮಾಜದಲ್ಲಿ ನಡೆದಾಗ ಎಲ್ಲ ಪಕ್ಷಗಳು, ಸಮಾಜ, ಜಾತಿಗಳು ವಿರೋಧಿಸಬೇಕು. ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಈ ಬಗ್ಗೆ ನಾವು ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳುತ್ತೇವೆ. ಗೃಹ ಸಚಿವರ ಒಳ್ಳೆಯವರಿದ್ದು, ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು ಎಂದು ಆಗ್ರಹಿಸಿದರು.

ಏ.18ರಂದು ಸಮನ್ವಯ ಕಲಾ ಉತ್ಸವ

ಬೆಂಗಳೂರು: ಶ್ರೀ ರಾಜರಾಜೇಶ್ವರಿ ಕಲಾನಿಕೇತನ್ ನೃತ್ಯ ಸಂಸ್ಥೆ ವತಿಯಿಂದ ಏ.18 ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ಸಮನ್ವಯ ಕಲಾ ಉತ್ಸವವನ್ನು ಆಯೋಜಿಸಲಾಗಿದೆ.

ಭಾರತೀಯ ನಾಟ್ಯರಂಗದಲ್ಲಿ ಡಾ.ವೀಣಾ ಮೂರ್ತಿ ವಿಜಯ್ ಹಿರಿಯ ನೃತ್ಯಗುರುಗಳಾಗಿದ್ದು, ಐದು ದಶಕಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇವರ ನೇತೃತ್ವದ ಶ್ರೀ ರಾಜರಾಜೇಶ್ವರಿ ಕಲಾನಿಕೇತನ್ ನೃತ್ಯ ಸಂಸ್ಥೆಗೆ ಈ ವರ್ಷ ಸುವರ್ಣ ಸಂಭ್ರಮ. ಕಲಾವಿದರಿಗೆ ವೇದಿಕೆ ಒದಗಿಸಿ ಅವರನ್ನು ಪ್ರೋತ್ಸಾಹಿಸಲು ಅನೇಕಾ ನೃತ್ಯೋತ್ಸವಗಳನ್ನು ನಡೆಸುತ್ತಾ ಬಂದಿದ್ದಾರೆ. ಸಮಕಾಲೀನ ವಿಷಯ, ವಸ್ತುಗಳನ್ನು ಆಯ್ದುಕೊಂಡು ನೃತ್ಯರೂಪಕಗಳನ್ನು, ವಿನೂತನ ನೃತ್ಯಪ್ರಯೋಗಗಳನ್ನು ಸಮನ್ವಯದ ಶೀರ್ಷಿಕೆಯಡಿ ಆಯೋಜಿಸುತ್ತ ಬಂದಿದ್ದು, ಅದರಂತೆ ಕಲೋತ್ಸವದಲ್ಲಿ ವೈವಿಧ್ಯಪೂರ್ಣ ವಿವಿಧ ಕಲಾವಿಧರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ. ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಅನಾರೋಗ್ಯವನ್ನು ಸೃಷ್ಟಿಸುತ್ತಿರುವ ಕಸದ ಸಮಸ್ಯೆಯ ಬಗ್ಗೆ ಉತ್ತಮ ಸಂದೇಶಾತ್ಮಕ ಕಥಕ್ –ಸಮಕಾಲೀನ ನೃತ್ಯ ಶೈಲಿಯ ನೃತ್ಯರೂಪಕ ಗಬ್ಬು ಕಥೆ, ಪುರುಷನರ್ತಕರಾಗಿ ಗಮನ ಸೆಳೆದಿರುವ ನೃತ್ಯಕಲಾವಿದ ಸೂರ್ಯ ಎನ್ ರಾವ್ ಅವರು, ವಿಶಿಷ್ಟ ರಾವಣ ವ್ಯಕ್ತಿತ್ವದ ಬಗ್ಗೆ ನೂತನ ಆಯಾಮವನ್ನು ತೆರೆದಿಡುವ ಕುತೂಹಲ ಭರಿತವಾದ ಅಂಶಗಳ ಸುತ್ತ ಪರಿಭ್ರಮಿಸುವ ರಾವಣ ಏಕವ್ಯಕ್ತಿ ನೃತ್ಯರೂಪಕವನ್ನು ಅನಾವರಣಗೊಳಿಸಲಿದ್ದಾರೆ.

14 ವರ್ಷದ ಮಗಳ ಕೊಂದು ತಾಯಿ ಆತ್ಮಹತ್ಯೆ

ಬೆಂಗಳೂರು: ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಾಯಿ–ಮಗಳ ಸಾವಿನ ದಾರುಣ ಘಟನೆಯೊಂದು ನಡೆದಿದೆ. 14 ವರ್ಷದ ಮಗಳನ್ನು ಕೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೈಟ್‌ಫೀಲ್ಡ್‌ನ ಇಮ್ಮಡಿಹಳ್ಳಿಯ ನಿವಾಸದಲ್ಲಿ ಈ ಘಟನೆ ಸಂಭವಿಸಿದೆ. ಮೃತ ತಾಯಿಯನ್ನು ಸುವರ್ಣ (40) ಮತ್ತು ಮಗಳನ್ನು ಕಾರುಣ್ಯ (14) ಎಂದು ಗುರುತಿಸಲಾಗಿದೆ. ಮನೆಯ ಕೋಣೆಯಲ್ಲಿ ಮಗಳು ಕಾರುಣ್ಯಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ ಸುವರ್ಣ, ನಂತರ ತಾವೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಗೆ ನಿಖರವಾದ ಕಾರಣ ಇನ್ನು ತಿಳಿದುಬಂದಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ವೈಟ್‌ಫೀಲ್ಡ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಿರುಸುದ್ದಿ

ಸಂಪುಟಕ್ಕೆ ವಿಸ್ತರಣೆ ಖಚಿತ: ಶಾಸಕ ತನ್ವೀರ್‌ಸೇಠ್

ಮೈಸೂರು: ಸಚಿವ ಸಂಪುಟಕ್ಕೆ ಸರ್ಜರಿ ಆಗುವುದು ಖಚಿತವಾಗಿದೆ ಎಂದು ಶಾಸಕ ತನ್ವೀರ್‌ಸೇಠ್ ಹೇಳಿದರು. ಸಚಿವ ಸ್ಥಾನಕ್ಕಾಗಿ ಆಗ್ರಹಿಸಿ ಹಿರಿಯ ಶಾಸಕರು ಹೈಕಮಾಂಡ್ ಭೇಟಿ ಮಾಡಲು ದೆಹಲಿಗೆ ತೆರಳಿರುವ ಸಂಬಂಧ ಪ್ರತಿಕ್ರಿಯಿಸಿ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನನ್ನು ದೆಹಲಿಗೆ ಕರೆದಿದ್ದರು. ನಾನು ದೆಹಲಿಗೆ ಹೋಗಲ್ಲ, ನಾನು ಸಚಿವ ಸ್ಥಾನದ ಆಕಾಂಕ್ಷಿ ಎಂದರು. ಸಿಎಂ ಆಪ್ತರ ಟಾರ್ಗೆಟ್ ಮಾಡಲಾಗುತ್ತಿದೆ ಎಂಬ ಆರೋಪ ಕುರಿತು ಪ್ರತಿಕ್ರಿಯಿಸಿ, ಯಾರನ್ನು ಟಾರ್ಗೆಟ್ ಮಾಡಿಲ್ಲ ಮಾಡುವುದೂ ಇಲ್ಲ, ಯಾರಿಗೆ ಜವಾಬ್ದಾರಿ ನೀಡಲಾಗಿತ್ತು ಅವರ ಮೇಲೆ ಕ್ರಮ ಆಗಿದೆ. ಕ್ರಮ ಸರಿಯಿದೆಯೆಂದು ಈ ಬಗ್ಗೆ ಕ್ರಮ ಕೈಗೊಂಡವರು ಹೇಳಲಿ ಎಂದು ಹೇಳಿದರು.

ಕೊರಳಿಗೆ ಜೋಕಾಲಿ ಸುತ್ತಿಕೊಂಡು ಬಾಲಕಿ ಸಾವು

ಚಿಕ್ಕಮಗಳೂರು: ಮನೆಯಲ್ಲಿ ಜೋಕಾಲಿ ಆಡುತ್ತಿದ್ದ ಬಾಲಕಿ ಕೊರಳಿಗೆ ಆಕಸ್ಮಿಕವಾಗಿ ಸೀರೆ ಬಿಗಿದುಕೊಂಡ ಪರಿಣಾಮ ಮೃತಪಟ್ಟಿರುವ ಧಾರುಣ ಘಟನೆ ತಾಲೂಕಿನ ಮಲ್ಲೇನಹಳ್ಳಿ ಬಳಿ ಹೆಬ್ಬಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ. 10 ವರ್ಷದ ಬಾಲಕಿ ಲೇಖನ ಮೃತ ದುರ್ದೈವಿಯಾಗಿದ್ದಾಳೆ.



ಶಾಲೆಗೆ ರಜೆಯಿದ್ದ ಹಿನ್ನಲೆಯಲ್ಲಿ ಆಕೆಯನ್ನು ಮನೆಯಲ್ಲಿ ಬಿಟ್ಟು ಪೋಷಕರು ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಆಕೆ ಸೀರೆಯನ್ನು ಜೋಕಾಲಿ ಮಾಡಿಕೊಂಡು ಆಟವಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ. ವಿಷಯ ತಿಳಿಯುತ್ತಿದ್ದಂತೆ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದು, ಮಗುವನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಗುಂಡಿನ ದಾಳಿ: ಗ್ರಾಪಂ ಸದಸ್ಯ ಭೀಕರ ಹತ್ಯೆ

ವಿಜಯಪುರ: ದುಷ್ಕರ್ಮಿಗಳ ಗುಂಡಿನ ದಾಳಿಗೆ ಗ್ರಾಪಂ ಸದಸ್ಯ ಭೀಕರವಾಗಿ ಸಾವಿಗೀಡಾದ ಘಟನೆ ಗುಮ್ಮಟ ನಗರಿಯ ಹೊರ ವಲಯ ಅಲಿಯಾಬಾದ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ಮಂಗಳವಾರ ಸಂಜೆ ನಡೆದಿದೆ. ಅಲಿಯಾಬಾದ ಗ್ರಾಪಂ ಸದಸ್ಯ, ಪಾಂಗರುನ ದೊಡ್ಡಿ ನಿವಾಸಿ ರಾಜು ಕರೆ (48) ಮೃತಪಟ್ಟ ವ್ಯಕ್ತಿ.



ರಾಜು ಕರೆ ತಮ್ಮ ಥಾರ್ ವಾಹನದಲ್ಲಿ ತೆರಳುತ್ತಿದ್ದಾಗ, ದುಷ್ಕರ್ಮಿಗಳು ಟಿಪ್ಪರ್ ಮೂಲಕ ಡಿಕ್ಕಿ ಹೊಡೆಸಿದ್ದು, ಬಳಿಕ ಜೀಪಿನ ಮೇಲೆ ಮನಬಂದಂತೆ 6 ಸುತ್ತಿನ ಗುಂಡಿನ ದಾಳಿ ನಡೆಸಿದ್ದು, ಜೀಪ್ ಡೋರ್ ಓಪನ್ ಆಗದಕ್ಕೆ ನಂತರ ಜೀಪಿನ ಮೇಲೆ ಕಲ್ಲು ಎತ್ತಿ ಹಾಕಿದ್ದಾರೆ. ದುಷ್ಕರ್ಮಿಗಳ ಭೀಕರ ದಾಳಿಯಿಂದ ರಾಜು ಕರೆ ಥಾರ್ ಜೀಪಿನಲ್ಲಿಯೇ ಗಂಭೀರ ಗಾಯಗೊಂಡು ಸ್ಥಳದಲ್ಲಿಯೇ ಅಸುನೀಗಿದ್ದಾನೆ. ಈ ಹತ್ಯೆಗೆ ಹಳೇ ವೈಷಮ್ಯವೇ ಕಾರಣ ಇರಬಹುದು ಎಂದು ಶಂಕಿಸಲಾಗಿದೆ.

ಆರ್ಥಿಕ ಶಕ್ತಿ ಎಲ್ಲರಿಗೂ ಲಭಿಸಿದಾಗ ಸ್ವಾವಲಂಬನೆ ಸಾಧ್ಯ: ಸಿಎಂ

ಜಾತಿ ವಿಮುಕ್ತಿಗೆ ಶಿಕ್ಷಣ ಅಸ್ತ್ರ

ಬೆಂಗಳೂರ: ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಎಲ್ಲರಿಗೂ ಲಭಿಸಿದಾಗ ಮಾತ್ರ ಸ್ವಾವಲಂಬನೆ ಸಾಧ್ಯ. ಎಲ್ಲ ಸಂಕೋಲೆಗಳಿಂದ ವಿಮುಕ್ತರಾಗಲು ಶಿಕ್ಷಣವೊಂದೇ ಪ್ರಬಲ ಅಸ್ತ್ರವೆಂದು ಡಾ. ಬಿ.ಆರ್. ಅಂಬೇಡ್ಕರ್ ಸಾರಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು, ಜಾತಿ ವ್ಯವಸ್ಥೆ ಇರುವವರೆಗೂ ಅಸ್ಪೃಶ್ಯತೆ ಇರುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಇರುವ ವರೆಗೆ ಜಾತೀಯತೆ ಇರಲಿದೆ. ಈ ಸಮಾಜದಲ್ಲಿ ಇವುಗಳನ್ನು ಹೋಗಲಾಡಿಸದಿದ್ದರೆ ದೇಶಕ್ಕೆ ಸ್ವಾತಂತ್ರ ಬಂದಿರುವುದು ಯಶಸ್ವಿಯಾಗಲಾರದು ಎಂದು ಸ್ಪಷ್ಟವಾಗಿ ಹೇಳಿದ್ದರು. ಇವತ್ತಿಗೂ ಸಂಪೂರ್ಣವಾಗಿ ಸಮಾನತೆಯನ್ನು ಸಾಧಿಸಲಾಗಿದೆ ಇರುವುದು ನೋವಿನ ಸಂಗತಿ ಎಂದು ಸಿದ್ದರಾಮಯ್ಯ ವಿಷಾಧಿಸಿದರು.

ವೈಜ್ಞಾನಿಕತೆಯುಳ್ಳ ಶಿಕ್ಷಣ ಬೇಕು: ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನದ ಮೂಲಕ ಎಲ್ಲಾ ಭಾರತೀಯರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದಲೇ ದೇಶದ ಸಂವಿಧಾನವನ್ನು ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಎಂದು ಪರಿಗಣಿಸಲಾಗುತ್ತದೆ. ಅಂಬೇಡ್ಕರ್ ಅವರು ವಿದ್ಯಾವಂತರಾಗದೆ ಹೋಗಿದ್ದರೆ, ಅವರಲ್ಲಿ ಹೋರಾಟದ ಮನೋಭಾವ ಇರದೇ ಹೋಗಿದ್ದರೆ ಇಂಥ ಸಂವಿಧಾನ ಸಿಗಲು ನಮಗೆ ಸಾಧ್ಯವಿರಲಿಲ್ಲ, ಆದಕ್ಕಾಗಿಯೇ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಅಂಬೇಡ್ಕರ್, ರಾಮ್ ಮನೋಹರ್ ಲೋಹಿಯಾ, ಜವಾಹರ್ ಲಾಲ್ ನೆಹರು ಅವರು ಪಡೆದಂತಹ ಶಿಕ್ಷಣ ಪಡೆಯಬೇಕು. ವೈಚಾರಿಕತೆ, ವೈಜ್ಞಾನಿಕತೆ, ಮಾನವೀ ಯತೆಯಿಂದ ಕೂಡಿರುವ ಶಿಕ್ಷಣ ನಮಗೆ ಸಿಗಬೇಕು ಎಂದರು.



ಶೋಷಿತರಿಗೆ ಹಕ್ಕು ಕೊಟ್ಟವರು ಅಂಬೇಡ್ಕರ್: ಮಹದೇವಪ್ಪ

ಅಸ್ಪೃಶ್ಯತೆಯ ಕಾರಣಕ್ಕೆ ಕುಡಿಯಲು ನೀರು ಸಿಗದೇ ಶಿಕ್ಷಣ ದೂರವಾಗಿ, ಜನರು ತಮ್ಮ ಹಕ್ಕುಗಳಿಗಾಗಿ ಒದ್ದಾಟ ನಡೆಸುತ್ತಿದ್ದ ಸಂದರ್ಭವನ್ನು ಕಣ್ಣಾರೆ ಕಂಡು, ತಾವೂ ಅದನ್ನು ಅನುಭವಿಸಿ ಮುಂದೆ ಶಿಕ್ಷಣ ಎಂಬ ಸಂಜೀವಿನಿಯ ಮೂಲಕವೇ ದೇಶದ ಜನರಿಗೆ ಅದರಲ್ಲೂ ಶೋಷಿತ ವರ್ಗದ ಜನರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ಕೆಲಸ ಮಾಡಿದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಸಚಿವ ಡಾ. ಎಚ್.ಸಿ.ಮಹದೇವಪ್ಪ ಹೇಳಿದರು. ಬಾಬಾ ಸಾಹೇಬರು ದೇಶದ ಬಹು ಜನರ ಬದುಕಿನ ಆಶಯಕ್ಕೆ ವಿರುದ್ಧವಾಗಿದ್ದ ಮನುಸ್ಮೃತಿಯನ್ನು ಸುಟ್ಟು, ಕುಡಿಯುವ ನೀರಿಗಾಗಿ ನಡೆದ ಜಗತ್ತಿನ ಮೊದಲ ಹೋರಾಟವಾದ ಮಹಾಡ್ ಚಳವಳಿಯ ನೇತೃತ್ವ ವಹಿಸಿದ್ದರು. ಬಹು ಜನರ ಪರವಾಗಿ, ಪ್ರಜಾಪ್ರಭುತ್ವ ಉಳಿವಿಗಾಗಿ ಬಹುದೊಡ್ಡ ಧರ್ಮಯುದ್ಧ ಮಾಡಿದ ಜಗತ್ತಿನ ಮಹಾನ್ ನಾಯಕ ಎಂದರೆ ಅದು ಬಾಬಾಸಾಹೇಬರು ಎಂದು ಬಣ್ಣಿಸಿದರು.

ಸರ್ಕಾರ ನಡೆಸುವ ವಸತಿಶಾಲೆಗಳಲ್ಲಿ ಶೇ. 97.22 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪಿಯು ಪರೀಕ್ಷೆಯಲ್ಲಿಯೂ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿರುವುದು ಇದು ಸರ್ಕಾರದ ಹೆಗ್ಗಳಿಕೆ ಎಂದರು. ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕರಾದ ರಿಜ್ವಾನ್ ಅರ್ಷದ್, ಭೋಜೇಗೌಡ, ಗೋವಿಂದರಾಜು, ಮಾಜಿ ಸಂಸದ ಚಂದ್ರಪ್ಪ, ಮಾಜಿ ಸಚಿವ ಆಂಜನೇಯ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮುಂತಾದವರು ಉಪಸ್ಥಿತರಿದ್ದರು.

ಅಂಬೇಡ್ಕರ್ ಕೊಡುಗೆ ಅಪಾರ: ಬೊಮ್ಮಾಯಿ

ಬಿ.ಆರ್.ಅಂಬೇಡ್ಕರ್ ಕಾಲಾತೀತ ನಾಯಕ

ಬೆಂಗಳೂರು: ಕೆಲವರು ಕಾಲಕ್ಕೆ ಸೀಮಿತವಾದ ನಾಯಕರಿರುತ್ತಾರೆ. ಆದರೆ, ಡಾ. ಅಂಬೇಡ್ಕರ್ ಹಾಗಲ್ಲ, ಅವರು ಕಾಲಾತೀತ ನಾಯಕ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಏರ್ಪಡಿಸಿದ ಸಂವಿಧಾನ ಕರ್ತೃ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಮಹಾನ್ ಚಿಂತಕರು ಸದಾ ಜೀವಂತರಾಗಿರುತ್ತಾರೆ. ಅಂಥವರಲ್ಲಿ ಡಾ.ಅಂಬೇಡ್ಕರ್ ಅವರೂ ಒಬ್ಬರು. ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಇವೆರಡನ್ನೂ ಪಡೆದವರು ಡಾ. ಅಂಬೇಡ್ಕರ್ ಅವರು ಎಂದು ವಿಶ್ಲೇಷಿಸಿದರು. ಭಾರತಕ್ಕೆ ಸಮಾನತೆ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿರುವ ಶ್ರೇಷ್ಠ ವ್ಯಕ್ತಿ ಬಾಬಾಸಾಹೇಬ ಅಂಬೇಡ್ಕರ್ ಅವರು ಎಂದು ವಿವರಿಸಿದರು.

ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಅಂಬೇಡ್ಕರ್ ಅವರ ಜನ್ಮದಿನವನ್ನು ದಲಿತರು ಮಾತ್ರ ಕೊಂಡಾಡಬೇಕೇ? ಅಂಬೇಡ್ಕರ್ ಅವರು ನಮ್ಮ ಅಸ್ಮಿತೆ, ನಮ್ಮ ಬೆಳಕು; ನಮಗೆ ದಾರಿದೀಪ ಎಂದು ಕೊಂಡಾಡುತ್ತೇವೆ. ಬಾಬಾಸಾಹೇಬರನ್ನು ಗೌರವಿಸುವಲ್ಲಿ ಬಿಜೆಪಿ ಮೊದಲ ಸ್ಥಾನದಲ್ಲಿದೆ. ಬಿಜೆಪಿ ಮೀಸಲಾತಿ ವಿರೋಧಿ; ಮೀಸಲಾತಿಯನ್ನು ಕಿತ್ತು ಬಿಡುತ್ತಾರೆ ಎಂದು ತಪ್ಪು ಮಾಹಿತಿ ಹರಡುತ್ತಾರೆ. ಮೀಸಲಾತಿ ರದ್ದು ಮಾಡುವುದಾದರೆ ನಾವು ಇಷ್ಟು ದಿನ ಯಾಕೆ ಕಾಯಬೇಕಿತ್ತು ಎಂದು ಪ್ರಶ್ನಿಸಿದರು.



ಮಹಿಳಾ ವಿಧೇಯಕಕ್ಕೆ ಬೆಂಬಲ ಕೊಡಿ

ಎಲ್ಲರೂ ಒಂದಾಗಿ ಭಾರತದ ಭವಿಷ್ಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲಾ ರಾಜಕೀಯ ಬದಿಗೊತ್ತಿ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಬೆಂಬಲ ಕೊಡಿ ಎಂದು ಸಂಸದ ಬಸವರಾಜ್ ಬೊಮ್ಮಾಯಿ ಮನವಿ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏ.16ರಿಂದ ಲೋಕಸಭಾ ವಿಶೇಷ ಅಧಿವೇಶನ ನಡೆಯುತ್ತಿದೆ. ಅತ್ಯಂತ ಸಂತೋಷದಿಂದ ಪಾರ್ಲಿಮೆಂಟ್ ನೋಡುತ್ತಿದ್ದೇವೆ. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರು ವಿಂಗಡನೆ ವಿಚಾರ ಚರ್ಚೆಗೆ ಬರುತ್ತಿದೆ. ಅಂಬೇಡ್ಕರ್ ಅವರ ಚಿಂತನೆಯಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಯಾಗಿದೆ. ಕಾಂಗ್ರೆಸ್‌ನ ಹಿಂದಿನ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಅಪೇಕ್ಷೆ ಕೂಡ ಇದಾಗಿತ್ತು. ಭಾರತದ ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಅನ್ನುವುದು ಎಲ್ಲರ ಅಪೇಕ್ಷೆ ಎಂದರು.

ಸುಪ್ರೀಂ ಕೊಲೀಜಿಯಂನಿಂದ ಶಿಫಾರಸು

ರಾಜ್ಯಕ್ಕೆ ಹೈ ಜಡ್ಜ್ ನೇಮಕ

ಹೊಸದಿಲ್ಲಿ: ದೇಶದ ಉನ್ನತ ನ್ಯಾಯಾಂಗದಲ್ಲಿ ಮಹಿಳಾ ಪ್ರತಿನಿಧಿತ್ವವನ್ನು ಹೆಚ್ಚಿಸುವತ್ತ ಮಹತ್ವದ ಹೆಜ್ಜೆಯಾಗಿ ಸುಪ್ರೀಂ ಕೋರ್ಟ್ ಕೊಲೀಜಿಯಂ ಕೇರಳ ಮತ್ತು ಕರ್ನಾಟಕ ಹೈಕೋರ್ಟ್‌ಗಳಿಗೆ ಹೊಸ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡಿದೆ.

ಕೊಲೀಜಿಯಂ ತನ್ನ ಇತ್ತೀಚಿನ ಸಭೆಯಲ್ಲಿ ಕರ್ನಾಟಕ ಹೈಕೋರ್ಟ್‌ಗೆ ಮೂವರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಸಹ ಒಪ್ಪಿಗೆ ನೀಡಲಾಗಿದೆ. ಇವರಲ್ಲಿ ರಾಜೇಶ್ವರಿ ನಾರಾಯಣ ಹೆಗಡೆ, ಕೆಡಂಬಾಡಿ ಗಣೇಶ್ ಶಾಂತಿ ಹಾಗೂ ಮಹದೇವಪ್ಪ ಬ್ಯಾಂಗೇಶ್ ಸೇರಿದ್ದಾರೆ.

ಕೇರಳ ಹೈಕೋರ್ಟ್‌ಗೆ ಇಬ್ಬರು ಮಹಿಳಾ ವಕೀಲರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಶಿಫಾರಸು ಮಾಡಿದೆ. ಇವರಲ್ಲಿ ಪ್ರೀತಾ ಅರವಿಂದನ್ ಕೃಷ್ಣಮ್ಮ ಮತ್ತು ಲಿಜ್ ಮ್ಯಾಥ್ಯೂ ಅತ್ರಾಪರ್ ಹೆಸರುಗಳು ಸೇರಿವೆ.

ಈ ಶಿಫಾರಸುಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಿರುವುದು ಗಮನಾರ್ಹವಾಗಿದೆ.

ಈ ಕ್ರಮವನ್ನು ಉನ್ನತ ನ್ಯಾಯಾಂಗದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ದೀರ್ಘಕಾಲದಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮಟ್ಟದಲ್ಲಿ ಮಹಿಳಾ ಪ್ರತಿನಿಧಿತ್ವ ಕಡಿಮೆ ಇರುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಕೊಲೀಜಿಯಂ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಂತಿಮವಾಗಿ ಅಂಗೀಕರಿಸಿದ ಬಳಿಕ ಈ ನೇಮಕಾತಿಗಳು ಜಾರಿಗೆ ಬರಲಿವೆ.

ಬಂಧಿತರ ಬಿಡುಗಡೆಗೆ ರವಿಕುಮಾರ್ ಒತ್ತಾಯ

ಬೆಂಗಳೂರು: ಧಾರವಾಡದಲ್ಲಿ ಬಂಧಿತ ಪ್ರತಿಭಟನಾನಿರತ ನಿರುದ್ಯೋಗಿ ಯುವಜನರನ್ನು ಕೂಡಲೇ ಬಿಡುಗಡೆ ಮಾಡದಿದ್ದರೆ ಬಿಜೆಪಿ ಕೂಡ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ವಿಧಾನಪರಿಷತ್ ಪ್ರತಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಎಚ್ಚರಿಸಿದ್ದಾರೆ.

ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಿರುದ್ಯೋಗಿ ಯುವಜನರು ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಹೋರಾಟ ಮಾಡಿದ್ದಾರೆ. ಸರ್ಕಾರ ಕೋರ್ಟಿನ ನೆಪ ಹೇಳಿ ಉದ್ಯೋಗ ಭರ್ತಿ ಮಾಡುತ್ತಿಲ್ಲ. ಕೂಡಲೇ ಉದ್ಯೋಗ ನೀಡಬೇಕು; ನಿರುದ್ಯೋಗಿ ಯುವಜನರನ್ನು ಮಾತುಕತೆಗೆ ಕರೆದು ಉದ್ಯೋಗ ಭರ್ತಿ ಮಾಡಿ ಎಂದು ಒತ್ತಾಯಿಸಿದರು.

ಸರ್ಕಾರ 56 ಸಾವಿರ ಜನರನ್ನು ಉದ್ಯೋಗಕ್ಕೆ ಭರ್ತಿ ಮಾಡುವುದಾಗಿ ತಿಳಿಸಿತ್ತು.

> ಸರ್ಕಾರ ನಿರುದ್ಯೋಗಿ ಯುವಕರಿಗೆ ನಿರುದ್ಯೋಗ ಭತ್ಯೆಯನ್ನೂ ನೀಡಿಲ್ಲ. ಸುಮಾರು 3 ಲಕ್ಷ ಹುದ್ದೆಗಳು ಖಾಲಿ ಇದ್ದರೂ ಅವನ್ನು ಭರ್ತಿ ಮಾಡಿಲ್ಲ, ಪ್ರತಿಭಟನೆಯ ಅವಕಾಶವನ್ನೂ ಕೊಡದೇ ಬಂಧಿಸಿದ್ದನ್ನು ಖಂಡಿಸುತ್ತೇನೆ.
> ■ ಗೋವಿಂದ ಕಾರಜೋಳ, ಸಂಸದ

ಏ.30ರಿಂದ ಪಿಯು ಪರೀಕ್ಷೆ-2

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣಗೊಂಡಿರುವ ಅಥವಾ ಪರೀಕ್ಷೆಗೆ ಗೈರಾದ ಅಭ್ಯರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸದೇ ಏ.30 ರಿಂದ ಆರಂಭವಾಗಲಿರುವ ಪರೀಕ್ಷೆ-2ಕ್ಕೆ ಹಾಜರಾಗಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಪರೀಕ್ಷಾ ಮಂಡಳಿಯು ಪರೀಕ್ಷೆ-2ಕ್ಕೆ ನೋಂದಣಿಯಾಗಲು ಏ. 17 ಕೊನೆಯ ದಿನವಾಗಿದ್ದು, ಮೊದಲನೇ ಪರೀಕ್ಷೆಯಲ್ಲಿ ಫಲಿತಾಂಶ ಪೂರ್ಣಗೊಳಿಸದ ವಿದ್ಯಾರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸುವ ಅಗತ್ಯವಿಲ್ಲ, ಇಂತಹ ವಿದ್ಯಾರ್ಥಿಗಳು ಉಚಿತವಾಗಿ ಪರೀಕ್ಷೆ-2ಕ್ಕೆ ನೋಂದಾಯಿಸಿಕೊಳ್ಳಬಹುದು ಎಂದು ಮಂಡಳಿ ತಿಳಿಸಿದೆ.

ವಿದ್ಯಾರ್ಥಿಗಳು ಮಂಡಳಿಯ ಅಧಿಕೃತ ಲಿಂಕ್ http://tinyurl.com/mvp9k6es ಬಳಸಿ ನೇರವಾಗಿ ನೋಂದಾಯಿಸಿಕೊಳ್ಳಬಹುದು ಅಥವಾ ತಮ್ಮ ಕಾಲೇಜಿನ ಪ್ರಾಂಶುಪಾಲರನ್ನು ಸಂಪರ್ಕಿಸಿ ಪಿಯು ಎಕ್ಸಾಂ ಪೋರ್ಟಲ್ ಮೂಲಕವೂ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಕಾರಣಾಂತರಗಳಿಂದ ಮೊದಲನೇ ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳಿಗೂ ಸಹ ಪ್ರಾಂಶುಪಾಲರ ಲಾಗಿನ್ ಮೂಲಕ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಮಂಡಳಿ ಹೇಳಿದೆ. ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಕಾಲೇಜಿನ ಪ್ರಾಂಶುಪಾಲರ ಲಾಗಿನ್‌ನಲ್ಲಿ ಪ್ರವೇಶಪತ್ರ ಲಭ್ಯವಾಗಲಿದೆ.

ಪ್ರಶ್ನೆ ಕೋಠಿ ಬಳಸಿಕೊಳ್ಳಿ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಶಾಂತಚಿತ್ತದಿಂದ ಸಿದ್ಧತೆ ಮಾಡಿಕೊಳ್ಳುವಂತೆ ಹಾಗೂ ಹೆಚ್ಚಿನ ನೆರವಿಗಾಗಿ ಮಂಡಲಿಯ ಜಾಲತಾಣದಲ್ಲಿ ಲಭ್ಯವಿರುವ ಪ್ರಶ್ನೆ ಕೋಠಿ ಮತ್ತು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

ಎಲೆಚುಕ್ಕಿ ರೋಗ, ಕೊಳೆರೋಗ ನಿಯಂತ್ರಣಕ್ಕಾಗಿ ಔಷಧ ಸಿಂಪಡಣೆ ಅನಿವಾರ್ಯ

ಮೈಲುತುತ್ತ ದರ ಏರಿಕೆ, ಬೆಳೆಗಾರರಿಗೆ ಸಂಕಷ್ಟ

ರಮೇಶ್ ಕರುವಾನೆ

ಶೃಂಗೇರಿ: ಮಲೆನಾಡಿನ ಅಡಕೆ ಬೆಳೆಗಾರರಿಗೆ ಅದೇನೋ ಶಾಪವೋ ಗೊತ್ತಿಲ್ಲ ಒಂದಿಲ್ಲೊಂದು ತಾಪತ್ರಯಗಳು ಅಡಕೆ ತೋಟಗಳಲ್ಲಿ ಕೊಳೆರೋಗ ಎಲೆ ಚುಕ್ಕಿ ಬಾಧೆ ಈಗ ಮತ್ತೊಂದು ಸಂಕಷ್ಟ ಎದುರಾಗಿದೆ. ಕಳೆದ ವರ್ಷಕ್ಕಿಂತ ಶೇ.35ರಷ್ಟು ಮೈಲುತುತ್ತಕ್ಕೆ ದರ ಏರಿಕೆಯಾಗಿ ಬೆಳೆಗಾರರ ಮೇಲೆ ಬರೆಯ ಮೇಲೆ ಬರೆ ಬಿದ್ದಿದೆ.

ಕಳೆದ ವರ್ಷ ಮೈಲುತುತ್ತ ದರ 330 ಇದ್ದಿದ್ದು ಈ ವರ್ಷ 490 ರಿಂದ 500 ದರ ತಲುಪಿದೆ ಹೀಗಾಗಿ ಔಷಧ ಸಿಂಪಡಣೆಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ.

ಬೋರ್ಡೋ ಔಷಧ ಸಿಂಪಡಣೆ: ಅಡಕೆ ತೋಟಗಳಲ್ಲಿ ಕೊಳೆ ರೋಗನಿಯಂತ್ರಣಕ್ಕೆ ಬೋರ್ಡೋ ಮಿಶ್ರಣ ಅತ್ಯವಶ್ಯಕವಾಗಿದ್ದು ಮೈಲುತುತ್ತ ಇಲ್ಲದೆ ಔಷಧ ಸಿಂಪಡಣೆ ಸಾಧ್ಯವಿಲ್ಲ, ಹಿಂಗಾರು ಉದುರುವಿಕೆ, ಎಲೆ ಚುಕ್ಕಿ ರೋಗ, ಕೊಳೆರೋಗ ನಿಯಂತ್ರಣಕ್ಕಾಗಿ ಕನಿಷ್ಟ ಮೂರು ಬಾರಿಯಾದರೂ ಔಷಧ ಸಿಂಪಡಿಸಬೇಕಾಗಿದೆ. ಕಳೆದ ಎರಡು ವರ್ಷದಂತೆ ತಾಲೂಕಿನಲ್ಲಿ ಅತಿವೃಷ್ಟಿಯಾದರೆ ಈ ವರ್ಷವೂ ನಾಲ್ಕು ಬಾರಿಯಾದರೂ ಸಿಂಪಡಿಸುವ ಸ್ಥಿತಿ ಇದೆ.

ವಿಪರೀತ ಬಿಸಿಲು ಮಳೆಗೆ ರೈತ ಕಂಗಾಲು: ಒಂದೆಡೆ ಸುಡುವ ವಿಪರೀತ ಬಿಸಿಲು ಇದರ ನಡುವೆ ತುಂತುರು ಮಳೆ. ಇನ್ನು



ಕೆಲವೆಡೆ ಸಿಡಿಲು ಗಾಳಿ ವಿಪರೀತ ಮಳೆಯಾದ್ದರಿಂದ ಇದರಿಂದಾಗಿ ಅಡಕೆ ಬೆಳೆಗಾರರು ಬೆಂದು ಕಂಗಾಲಾಗಿದ್ದಾರೆ. ಬಿಸಿಲಿನಿಂದ ಬಳಲಿ ಬೆಂಡಾಗಿದ್ದ ಅಡಕೆ ಮರಗಳಿಗೆ ಇತ್ತೀಚೆಗೆ ಸುರಿದ ಮಳೆ ಅಮೃತವಾಗುವ ಬದಲು ವಿಷವಾಗಿದೆ. ಕಳೆದ ವಾರ ಏಕಾಏಕಿ ಅಬ್ಬರದ ಮಳೆ ಸುರಿದಾಗ ಒಮ್ಮೆ ತೋಟಕ್ಕೆ ತಂಪಾಯಿತು. ಈಗ ವಿಪರೀತ ಬಿಸಿಲಿನಿಂದಾಗಿ ಅಡಕೆ ಮರಗಳ ತಲೆ ನೋಡಿದರೆ ಹಿಂಗಾರವೆಲ್ಲ ಕರಟಿ ಹೋಗಿ ಕೆಂಪಾಗಿದೆ.

ದರ ಹೆಚ್ಚಳ: ಈಗ ಮೈಲುತುತ್ತ ಏಕಾಏಕಿ ದರ ಏರಿಸಿ ರೈತರು ಕಂಗಾಲಾಗಿದ್ದು ಇನ್ನು ಎರಡು ತಿಂಗಳು ಮಳೆಗಾಲಕ್ಕೆ ಬಾಕಿ ಇರುವಾಗಲೇ ಇಷ್ಟೊಂದು ಪ್ರಮಾಣದಲ್ಲಿ ದರ ಏರಿಕೆ ಆಗಿರುವುದು ಮುಂದಿನ ದಿನಗಳಲ್ಲಿ ಇನ್ನೇನು ಎಂಬ ಆತಂಕ ಹುಟ್ಟಿಸಿದೆ.


> ಮಲೆನಾಡಿನ ಜೀವನಾಡಿಯಾಗಿದ್ದ ಅಡಕೆ ಕೃಷಿಕರ ಮುಖ್ಯ ಆರ್ಥಿಕ ಶಕ್ತಿಯಾಗಿದೆ ಕಳೆದ ವರ್ಷ ತೋಟಗಳಿಗೆ ಕೊಳೆರೋಗ ವ್ಯಾಪಿಸಿದೆ. ನಿರಂತರ ಸುರಿದ ಮಳೆ ಅಡಿಕೆ ಬೆಳೆಯ ಮೇಲೆ ನೇರ ಪರಿಣಾಮ ಬೀರಲಿದೆ. ಇದೀಗ ಮೈಲುತುತ್ತ ದರ ಏರಿಕೆಯಿಂದಾಗಿ ಔಷಧ ಸಿಂಪಡಣೆ ಮಾಡುವುದು ತುಂಬಾ ಕಷ್ಟವಾಗಿದೆ ಸಹಾಯಧನ ನೀಡಬೇಕು.
> ■ ರಾಘವೇಂದ್ರ ಕಾವಡಿ, ಗ್ರಾಮ ಹಂಚಲಿ ಶೃಂಗೇರಿ.

ಸರಕಾರದಿಂದ ಮೂಗಿಗೆ ತುಪ್ಪ: ಕಳೆದ ಎರಡು ವರ್ಷದಿಂದ ತಾಲೂಕಿನಲ್ಲಿ ಅತಿವೃಷ್ಟಿ ಆಗಿದ್ದರೂ ಸರ್ಕಾರ ಅತಿವೃಷ್ಟಿ ಪೀಡಿತ ಪ್ರದೇಶವೆಂದು ಗುರುತಿಸದೇ ಅನ್ಯಾಯ ಎಸಗಿದೆ. ಈ ಹಿಂದೆ ಮೈಲುತುತ್ತಕ್ಕೆ ದೊರೆಯುತ್ತಿದ್ದ ಸಹಾಯಧನ ಇತ್ತೀಚಿನ ವರ್ಷಗಳಲ್ಲಿ ಸಿಗದಿರುವುದು ಸಮಸ್ಯೆಯನ್ನು ಗಂಭೀರಗೊಳಿಸಿದೆ. ಗ್ಯಾರಂಟಿ ಭಾಗ್ಯಗಳನ್ನು ಕೊಡುವುದರಲ್ಲಿ ಮುಳುಗಿ ಹೋಗಿದ್ದ ಸರ್ಕಾರ ರೈತರ ನೆರವಿಗೆ ಧಾವಿಸದೆ ಬಜೆಟ್‌ನಲ್ಲಿ ಅಡಿಕೆ ಬೆಳೆಗಾರರ ನೆರವಿಗೆ ಧಾವಿಸದೆ ವಂಚಿತರನ್ನಾಗಿಸಿದೆ. ಮೈಲುತುತ್ತ ದರ ಏರಿಕೆಗೆ ಸ್ಪಷ್ಟ ಕಾರಣ ತಿಳಿಯದಿಲ್ಲ. ಸರಕಾರಗಳು ಮಧ್ಯಪ್ರವೇಶಿಸಿ ಮೈಲುತುತ್ತ ದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂಬುದು ಬೆಳೆಗಾರರ ಆಗ್ರಹವಾಗಿದೆ.

ಯುವ ವೈದ್ಯೆ ಕೊಂದಿದ್ದ ನೀರಾನೆ ಸಾವು

ಶಿವಮೊಗ್ಗ: ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಲ್ಲಿ ಇತ್ತೀಚೆಗೆ ತರಬೇತಿ ಯುವ ವೈದ್ಯೆಯ ಸಾವಿಗೆ ಕಾರಣವಾಗಿದ್ದ ನೀರಾನೆ ಕೂಡ ಮಂಗಳವಾರ ಮಧ್ಯಾಹ್ನ ಮೃತಪಟ್ಟಿದೆ.

ಕಳೆದ ಕೆಲವು ದಿನಗಳಿಂದ 8 ವರ್ಷದ ಹೆಣ್ಣು ನೀರಾನೆ ಹಂಸಿಣಿ ತೀವ್ರ ಅನಾರೋಗ್ಯದಿಂದ ಬಳಲುತ್ತಿತ್ತು. ನೀರಾನೆಗೆ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮಧ್ಯಾಹ್ನ 3.08ಕ್ಕೆ ಮೃತಪಟ್ಟಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಂಸಿಣಿ ಗರ್ಭಿಣಿಯಾಗಿದ್ದ ಲಕ್ಷಣಗಳು ಕಾಣಿಸಿಕೊಂಡಿದ್ದವು. ಎಂಟು ತಿಂಗಳ ಗರ್ಭಧಾರಣೆಯ ಅವಧಿ ಮಾರ್ಚ್ ಮಧ್ಯಭಾಗದಲ್ಲೇ ಪೂರ್ಣಗೊಂಡಿತ್ತು. ಆದರೆ ಪ್ರಸವದ ಲಕ್ಷಣಗಳು ಕಾಣಿಸಿರಲಿಲ್ಲ. ಇನ್ನೊಂದೆಡೆ ಕಳೆದ ಕೆಲವು ದಿನಗಳಿಂದ ಆಹಾರ ಸೇವನೆ ಕಡಿಮೆ ಮಾಡಿದ್ದ ನೀರಾನೆ, ಮಂದವಾಗಿ ವರ್ತಿಸುತ್ತಿತ್ತು. ಏಪ್ರಿಲ್ 10ರಂದು ಮೈಸೂರಿನ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಪಶುವೈದ್ಯರ ತಂಡ ನೀರಾನೆ ಆರೋಗ್ಯ ತಪಾಸಣೆ ನಡೆಸಿ, ರಕ್ತದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿತ್ತು. ಈ ವೇಳೆ ನೀರಾನೆಯ ಗರ್ಭಾಶಯದಲ್ಲಿ ಗಂಭೀರವಾದ ಸೋಂಕು ಇರುವುದು ಪತ್ತೆಯಾಗಿತ್ತು. ಗರ್ಭಾಶಯದ ಒಳಗಿನ ಭ್ರೂಣ ಮರಣ ಹೊಂದಿದ್ದೇ ಈ ಸೋಂಕಿಗೆ ಪ್ರಮುಖ ಕಾರಣ ಎಂದು ವೈದ್ಯರು ಮಾಹಿತಿ ನೀಡಿದ್ದರು. ಭ್ರೂಣ ಗರ್ಭದಲ್ಲೇ ಮೃತಪಟ್ಟಿದ್ದರಿಂದ ನೀರಾನೆಯ ದೇಹದ ಪ್ರಮುಖ ಅಂಗಾಂಗಗಳಿಗೆ ಸೋಂಕು ತಗುಲಿತ್ತು. ಆದರ ಚೇತರಿಕೆ ಸಾಧ್ಯತೆ ಕಡಿಮೆ ಇತ್ತು. ಮೈಸೂರಿನ ವನ್ಯಜೀವಿ ಪಶುವೈದ್ಯರು ಹಾಗೂ ಸ್ತ್ರೀರೋಗ ತಜ್ಞ ಪಶುವೈದ್ಯರ ಸಲಹೆಯಂತೆ ಸತತ ಔಷಧೋಪಚಾರ ಮತ್ತು ಆರೈಕೆ ನೀಡಲಾಗಿತ್ತು. ಆದರೂ ಸೋಂಕಿನ ತೀವ್ರತೆಯಿಂದಾಗಿ ಹಂಸಿಣಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದೆ ಎಂದು ತಿಳಿಸಿದ್ದಾರೆ.




ಮೈಸೂರಿಂದ ಬಂದಿತ್ತು ಹಂಸಿಣಿ

ಹಂಸಿಣಿಯನ್ನು 2022ರಲ್ಲಿ ಮೈಸೂರಿನಿಂದ ತ್ಯಾವರೆಕೊಪ್ಪ ಮೃಗಾಲಯಕ್ಕೆ ತರಲಾಗಿತ್ತು. ಇಲ್ಲಿ ಬಂದಾಗ ಎರಡು ಬಾರಿ ಗರ್ಭ ಧರಿಸಿದ್ದ ಹಂಸಿಣಿ, ಎರಡೂ ಬಾರಿ ವಿವಿಧ ಕಾರಣಕ್ಕೆ ಮರಿ ಹಾಕಿರಲಿಲ್ಲ. ಈ ಬಾರಿ ಮೂರನೆ ಸಲ ಗರ್ಭ ಧರಿಸಿತ್ತು. ಆದರೆ ಮಾರ್ಚ್ 18ರಿಂದ ಆಹಾರ ತ್ಯಜಿಸಿತ್ತು. ಮಾರ್ಚ್ 19ರಂದು ಚಿಕಿತ್ಸೆ ನೀಡಲು ಹೋದಾಗ ಬೆಂಗಳೂರು ಮೂಲದ ಡಾ. ಸಮೀಕ್ಷಾ ರೆಡ್ಡಿ ಅವರ ಮೇಲೆ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡಿದ್ದ ವೈದ್ಯೆ ಸಮೀಕ್ಷಾ ಮಾರ್ಚ್ 20ರಂದು ಮೃತಪಟ್ಟಿದ್ದರು. ಇದೀಗ ದಾಳಿ ನಡೆಸಿದ್ದ ನೀರಾನೆಯೂ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಮೃಗಾಲಯದ ಆವರಣದಲ್ಲಿ ಸೂತಕದ ಛಾಯೆ ಮೂಡಿಸಿದೆ.

ಸಂಪಾದಕೀಯ

ಈಗಲಾದರೂ ಜಾರಿಯಾಗಲಿ

ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಮಂಡಿಸುವುದಕ್ಕಾಗಿ ಸಂಸತ್ತಿನ ಮೂರು ದಿನಗಳ ವಿಶೇಷ ಅಧಿವೇಶನವನ್ನು ಕರೆಯಲಾಗಿದ್ದು, ಇದು ಮೋದಿ ಸರಕಾರವು ಶಾಸಕಾಂಗದಲ್ಲಿ ಮಹಿಳೆಯರ ಮೀಸಲಾತಿಗೆ ಕಟಿಬದ್ಧವಾಗಿರುವುದನ್ನು ಸೂಚಿಸುತ್ತದೆ. ಏಪ್ರಿಲ್ 16ರಿಂದ ಆರಂಭಗೊಳ್ಳಲಿರುವ ಈ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಸಾಧಕಬಾಧಕಗಳ ಕುರಿತಂತೆ ಅರ್ಥಪೂರ್ಣ ಹಾಗೂ ರಚನಾತ್ಮಕ ಚರ್ಚೆ ನಡೆದು ಮಸೂದೆಯು ಸರ್ವಸಮ್ಮತವಾಗಿ ಅಂಗೀಕಾರ ಪಡೆಯಲೆಂದು ಆಶಿಸಬೇಕಾಗಿದೆ. ಈ ವಿಚಾರದಲ್ಲಿ ಹಿಂದಿನಂತೆ ರಾಜಕೀಯ ಮಾಡುವುದು, ಕುಂಟು ನೆಪಗಳನ್ನೊಡ್ಡಿ ಅದನ್ನು ನನೆಗುದಿಗೆ ಹಾಕುವಂತಹ ಬೆಳವಣಿಗೆ ನಡೆಯದಿರಲಿ ಎಂಬುದು ಎಲ್ಲರ ಆಶಯವಾಗಿದೆ.



ನಿಜವಾಗಿ ಸಂವಿಧಾನ ರಚನೆಯ ಸಂದರ್ಭದಲ್ಲೇ ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿಯ ಕುರಿತಂತೆ ಪ್ರಸ್ತಾಪವಿತ್ತು. ಆದರೆ ಸಂವಿಧಾನ ರಚನಾ ಸಮಿತಿಯಲ್ಲಿದ್ದ ಕೆಲವು ಪ್ರಮುಖ ಮಹಿಳೆಯರೇ ಅದನ್ನು ವಿರೋಧಿಸಿದ್ದರು. ಮಹಿಳೆಯರು ಸ್ವಂತ ಬಲದಿಂದಲೇ ಸಮಾನ ಹಕ್ಕುಗಳನ್ನು ಪಡೆಯಲಿದ್ದಾರೆ ಎಂಬುದು ಅವರ ವಿಶ್ವಾಸವಾಗಿತ್ತು. ಆದರೆ ಮುಂದಿನ ದಿನಗಳಲ್ಲಿ ಆ ವಿಶ್ವಾಸ ಉಳಿಯಲಿಲ್ಲ. ರಾಜಕೀಯದಲ್ಲಿ ಕೆಲವೇ ಕೆಲವು ಮಹಿಳೆಯರು ಪ್ರವರ್ಧಮಾನಕ್ಕೆ ಬಂದರೂ, ಒಟ್ಟು ಸಂಖ್ಯೆಯು ಕಡಿಮೆಯೇ ಆಗಿತ್ತು. 1952ರ ಮೊದಲ ಲೋಕಸಭೆಯಲ್ಲಿ ಶೇ.5ರಷ್ಟು ಮಹಿಳಾ ಪ್ರತಿನಿಧಿಗಳಿದ್ದರೆ, ಇತ್ತೀಚೆಗೆ 2004ರಲ್ಲಿ ಈ ಸಂಖ್ಯೆ ಕೇವಲ ಶೇ.9ಕ್ಕೇರಿತ್ತಷ್ಟೆ. ಪ್ರಸಕ್ತ ಲೋಕಸಭೆಯಲ್ಲಿ ಸುಮಾರು ಶೇ.15ರಷ್ಟಿದೆಯಷ್ಟೆ.

ಶಾಸಕಾಂಗದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಪ್ರಯತ್ನಗಳು ಹಿಂದೆ ನಡೆದಿಲ್ಲವೆಂದಲ್ಲ. 1992ರಲ್ಲಿ ತಂದ ಸಂವಿಧಾನ ತಿದ್ದುಪಡಿಯ ಮೂಲಕ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕಲ್ಪಿಸುವುದು ಜಾರಿಗೆ ಬಂದಿತ್ತು. ಆದರೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವುದಕ್ಕೆ ಕೆಲವು ರಾಜಕೀಯ ಪಕ್ಷಗಳು ತೀವ್ರ ವಿರೋಧ ಸೂಚಿಸಿ, ಅಂತಹ ಪ್ರಯತ್ನವನ್ನು ಹಳಿ ತಪ್ಪಿಸಿದ್ದವು. ಕೆಲವು ಪಕ್ಷ ಗಳಂತೂ ಮಹಿಳಾ ಮೀಸಲಾತಿಯಲ್ಲಿ ಮತ್ತೆ ಪರಿಶಿಷ್ಟರಿಗೆ ಒಳ ಮೀಸಲಾತಿ ಬೇಕು ಎಂದೂ ಬೇಡಿಕೆ ಸಲ್ಲಿಸಿದ್ದವು. ಮನಮೋಹನ ಸಿಂಗ್ ಸರಕಾರವು 2010ರಲ್ಲಿ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಪಡೆದಿದ್ದರೂ ಬಳಿಕ ಕೆಲವು ಪಕ್ಷಗಳ ವಿರೋಧಕ್ಕೆ ಮಣಿದು ಆ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವ ಗೋಜಿಗೇ ಹೋಗಲಿಲ್ಲ. ಈ ಬಾರಿಯಾದರೂ ಮಸೂದೆಯು ಅಂಗೀಕಾರಗೊಳ್ಳಲು ಇರುವ ಅಡ್ಡಿ ಆತಂಕಗಳು ತೊಲಗಲಿ ಎಂದು ಎಲ್ಲರು ನಿರೀಕ್ಷಿಸುತ್ತಿದ್ದಾರೆ. ಹಾಗಾದಲ್ಲಿ ಕ್ಷೇತ್ರ ಮರುವಿಂಗಡಣೆಯ ಬಳಿಕ, ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಗೊಂಡೀತು.

ಏಕಾತ್ಮತೆಯ ಸೂತ್ರದಿಂದ ಸಮನ್ವಯ ಸಾಧಿಸಿದ ಶಂಕರರು

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಜಗತ್ತಿಗೆ ಅಧ್ಯಾತ್ಮದ ಬೆಳಕನ್ನು ನೀಡಿದ ಭಾರತವರ್ಷವು, ಪ್ರತಿಯೊಬ್ಬರೂ ಪೂರ್ಣತೆ ಹಾಗೂ ಆನಂದದ ಸ್ವರೂಪರೇ ಆಗಿದ್ದಾರೆಂದು ಪ್ರತಿಪಾದಿಸಿದ ಅನೇಕ ಮಹಾತ್ಮರಿಗೆ ಅವತಾರದ ನೆಲವಾಗಿದೆ. ಸರ್ವಕಾಲಕ್ಕೂ, ಸರ್ವದೇಶಕ್ಕೂ ಹಾಗೂ ಸರ್ವಜನರಿಗೂ ಒದಗುವ ನಿತ್ಯತತ್ತ್ವದ ಉಪದೇಶವು ಪ್ರಪಂಚಕ್ಕೆ ದೊರಕಿದ್ದು ಇದೇ ನೆಲದಿಂದ ಮತ್ತು ಈ ನೆಲದ ತತ್ತ್ವಜ್ಞಾನಿಗಳಿಂದಲೇ ಆಗಿದೆ. ಸುಮಾರು ಸಾವಿರದ ಇನ್ನೂರು ವರ್ಷಗಳ ಹಿಂದೆ ಅವತರಿಸಿದ ಶ್ರೀಶಂಕರ ಭಗವತ್ಪಾದರು ಇಂಥ ತತ್ತ್ವಜ್ಞಾನಿಗಳ ಪರಂಪರೆಗೆ ಮುಕುಟಪ್ರಾಯರೂ, ಸನಾತನ ಧರ್ಮದ ಪುನಃಪ್ರತಿಷ್ಠಾಪನಾಚಾರ್ಯರೂ, ಸಮನ್ವಯಸೂತ್ರದಿಂದ ಇಡೀ ದೇಶವನ್ನು ಒಗ್ಗೂಡಿಸಿದವರೂ ಆಗಿದ್ದಾರೆ. ಪ್ರತಿಯೊಬ್ಬ ಮಹಾತ್ಮನ ಅವತಾರವೂ ಯಾವುದೋ ಒಂದು ಉದ್ದೇಶಕ್ಕಾಗಿಯೇ ಆಗಿರುತ್ತದೆ. ಅವರಿಂದ ಪ್ರಪಂಚಕ್ಕೆ ಅನಿತರಸಾಧಾರಣವಾದ ಯಾವುದೋ ಒಂದು ಕೊಡುಗೆಯನ್ನು ಬಯಸಿಯೇ ಪ್ರಕೃತಿಯು ಅಂಥವರನ್ನು ಸೃಷ್ಟಿಸಿಕೊಳ್ಳುತ್ತದೆ. ಶ್ರೀಶಂಕರಭಗವತ್ಪಾದರ ಅವತಾರವಾದ ಕಾಲಘಟ್ಟವೂ ಕೂಡ ಅಂಥ ಒಬ್ಬ ಮಹಾತ್ಮನ ನಿರೀಕ್ಷೆಯಲ್ಲಿತ್ತು. ಒಂದು ಕಡೆ ಯಾವುದು ಸಮ್ಯಕ್ ಜ್ಞಾನ, ಯಾವುದಲ್ಲ ಎಂಬ ವಿವೇಕವನ್ನು ಸಮಾಜ ಕಳೆದುಕೊಂಡ ಸ್ಥಿತಿಯದು. ಇನ್ನೊಂದು ಕಡೆ ಪರಸ್ಪರ ವಿದ್ವೇಷ ಮತ್ತು ಅಸಹನೆಗಳಿಂದಾಗಿ ಸಮಾಜವು ಒಡೆದು ಹೋಗಿದ್ದ ಕಾಲಘಟ್ಟ. ಇಂತಹ ಸಮಯದಲ್ಲಿ ಇಡೀ ಮನುಕುಲಕ್ಕೆ ಜಗದ್ಗುರುವಿನ ಸ್ಥಾನದಲ್ಲಿ ನಿಂತು ಮಾರ್ಗವನ್ನು ತೋರಿಸುವ ಒಬ್ಬ ಮಹಾತ್ಮನ ಅಗತ್ಯವಿತ್ತು. ಸನಾತನ ಧರ್ಮವು ಜಗತ್ತಿನಲ್ಲಿ ಧರ್ಮಹ್ರಾಸಗೊಂಡಾಗ ಮತ್ತು ಅಧರ್ಮವು ಎಲ್ಲೆ ಮೀರುವಾಗ ಒಬ್ಬ ಮಹಾತ್ಮನ ಅವತಾರವಾಗುತ್ತದೆ ಎಂದು ನಂಬುತ್ತದೆ. ಅದಕ್ಕೆ ದೃಷ್ಟಾಂತವೋ ಎಂಬಂತೆ ಶ್ರೀಶಂಕರರ ಉದಯವಾಯಿತು.

ಶ್ರೀಶಂಕರರು ಪರಸ್ಪರ ವಿದ್ವೇಷಗಳಲ್ಲಿ, ಅವಿಶ್ವಾಸದಲ್ಲಿ, ಭಿನ್ನಾಭಿಪ್ರಾಯಗಳಲ್ಲಿ, ಅಶಾಂತಿಯಲ್ಲಿ ಮುಸುಕಾಗಿದ್ದ ಭಾರತವರ್ಷಕ್ಕೆ ಸಮನ್ವಯಸೂತ್ರವನ್ನು ಕರುಣಿಸಿ ಭಾರತವನ್ನು ಮತ್ತೆ ಅಧ್ಯಾತ್ಮದ ವಿಶ್ವಗುರುವನ್ನಾಗಿಸಿದವರು. ಸನಾತನಧರ್ಮವು ಚಿರಂತನವಾಗಿರುವಂತೆ ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡಿದವರು. ಸಾವಿರದ ಇನ್ನೂರು ವರ್ಷಗಳ ಹಿಂದೆಯೇ ಇಡೀ ಭಾರತವರ್ಷವನ್ನು ಸಂಚರಿಸಿದವರು. ಧರ್ಮವು ಈ ನೆಲದ ಜನರ ಜೀವನದಲ್ಲಿ ಯಾವತ್ತೂ ಇರುವಂತೆ ನೋಡಿಕೊಳ್ಳಲು ದೇಶದ ನಾಲ್ಕು ದಿಕ್ಕುಗಳಲ್ಲಿ ಮಠವನ್ನು ಸ್ಥಾಪಿಸಿದವರು. ಜೊತೆಗೆ ಧರ್ಮಮಾರ್ಗದಿಂದ ಅಧ್ಯಾತ್ಮದೆತ್ತರಕ್ಕೆ ಪ್ರತಿಯೊಬ್ಬನೂ ಸಾಗಲು ಮಾರ್ಗೋಪದೇಶವನ್ನು ಮಾಡಿದವರು. ಶ್ರೀಶಂಕರರ ಅವತಾರ ಆಗದೇ ಇದ್ದಿದ್ದರೆ ಇಂದಿಗೆ ಭಾರತ ಹೀಗಿರುತ್ತಿರಲಿಲ್ಲ. ಜಗತ್ತಿನ ಅತ್ಯಂತ ಪ್ರಾಚೀನ ನಾಗರಿಕತೆಯೊಂದು ಅವಸಾನ ಹೊಂದಿ ಎಷ್ಟೋ ಕಾಲವಾಗುತ್ತಿತ್ತು. ಶ್ರೀಶಂಕರರು ಕೇವಲ ಅಧ್ಯಾತ್ಮದ ಬೋಧನೆಯನ್ನು ಮಾಡಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಯಾವ ಶಂಕರರು ಭೌತಿಕ ಜಗತ್ತನ್ನು ಮಿಥ್ಯೆಯೆಂದು ಕರೆದರೋ ಅದೇ ಶಂಕರರು ವ್ಯಾವಹಾರಿಕ ಜಗತ್ತಿನ ಎಲ್ಲ ವೈಷಮ್ಯಗಳಿಗೆ ಪರಿಹಾರವನ್ನೂ ಹೇಳಿ, ಅಭ್ಯುದಯದ ಮಾರ್ಗವನ್ನೂ ಉಪದೇಶಿಸಿದರು. ಹೀಗೆ ಎಲ್ಲ ವಿಷಯಗಳಲ್ಲೂ, ಎಲ್ಲ ರೀತಿಯಲ್ಲಿಯೂ ಸಮನ್ವಯವನ್ನು ಸಾಧಿಸುತ್ತಲೇ ಶ್ರೇಯೋಮಾರ್ಗದ ತುತ್ತತುದಿಯನ್ನು ತಲುಪುವ ಸಾಧನವನ್ನೂ ತಿಳಿಸಿಕೊಟ್ಟರು.

ಶ್ರೀಶಂಕರರ ಸಮನ್ವಯಸೂತ್ರವು ಎಲ್ಲ ಕಾಲಕ್ಕೂ, ಎಲ್ಲ ಕ್ಷೇತ್ರಕ್ಕೂ ಅನ್ವಯಿಸುವಂಥದು. ಅವರ ಜೀವನವೇ ಒಂದು ಸಮನ್ವಯದ ರೂಪಕವಾಗಿದೆ. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಭೌತಿಕವಾಗಿ, ವ್ಯಾವಹಾರಿಕವಾಗಿ, ಎಲ್ಲ ರೀತಿಯಲ್ಲಿಯೂ ಸಮನ್ವಯತೆಯ ಸೂತ್ರವನ್ನು ನಮಗೆ ಕರುಣಿಸಿದ್ದಾರೆ. ಯಾವ ಶಂಕರರು ಪ್ರಸ್ಥಾನತ್ರಯಕ್ಕೆ ಭಾಷ್ಯವನ್ನು ಬರೆದರೋ, ಯಾರು "ಅಹಂ ಬ್ರಹ್ಮಾಸ್ಮಿ", "ತತ್ತ್ವಮಸಿ" ಎಂಬ ಜೀವ-ಬ್ರಹ್ಮೈಕ್ಯವನ್ನು ಉಪದೇಶಿಸುವ ಉಪನಿಷತ್ತತ್ತ್ವವನ್ನು ಎತ್ತಿಹಿಡಿದರೋ, ಯಾವ ಶಂಕರರು ಎಲ್ಲ ಭೇದಗಳನ್ನೂ ಧಿಕ್ಕರಿಸಿದರೋ ಅದೇ ಶಂಕರರು ವ್ಯಾವಹಾರಿಕವಾದ ಎಲ್ಲ ಭೇದಗಳನ್ನೂ ಒಪ್ಪಿಕೊಂಡೇ ಅವುಗಳಿಗೆ ಪರಸ್ಪರ ವಿರೋಧವಾಗದಂತೆ, ಒಂದು ಮತ್ತೊಂದನ್ನು ನಾಶ ಮಾಡದಂತೆ ಸಮನ್ವಯಸೂತ್ರದಲ್ಲಿ ಪೋಣಿಸಿದರು. ನಾಮ, ರೂಪಗಳನ್ನೇ ಆಶ್ರಯಿಸಿ ಅವುಗಳನ್ನೇ ಪಾರಮಾರ್ಥಿಕವೆಂದು ವಾದಿಸುತ್ತಾ, ಅವುಗಳ ಸಹಜವಾದ ಅನೇಕತ್ವವೆಂಬ ದ್ವಂದ್ವದಲ್ಲೇ ಕಳೆದುಹೋಗಿದ್ದ ಪಂಡಿತವರ್ಗವನ್ನೂ ಅವರು ತಮ್ಮ ಅದ್ವೈತಸೂತ್ರದಿಂದ ಒಂದಾಗಿಸಿದರು. ನಾಮ-ರೂಪಗಳಿಂದ ಮೇಲೆದ್ದು ಅದಕ್ಕೆ ಮೀರಿದ ನಿರಾಕಾರ, ನಿರ್ಗುಣದ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವನ್ನು ಇನ್ನಷ್ಟು ಸ್ಪಷ್ಟಗೊಳಿಸಿದರು.

ಶಂಕರರು ತಾವೇನನ್ನೂ ಹೊಸದನ್ನು ಹೇಳಲು ಹೋಗಲಿಲ್ಲ. ಈ ನೆಲಕ್ಕೆ ಪರಮಪ್ರಮಾಣವಾಗಿರುವ ವೇದದ ತಾತ್ಪರ್ಯವನ್ನೇ ಮತ್ತಷ್ಟು ಸ್ಪಷ್ಟವಾಗಿ ಪ್ರತಿಪಾದಿಸಿದರು, ಅದನ್ನು ಸ್ವಜೀವನದಲ್ಲಿಯೂ, ಸ್ವಕೃತಿಗಳಲ್ಲಿಯೂ ಅನುಸರಿಸಿದರು. ಶಂಕರರು ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ, ಆದರೆ ತತ್ತ್ವಕ್ಕೆ ವಿರುದ್ಧವಾಗಿ ತಮ್ಮ ತಮ್ಮ ಸಿದ್ಧಾಂತಗಳನ್ನು ಸಮಾಜದಲ್ಲಿ ಹರಡುತ್ತಾ ಲೋಕವನ್ನು ಸಂಭ್ರಾಂತಗೊಳಿಸುತ್ತಿದ್ದ ಪಂಡಿತಪರಂಪರೆಯ ಸಂದೇಹಗಳನ್ನು ಮತ್ತು ಅಜ್ಞಾನವನ್ನು ಮೊದಲು ನಿವಾರಿಸಿದರು. ಶಾಸ್ತ್ರವಾಕ್ಯಾರ್ಥಗಳೆಂಬ ಬೌದ್ಧಿಕವಾದ ಸಮರದಲ್ಲಿ ಎಲ್ಲ ಪಂಥಾನುಯಾಯಿಗಳನ್ನೂ ಎದುರಿಸಿದರು. ಆ ಮೂಲಕ ಎಲ್ಲರನ್ನೂ ಒಂದೇ ವೇದಿಕೆಗೆ ಸೇರಿಸಿದರು. ಅಲ್ಲಿಂದಲೇ ಅವರ ಸಮನ್ವಯದ ಹಾದಿ ಆರಂಭವಾಗುತ್ತದೆ.

ಎಲ್ಲಿಯವರೆಗೆ ವಿಶೇಷವನ್ನೇ ಪಾರಮಾರ್ಥಿಕವೆಂದು ಕಾಣುತ್ತೇವೆಯೋ ಅಲ್ಲಿಯವರೆಗೆ ಪರಸ್ಪರ ವಿರೋಧವೇ ಮುನ್ನೆಲೆಗೆ ಬರುತ್ತದೆ ಎಂಬುದನ್ನು ಅವರು ಮನಗಾಣಿಸಿದರು. ಜೊತೆಗೆ ಅದರಲ್ಲಿ ಉಪನಿಷತ್ತುಗಳಿಗೆ ತಾತ್ಪರ್ಯವಿಲ್ಲವೆಂದು ನಿರ್ಭಿಡೆಯಿಂದ ಸಾಧಿಸಿ ತೋರಿಸಿದರು. ಎಲ್ಲ ವಿಶೇಷಗಳಲ್ಲೂ ಇರುವ ಸಾಮಾನ್ಯವೊಂದನ್ನು ಕಂಡುಕೊಂಡರೆ ಆಗ ಎಲ್ಲ ವಿಶೇಷ ಅಥವಾ ಭೇದಗಳಲ್ಲೂ ಸಮನ್ವಯ ಉಂಟಾಗಿ ಅದು ಶ್ರೇಯಸ್ಸಿಗೆ ಸಾಧನವಾಗುತ್ತದೆ ಎಂದು ಉಪದೇಶಿಸಿದರು. ನಾನಾ ಮಣಿಗಳಿಂದ ಕೂಡಿದ ಸರವನ್ನು ಮಾಡಲು, ಆ ಎಲ್ಲ ಮಣಿಗಳನ್ನು ಪೋಣಿಸುವ ಸಾಮಾನ್ಯವಾದ ಸೂತ್ರ ಅಥವಾ ದಾರವೊಂದು ಬೇಕಾಗುತ್ತದೆ. ಆ ದಾರವು ಎಲ್ಲ ಮಣಿಗಳಲ್ಲೂ ಸಾಮಾನ್ಯವಾಗಿರುವುದರಿಂದಲೇ ಮಣಿಗಳೆಂಬ ವಿಶೇಷಗಳು ಒಂದು ಸರವಾಗಿ ಮಾರ್ಪಡುತ್ತವೆ. ಮಣಿಗಳಿಗೆ ತಮ್ಮೊಳಗೆ ಹಾಸುಹೊಕ್ಕಾಗಿರುವ, ಓತಪ್ರೋತವಾಗಿರುವ ಆ ಸೂತ್ರವೇ ಆಧಾರ. ಇದೇ ರೀತಿಯಲ್ಲಿ ಎಲ್ಲ ವಿಭಿನ್ನತೆಗಳಿಗೂ ಏಕತೆಯೇ ಆಧಾರ. ಏಕತೆಯ ಬೇರು ಇಲ್ಲದ ಗಿಡವು ವಿಭಿನ್ನತೆಯೆಂಬ ಪುಷ್ಪಗಳಿಂದ ಕಂಗೊಳಿಸಲು ಸಾಧ್ಯವಿಲ್ಲ. ಹಾಗಾಗಿ ಏಕತೆಯೇ ಮೂಲ, ವಿಭಿನ್ನತೆ ಅದರ ಬಾಹ್ಯ ಅಭಿವ್ಯಕ್ತಿ ಅಷ್ಟೇ ಎಂಬ ತತ್ತ್ವವನ್ನು ಅವರು ತಮ್ಮ ಭಾಷ್ಯಗಳ ಮೂಲಕ, ತಮ್ಮ ಉಪದೇಶಗಳ ಮೂಲಕ, ತಮ್ಮ ಕೃತಿಗಳ ಮೂಲಕ, ತಮ್ಮ ಕಾರ್ಯಗಳ ಮೂಲಕ ಮತ್ತು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಜಗತ್ತಿಗೆ ಸ್ವಸ್ವರೂಪದ ದರ್ಶನವನ್ನು ಮಾಡಿಸಿದರು.

ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ ಮೊದಲಾದವುಗಳಲ್ಲಿ "ನಾನೆಂಬ" ಭ್ರಮೆಯನ್ನು ಮತ್ತು ಅಭಿಮಾನವನ್ನು ಕಳಚಿಕೊಳ್ಳದೆಯೇ, ಅದರಾಚೆಗೆ ಇರುವ ಮತ್ತು ಈ ಎಲ್ಲವನ್ನು ಮಣಿಗಳಂತೆ ಪೋಣಿಸಿರುವ, ಎಲ್ಲ ದೇಹಗಳಲ್ಲೂ ನೆಲೆಸಿ, ಅವೆಲ್ಲವನ್ನೂ ಧರಿಸಿರುವ ಆತ್ಮಸ್ವರೂಪವನ್ನು ಮನಗಾಣದೇ ಮನುಷ್ಯನ ಜೀವನ ಸಾರ್ಥಕವಾಗುವುದಿಲ್ಲ ಎಂದು ಅವರು ತಿಳಿಸಿದರು. "ನಾನು ಬೇರೆ, ನೀನು ಬೇರೆ" ಎಂಬ ಭಾವವು ಭೌತಿಕವಾಗಿ ಸತ್ಯವೆಂದು ಕಂಡರೂ, ಕಾರ್ಯ ಮತ್ತು ಕಾರಣಗಳಲ್ಲಿ ಕಾರಣದ ಹೊರತಾಗಿ ಇರಲಾಗದ ಕಾರ್ಯವು ತತ್ತ್ವಶಃ ಹೇಗೆ ಕಾರಣಕ್ಕಿಂತ ಅತ್ಯಂತ ಭಿನ್ನವಲ್ಲವೋ ಮತ್ತು ಕಾರಣಕ್ಕಿಂತ ಹೊರತಾಗಿ ಇರಲು ಸಾಧ್ಯವಿಲ್ಲವೋ, ಅದೇ ರೀತಿಯಲ್ಲಿ ದೇಹಾದಿಗಳೆಲ್ಲವೂ ಅನಿತ್ಯವಾಗಿದ್ದು, ಆತ್ಮವೇ ಸತ್ಯವಾಗಿದೆ ಎಂದು ತಿಳಿಸಿದರು. ಹಾಗಾಗಿ ಈ ದೇಹಾದಿ ನಿಮಿತ್ತವಾದ ಎಲ್ಲ ಅಭಿಮಾನವೂ ಅನರ್ಥಕ್ಕೇ ಕಾರಣವೆಂದು ಉಪದೇಶಿಸಿದರು. "ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ, ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ" ಎಂಬಂತೆ ಎಲ್ಲರಲ್ಲೂ ಆ ಆತ್ಮತತ್ತ್ವವನ್ನೇ ಕಾಣುವ ಏಕಾತ್ಮತೆಯನ್ನು ಬೋಧಿಸಿದರು.

ಇಲ್ಲಿ ಯಾರೂ ಮೇಲೂ ಅಲ್ಲ, ಕೀಳೂ ಅಲ್ಲ. ಎಲ್ಲರೂ ಆ ಪರಮಾತ್ಮನ ಸ್ವರೂಪಿಗಳೇ ಆಗಿದ್ದಾರೆ. ಪಾರಮಾರ್ಥಿಕವಾಗಿ ಎಲ್ಲರೂ ಆ ಪರಬ್ರಹ್ಮಸ್ವರೂಪಿಗಳೇ ಆಗಿದ್ದಾರೆ ಎಂಬುದನ್ನು ಪ್ರತಿಪಾದಿಸಿದರು. ಜೊತೆಗೆ ಈ ತತ್ತ್ವವೇ ಉಪನಿಷತ್ತುಗಳ ಮುಖ್ಯ ಪ್ರತಿಪಾದ್ಯವಾದ ತತ್ತ್ವವಾಗಿದೆ ಎಂಬುದನ್ನೂ ಎತ್ತಿಹಿಡಿದರು.

ಏಕತೆಯೆಂಬುದು ವಿಭಿನ್ನತೆಯ ನಾಶಕವಲ್ಲ, ಬದಲಿಗೆ ವಿಭಿನ್ನತೆಯ ಪೋಷಕ ಹಾಗೂ ಆಶ್ರಯ ಎಂಬುದೇ ಶಂಕರರ ಮುಖ್ಯ ಪ್ರತಿಪಾದ್ಯವಾಗಿದೆ. ವ್ಯಾವಹಾರಿಕವನ್ನು ಪಾರಮಾರ್ಥಿಕದ ಸಾಧನವಾಗಿಸಿಕೊಳ್ಳುವುದರಲ್ಲಿಯೇ ಜೀವನದ ಸಾರ್ಥಕ್ಯ ಅಡಗಿದೆಯೇ ಹೊರತು ಇದರ ವಿಪರೀತವಲ್ಲ. ಸಾಧನವೇ ಸಾಧ್ಯವಾದರೆ, ಪುರುಷಾರ್ಥದಿಂದ ವ್ಯಕ್ತಿಯು ವಂಚಿಸಲ್ಪಡುತ್ತಾನೆ. ಹಾಗಾಗಿ ನಿಃಶ್ರೇಯಸ್ಸಿನ ಪ್ರಾಪ್ತಿಗಾಗಿನ ಸಾಧನವನ್ನಾಗಿ ತಮಗೆ ದೊರೆತಿರುವ ಮನುಷ್ಯ ಜನ್ಮವನ್ನು ಬಳಸಿಕೊಳ್ಳಬೇಕೆಂಬ ಅವರ ಉಪದೇಶವು ಎಲ್ಲ ವೈಷಮ್ಯಗಳಿಗೂ, ಎಲ್ಲ ಭೇದಭಾವಕ್ಕೂ, ಎಲ್ಲ ಸಂಘರ್ಷಗಳಿಗೂ, ಎಲ್ಲ ಅಶಾಂತಿಗೂ ಪರಿಹಾರವಾಗಿದೆ.

ಭಾವಾದ್ವೈತಕ್ಕೆ ನೆಲೆ ಸಿಕ್ಕಾಗ ಮಾತ್ರ ಭೌತಿಕವಾದ ಭೇದಗಳು ಸಾಧಕವಾಗುತ್ತವೆ, ಅನ್ಯಥಾ ವಿಷಮತೆಗೆ ಕಾರಣವಾಗಬಹುದು ಎಂಬುದು ಅವರು ನೀಡಿರುವ ಎಚ್ಚರಿಕೆಯೂ ಹೌದು. ಪರಸ್ಪರ ಸೌಹಾರ್ದದ ಬದುಕನ್ನು ಎಲ್ಲರೂ ಬದುಕುವಂತಾಗಬೇಕೆಂದರೆ ಏಕಾತ್ಮತೆಯ ಸೂತ್ರವನ್ನು ತನ್ನ ಅಂತರಂಗ ಮತ್ತು ಬಹಿರಂಗದಲ್ಲಿ ಪ್ರತಿಯೊಬ್ಬರೂ ಕಂಡುಕೊಳ್ಳಬೇಕೆಂಬ ಅವರ ಉಪದೇಶವು ಇಂದಿಗೆ ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಇಂಥ ಶಂಕರರ ತತ್ತ್ವವನ್ನು ನೆನಪಿಸಿಕೊಂಡು ನಮ್ಮ ಜೀವನದಲ್ಲಿ ಆಚರಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ದೇಶವು ಮುಂದಿನ ಮಂಗಳವಾರ (21-04-2026) ತತ್ತ್ವಜ್ಞಾನಿಗಳ ದಿನವನ್ನು ಆಚರಿಸುತ್ತಿದೆ.

ಅಹಂಕಾರ ಎಲ್ಲವನ್ನೂ ನಾಶಪಡಿಸುತ್ತದೆ

ವಿತ್ತಂ ಜ್ಞಾನಂ ಕುಲಂ ವಾಪಿ ನ ಭವೇದ್ ಗರ್ವಕಾರಣಮ್।
ಗರ್ವಃ ಪತನಹೇತುಃ ಸ್ಯಾತ್ ಗರ್ವಃ ಸರ್ವಂ ವಿನಾಶಯೇತ್ ॥

-ಸುವಚನ ಶತಕಮ್

ಆಸ್ತಿ, ತಿಳಿವು, ಮನೆತನ- ಇವು ಯಾವುವೂ ಗರ್ವಕ್ಕೆ ಕಾರಣ ಆಗಬಾರದು. ಗರ್ವವು ಕೆಳಗೆ ಬೀಳುವುದಕ್ಕೆ ಕಾರಣ. ಅದು ಉಳಿದ ಎಲ್ಲವನ್ನೂ ಹಾಳುಗೆಡವುತ್ತದೆ -ಎಂಬುದು ಶ್ಲೋಕಾರ್ಥ.

ಜಂಬ ಕೊಚ್ಚಿಕೊಳ್ಳುವುದು ಅಸಂಸ್ಕೃತರ ಸ್ವಭಾವ. ಇದೆಂದೂ ಮನುಷ್ಯರಿಗೆ ಶೋಭೆ ತರುವುದಿಲ್ಲ. ಅಲ್ಪಜ್ಞಾನಿ ಅಥವಾ ಕಡಿಮೆ ತಿಳಿದುಕೊಂಡವರು ಕೆಲವೊಮ್ಮೆ ಮಹಾ ಜ್ಞಾನಿಗಳಂತೆ ಮಾತನಾಡುತ್ತಾರೆ. ತಮ್ಮ ಮೌಢ್ಯವನ್ನೂ ಅಜ್ಞಾನವನ್ನೂ ಪ್ರದರ್ಶಿಸುತ್ತಾರೆ. ತಾವು ಕಂಡ ಮೊಲಕ್ಕೆ ಮೂರೇ ಕಾಲು ಎಂದು ವಾದಿಸುವ ಅಲ್ಪಜ್ಞರೂ ಇರುತ್ತಾರೆ. ಅಹಂಕಾರಿಗಳಾದ ಜ್ಞಾನಿಗಳೂ ಕೆಲವೊಮ್ಮೆ ಅಲ್ಪರಂತೆ ವ್ಯವಹರಿಸುತ್ತಾರೆ.

ತಾವು ಗಳಿಸದಿದ್ದರೂ ಹಿರಿಯರು ಮಾಡಿಟ್ಟ ಆಸ್ತಿಯ ಮದದಲ್ಲಿ ಅಹಂಕಾರಿಗಳಾಗುವವರನ್ನೂ ನೋಡುತ್ತೇವೆ. ದೊಡ್ಡವರ ಹೆಸರಿನ ಹಿನ್ನೆಲೆಯಿದ್ದರೆ ಯಾರು ಏನು ಬೇಕಾದರೂ ಆಗಬಹುದು. ನೆಟ್ಟಗೆ ಕನ್ನಡ ಓದಲು ಬರದವರು ಶಿಕ್ಷಣ ಮಂತ್ರಿಯಾಗುತ್ತಾರೆ. ಐಟಿ,ಬಿಟಿಗಳ ಗಂಧವಿಲ್ಲದವನು ಜಾತಿಯ ಹಿನ್ನೆಲೆಯಿಂದಲೋ, ಅಪ್ಪ ಉನ್ನತ ಸ್ಥಾನದಲ್ಲಿದ್ದಾರೆ ಎಂಬ ಕಾರಣಕ್ಕೋ ಅದೇ ವಿಭಾಗದ ಸಚಿವರೂ ಆಗುತ್ತಾರೆ. ಸಂಸ್ಕೃತಿಯ ಗಂಧವಿಲ್ಲದವರು ಸಂಸ್ಕೃತಿ ಇಲಾಖೆಯ ಮಂತ್ರಿಯಾಗುತ್ತಾರೆ. ಹೆತ್ತವರು ದೊಡ್ಡ ಸ್ಥಾನದಲ್ಲಿದ್ದರೆ, ಅಧಿಕಾರಿಗಳಾಗಿದ್ದರೆ ಮಕ್ಕಳೂ ಅಧಿಕಾರ ಚಲಾಯಿಸುತ್ತಾರೆ. ವಸ್ತುಸ್ಥಿತಿ ಹೀಗಿರುವುದನ್ನು ನಾವು ಸುತ್ತೆಲ್ಲ ಕಾಣುತ್ತೇವೆ. ಯಾರಿಗೆಲ್ಲ ಶಿಕ್ಷಣದ ಜತೆಗೆ ಸಂಸ್ಕಾರವಿರುವುದಿಲ್ಲವೋ, ಅಹಂಕಾರ ತಲೆಯಲ್ಲಿರುತ್ತದೆಯೋ ಇಂಥವರಲ್ಲಿ ಇದೆಲ್ಲ ಸಹಜ. ಆದರೆ ಇದಾವುದೂ ಶಾಶ್ವತವಲ್ಲ ಎಂಬುದು ತಿಳಿದಿದ್ದರೆ ಒಳ್ಳೆಯದು.



ಮನುಷ್ಯ ಅವನತಿ ಹೊಂದುವುದಕ್ಕೆ ಅಹಂಕಾರವೇ ಮೂಲ ಕಾರಣ. ಸಂಪತ್ತು, ಜ್ಞಾನ, ಮನೆತನ, ಶಕ್ತಿ ಇತ್ಯಾದಿಗಳಿದ್ದರೆ ಅಲ್ಪರಿಗೆ ಅದು ಅಹಂಕಾರವನ್ನು ಉಂಟು ಮಾಡುತ್ತದೆ. ಇವುಗಳೆಂದೂ ಅಹಂಕಾರಕ್ಕೆ ಕಾರಣವಾಗಬಾರದು.

ಸಂಪತ್ತೆಂದೂ ಶಾಶ್ವತವಲ್ಲ. ಅದಕ್ಕೆ ಏರಿಳಿತವಿದ್ದೇ ಇರುತ್ತದೆ. ಸಂಪತ್ತು ಬಂದಾಗ ಸದ್ವಿನಿಯೋಗ ಮಾಡಬೇಕು. ಈ ರೀತಿ ಯೋಚಿಸಿ ತೊಡಗಿಕೊಂಡರೆ ಅವನೆಂದೂ ಕೆಳಕ್ಕೆ ಬೀಳಲಾರ. ಜ್ಞಾನಿಯೆಂದೂ ಅಹಂಕಾರದಿಂದ ವರ್ತಿಸಬಾರದು. ತನ್ನ ಅರಿವಿನಿಂದ ಇನ್ನೊಬ್ಬರ ಅರಿವನ್ನು ಅರಳಿಸಲು ಪ್ರಯತ್ನಿಸಬೇಕು. ತನ್ನಲ್ಲಿರುವ ಉತ್ತಮ ಜ್ಞಾನವನ್ನು ಹಂಚಿ ಖುಷಿಪಡಬೇಕೇ ವಿನಾ ತಾನೇ ಜ್ಞಾನಿ, ತನಗಿಂತ ಬುದ್ಧಿವಂತರಿಲ್ಲ ಎಂದು ಬೀಗಿದರೆ ಅಧಃಪತನಕ್ಕೆ ಅದುವೇ ಹೇತುವಾಗುತ್ತದೆ. ಕುಲಾಭಿಮಾನ ಬಿಡಬೇಕು. ತಮ್ಮ ಮನೆತನ ಇರುವುದೇ ಅಧಿಕಾರ ಚಲಾಯಿಸುವುದಕ್ಕೆ ಎಂದು ಗರ್ವದಿಂದ ವ್ಯವಹರಿಸಬಾರದು. ಇದೇ ಸೋಲಿಗೆ ಕಾರಣವಾಗುತ್ತದೆ. ಅಂಥವನು ಸಜ್ಜನರ ಅವಕೃಪೆಗೆ ಕಾರಣನಾಗುತ್ತಾನೆ. ಇಂತಹ ಕೆಟ್ಟ ಸ್ವಭಾವಗಳು ಅಂಟಿಕೊಂಡರೆ ಮುಂದೊಂದು ದಿನ ಅದು ನಮ್ಮನ್ನಷ್ಟೇ ಅಲ್ಲ, ಎಲ್ಲವನ್ನೂ ಹಾಳು ಮಾಡುತ್ತದೆ. ಆದ್ದರಿಂದ ಕ್ಷಣಿಕವಾದ ಸಂಪತ್ತು ಮೊದಲಾದವುಗಳು ಇವೆ ಎಂದು ಸರ್ವಥಾ ಗರ್ವ ತಾಳಬಾರದು. ಗರ್ವದಿಂದ ವ್ಯವಹರಿಸಿದರೆ ಮುಂದೊಂದು ದಿನ ಅದೇ ನಮ್ಮ ಬೀಳಿಗೆ ಕಾರಣವಾಗುತ್ತದೆ.

ಧುರಂಧರ್: ಅಪಪ್ರಚಾರದ ಹಿಂದಿನ ಮನಸ್ಥಿತಿ

▸ ಉತ್ಪಲ್ ಕುಮಾರ್

ಧುರಂಧರ್ ಸಿನಿಮಾ ಕುರಿತಾದ ಕೆಲವರ ಆಕ್ರೋಶವು ಅದರ ಕತೆ ಅಥವಾ ಅದರ ನಿರೂಪಣೆಯ ಕುರಿತಾಗಿಯಲ್ಲ. ಅದಕ್ಕಿಂತಲೂ ಮುಖ್ಯವಾಗಿ ನಿಯಂತ್ರಣದ ಕುರಿತಾಗಿ. ಅಂದರೆ ಆ ಕತೆಯನ್ನು ಹೇಳುವ ನಿಯಂತ್ರಣ ಯಾರ ಕೈಯಲ್ಲಿದೆ ಎಂಬ ಕುರಿತಾಗಿ. ಯಾರ ನೋವು ಅಧಿಕೃತವಾಗಿದೆ, ಯಾರ ರಾಷ್ಟ್ರೀಯತೆಯು ನ್ಯಾಯಾರ್ಹವಾಗಿದೆ ಎಂಬುದರಲ್ಲಿ.

ಕೆಲವು ದಶಕಗಳಿಂದ ಸಿನಿಮಾ ಮತ್ತು ಸಾಹಿತ್ಯಿಕ ಮಾಧ್ಯಮಗಳು ಎಡಪಂಥೀಯರ ಏಕಾಧಿಪತ್ಯದಲ್ಲಿತ್ತು. ಈ ಎಡಪಂಥೀಯರು ತಮ್ಮನ್ನು ಲಿಬರಲ್‌ಗಳು ಎಂದು ಕರೆಸಿಕೊಳ್ಳುತ್ತಿದ್ದರು. ಅವರು ಸಿನಿಮಾ ಮತ್ತು ಸಾಹಿತ್ಯವನ್ನು ತಮ್ಮ ಪ್ರಚಾರ ಸಾಧನವಾಗಿ ಬಳಸಿಕೊಳ್ಳುತ್ತಿದ್ದರು.

ಬಹುಕಾಲದಿಂದ ಹಿಂದಿ ಸಿನಿಮಾಗಳು ಎಡಪಂಥೀಯ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದವು. ಹಣೆಯಲ್ಲಿ ತಿಲಕ ಧರಿಸಿದ ವ್ಯಕ್ತಿ ಯಾವಾಗಲೂ ಖಳನಾಯಕನಾಗುತ್ತಿದ್ದ. ಮೇಲ್ವರ್ಗದವರು ಖಳರಂತೆ ಚಿತ್ರಿಸಲ್ಪಡುತ್ತಿದ್ದರು. ಹಿಂದುಗಳನ್ನು ಮತ್ತು ಹಿಂದು ಧರ್ಮವನ್ನು ಹೀಯಾಳಿಸುವುದು, ಅಣಕವಾಡುವುದು ಪ್ರಗತಿಪರ ಚಿಂತನೆಯೆಂಬಂತೆ ಬಿಂಬಿಸಲಾಗುತ್ತಿತ್ತು. ಹಾಗೆಂದು ಹಿಂದುಯೇತರ ಧರ್ಮಗಳ ಮೇಲೆ ಜಾತ್ಯತೀತ ಮಾನದಂಡಗಳು ಎಂದೂ ಅನ್ವಯವಾಗುತ್ತಿರಲಿಲ್ಲ.

ಈ ವಿಷಯದಲ್ಲಿ ಹಾಲಿವುಡ್ ಸ್ವಲ್ಪ ಭಿನ್ನವೆನ್ನಬಹುದು. ಯಾರು ಹೀರೋಗಳು, ಯಾರ ಮೇಲೆ ಬಾಂಬ್ ಹಾಕಬೇಕು, ಯಾರನ್ನು ಅಣಕಿಸಬೇಕು ಎಂಬುದನ್ನು ಅದು ನಿರ್ಧರಿಸು ತ್ತಿತ್ತು. ರಷ್ಯನ್ನರು ಖಳನಾಯಕರಾಗುತ್ತಿದ್ದರು. ಅರಬರು ಭಯೋತ್ಪಾದಕರಾಗುತ್ತಿದ್ದರು. ಭಾರತೀಯರು ತೀರಾ ಮೂಢನಂಬಿಕೆ ತುಂಬಿದ , ಅಭಿವೃದ್ಧಿ ಕಾಣದ ಸಮುದಾಯವಾಗುತ್ತಿದ್ದರು.

ರ‍್ಯಾಂಬೋ ವಿಯೆಟ್ನಾಂನಲ್ಲಿ ಅಮೆರಿಕದ ಶೌರ್ಯವನ್ನು ತೋರಿ ತಾನೇ ರಕ್ಷಕನೆಂಬಂತೆ ಬಿಂಬಿಸಲ್ಪಟ್ಟಾಗ ಅದನ್ನು ಯಾರೂ 'ಪ್ರಚಾರದ ಸಿನೆಮಾ' ಅನ್ನಲಿಲ್ಲ. ಜೇಮ್ಸ್ ಬಾಂಡ್ ತನ್ನ ಸಿನಿಮಾಗಳಲ್ಲಿ ಬ್ರಿಟಿಷರ ಸಾರ್ವಭೌಮತೆಯನ್ನು ಪ್ರತಿಪಾದಿಸಿದಾಗಲೂ ಅದನ್ನು ಪ್ರಚಾರವೆನ್ನಲಿಲ್ಲ. ಕೆಲವು ಪ್ರಳಯದ ಚಿತ್ರಗಳಲ್ಲಿ ಅಮೆರಿಕವೇ ಜಗತ್ತಿನ ರಕ್ಷಕ ಎಂಬಂತೆ ಚಿತ್ರಿಸಿದಾಗಲೂ ಅದನ್ನು ಪ್ರಚಾರ ಎನ್ನಲಿಲ್ಲ.

ಇಂತಹ ಚಿತ್ರಗಳ ಪ್ರಚಾರ ತಂತ್ರ ಎಷ್ಟು ಪ್ರಭಾವಶಾಲಿ ಯಾಗಿತ್ತೆಂದರೆ 1985ರಲ್ಲಿ ಬೆರೂತ್ ಒತ್ತೆಯಾಳು ಪ್ರಕರಣದ ಕೊನೆಯ ವೇಳೆ ಅಮೆರಿಕದ ಅಧ್ಯಕ್ಷ ರೇಗನ್ "ಕಳೆದ ರಾತ್ರಿ ನಾನು ರ‍್ಯಾಂಬೋ ಸಿನಿಮಾ ನೋಡಿದ ಬಳಿಕ, ಇನ್ನು ಮುಂದೆ ಇಂತಹ ಒತ್ತೆಯಾಳು ಪ್ರಸಂಗ ಒದಗಿದರೆ, ಏನು ಮಾಡಬೇಕೆಂಬುದನ್ನು ನಾನು ಕಂಡುಕೊಂಡೆ" ಎಂದು ನುಡಿದಿದ್ದರು.

ಈ ರೀತಿ ಹಾಲಿವುಡ್‌ನ ಕೆಲವು ಚಿತ್ರಗಳು ತಮ್ಮ ತಮ್ಮ ದೇಶದ ಸಾಮರ್ಥ್ಯವನ್ನು ಅತಿಯಾಗಿ ಬಿಂಬಿಸಿದ ಪ್ರಚಾರ ಚಿತ್ರಗಳನ್ನು ನಿರ್ಮಿಸಿದಾಗ ಅದನ್ನು ಯಾರೂ ಟೀಕಿಸಲಿಲ್ಲ. ಅದರ ಬದಲಾಗಿ ಅದು ರಾಷ್ಟ್ರೀಯ ಅಸ್ಮಿತೆಯನ್ನು ಎತ್ತಿ ಹಿಡಿಯುವ, ದೇಶಪ್ರೇಮವನ್ನು ಅಭಿವ್ಯಕ್ತಿಸುವ ಸಿನಿಮಾಗಳು ಎಂದು ಹೊಗಳಲಾಯಿತು.

ಆದರೆ 'ಧುರಂಧರ್' ಭಾರತದ ಅಸ್ಮಿತೆಯನ್ನು ಪ್ರತಿಬಿಂಬಿಸು ವಾಗ ಎಡಪಂಥೀಯ, ಲಿಬರಲ್‌ವಾದಿಗಳು ಅದನ್ನು ಪ್ರಚಾರದ ಸಿನಿಮಾ ಎಂದು ಹೀಗಳೆಯುತ್ತಿದ್ದಾರೆ. ಅದು ಮೋದಿಯವರನ್ನು ಹೊಗಳಲು ನಿರ್ಮಿಸಲ್ಪಟ್ಟ ಪ್ರಚಾರದ ಸಿನಿಮಾ ಎಂದು ಟೀಕಿಸಲಾಗುತ್ತಿದೆ.

ಇತ್ತೀಚೆಗೆ ಆಂಗ್ಲ ಪತ್ರಿಕೆಯೊಂದಂತೂ ಧುರಂಧರ್ ಸಿನಿಮಾವು ಮೋದಿಯವರನ್ನೇ ಪ್ರಚಾರದ ಪ್ರಮುಖ ಕೇಂದ್ರವಾಗಿಸಿದೆ ಎಂದು ಆರೋಪಿಸಿತು. "ಈ ಸಿನಿಮಾದಲ್ಲಿ ಇರುವುದು ಒಬ್ಬನೇ ಒಬ್ಬ ಹೀರೋ. ಅದು ಭಾರತದ ಗೂಢಚಾರನಲ್ಲ, ಬದಲಾಗಿ ಮೋದಿ. ತೆರೆಯ ಮೇಲೆ ಮೋದಿಯವರು ಬಂದಾಗ ಚಿತ್ರಮಂದಿರದಲ್ಲಿ ಅತಿಯಾದ ಕರತಾಡನ



ಕೇಳಿಸಿತು" ಎಂದು ಅದರಲ್ಲಿ ಬರೆಯಲಾಯಿತು. "ಈ ಚಿತ್ರದಲ್ಲಿ ವೈರಿಗಳು ಎಲ್ಲೆಡೆಯೂ ಇದ್ದಾರೆ. ಕೇವಲ ಪಾಕಿಸ್ತಾನದಲ್ಲಲ್ಲ, ಭಾರತದ ವಿರೋಧ ಪಕ್ಷಗಳು, ಮುಸ್ಲಿಂ ಹಂತಕರು, ಸಿಖ್ ಪ್ರತ್ಯೇಕತಾವಾದಿಗಳು, ಎನ್‌ಜಿಓಗಳು ಮತ್ತು ಎಡಪಂಥೀಯರು ಎಲ್ಲರೂ ವೈರಿಗಳೆ" ಎಂದು ಅದು ಬರೆಯಿತು.

ಬಿಬಿಸಿ ಸೇರಿದಂತೆ ಇನ್ನಿತರ ಕೆಲವು ಪಾಶ್ಚಿಮಾತ್ಯ ಮಾಧ್ಯಮಗಳು ಕೂಡಾ ಇದೇ ಧ್ವನಿಯಲ್ಲಿ ಮಾತನಾಡುತ್ತಿವೆ. "ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಿನಿಮಾಗಳು ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತಿವೆ. ಸರಕಾರದ ನೀತಿಗಳನ್ನು ಮತ್ತು ಐತಿಹಾಸಿಕ ಘಟನೆಗಳನ್ನು ವೈಭವೀಕರಿಸುವ ಚಿತ್ರಗಳು ಭಾರೀ ಯಶಸ್ಸು ಸಾಧಿಸುತ್ತಿವೆ" ಎಂದು ಬಿಬಿಸಿ ಬರೆದಿತ್ತು.

ಇಲ್ಲಿರುವುದು ಕೇವಲ ರಾಜಕೀಯ ವಿಷಯವಲ್ಲ. ಧುರಂಧರ್ ಬೇರೆ ಕೆಲವು ವಿಚಾರಗಳಲ್ಲೂ ಅವರ ನೆಮ್ಮದಿ ಕೆಡಿಸಿದೆ. ಅದು ಸಿನಿಮಾ ಕ್ಷೇತ್ರದ ಮೇಲಿನ ಅವರ ಏಕಾಧಿಪತ್ಯವನ್ನು ಕಿತ್ತೊಗೆದಿದೆ. ಕೆಲವು ವ್ಯಕ್ತಿಗಳಷ್ಟೆ ಸಿನಿಮಾ ಮಾಡಬಲ್ಲವರು, ಕೆಲವು ದೇಶಗಳಷ್ಟೇ ಉತ್ತಮ ಚಿತ್ರ ಕೊಡಬಲ್ಲವರು, ಕೇವಲ ಒಂದು ಬಗೆಯ ನರೇಟಿವ್‌ಗಳು ಮಾತ್ರ ಸಫಲವಾಗಬಲ್ಲವು ಮುಂತಾದ ಮಿಥ್ಯೆಗಳನ್ನು ಒಡೆದುಹಾಕಿದೆ.

ಧುರಂಧರ್ ಈ ದೃಷ್ಟಿಕೋನವನ್ನೆ ಭಂಗಿಸಿದೆ. ಏಕೆಂದರೆ ಇದು ಭಾರತದ ಕತೆಯನ್ನು ಹೇಳುವಾಗ ಪಾಶ್ಚಿಮಾತ್ಯ ದೃಷ್ಟಿಕೋನವನ್ನು ತಿರಸ್ಕರಿಸಿತು. ಅದು ಖಳನಾಯಕರನ್ನು ಲಿಬರಲ್‌ಗಳ ಇಚ್ಛೆಗೆ ತಕ್ಕಂತೆ ಮೃದುವಾಗಿಸಲು ಹೋಗಲಿಲ್ಲ. ಪಾಶ್ಚಿಮಾತ್ಯರು ಮತ್ತು ಅವರ ಗಾರ್ಡಿಯನ್‌ಗಳ ಅಧಿಕೃತ ಮುದ್ರೆ ಪಡೆಯಲು ಹೋಗಲಿಲ್ಲ.

> ಧುರಂಧರ್ ಮೋದಿಯವರ 'ಪ್ರಚಾರದ ಚಿತ್ರ' ಎಂದು ಟೀಕಿಸುವವರು ನೆಮ್ಮದಿ ಕಳಕೊಂಡಿದ್ದಾರೆ. ಧುರಂಧರ್ ಅವರ ಏಕಾಧಿಪತ್ಯ ಕಿತ್ತು ಹಾಕಿದ್ದು ಅವರಿಗೆ ಅಸಹನೀಯವಾಗಿದೆ.

ಕಳೆದ ಕೆಲವು ದಶಕಗಳಿಂದ ಜಾಗತಿಕ ಸಂಸ್ಕೃತಿಯ ಸ್ವೀಕಾರಾರ್ಹತೆಯನ್ನು ಸ್ವಘೋಷಿತ ಲಿಬರಲ್‌ಗಳು ನಿರ್ಧರಿಸುತ್ತಿದ್ದರು. ಯಾವ ಕತೆಗಳು ಪ್ರಗತಿಗಾಮಿ, ಯಾವುದು ಪ್ರತಿಗಾಮಿ, ಯಾವುದನ್ನು ಸಂಪೂರ್ಣವಾಗಿ ಹತ್ತಿಕ್ಕಬೇಕು ಎಂಬುದನ್ನೆಲ್ಲ ಅವರೇ ನಿರ್ಧರಿಸುತ್ತಿದ್ದರು. ಕಾಶ್ಮೀರ್ ಫೈಲ್ಸ್ ಇದನ್ನು ಪ್ರತಿರೋಧಿಸಿ, ಇತಿಹಾಸದ ಕಹಿಸತ್ಯಗಳನ್ನು ಜನರ ಮುಂದೆ ತೆರೆದಿಟ್ಟಿತು. ಧುರಂಧರ್ ಈ ನಿಟ್ಟಿನಲ್ಲಿ ಇನ್ನೂ ಕೆಲವು ಹೆಜ್ಜೆಗಳನ್ನು ಮುಂದಿಟ್ಟಿತು. ಇಂತಹ ನರೇಟಿವ್‌ಗಳು ವಾಣಿಜ್ಯಕಾಗಿಯೂ ಲಾಭತರಬಲ್ಲವು, ತಾಂತ್ರಿಕ ಕೌಶಲ ಹೊಂದಿರಬಲ್ಲವು ಹಾಗೂ ಜಾಗತಿಕವಾಗಿ ಮನ್ನಣೆ ಪಡೆಯಬಲ್ಲವು ಎಂದು ತೋರಿಸಿಕೊಟ್ಟಿತು. ತಾವೇ ಶ್ರೇಷ್ಠರು ಎಂದು ಭಾವಿಸಿಕೊಂಡಿದ್ದ ಹಲವರ ಹೆಮ್ಮೆಯ ಬಲೂನಿಗೆ ಇದು ಸೂಜಿ ಚುಚ್ಚಿದೆ.

ಹಾಗಾಗಿಯೇ ಅವರೀಗ ಧುರಂಧರ್‌ಗೆ 'ಪ್ರಚಾರದ ಚಿತ್ರ, ಹಿಂದುತ್ವ ರಾಷ್ಟ್ರೀಯವಾದಿ ಚಿತ್ರ ಮುಂತಾದ ಹಣೆಪಟ್ಟಿ ಕಟ್ಟುತ್ತಿದ್ದಾರೆ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಕತೆ ಬೇಕು. ರ‍್ಯಾಂಬೋ, ಜೇಮ್ಸ್ ಬಾಂಡ್‌ಗಳಿಗೆ ಅದು ಸಮ್ಮತವಾದರೆ, ಧುರಂಧರ್ ಭಾರತೀಯ ಹಿತಾಸಕ್ತಿ ರಕ್ಷಿಸಲು ಹಿಂಸಾತಾಂಡವ ನಡೆಸುವುದೂ ಸರಿಯಾಗಿಯೇ ಇದೆ.

ಒಂದು ರೀತಿಯಲ್ಲಿ ಧುರಂಧರ್ ಕೇವಲ ಸಿನಿಮಾವಲ್ಲ, ಅದೊಂದು ಬಗೆಯ ಸ್ಥಿತ್ಯಂತರ. ಕಹಿಸತ್ಯಗಳನ್ನು, ನಮಗೆ ಸ್ವೀಕಾರಾರ್ಹವಾದುದನ್ನು ಇತರರ ಅನುಮತಿ ಪಡೆಯದೆ ಜನರಿಗೆ ಹೇಳುವ ಸ್ವಾತಂತ್ರ್ಯದ ಅಭಿವ್ಯಕ್ತಿ ಇಲ್ಲಿದೆ. ಜತೆಗೇ ಇದು ಕಮರ್ಷಿಯಲ್ ಆಗಿಯೂ ಗೆಲುವು ಸಾಧಿಸಿದೆ.

ಧುರಂಧರ್ ಕುರಿತ ಆಕ್ರೋಶವು ಆ ಸಿನಿಮಾ ಏನು ಹೇಳುತ್ತದೆ ಎಂಬುದರ ಬಗೆಗಲ್ಲ. ಅದನ್ನು ಜನರು ಕೇಳಿಸಿಕೊಳ್ಳುತ್ತಿದ್ದಾರೆ, ಒಪ್ಪಿಕೊಳ್ಳುತ್ತಿದ್ದಾರೆ ಎಂಬ ನಿಟ್ಟಿನಲ್ಲಿ ಮೂಡಿದ ಆಕ್ರೋಶವದು. ಧುರಂಧರ್ ಕೂಡಾ ರ‍್ಯಾಂಬೋ, ಜೇಮಸ್ ಬಾಂಡ್‌ರಂತೆ ಭಾರತದ ಕುರಿತಾದ ಪ್ರಚಾರ ಸಿನಿಮಾ. ನಿಜಕ್ಕಾದರೆ ಭಾರತೀಯ ಗೂಢಚಾರಿಯು ಅಮೆರಿಕನ್ ಹೀರೋ ಅಥವಾ ಬ್ರಿಟಿಷ್ ಗೂಢಚಾರಿಗಿಂತ ವಾಸ್ತವಕ್ಕೆ ಹೆಚ್ಚು ಹತ್ತಿರವಿದ್ದಾನೆ.

ಧುರಂಧರ್‌ನ ಪ್ರಭಾವ ಮತ್ತು ಅದು ಮೂಡಿಸಿದ ಜಾಗತಿಕ ಕೋಲಾಹಲ ಗಮನಿಸುವಾಗ ಇನ್ನು ಮುಂದೆ ಹಿಂದಿ ಸಿನಿಮಾಗಳನ್ನು ಎರಡು ವಿಭಾಗಗಳಲ್ಲಿ ವರ್ಗೀಕರಿಸಬಹುದು. 'ಧುರಂಧರ್‌ಗಿಂತ ಮೊದಲಿನ ಯುಗ' ಮತ್ತು 'ಧುರಂಧರ್ ನಂತರದ ಯುಗ' ಎಂಬುದಾಗಿ. ಎಲ್ಲಕ್ಕಿಂತ ಮುಖ್ಯವಾಗಿ ಧುರಂಧರ್ ಭಾರತಕ್ಕೊಂದು ಧ್ವನಿ ನೀಡಿದೆ. ಅತ್ಯಂತ ಆತ್ಮವಿಶ್ವಾಸದ ಮತ್ತು ತಪ್ಪೊಪ್ಪಿಕೆಯಿಲ್ಲದ ಧ್ವನಿಯದು.

ಹಿಂದೂ ವಿರೋಧವೇ ಇವರ ಸಾಹಿತ್ಯವೇ?

▸ ಅರುಣ ಜೋಶಿ

ಧಾರವಾಡದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನ ಸಮಾರೋಪದಲ್ಲಿ ಡಾ॥ ವಿನಯಾ ವಕ್ಕುಂದ ಎಂಬ ಎಡಪಂಥೀಯ ಲೇಖಕಿ ತಮ್ಮ ಭಾಷಣದುದ್ದಕ್ಕೂ ಹಿಂದೂ ವಿರೋಧಿ ನಿಲುವು ಪ್ರದರ್ಶಿಸಿ, ಒಂದು ಕೋಮಿನ ಪರ ಮಾತನಾಡಿದ್ದರಿಂದ ಸಭಿಕರಲ್ಲಿ ಡಾ॥ ರಾಜೇಂದ್ರ ಕುಮಾರ್ ಮಠ ಎಂಬ ಪ್ರಾಧ್ಯಾಪಕರು ತೀವ್ರ ವಿರೋಧ ವ್ಯಕ್ತಪಡಿಸಿದರು. ಅವರೊಟ್ಟಿಗೆ ಹಲವು ಜನ ಧ್ವನಿ ಸೇರಿಸಿದ್ದು ಕಂಡು ತಕ್ಷಣ ಕ.ಸಾ.ಪ ಪದಾಧಿಕಾರಿಗಳು ಈ ವಿಷಯವನ್ನು ನಿಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭಿಸಿದರು.

ಕೆಲವು ವರ್ಷಗಳ ಹಿಂದೆ ಧಾರವಾಡದ ಒಂದು ಖಾಸಗಿ ಸಾಹಿತ್ಯಿಕ ಸಂಸ್ಥೆಯ ಸಮ್ಮೇಳನದಲ್ಲಿ ಮಾತನಾಡಿದ ಪ್ರೊಫೆಸರ್ ದೇವಿ ಎಂಬ ಎಡಪಂಥೀಯ ಲೇಖಕರು ಭಾರತೀಯ ಸೈನಿಕರನ್ನು ಅತ್ಯಾಚಾರಿಗಳು ಎಂದು ಬಹಿರಂಗವಾಗಿ ದೂಷಿಸಿದ್ದು ಆಕ್ರೋಶಕ್ಕೆ ಕಾರಣವಾಗಿತ್ತು. ಮಾಜಿ ಸೈನಿಕರು ಮತ್ತು ದೇಶಭಕ್ತ ಸಂಘಟನೆಗಳು ವೇದಿಕೆಯನ್ನು ಕಿತ್ತೆಸೆದು ಸಮ್ಮೇಳನವನ್ನೇ ರದ್ದು ಮಾಡಿಸಿದ್ದರು. ಇಂಥ ಘಟನೆಗಳು ಬಾರಿ ಬಾರಿ ನಡೆಯುತ್ತಿದ್ದರೂ ಸಂಬಂಧಿತರು ಎಚ್ಚರಿಕೆ ವಹಿಸದೆ ಹಿಂದೂ ವಿರೋಧಿ ಮತ್ತು ದೇಶವಿರೋಧಿ ವ್ಯಕ್ತಿಗಳನ್ನೇ ಅತಿಥಿಗಳಾಗಿ ಭಾಷಣಕ್ಕೆ ಕರೆಯುವುದು ಏಕೆ?

ಧಾರವಾಡ ಸಾಹಿತ್ಯ ಸಮ್ಮೇಳನದಲ್ಲಿ ವಿನಯಾ ವಕ್ಕುಂದ ಮಾತನಾಡುತ್ತಾ ಇಂದು ಸಾಹಿತ್ಯಕ್ಕೆ ಬಹುದೊಡ್ಡ ಸವಾಲು ಎದುರಾಗಿದೆ. ದೇಶದಲ್ಲಿ ಸಾಹಿತ್ಯದ ಮೇಲೆ ಸರ್ವಾಧಿಕಾರ ತಾಂಡವವಾಡುತ್ತಿದೆ ಎಂದು, ಎರಡು ವರ್ಷಗಳ ಹಿಂದೆ ಶ್ರೀ ನುಗ್ಗಿಕೇರಿಯ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿದ್ದ ಅನ್ಯಕೋಮಿನ ಒಬ್ಬ ವ್ಯಕ್ತಿಯ ಕಲ್ಲಂಗಡಿ ಹಣ್ಣಿನ ಅಂಗಡಿಯನ್ನು ಕೆಲವರು ಹಾಳುಗೆಡವಿದ ಘಟನೆ ಉಲ್ಲೇಖಿಸಿದ್ದರು. ಇದು ಧಾರವಾಡದ ಅಸಹಿಷ್ಣತೆಯ ಪ್ರತೀಕವಾಗಿದೆ ಎಂಬರ್ಥದಲ್ಲಿ ಮಾತನಾಡಿದ ಅವರು, ಉತ್ತರ ಭಾರತದ ಒಂದು ಹಳ್ಳಿಯಲ್ಲಿ ಅಲ್ಪಸಂಖ್ಯಾತ ಮಹಿಳೆಯ ಮೇಲೆ ಆದ ದೌರ್ಜನ್ಯವನ್ನು ಪ್ರಸ್ತಾಪಿಸಿ ಇಂಥವರ ವಿರುದ್ಧ ಸಾಹಿತಿಗಳು ಧ್ವನಿ ಎತ್ತಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಇದನ್ನು ಆಕ್ಷೇಪಿಸಿದ ಡಾ. ರಾಜೇಂದ್ರ ಅವರು ಇದು ಸಾಹಿತ್ಯಗೋಷ್ಠಿ. ಇಲ್ಲಿ ಒಂದು ಸಮುದಾಯವನ್ನು ಏಕೆ ಎತ್ತಿಕಟ್ಟಿ ಮಾತನಾಡುತ್ತೀರಿ? ಅಲ್ಪಸಂಖ್ಯಾತರ ಕಲ್ಲಂಗಡಿ ಹಣ್ಣುಗಳ ಮೇಲೆ ನಿಮಗಿರುವ ಪ್ರೀತಿ ಹುಬ್ಬಳ್ಳಿಯಲ್ಲಿ ಕಾಲೇಜ್ ಕ್ಯಾಂಪಸ್‌ನಲ್ಲಿ ಕೊಲೆಯಾದ ವಿದ್ಯಾರ್ಥಿನಿಯ ಬಗ್ಗೆ ಏಕೆ ಇಲ್ಲ? ಮತ್ತು ಉತ್ತರಪ್ರದೇಶದ ಒಂದು ಘಟನೆಯನ್ನು ಹೇಳುವ ನೀವು ಕಾಶ್ಮೀರ, ಕೇರಳ ಮತ್ತು ಇದೇ ವಿಜಯಪುರದಲ್ಲಿ ಆದ ದಲಿತ ಮಹಿಳೆಯ ಮೇಲಿನ ದೌರ್ಜನ್ಯದ ಬಗ್ಗೆ ಏಕೆ ಮಾತನಾಡುವುದಿಲ್ಲ ಎಂದು ಪ್ರಶ್ನಿಸಿದರು.

ಮೂಲತಃ ಇದೊಂದು ಸಾಹಿತ್ಯ ಸಮ್ಮೇಳನವಾಗಿದ್ದು ಅಲ್ಲಿ ಇಂತಹ ವಿಷಯಗಳನ್ನು ಪ್ರಸ್ತಾಪಿಸುವ ಯಾವ ಸಂದರ್ಭವೂ ಇರಲಿಲ್ಲ. ಬಹುಸಂಖ್ಯಾತರನ್ನು ವಿನಾಕಾರಣ ಹೀಯಾಳಿಸುವ ಉದ್ದೇಶದಿಂದಲೇ ಈ ರೀತಿ ಮಾತನಾಡಿದರು ಎಂಬುದು ಸ್ಪಷ್ಟವಾಗುತ್ತದೆ. ಧಾರವಾಡದಲ್ಲಿ ಕಳೆದ 3-4 ವರ್ಷಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷಣಕಾರರ ಪಟ್ಟಿಯನ್ನು ನೋಡಿದರೆ ಸತ್ಯ ಯಾರಿಗಾದರೂ ತಿಳಿಯುತ್ತದೆ. ರಾಜ್ಯ ಕಮ್ಯುನಿಷ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿರುವ ವ್ಯಕ್ತಿ ಪ್ರತಿವರ್ಷ ಅತಿಥಿಯಾಗಿ ಮಾತನಾಡಿ ತಮ್ಮ ವಿಚಾರವನ್ನು ಪ್ರಚಾರ ಮಾಡಿರುವುದು ಸಾಹಿತ್ಯ ಸಮ್ಮೇಳನಗಳ ಉದ್ದೇಶಗಳ ಬಗ್ಗೆ ಪ್ರಶ್ನೆ ಏಳುವಂತೆ ಮಾಡಿದೆ. ಸಾಹಿತ್ಯ ಸಮ್ಮೇಳನದ ಭಾಷಣ ಎಡಪಂಥೀಯರಿಂದಲೇ ಆಗಬೇಕು ಎಂಬ ನಿಯಮವಿದೆಯೆ? ಒಂದು ಸಾಲೂ ಬರೆಯದಿರುವವರನ್ನು ಕೂಡಾ ಸಾಹಿತಿಗಳು ಎಂದು ಅತಿಥಿಗಳಾಗಿ ಕರೆಯಲಾಗಿದೆ ಎಂಬ ದೂರುಗಳೂ ಇವೆ. ಈ ಸಮ್ಮೇಳನಗಳಿಗೆ ಎಲ್ಲ ವಿಚಾರಧಾರೆ ಇರುವ ವ್ಯಕ್ತಿಗಳು ಬರಬೇಕೆಂದು ಅಧ್ಯಕ್ಷರು ನುಡಿಯುತ್ತಾರೆ. ಆದರೆ ಎಡಪಂಥೀಯರನ್ನು ಬಿಟ್ಟು ಯಾರನ್ನೂ ವೈಚಾರಿಕ ಭಾಷಣಕ್ಕೆ ಕರೆಯೋದಿಲ್ಲ ಎಂಬುದು ಧಾರವಾಡದಂತಹ ಸಾಹಿತ್ಯ ನಗರದ ದೊಡ್ಡ ಕೊರಗು.

ಈಗ ಚರ್ಚೆಯಲ್ಲಿರುವ ಸಮ್ಮೇಳನದಲ್ಲಿ ಮಾತನಾಡಿದ ಡಾ॥ ವಕ್ಕುಂದರವರು, 'ಕಲ್ಲಂಗಡಿ ಹಣ್ಣಿನ ಅಂಗಡಿ ನಾಶದ ಬಗ್ಗೆ ಕೋಮು ಕಾರಣದಿಂದ ಪ್ರಸ್ತಾಪಿಸಿಲ್ಲ, ಬೆವರು ಮತ್ತು ಶ್ರಮದ ಕಾರಣದಿಂದ ಪ್ರಸ್ತಾಪಿಸಿದ್ದೇನೆ' ಎಂದು ಪಕ್ಕಾ ಮಾರ್ಕ್ಸ್‌ವಾದಿ ಉತ್ತರವನ್ನು ನೀಡಿದ್ದಾರೆ. ನಗರದಲ್ಲಿ ಎರಡು ವರ್ಷಗಳಲ್ಲಿ ಹಾನಿಗೀಡಾದ ಇತರ ಅಂಗಡಿ ಮನೆಗಳ ಬಗ್ಗೆ, ದಾಳಿಗೀಡಾದ ಇಂಡಿಪಂಪ್ ಪೋಲಿಸ್ ಸ್ಟೇಷನ್ ಬಗ್ಗೆ ಮತ್ತು ಇತರ ಜನಾಂಗದ ಬೆವರು ಕಣ್ಣೀರಿನ ಬಗ್ಗೆ ಇವರಿಗೇಕೆ ನೆನಪಾಗುವುದಿಲ್ಲ? ಭಜರಂಗಿ ಭಾಯಿಜಾನ್ ಎಂಬ ಪಾಕಿಸ್ತಾನ ವೈಭವೀಕರಣದ ಕಾಲ್ಪನಿಕ ಚಿತ್ರವನ್ನು ಕಾರಣವಿಲ್ಲದೇ ಹೊಗಳಿದ ಈ ಸಾಹಿತಿಗೆ ಕೇರಳ ಫೈಲ್ಸ್, ಕಾಶ್ಮೀರ ಫೈಲ್ಸ್‌ಗಳಂತಹ ಚಿತ್ರಗಳು ಯಾಕೆ ಕಾಣುವುದಿಲ್ಲ ಎಂದು ಸಭಿಕರು ಪ್ರಶ್ನಿಸಿದ್ದು ಸಹಜವಾಗಿದೆ.

ಉತ್ತರ ಭಾರತದ ಒಂದು ಊರಲ್ಲಿ ಆದ ಅಲ್ಪಸಂಖ್ಯಾತ ಮಹಿಳೆಮೇಲಿನ ದೌರ್ಜನ್ಯವನ್ನು ಭಾಷಣದಲ್ಲಿ ಪ್ರತಿಪಾದಿಸಿ ದೇಶ ಸಂಕಷ್ಟದಲ್ಲಿದೆ ಎಂದು ಚೀರಾಡುವ ಲೇಖಕಿಗೆ ಕೇರಳ, ಕಾಶ್ಮೀರ, ಬಂಗಾಳದಲ್ಲಿ ಹಿಂದುಗಳ ಮೇಲೆ ನಡೆಯುವ ಹಿಂಸಾಚಾರ ನೆನಪಾಗುವುದಿಲ್ಲ. ಹೋಗಲಿ, ಪಕ್ಕದಲ್ಲೇ ಕಾಲೇಜ್ ಕ್ಯಾಂಪಸ್‌ನಲ್ಲಿ ಕೊಲೆಯಾದ ನೇಹಾ ಹೀರೇಮಠ, ಅಮಾನವೀಯವಾಗಿ ಕೊಲೆಯಾದ ಬಿಜಾಪುರದ ದಲಿತ ಮಹಿಳೆ, ಸಹಪಾಠಿಗಳಿಂದಲೇ ಕೊಲೆಯಾದ ಅಪ್ರಾಪ್ತ ಬಾಲಕ ಶಿವಮೊಗ್ಗದ ಸಾಕೇತ್ ಇವರ ಮಾನವೀಯತೆಯ ಪರಿಧಿಯೊಳಗೆ ಬರುವುದಿಲ್ಲವೇಕೆ? ಏಕೆಂದರೆ ಈ ಎಲ್ಲ ಪ್ರಕರಣಗಳಲ್ಲಿ ಆರೋಪಿಗಳಾಗಿರುವವರು ಒಂದು ನಿರ್ದಿಷ್ಟ ಕೋಮಿನ ಜನ.

ಈ ವರ್ಷ ಯಾವುದೇ ಸಾಹಿತ್ಯ ಸಮ್ಮೇಳನದಲ್ಲಿ 'ವಂದೇ ಮಾತರಂ' ಗೀತೆಯ ಶತಮಾನೋತ್ಸವದ ಬಗ್ಗೆ ಮಾತು ಬರುವುದಿಲ್ಲ. ಲೆನಿನ್-ಸ್ಟಾಲಿನ್, ಮ್ಯಾಕ್ಸಿಂ ಗೊರ್ಕಿ, ಲಿಯೋ ಟಾಲ್‌ಸ್ಟಾಯ್ ಬರಹಗಳ ಬಗ್ಗೆಯೇ ಮಾತು. ಧಾರವಾಡದ ಸಾಹಿತ್ಯ ಪರಿಷತ್ ಸಮ್ಮೇಳನಕ್ಕೆ ಈ ವರ್ಷದಲ್ಲಿ ಮಹಾನಗರ ಪಾಲಿಕೆ ತೆರಿಗೆದಾರರ ಹಣದಲ್ಲಿ 2 ಲಕ್ಷ ರೂ. ಅನುದಾನ ನೀಡಿದೆ. ಪ್ರಾಥಮಿಕ ಸೌಲಭ್ಯಗಳಿಗೆ ಕೊರತೆಯಿರುವ ನಗರದಲ್ಲಿ, ತೆರಿಗೆದಾರರ ಹಣವು ಇಂಥ ಬಹುಸಂಖ್ಯಾತ ವಿರೋಧಿ ವಿಚಾರಗಳನ್ನು ಹರಡುವ ಸಮಾವೇಶಗಳಿಗೆ ವಿನಿಯೋಗವಾಗಬೇಕೇ ಎಂಬುದು ಪಾಲಿಕೆ ಅಧಿಕಾರಿಗಳಿಗೆ ಮತ್ತು ಚುನಾಯಿತ ಸದಸ್ಯರಿಗೆ ಕರದಾತರ ಪ್ರಶ್ನೆ.

ಭಾರತ ತೀವ್ರ ನಿಗಾ

ಕೊಲ್ಲಿ ರಾಷ್ಟ್ರಗಳಿಂದ ತೈಲ ಆಮದಿನ ಮೇಲೆ ಭಾರತವು ಹೆಚ್ಚಿನ ಅವಲಂಬನೆ ಹೊಂದಿರುವುದರಿಂದ, ಪರಿಸ್ಥಿತಿ ತಿಳಿಗೊಳಿಸಲು ಮತ್ತು ಹೊರ್ಮುಜ್ ಜಲಸಂಧಿಯನ್ನು ತಕ್ಷಣವೇ ಮುಕ್ತಗೊಳಿಸಲು ಭಾರತ ಕರೆ ನೀಡಿದೆ. ಪ್ರಸ್ತುತ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಕಚ್ಚಾ ತೈಲ ಪೂರೈಕೆಯನ್ನು ಸುರಕ್ಷಿತವಾಗಿರಿಸಲು ಮತ್ತು ಭಾರತದ ಧ್ವಜ ಹೊತ್ತ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತುರ್ತು ಕಾರ್ಯಯೋಜನೆಗಳಿಗೆ ಸಿದ್ಧವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚೀನಾ ಎಚ್ಚರಿಕೆ

ಸಂಘರ್ಷ ತೀವ್ರಗೊಳ್ಳದಂತೆ ಎಚ್ಚರಿಕೆ ನೀಡಿರುವ ಚೀನಾ, ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ನೌಕಾಯಾನದ ಸ್ವಾತಂತ್ರ್ಯವನ್ನು ಕಾಪಾಡುವ ಅಗತ್ಯವನ್ನು ಒತ್ತಿಹೇಳಿದೆ. ಹಾರ್ಮುಜ್ ಜಲಸಂಧಿಯಲ್ಲಿನ ಯಾವುದೇ ಅಡೆತಡೆಗಳು ಜಾಗತಿಕ ವ್ಯಾಪಾರ ಮತ್ತು ಇಂಧನ ಮಾರುಕಟ್ಟೆಗಳ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದು ಚೀನಾ ತಿಳಿಸಿದೆ. ಇದೇ ವೇಳೆ, ತನ್ನ ವಾಣಿಜ್ಯ ಹಡಗುಗಳ ಸಂಚಾರ ಅಂತಾರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಮುಂದುವರಿಯಲಿದೆ ಎಂದು ಚೀನಾ ಸರ್ಕಾರ ಸ್ಪಷ್ಟಪಡಿಸಿದೆ.

ರಷ್ಯಾ ಸಂಧಾನದ ಪ್ರಸ್ತಾಪ

ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಸಲು ರಷ್ಯಾ ಮುಂದಾಗಿದ್ದು, ತಾನು ಮಧ್ಯಸ್ಥಿಕೆ ವಹಿಸಲು ಸಿದ್ಧವಿರುವುದಾಗಿ ತಿಳಿಸಿದೆ. ಪ್ರದೇಶದಲ್ಲಿ ಸ್ಥಿರತೆಯನ್ನು ಪುನಃ ಸ್ಥಾಪಿಸಲು ಮತ್ತು ಪ್ರಮುಖ ನೌಕಾ ಮಾರ್ಗಗಳನ್ನು ಪುನರಾರಂಭಿಸಲು ಪೂರಕವಾಗಿ ರಾಜತಾಂತ್ರಿಕ ವೇದಿಕೆ ಒದಗಿಸಲು ಮಾಸ್ಕೋ ಸಿದ್ಧತೆ ನಡೆಸಿದೆ.

ಭಾರತದ ರಷ್ಯಾ ತೈಲ ಆಮದು 5 ಬಿಲಿಯನ್ ಯುರೋಗೆ ಏರಿಕೆ

ಹೊಸದಿಲ್ಲಿ: ಆಮದು ಪ್ರಮಾಣ ದುಪ್ಪಟ್ಟಾಗುವುದರ ಜೊತೆಗೆ, ಜಾಗತಿಕ ತೈಲ ಬೆಲೆಗಳು ಏರಿಕೆಯಾದ ಕಾರಣ, ಮಾರ್ಚ್‌ನಲ್ಲಿ ರಷ್ಯಾದಿಂದ ಭಾರತದ ಕಚ್ಚಾ ತೈಲ ಖರೀದಿ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದ್ದು, ಒಟ್ಟು 5.3 ಬಿಲಿಯನ್ ಯುರೋಗಳಿಗೆ ತಲುಪಿದೆ. ಇಂಧನ ಮತ್ತು ಶುದ್ಧ ಗಾಳಿ ಸಂಶೋಧನಾ ಕೇಂದ್ರದ (ಸಿಆರ್‌ಇಎ) ವರದಿಯ ಪ್ರಕಾರ, ಮಾರ್ಚ್‌ನಲ್ಲಿ ರಷ್ಯಾದ ಪಳೆಯುಳಿಕೆ ಇಂಧನಗಳ ಎರಡನೇ ಅತಿದೊಡ್ಡ ಖರೀದಿದಾರನಾಗಿ ಭಾರತ ಹೊರಹೊಮ್ಮಿದೆ. ಭಾರತ ಒಟ್ಟು 5.8 ಬಿಲಿಯನ್ ಯುರೋ ಮೌಲ್ಯದ ಹೈಡ್ರೋಕಾರ್ಬನ್‌ಗಳನ್ನು ಆಮದು ಮಾಡಿಕೊಂಡಿದ್ದು, ಇದರಲ್ಲಿ ಕಚ್ಚಾ ತೈಲದ ಪಾಲು ಶೇ.91 ರಷ್ಟಿದೆ.

ಹಾರ್ಮುಜ್ ಉದ್ವಿಗ್ನತೆ ಹೆಚ್ಚಳ | ಜಾಗತಿಕ ಆರ್ಥಿಕತೆ ಮತ್ತು ಪೂರೈಕೆ ಸರಪಳಿ ಮೇಲೆ ತೀವ್ರ ಪರಿಣಾಮ

ಇರಾನ್‌ಗೆ ಅಮೆರಿಕ ನೌಕಾ ದಿಗ್ಬಂಧನ



ವಾಷಿಂಗ್ಟನ್: ಇರಾನ್ ಜತೆಗಿನ ಕದನ ವಿರಾಮ ಮಾತುಕತೆಗಳು ವಿಫಲಗೊಂಡ ಬೆನ್ನಲ್ಲೇ, ಅಮೆರಿಕ ಆ ದೇಶದ ಬಂದರುಗಳ ಮೇಲೆ ನೌಕಾ ದಿಗ್ಬಂಧನವನ್ನು ಆರಂಭಿಸಿದೆ. ಈ ಬೆಳವಣಿಗೆಯಿಂದಾಗಿ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿದ್ದು, ಹಾರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಹೆಚ್ಚುವ ಆತಂಕ ಮೂಡಿದೆ. ಕಳೆದ ವಾರಾಂತ್ಯದಲ್ಲಿ ಅಮೆರಿಕದಲ್ಲಿ ನಡೆದ ಶಾಂತಿ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡ ನಂತರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಕಠಿಣ ನಿರ್ಧಾರ ಪ್ರಕಟಿಸಿದ್ದಾರೆ. ಇದಕ್ಕೂ ಮೊದಲು ಇರಾನ್ ತಾನೇ ಜಲಸಂಧಿಯಲ್ಲಿ ಟ್ಯಾಂಕರ್‌ಗಳ ಸಂಚಾರವನ್ನು ನಿರ್ಬಂಧಿಸಿತ್ತು. ಈಗ ಅಮೆರಿಕದ ದಿಗ್ಬಂಧನ ಇರಾನ್‌ನ ತೈಲ ರಫ್ತನ್ನು ಸಂಪೂರ್ಣವಾಗಿ ಕಡಿತಗೊಳಿಸಿ, ಅದನ್ನು ಮತ್ತೆ ಮಾತುಕತೆಗೆ ಬರುವಂತೆ ಒತ್ತಡ ಹೇರುವ ತಂತ್ರ ಎಂದು ವಿಶ್ಲೇಷಿಸಲಾಗಿದೆ.

ದಿಗ್ಬಂಧನ ಜಾರಿಯ ಸವಾಲುಗಳು: ಈ ದಿಗ್ಬಂಧನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಮೆರಿಕ ನೌಕಾಪಡೆ ಬೃಹತ್ ಪ್ರಮಾಣದ ಹಡಗುಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿದೆ. ವಿಶ್ವದ ಒಟ್ಟು ತೈಲ ವ್ಯಾಪಾರದಲ್ಲಿ ಸುಮಾರು ಶೇ. 20ರಷ್ಟು ಪಾಲು ಹೊಂದಿರುವ ಹೊರ್ಮುಜ್ ಜಲಸಂಧಿಯಲ್ಲಿನ ದಟ್ಟಣೆಯನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ. ನೌಕಾಶಕ್ತಿ ತಜ್ಞರ ಪ್ರಕಾರ, ಆರಂಭಿಕ ದಿನಗಳಲ್ಲಿ ಎಷ್ಟು ಹಡಗುಗಳನ್ನು ಅಮೆರಿಕ ವಶಪಡಿಸಿಕೊಳ್ಳುತ್ತದೆ ಎಂಬುದರ ಮೇಲೆ ಈ ಕಾರ್ಯಾಚರಣೆಯ ಯಶಸ್ಸು ನಿರ್ಧಾರವಾಗಲಿದೆ.

ಅಂತಾರಾಷ್ಟ್ರೀಯ ಕಾನೂನು: ಅಂತಾರಾಷ್ಟ್ರೀಯ ಕಾನೂನಿನಲ್ಲಿ ಇಂತಹ ದಿಗ್ಬಂಧನಗಳು ನಿಷ್ಪಕ್ಷಪಾತವಾಗಿರಬೇಕು ಮತ್ತು ಆಹಾರ ಹಾಗೂ ಔಷಧಿಗಳಂತಹ ಮಾನವೀಯ ನೆರವಿನ ಸರಕುಗಳಿಗೆ ವಿನಾಯಿತಿ ನೀಡಬೇಕು. ಈ ನಿಯಮಗಳನ್ನು ಉಲ್ಲಂಘಿಸಿದರೆ ದಿಗ್ಬಂಧನ ಕಾನೂನುಬಾಹಿರವಾಗುವ ಸಾಧ್ಯತೆಯಿದೆ. ಅಮೆರಿಕ ನೌಕಾಪಡೆಯ ಉಪಸ್ಥಿತಿಯಿಂದಾಗಿ ಹೆಚ್ಚಿನ ವ್ಯಾಪಾರಿ ಹಡಗುಗಳು ಸಂಘರ್ಷಕ್ಕೆ ಇಳಿಯದೆ ದಿಗ್ಬಂಧನವನ್ನು ಗೌರವಿಸುವ ಸಾಧ್ಯತೆಯಿದೆ, ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ತೈಲ ಮಾರುಕಟ್ಟೆ , ಆರ್ಥಿಕತೆ ಮೇಲೆ ಆಘಾತ: ಈ ಬೆಳವಣಿಗೆಯಿಂದಾಗಿ ತೈಲ ಬೆಲೆಗಳು ಗಗನಕ್ಕೇರಿವೆ. ಕಚ್ಚಾ ತೈಲದ ಬೆಲೆ ಈಗಾಗಲೇ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿದ್ದು, ಸಂಘರ್ಷ ಮುಂದುವರಿದರೆ ಇದು 150 ಡಾಲರ್‌ವರೆಗೂ ಏರಬಹುದು ಎಂದು ಎಚ್ಚರಿಸಲಾಗಿದೆ. ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಗ್ಯಾಲನ್‌ಗೆ ಸರಾಸರಿ 4.12 ಡಾಲರ್‌ಗೆ ತಲುಪಿದ್ದು, ಇದು ಗ್ರಾಹಕರಿಗೆ ದೊಡ್ಡ ಹೊರೆಯಾಗಿದೆ. ಏಷ್ಯಾ ರಾಷ್ಟ್ರಗಳು ತಮ್ಮ ತೈಲ ಅಗತ್ಯಕ್ಕಾಗಿ ಮಧ್ಯಪ್ರಾಚ್ಯವನ್ನು ಅವಲಂಬಿಸಿರುವುದರಿಂದ, ಈ ಭಾಗದ ದೇಶಗಳ ಮೇಲೆ ಆರ್ಥಿಕ ಪರಿಣಾಮ ತೀವ್ರವಾಗಿರಲಿದೆ.

ಪೂರೈಕೆ ಸರಪಳಿ ಮತ್ತು ಆಹಾರ ಭದ್ರತೆ: ತೈಲದ ಹೊರತಾಗಿ, ಈ ಮಾರ್ಗ ರಸಗೊಬ್ಬರ ಮತ್ತು ಕೈಗಾರಿಕಾ ಕಚ್ಚಾ ವಸ್ತುಗಳ ಸಾಗಣೆಗೆ ಅತ್ಯಂತ ನಿರ್ಣಾಯಕ. ವಿಶ್ವದ ಒಟ್ಟು ರಸಗೊಬ್ಬರ ಪೂರೈಕೆಯ ಶೇ. 30ರಷ್ಟು ಈ ಜಲಸಂಧಿಯ ಮೂಲಕವೇ ಸಾಗುತ್ತದೆ. ಇದರಿಂದಾಗಿ ಜಾಗತಿಕ ಕೃಷಿ ಇಳುವರಿ ಕುಂಠಿತಗೊಂಡು ಆಹಾರದ ಬೆಲೆಗಳು ಹೆಚ್ಚಾಗಬಹುದು. ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಕತಾರ್‌ನಂತಹ ದೇಶಗಳು ತಮ್ಮ ಆಹಾರದ ಅಗತ್ಯಕ್ಕಾಗಿ ಆಮದನ್ನೇ ನೆಚ್ಚಿಕೊಂಡಿದ್ದು, ವಿಮಾನಗಳ ಮೂಲಕ ಸರಕು ಸಾಗಿಸಬೇಕಾದ ಅನಿವಾರ್ಯತೆಯಿಂದಾಗಿ ವೆಚ್ಚ ದುಪ್ಪಟ್ಟಾಗುವ ಭೀತಿಯಿದೆ.

ಸಂಘರ್ಷ ತೀವ್ರಗೊಳ್ಳುವ ಸಾಧ್ಯತೆ: ಇರಾನ್ ಈ ದಿಗ್ಬಂಧನಕ್ಕೆ ಸುಲಭವಾಗಿ ಶರಣಾಗುವ ಲಕ್ಷಣಗಳು ಕಾಣುತ್ತಿಲ್ಲ. ಚೀನಾ ಮತ್ತು ರಷ್ಯಾದಂತಹ ದೇಶಗಳೊಂದಿಗೆ ಅದು ಪರ್ಯಾಯ ವ್ಯಾಪಾರ ಸಂಬಂಧಗಳನ್ನು ಹೊಂದಿದೆ. ಅಲ್ಲದೆ, ಇರಾನ್ ತನ್ನ 'ಫಾಸ್ಟ್ ಅಟ್ಯಾಕ್' ಬೋಟ್‌ಗಳು ಮತ್ತು ಕ್ಷಿಪಣಿಗಳ ಮೂಲಕ ಅಮೆರಿಕದ ಹಡಗುಗಳ ಮೇಲೆ ದಾಳಿ ನಡೆಸುವ ಬೆದರಿಕೆ ಹಾಕಿದೆ. ಅಮೆರಿಕ ಕೂಡ ದಿಗ್ಬಂಧನ ವಲಯಕ್ಕೆ ಬರುವ ಇರಾನ್‌ನ ಯಾವುದೇ ಹಡಗುಗಳನ್ನು ನಾಶಪಡಿಸುವುದಾಗಿ ಎಚ್ಚರಿಸಿದೆ. ಒಟ್ಟಾರೆಯಾಗಿ, ಈ ದಿಗ್ಬಂಧನವು ಕೇವಲ ಆರ್ಥಿಕ ಒತ್ತಡವಾಗಿ ಉಳಿಯದೆ ದೊಡ್ಡ ಮಟ್ಟದ ಯುದ್ಧಕ್ಕೆ ನಾಂದಿ ಹಾಡುತ್ತದೆಯೇ ಎಂಬ ಆತಂಕ ಜಗತ್ತನ್ನು ಕಾಡುತ್ತಿದೆ.

ಅಮೆರಿಕದ ದಿಗ್ಬಂಧನದಿಂದ ಇರಾನ್‌ಗೆ ಪ್ರತಿದಿನ 4081ಕೋಟಿ ರೂ. ನಷ್ಟ

ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯಲ್ಲಿನ ಇರಾನ್ ಬಂದರುಗಳ ಮೇಲೆ ಅಮೆರಿಕ ವಿಧಿಸಿರುವ ದಿಗ್ಬಂಧನದಿಂದಾಗಿ ಇರಾನ್‌ಗೆ ಪ್ರತಿದಿನ ಅಂದಾಜು 435 ಮಿಲಿಯನ್ ಡಾಲರ್ ಆರ್ಥಿಕ ನಷ್ಟವಾಗಬಹುದು, ಎಂದು ಅಂದಾಜಿಸಲಾಗಿದೆ.

ಸೋಮವಾರದಿಂದ ಜಾರಿಗೆ ಬಂದಿರುವ ಈ ದಿಗ್ಬಂಧನ, ಇರಾನ್‌ನ ಇಂಧನ ವ್ಯಾಪಾರ, ವಿಶೇಷವಾಗಿ ಕಚ್ಚಾ ತೈಲ ಮತ್ತು ಪೆಟ್ರೋಕೆಮಿಕಲ್ಸ್ ನಿಂದ ಬರುವ ಹಣದ ಹರಿವನ್ನು ಗುರಿಯಾಗಿಸಿಕೊಂಡಿದೆ. ದಿನಕ್ಕೆ 87 ಡಾಲರ್ ಬೆಲೆಯಂತೆ 15 ಲಕ್ಷ ಬ್ಯಾರೆಲ್ ತೈಲ ರಫ್ತಿನ ಆಧಾರದ ಮೇಲೆ, ರಫ್ತು ವಲಯವೊಂದರಲ್ಲೇ 276 ಮಿಲಿಯನ್ ಡಾಲರ್ ನಷ್ಟವಾಗಲಿದೆ ಎಂದು ಅಂದಾಜಿಸಲಾಗಿದೆ. ಆದರೆ, ಪ್ರಸ್ತುತ ಕೊಲ್ಲಿಯ ಹೊರಭಾಗದಲ್ಲಿರುವ ಇರಾನ್‌ನ 154 ಮಿಲಿಯನ್ ಬ್ಯಾರೆಲ್ ತೈಲ ಸಂಗ್ರಹ ಈ ನಷ್ಟವನ್ನು ಸ್ವಲ್ಪಮಟ್ಟಿಗೆ ಸರಿದೂಗಿಸಬಹುದು.

ಶಾಂತಿ ಮಾತುಕತೆಗಳು ಒಪ್ಪಂದವಿಲ್ಲದೆ ಮುಕ್ತಾಯಗೊಂಡ ನಂತರ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಕ್ರಮಕ್ಕೆ ಮುಂದಾಗಿದ್ದಾರೆ. ಚೀನಾಕ್ಕೆ ಹೋಗುವ ಇಂಧನ ರಫ್ತನ್ನು ನಿರ್ಬಂಧಿಸುವುದು ಈ ಕಾರ್ಯಾಚರಣೆಯ



ಉದ್ದೇಶವಾಗಿದೆ, ಏಕೆಂದರೆ ಚೀನಾ ತನ್ನ ಅರ್ಧದಷ್ಟು ಕಚ್ಚಾ ತೈಲವನ್ನು ಈ ಜಲಸಂಧಿಯ ಮೂಲಕವೇ ಪಡೆಯುತ್ತದೆ.

ಭೂಸೇನೆಯನ್ನು ಬಳಸದೆಯೇ ಇರಾನ್‌ನ ಖಾರ್ಗ್ ದ್ವೀಪವನ್ನು ವಶಪಡಿಸಿಕೊಂಡಷ್ಟೇ ಆರ್ಥಿಕ ಹಾನಿಯನ್ನು ಈ ದಿಗ್ಬಂಧನ ಉಂಟುಮಾಡಲಿದೆ, ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ನಾಳೆ ಮತ್ತೆ ಅಮೆರಿಕ-ಇರಾನ್ ಮಾತುಕತೆ?

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಕದನ ವಿರಾಮ ಮಾತುಕತೆಗಳನ್ನು ಮರುಪ್ರಾರಂಭಿಸಲು ಪಾಕಿಸ್ತಾನ ಉನ್ನತ ಮಟ್ಟದ ಸಂಪರ್ಕಗಳ ಮನವೊಲಿಸಿದ್ದು, ಗುರುವಾರ ಇಸ್ಲಾಮಾಬಾದ್‌ನಲ್ಲಿ ಎರಡನೇ ಸುತ್ತಿನ ಮಾತುಕತೆ ನಡೆಯಲಿದೆ ಎಂದು ಮಂಗಳವಾರ ವರದಿಯಾಗಿದೆ.

ಏ.21ರಂದು ಎರಡು ವಾರಗಳ ಯುದ್ಧ ವಿರಾಮ ಕೊನೆಗೊಳ್ಳಲಿದ್ದು, ಮತ್ತೊಮ್ಮೆ ಮಾತುಕತೆ ನಡೆಯಲಿದೆ. ಇರಾನ್ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಎರಡನೇ ಸುತ್ತಿನ ಮಾತುಕತೆಯನ್ನು ನಡೆಸಲು ಪ್ರಧಾನಿ ಶೆಹಬಾಜ್ ಷರೀಫ್, ಉಪಪ್ರಧಾನಿ ಇಶಾಕ್ ದಾರ್ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ತೀವ್ರ ಪ್ರಯತ್ನ ಮಾಡುತ್ತಿದ್ದಾರೆಂದು ಬಲ್ಲ ಮೂಲಗಳು ತಿಳಿಸಿವೆ.

ಕಳೆದ ವಾರಾಂತ್ಯ ನಡೆದ ಸಭೆಯಲ್ಲಿ, 47 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಅಮೆರಿಕ-ಇರಾನ್ ನೇರ ಮಾತುಕತೆ ನಡೆಸಿದ್ದವು. ಸೌದಿ ಅರೇಬಿಯಾ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಆಹ್ವಾನದ ಮೇರೆಗೆ ಗುರುವಾರ ಪಾಕ್ ಪ್ರಧಾನಿ ಶರೀಫ್ ಸೌದಿ ಅರೇಬಿಯಾಗೆ ಭೇಟಿ ನೀಡಲಿದ್ದಾರೆ. ಬಳಿಕ ಟರ್ಕಿಗೆ ಕಿರು ಭೇಟಿ ನೀಡಲಿದ್ದಾರೆ.

ಮಧ್ಯಸ್ಥಿಕೆವಹಿಸಿಕೊಳ್ಳಲು ಟರ್ಕಿ ಉತ್ಸುಕ: ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆ ವಿಫಲವಾದ ಹಿನ್ನೆಲೆ ಮಧ್ಯಸ್ಥಿಕೆ ವಹಿಸಲು ಟರ್ಕಿ ಉತ್ಸಾಹವನ್ನು ತೋರಿಸಿದೆ. ಅಮೆರಿಕ-ಇರಾನ್ ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ. ಆದರೆ ಇಸ್ರೇಲ್‌ನ ವಿಧ್ವಂಸಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಟರ್ಕಿ ವಿದೇಶಾಂಗ ಸಚಿವ ಹಕನ್ ಫೈದಾನ್ ಹೇಳಿದ್ದಾರೆ.

ಇರಾನ್ ಬಂದರುಗಳಿಂದ ನಿರ್ಗಮಿಸಿದ 2 ಹಡಗುಗಳು

ದುಬೈ: ಇರಾನ್ ಬಂದರುಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ವಿಧಿಸಿರುವ ಸೇನಾ ದಿಗ್ಬಂಧನದ ನಡುವೆಯೂ, ಸೋಮವಾರ ಕನಿಷ್ಠ ಎರಡು ವಾಣಿಜ್ಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿವೆ.

ಮಾ.31ರಂದು ಬುಶೆಹ್ರ್‌ನಿಂದ ಹೊರಟಿದ್ದ, 31,000 ಟನ್ ಮೆಥನಾಲ್ ಹೊತ್ತ ಕೊಮೊರೊಸ್ ಧ್ವಜದ ಟ್ಯಾಂಕರ್ ಎಲ್ಪಿಸ್ ಸೋಮವಾರ ಸಂಜೆ 1600 ಜಿಎಂಟಿ ವೇಳೆಗೆ ಲಾರಾಕ್ ದ್ವೀಪವನ್ನು ದಾಟಿದೆ ಎಂದು ಕೆಪ್ಲರ್ ಕಡಲ ಟ್ರ್ಯಾಕಿಂಗ್ ಅಂಕಿಅಂಶಗಳು ಖಚಿತಪಡಿಸಿವೆ. ಬಂದರ್ ಇಮಾಮ್ ಖೊಮೇನಿಯಲ್ಲಿ ಜೋಳವನ್ನು ಇಳಿಸಿದ್ದ ಲೈಬೀರಿಯಾ ಧ್ವಜದ 'ಕ್ರಿಶ್ಚಿಯಾನಾ' ಹಡಗು ಕೂಡ ದಿಗ್ಬಂಧನ ಜಾರಿಗೆ ಬಂದ ಎರಡು ಗಂಟೆಗಳ ನಂತರ ಜಲಸಂಧಿಯನ್ನು ದಾಟಿದೆ. ಇದಲ್ಲದೆ, ಚೀನಾದ ಟ್ಯಾಂಕರ್ 'ರಿಚ್ ಸ್ಟಾರ್ರಿ' ಕೂಡ ರಾತ್ರೋರಾತ್ರಿ ಒಮನ್ ಕಡೆಗೆ ಪ್ರಯಾಣ ಬೆಳೆಸಿದೆ.

ಶಾಂತಿ ಮಾತುಕತೆ ವಿಫಲವಾದ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ದಿಗ್ಬಂಧನಕ್ಕೆ ಆದೇಶಿಸಿದ್ದರು. ಇರಾನ್ ಕರಾವಳಿ ಪ್ರದೇಶಗಳನ್ನು ಪ್ರವೇಶಿಸುವ ಅಥವಾ ಅಲ್ಲಿಂದ ನಿರ್ಗಮಿಸುವ ಎಲ್ಲಾ ಹಡಗುಗಳಿಗೆ ಈ ನಿರ್ಬಂಧ ಅನ್ವಯಿಸುತ್ತದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಈ ನಿರ್ಬಂಧಗಳು ತೈಲ, ರಸಗೊಬ್ಬರ ಮತ್ತು ಆಹಾರದ ಜಾಗತಿಕ ಪೂರೈಕೆಗೆ ಅಡ್ಡಿಪಡಿಸಬಹುದು ಮತ್ತು ಗ್ರಾಹಕ ಬೆಲೆಗಳ ಏರಿಕೆಗೆ ಕಾರಣವಾಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕಿರುಸುದ್ದಿ

ಐ-ಪ್ಯಾಕ್ ಸಹಸಂಸ್ಥಾಪಕ 10 ದಿನ ಇಡಿ ಕಸ್ಟಡಿಗೆ

ಹೊಸದಿಲ್ಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು(ಇಡಿ) ಐ-ಪ್ಯಾಕ್ ಸಹ-ಸಂಸ್ಥಾಪಕ ಮತ್ತು ನಿರ್ದೇಶಕ ವಿನೇಶ್ ಚಾಂಡೇಲ್ ಅವರನ್ನು ಬಂಧಿಸಿದೆ. ದಿಲ್ಲಿಯ ವಿಶೇಷ ನ್ಯಾಯಾಲಯವು ಅವರನ್ನು ಹತ್ತು ದಿನಗಳ ಇಡಿ ಕಸ್ಟಡಿಗೆ ಕಳುಹಿಸಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಕೆಲವು ವಾರಗಳ ಮುನ್ನ ಇಡಿ ಸೋಮವಾರ ತಡರಾತ್ರಿ ರಾಜ್ಯದಲ್ಲಿ ನಡೆದ ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಚಾಂಡೇಲ್ ಅವರನ್ನು ಬಂಧಿಸಿದೆ.

ಆಸ್ಟ್ರೇಲಿಯಾಗೆ ಮೊದಲ ಮಹಿಳಾ ಸೇನಾ ಮುಖ್ಯಸ್ಥೆ

ಕ್ಯಾನ್ಬೆರಾ: ಲೆಫ್ಟಿನೆಂಟ್ ಜನರಲ್ ಸುಸಾನ್ ಕೊಯ್ಲ್ ಅವರನ್ನು ನೇಮಿಸುವ ಮೂಲಕ ಆಸ್ಟ್ರೇಲಿಯಾ ಇದೇ ಮೊದಲ ಬಾರಿಗೆ ತನ್ನ ಮೊದಲ ಮಹಿಳಾ ಸೇನಾ ಮುಖ್ಯಸ್ಥರನ್ನು ನೇಮಕ ಮಾಡಿದೆ. ಪ್ರಸ್ತುತ ಜಂಟಿ ಸಾಮರ್ಥ್ಯಗಳ ಮುಖ್ಯಸ್ಥರಾಗಿರುವ ಕೊಯ್ಲ್, ಆಸ್ಟ್ರೇಲಿಯಾದ ಮಿಲಿಟರಿಯಲ್ಲಿ ಸೇವೆಗಳ ಮುಖ್ಯಸ್ಥರಾಗಿ ನೇಮಕಗೊಂಡ ಮೊದಲ ಮಹಿಳೆಯಾಗಿದ್ದಾರೆ.

ಸಿರಿಂಜ್ ಮರುಬಳಕೆ:331 ಪಾಕ್ ಮಕ್ಕಳಿಗೆ ಎಚ್‌ಐವಿ!

ಇಸ್ಲಾಮಾಬಾದ್: ಆಘಾತಕಾರಿ ಘಟನೆಯೊಂದರಲ್ಲಿ ಪಾಕಿಸ್ತಾನದಲ್ಲಿ ಸಿರಿಂಜಿಯನ್ನು ಮರುಬಳಕೆ ಮಾಡಿದ್ದರಿಂದ 331 ಮಕ್ಕಳು ಎಚ್‌ಐವಿ ಸೋಂಕಿಗೆ ತುತ್ತಾಗಿದ್ದಾರೆ. ಬಿಬಿಸಿ ನ್ಯೂಸ್‌ನ ರಹಸ್ಯ ತನಿಖೆಯಿಂದ ಪಾಕಿಸ್ತಾನದ ಟಿಎಚ್‌ಕ್ಯು ಆಸ್ಪತ್ರೆ ಟೌನ್ಸಾದಲ್ಲಿ ವ್ಯವಸ್ಥಿತ ಸೋಂಕು ನಿಯಂತ್ರಣ ವೈಫಲ್ಯಗಳನ್ನು ಬಹಿರಂಗಪಡಿಸಿದೆ. ಬಿಬಿಸಿಯು ಆಸ್ಪತ್ರೆ ಸಿಬ್ಬಂದಿ ಮಕ್ಕಳ ಮೇಲೆ ಸಿರಿಂಜ್‌ಗಳನ್ನು ಮರುಬಳಕೆ ಮಾಡುವುದನ್ನು ಚಿತ್ರೀಕರಿಸಿದೆ. ದೃಶ್ಯಾವಳಿಗಳು ಅಪಾಯಕಾರಿ ನೈರ್ಮಲ್ಯ ಉಲ್ಲಂಘನೆ ಮತ್ತು ಅನೇಕ ರೋಗಿಗಳಿಗೆ ಉಪಕರಣಗಳ ಮರುಬಳಕೆಯನ್ನು ಬಹಿರಂಗಪಡಿಸಿದೆ. ಇದು ಅಸುರಕ್ಷಿತ ವೈದ್ಯಕೀಯ ಪದ್ಧತಿಗಳಿಗೆ ಸಂಬಂಧಿಸಿದ ಎಚ್‌ಐವಿ ಏಕಾಏಕಿ ವ್ಯಾಪಕ ಬಿಕ್ಕಟ್ಟಿಗೆ ಕಾರಣವಾಗಿದೆ. ಎಂಟು ವರ್ಷದ ಮೊಹಮ್ಮದ್ ಅಮೀನ್ ಎಚ್‌ಐವಿ ಪರೀಕ್ಷೆಯಲ್ಲಿ ಪಾಸಿಟಿವ್ ಬಂದ ಸ್ವಲ್ಪ ಸಮಯದಲ್ಲೇ ನಿಧನರಾಗಿದ್ದು, ಅಂತಿಮ ದಿನಗಳಲ್ಲಿ ತೀವ್ರ ಜ್ವರ ಮತ್ತು ತೀವ್ರ ನೋವಿನಿಂದ ಬಳಲಿದ್ದಾನೆ ಎಂದು ಅವರ ತಾಯಿ ನೋವು ಹಂಚಿಕೊಂಡಿದ್ದಾರೆ. ಇನ್ನೂ ಆಘಾತಕಾರಿಯಂತೆ ಸಹೋದರಿ ಅಸ್ಮಾಳಿಗೆ ಕೂಡ ಎಚ್‌ಐವಿ ಪಾಸಿಟಿವ್ ಬಂದಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ವಾಡಿಕೆಯ ಚಿಕಿತ್ಸೆಯ ವೇಳೆ ನೀಡಲಾದ ಕಲುಷಿತ ಚುಚ್ಚುಮದ್ದಿನ ಮೂಲಕ ಎರಡೂ ಮಕ್ಕಳಿಗೆ ವೈರಸ್ ತಗುಲಿದೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ. ಸ್ಥಳೀಯ ವೈದ್ಯ ಡಾ. ಗುಲ್ ಕೈಸ್ರಾನಿ ಅವರು ತಮ್ಮ ಕ್ಲಿನಿಕ್‌ಗೆ ಭೇಟಿ ನೀಡುವ ಮಕ್ಕಳಲ್ಲಿ ಎಚ್‌ಐವಿ ಪ್ರಕರಣಗಳಲ್ಲಿ ಅಸಾಮಾನ್ಯ ಹೆಚ್ಚಳವನ್ನು ಗಮನಿಸಿದಾಗ ಈ ಸಾಂಕ್ರಾಮಿಕ ರೋಗವು ಮೊದಲ ಬಾರಿಗೆ 2024 ರ ಕೊನೆಯಲ್ಲಿ ಬೆಳಕಿಗೆ ಬಂದಿದೆ.

ಗೋರ್ಖಾ ಸಮಸ್ಯೆಗೆ ಪರಿಹಾರದ ಭರವಸೆ

ಗಂಗಾರಾಂಪುರ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯವನ್ನು ವಿಭಜಿಸದೆ ಸಾಂವಿಧಾನಿಕವಾಗಿ ಗೋರ್ಖಾ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಘೋಷಿಸಿದ್ದಾರೆ.

ಗಂಗಾರಾಂಪುರ ಮತ್ತು ಮಾಣಿಕ್‌ಚಕ್‌ನಲ್ಲಿ ನಡೆದ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದ ಶಾ, ಉತ್ತರ ಬಂಗಾಳದ ಅಭಿವೃದ್ಧಿಗಾಗಿ ಎಕೋ-ಅಡ್ವೆಂಚರ್ ಹಬ್, ಏಮ್ಸ್, ಕ್ಯಾನ್ಸರ್ ಆಸ್ಪತ್ರೆ ಹಾಗೂ ಐಐಟಿ ಮತ್ತು ಐಐಎಂ ಕ್ಯಾಂಪಸ್‌ಗಳ ಸ್ಥಾಪನೆಯನ್ನು ಒಳಗೊಂಡ ಯೋಜನೆಗಳ ಪಟ್ಟಿ ಮಾಡಿದರು. ಅಲ್ಲದೆ, ರಾಜಬಂಶಿ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲಾಗುವುದು ಎಂದು ಅವರು ತಿಳಿಸಿದರು. ಅಕ್ರಮ ವಲಸೆ ಮತ್ತು ರಾಜಕೀಯ ಹಿಂಸಾಚಾರವನ್ನು ಕೊನೆಗಾಣಿಸುವುದು ಪಕ್ಷದ ಪ್ರಾಥಮಿಕ ಉದ್ದೇಶ, ಎಂದು ಸಚಿವರು ಒತ್ತಿಹೇಳಿದರು.

ರಾಜಕೀಯ ಹಿನ್ನೆಲೆ: ಗೋರ್ಖಾಲ್ಯಾಂಡ್ ಪ್ರತ್ಯೇಕ ರಾಜ್ಯದ ಬೇಡಿಕೆ ಈ ಹಿಂದೆ 2017ರವರೆಗೆ ಹಿಂಸಾತ್ಮಕ ಪ್ರತಿಭಟನೆಗಳಿಗೆ ಸಾಕ್ಷಿಯಾಗಿತ್ತು. ಇದೇ ವೇಳೆ ಶಾ, ಹುಮಾಯೂನ್ ಕಬೀರ್ ಪ್ರಸ್ತಾಪಿಸಿರುವ ಮಸೀದಿ ನಿರ್ಮಾಣವನ್ನು ಬಿಜೆಪಿ ತಡೆಯಲಿದೆ ಎಂದು ಹೇಳಿದ್ದಾರೆ. ಏಪ್ರಿಲ್ 23 ಮತ್ತು 29 ರಂದು ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ, ತೃಣಮೂಲ ಕಾಂಗ್ರೆಸ್ ಮತ್ತು ಭಾರತೀಯ ಗೋರ್ಖಾ ಪ್ರಜಾತಾಂತ್ರಿಕ ಮೋರ್ಚಾ ಮೈತ್ರಿಕೂಟವನ್ನು ಎದುರಿಸಲಿದೆ. ಮೇ 4 ರಂದು ಮತ ಎಣಿಕೆ ನಡೆಯಲಿದೆ.

ಹಿಂದುಗಳ ವಿವಾಹವಾಗಿ, ಮತಾಂತರಗೊಳಿಸಿ!

ಮುಂಬೈ: ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್ ಕಚೇರಿಯಲ್ಲಿ ನಡೆದ ಲೈಂಗಿಕ ಕಿರುಕುಳ ಹಾಗೂ ಬಲವಂತ ಮತಾಂತರ ಆರೋಪ ಪ್ರಕರಣ ಹೊಸ ತಿರುವು ಪಡೆದಿದ್ದು, ಸಾಕ್ಷಿದಾರರ ಹೇಳಿಕೆ ಪ್ರಕರಣದ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿದ ಒಬ್ಬ ಸಾಕ್ಷಿದಾರ, ಆರೋಪಿಗಳು ಸಹೋದ್ಯೋಗಿಗಳಿಗೆ 'ಹಿಂದು ಹುಡುಗಿಯರೊಂದಿಗೆ ಸ್ನೇಹ ಬೆಳೆಸಿ, ಅವರನ್ನು ಮದುವೆಯಾಗಿರಿ ಮತ್ತು ಮತಾಂತರಗೊಳಿಸಿ' ಎನ್ನುತ್ತಿದ್ದರು ಎಂದು ಆರೋಪಿಸಿದ್ದಾರೆ. ಈ ಆರೋಪದ ಜತೆಗೆ ಹಣಕಾಸು ಪ್ರೋತ್ಸಾಹ ಕೂಡ ನೀಡಲಾಗುತ್ತಿತ್ತು ಎಂಬ ಗಂಭೀರ ಅಂಶವೂ ಹೊರಬಂದಿದೆ.ದೂರುದಾರ ಮಹಿಳೆಯರು ನೀಡಿದ ಮಾಹಿತಿಯಂತೆ, ಕಚೇರಿಯಲ್ಲಿ ಲೈಂಗಿಕ ಕಿರುಕುಳ ಮಾತ್ರವಲ್ಲದೆ ಧಾರ್ಮಿಕ ಒತ್ತಡ ಹಾಗೂ ಅವಮಾನಕಾರಿ ವರ್ತನೆ ಕೂಡ ನಡೆದಿತ್ತು. ಕೆಲವರನ್ನು ನಮಾಜ್ ಮಾಡಲು ಬಲವಂತ ಮಾಡಲಾಗಿದೆ, ಧಾರ್ಮಿಕ ಆಚರಣೆಗಳನ್ನು ಬದಲಾಯಿಸಲು ಒತ್ತಡ ಹೇರಲಾಗಿದೆ ಎಂಬ ಆರೋಪಗಳೂ ಕೇಳಿಬಂದಿವೆ. ಇನ್ನೂ, ಮಹಿಳೆಯರು ಮೇಲಾಧಿಕಾರಿಗಳಿಗೆ ದೂರು ನೀಡಿದರೂ ಸೂಕ್ತ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಕೆಲ ಸಂದರ್ಭಗಳಲ್ಲಿ ದೂರುಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

ಬ್ಯಾಂಕ್ ಖಾತೆ ಮೇಲೆ ಕಣ್ಣು: ಅಕ್ರಮ ಚಟುವಟಿಕೆಗಳನ್ನು ನಡೆಸಲು ಬಂಧಿತ ಆರೋಪಿಗಳ ಬ್ಯಾಂಕ್ ಖಾತೆಗಳು ಹಣವನ್ನು ಪಡೆದಿದೆಯೇ ಎಂದು ಪರಿಶೀಲಿಸಲು ತನಿಖೆ ನಡೆಸಲಾಗುತ್ತಿದೆ. ಹಣದ ಮೂಲವನ್ನು ನಿರ್ಧರಿಸಲು ಆರೋಪಿಗಳ ಖಾತೆಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಈ ಪ್ರಕರಣವನ್ನು ಎಸ್‌ಐಟಿ ತನಿಖೆ ನಡೆಸುತ್ತಿದೆ.

ಛತ್ತೀಸ್‌ಗಢದಲ್ಲಿ ಬಾಯ್ಲರ್ ಸ್ಫೋಟಕ್ಕೆ 10 ಮಂದಿ ಸಾವು

ಸಕ್ತಿ (ಛತ್ತೀಸ್‌ಗಢ): ರಾಜ್ಯದ ವೇದಾಂತ ವಿದ್ಯುತ್ ಘಟಕದಲ್ಲಿ ಮಂಗಳವಾರ ಸಂಭವಿಸಿದ ಬಾಯ್ಲರ್ ಸ್ಫೋಟಕ್ಕೆ 10 ಮಂದಿ ಬಲಿಯಾಗಿದ್ದು, ಸುಮಾರು 15 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಕ್ತಿ ಜಿಲ್ಲೆಯ ಸಿಂಘಿ ತರೈ ಪ್ರದೇಶದಲ್ಲಿನ ವೇದಾಂತ ವಿದ್ಯುತ್ ಸ್ಥಾವರದಲ್ಲಿ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ 9 ಮಂದಿ ಮೃತಪಟ್ಟಿದ್ದು, 15 ಗಾಯಾಳುಗಳಿಗೆ ರಾಯ್‌ಗಢದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಕ್ತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಫುಲ್ ಠಾಕೂರ್ ಹೇಳಿದ್ದಾರೆ. ದುರ್ಘಟನೆಯ ಬಗ್ಗೆ ಕೂಲಂಕುಶ ತನಿಖೆಯನ್ನು ನಡೆಸಲಾಗುವುದು ಎಂದು ರಾಯ್‌ಗಢ ಜಿಲ್ಲಾ ನ್ಯಾಯಾಧೀಶ ಮಹೇಶ್ ಶರ್ಮಾ ಹೇಳಿದ್ದಾರೆ. ವೇದಾಂತ ವಿದ್ಯುತ್ ಸ್ಥಾವರದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕಾರ್ಮಿಕರೂ ಗಾಯಗೊಂಡಿದ್ದಾರೆ. ತನಿಖೆ ಪ್ರಗತಿಯಲ್ಲಿದೆ ಎಂದು ನ್ಯಾ. ಶರ್ಮಾ ತಿಳಿಸಿದ್ದಾರೆ. ಮಂಗಳವಾರ ಮಧ್ಯಾಹ್ನ ಈ ದುರಾದೃಷ್ಟಕರ ಘಟನೆ ಸಂಭವಿಸಿದೆ. ಸಿಂಘಿತರೈ ಘಟಕದ ಬಾಯ್ಲರ್ ಯೂನಿಟ್‌ವೊಂದರಲ್ಲಿ ಸ್ಫೋಟ ಸಂಭವಿಸಿದ್ದು, ಎನ್‌ಜಿಎಸ್‌ಎಲ್ ಸಿಬ್ಬಂದಿ ಸ್ಥಳದಲ್ಲಿದ್ದರು.

ಎಕ್ಸ್‌ಪ್ರೆಸ್‌ವೇ ಲೋಕಾರ್ಪಣೆ ಮಾಡಿ ಪ್ರಧಾನಿ ನರೇಂದ್ರ ಮೋದಿ ನೀಡಿದ ಭರವಸೆ

ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸಲು ಬದ್ಧ

ಡೆಹ್ರಾಡೂನ್: 370ನೇ ವಿಧಿ ರದ್ದತಿ ನಂತರದಲ್ಲಿ ಸಂವಿಧಾನವೀಗ ದೇಶಾದ್ಯಂತ ಸಮಸ್ತರಿಗೂ ಸಮಾನವಾಗಿ, ಪರಿಪೂರ್ಣವಾಗಿ ಅನ್ವಯಿಸುತ್ತಿದೆ. ಎನ್‌ಡಿಎ ಸರಕಾರ ಪ್ರತಿಯೋರ್ವ ಬಡವರಿಗೂ ನೈಜ ಸಾಮಾಜಿಕ ನ್ಯಾಯ ನೀಡಲು ಸಂಕಲ್ಪಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.



ಇಂದಿನ ದಿನ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮ ವರ್ಧಂತಿ ದಿನವಾಗಿದೆ. ದೇಶದ ಜನರ ಪರವಾಗಿ ತಾನು ಬಾಬಾಸಾಹೇಬರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ಕಳೆದ ದಶಕದಲ್ಲಿ ತನ್ನ ನೇತೃತ್ವದ ಸರಕಾರ ಕೈಗೊಂಡ ನಿರ್ಧಾರಗಳು, ರೂಪಿಸಿರುವ ನಿಯಮಗಳು ಸಂವಿಧಾನದ ಘನತೆ ಗೌರವಗಳ ಎತ್ತಿಹಿಡಿದಿವೆ ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು. ದಿಲ್ಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್ ಉದ್ಘಾಟನೆ ನಂತರ ಡೆಹ್ರಾಡೂನ್‌ನಲ್ಲಿ ನಡೆದ ಸಾರ್ವಜನಿಕ ಸಭೆ ಉದ್ದೇಶಿಸಿ ಪ್ರಧಾನಿ ಮಾತನಾಡಿದರು. ಡಾ. ಅಂಬೇಡ್ಕರ್ ಬಡವರು, ಶೋಷಿತರು ಮತ್ತು ಅವಕಾಶವಂಚಿತರಿಗೆ ನ್ಯಾಯ ನೀಡಲು ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದರು ಎಂದು ಸ್ಮರಿಸಿದರು.

ನಕ್ಸಲ್ ಪಿಡುಗು, ಮಾವೋವಾದ ಅಂತ್ಯಗೊಂಡ ಆದೆಷ್ಟೋ ಜಿಲ್ಲೆಗಳಲ್ಲಿ ಜನಪರ ಕಾರ್ಯಚಟುವಟಿಕೆಗಳು ಸಂವಿಧಾನದ ಸ್ಫೂರ್ತಿಗನುಗುಣವಾಗಿ ನಡೆದಿವೆ ಎಂದು ಮಾಹಿತಿ ನೀಡಿದ ಪ್ರಧಾನಿ ಮೋದಿ, ದೇಶದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಯನ್ನು ಸಂವಿಧಾನ ಅಪೇಕ್ಷಿಸಿದೆ. ಈ ನಿಟ್ಟಿನಲ್ಲಿ ಸಂವಿಧಾನವು ನಿರೀಕ್ಷಿಸಿರುವ ಸ್ಫೂರ್ತಿಯಲ್ಲಿ ಮುನ್ನಡೆದು ಉತ್ತರಾಖಂಡವು ದೇಶಕ್ಕೊಂದು ಸನ್ಮಾರ್ಗ ತೋರಿದೆ ಎಂದು ಪ್ರಶಂಸಿಸಿದರು. ಇಂದೀಗ ಇದೇ ಸ್ಫೂರ್ತಿಯಲ್ಲಿ ನಮ್ಮ ಸರಕಾರ ಪ್ರತೀ ಬಡವರು ಮತ್ತು ಅವಕಾಶ ವಂಚಿತ ಜನರಿಗೆ ಸಾಮಾಜಿಕ ನ್ಯಾಯ ನೀಡಲು ಸಂಕಲ್ಪಬದ್ಧವಾಗಿದೆ.

ಪ್ರತಿಯೋರ್ವರಿಗೂ ಪ್ರಾಥಮಿಕ ಸೌಲಭ್ಯ: ಎಲ್ಲರಿಗೂ ಪ್ರಾಥಮಿಕ ಆವಶ್ಯಕತೆಗಳು ಅಥವಾ ಮೂಲಭೂತ ಸೌಕರ್ಯ ಕಲ್ಪಿಸುವುದು ಮತ್ತು ಪ್ರತಿಯೋರ್ವರ ಸಂಪನ್ನತೆ ಮುಖೇನ ದೇಶದ ಸಮತೋಲಿತ ಅಭಿವೃದ್ಧಿಯು , ಸಾಮಾಜಿಕ ನ್ಯಾಯದಾನ ಸಾಕಾರಕ್ಕಿರುವ ಬೃಹತ್ ಮಾಧ್ಯಮವಾಗಿದೆ. ಬಾಬಾಸಾಹೇಬರು ಅತ್ಯಾಧುನಿಕ ಮೂಲಸೌಕರ್ಯ ಮತ್ತು ಕೈಗಾರಿಕೀಕರಣವನ್ನು ಬಲವಾಗಿ ಪ್ರತಿಪಾದಿಸಿದ್ದು ಕೂಡ ಇದೇ ಕಾರಣಕ್ಕಾಗಿ. ಪ್ರಸ್ತುತ ದಶಕವು ಉತ್ತರಾಖಂಡದ್ದಾಗಲಿದೆ ಮತ್ತು ಈ ಕಾರಿಡಾರ್ ರಾಜ್ಯದ ಬೆಳವಣಿಗೆಗೆ ತುಂಬು ವೇಗ ನೀಡಲಿದೆ ಎಂದು ಪ್ರಧಾನಿ ಮೋದಿ ಭರವಸೆ ವ್ಯಕ್ತಪಡಿಸಿದರು.

ಪ್ರವಾಸೋದ್ಯಮದಿಂದ ಎಲ್ಲರಿಗೂ ಪ್ರಯೋಜನ: ಪ್ರವಾಸೋದ್ಯಮದ ಅಭಿವೃದ್ಧಿಯಿಂದ ಸಮಸ್ತರಿಗೂ ಪ್ರಯೋಜನವಾಗುವುದು. ಉತ್ತರಾಖಂಡವು ಚಳಿಗಾಲದ ಪ್ರವಾಸೋದ್ಯಮ ಮತ್ತು ಕ್ರೀಡೆಗಳಿಗೆ ಪ್ರಮುಖ ಕೇಂದ್ರವಾಗಿ ರೂಪುಗೊಳ್ಳುತ್ತಿರುವುದ ಕಂಡು ತನಗೆ ಸಂತಸವಾಗಿದೆ. ಆನೆಗಳ ಸುರಕ್ಷೆ ಮತ್ತು ಭದ್ರತೆಯನ್ನು ಪರಿಗಣಿಸಿ, ದಿಲ್ಲಿ-ಡೆಹ್ರಾಡೂನ್ ಎಕ್ಸ್‌ಪ್ರೆಸ್‌ವೇ ಉದ್ದಕ್ಕೂ 12 ಕಿಮೀ ಎತ್ತರದ ಕಾರಿಡಾರ್ ನಿರ್ಮಿಸಲಾಗಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು. ಮುಂದಿನ ವರ್ಷ ಹರಿದ್ವಾರದ ಆತಿಥೇಯದಲ್ಲಿ ನಡೆಯುವ ಹರಿದ್ವಾರ ಕುಂಭವು ಒಂದು ದೈವೀಕ, ಪರಿಶುದ್ಧ ಉತ್ಸವವಾಗಿ ಮೇಳೈಸಲು ನಾವು ತುಂಬು ಪರಿಶ್ರಮಿಸಬೇಕೆಂದು ಕರೆ ನೀಡಿದರು.

ಬಿಹಾರದಲ್ಲಿ ಬಿಜೆಪಿಗೆ ಮೊದಲ ಮುಖ್ಯಮಂತ್ರಿ ಗದ್ದುಗೆ

ನೂತನ ಸಿಎಂ ಸಾಮ್ರಾಟ್ ಚೌಧರಿ

ಪಾಟ್ನಾ: ಬಿಹಾರದ ನೂತನ ಮುಖ್ಯಮಂತ್ರಿಯಾಗಿ ಸಾಮ್ರಾಟ್ ಚೌಧರಿ ಆಯ್ಕೆಯಾಗಿದ್ದು, ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಸಿಎಂ ನಿತೀಶ್ ಕುಮಾರ್ ರಾಜ್ಯಸಭೆಗೆ ಸ್ಪರ್ಧಿಸುವ ನಿರ್ಧಾರದಿಂದ ತೆರವಾಗಿರುವ ಬಿಹಾರ ಮುಖ್ಯಮಂತ್ರಿ ಗಾದಿಯನ್ನು ಬಿಜೆಪಿ ನಾಯಕ, ಬಿಹಾರದ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ತುಂಬಲಿದ್ದಾರೆ ಮತ್ತು ಇದಕ್ಕಾಗಿ ವೇದಿಕೆ ಸಜ್ಜಾಗಿದೆ. ಚೌಧರಿ ಅವರಿಗೆ ದೊರೆತಿರುವ ಬಡ್ತಿಯಿಂದ, ರಾಜ್ಯದಲ್ಲಿ ತನ್ನ ಮೊದಲ ಮುಖ್ಯಮಂತ್ರಿಯನ್ನು ಹೊಂದಿದ ಹಿರಿಮೆ ಬಿಜೆಪಿಯದ್ದಾಗಲಿದೆ. ಒಬಿಸಿ ಸಮುದಾಯದ ಪ್ರಮುಖ ನಾಯಕ, ಈ ಹಿಂದೆ ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥನಾಗಿ ದುಡಿದಿರುವ ಚೌಧರಿ ಅವರು ಬುಧವಾರ ಲೋಕಭವನದಲ್ಲಿ ನಡೆಯುವ ಸಮಾರಂಭದಲ್ಲಿ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.



ನಿತೀಶ್‌ಕುಮಾರ್ ರಾಜ್ಯಸಭೆಗೆ ಸ್ಪರ್ಧಿಸಲು ತೀರ್ಮಾನಿಸಿದ ಬೆನ್ನಲ್ಲೇ, ಮುಂದಿನ ಮುಖ್ಯಮಂತ್ರಿ ಯಾರೆಂಬ ಜಿಜ್ಞಾಸೆಗೆ ಅವಕಾಶವಿಲ್ಲದ ತೆರ ಚೌಧರಿ ಅವರ ಹೆಸರು ಮುಂಚೂಣಿಯಲ್ಲಿ ಕೇಳಿಬಂದಿತ್ತು. ಬಿಹಾರದ ಮುಂದಿನ ಮುಖ್ಯಮಂತ್ರಿಯಾಗಿ ಚೌಧರಿ ಆಯ್ಕೆಯನ್ನು ಬಿಜೆಪಿಯ ಬಹುತೇಕ ಹಿರಿಯ ನಾಯಕರು ಬೆಂಬಲಿಸಿದ ಪರಿಣಾಮ, ಚೌಧರಿ ಆಯ್ಕೆ ಸರ್ವಾನುಮತದ ಆಯ್ಕೆಯಾಗಿ ಪರಿವರ್ತಿತವಾಗಿತ್ತು.

ಅನುಮೋದಿಸಿದ್ದು ಸಚಿವ ಚೌಹಾಣ್: ಮಹತ್ವದ ಶಾಸಕಾಂಗ ಪಕ್ಷ ಸಭೆಯಲ್ಲಿ ಹಿರಿಯ ಬಿಜೆಪಿ ನಾಯಕರಾದ ಮಂಗಲ್ ಪಾಂಡೆ, ದಿಲೀಪ್ ಜೈಸ್ವಾಲ್, ರೇಣುದೇವಿ ಜತೆಗೂಡಿ ಉಪ ಮುಖ್ಯಮಂತ್ರಿ ವಿಜಯ ಸಿನ್ಹಾ, ಚೌಧರಿ ಅವರ ಹೆಸರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಔಪಚಾರಿಕವಾಗಿ ಪ್ರಸ್ತಾವಿಸಿದ್ದರು. ಕೇಂದ್ರೀಯ ವೀಕ್ಷಕ ಮತ್ತು ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅನುಮೋದಿಸಿದ್ದರು.

ಚೌಧರಿ ಕೃತಜ್ಞತೆ: ಶಾಸಕಾಂಗ ಪಕ್ಷ ನಾಯಕನೆಂಬ ಪ್ರಕಟಣೆಯಾಗುತ್ತಲೇ, ಬಿಹಾರದ ಜನತೆಯ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಬಿಜೆಪಿಗೆ ಚೌಧರಿ ಅವರು ಕೃತಜ್ಞತೆ ಸಲ್ಲಿಸಿದರು. ಇದು ತನಗೊಂದು ಹುದ್ದೆಯಷ್ಟೇ ಅಲ್ಲ, ಬಿಹಾರದ ಜನತೆಯ ವಿಶ್ವಾಸ ಮತ್ತು ಕನಸುಗಳ ಸಾಕಾರ ಜತೆಗೆ ಅವರ ಸೇವೆಗೆ ಸಿಕ್ಕಿರುವ ಪವಿತ್ರ ಅವಕಾಶವಾಗಿದೆ.

ಕಿರುಸುದ್ದಿ

ಎ.20ರಂದು ಬಸವ ಜಯಂತಿ ಆಚರಣೆ



ಗುಳೇದಗುಡ್ಡ: ಪಟ್ಟಣದ ಬಸವ ಕೇಂದ್ರದ ವತಿಯಿಂದ ಎ.20ರಂದು ಸ್ಥಳೀಯ ಬಸಮ್ಮ ಮಂಗಳಗುಡ್ಡ ಕಲ್ಯಾಣ ಮಂಟಪದಲ್ಲಿ ಬಸವ ಜಯಂತಿ ಕಾರ್ಯಕ್ರಮ ಆಚರಿಸಲಾಗುವುದು ಎಂದು ವಿಶ್ರಾಂತ ಪ್ರಾಚಾರ್ಯ ಸಿದ್ದಲಿಂಗಪ್ಪ ಬರಗುಂಡಿ ಹೇಳಿದರು.

ಅವರು ಮಂಗಳವಾರ ಸ್ಥಳೀಯ ಶ್ರೀಮತಿ ಬಸಮ್ಮ ಮಂಗಳಗುಡ್ಡ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಪಟ್ಟಣದ ಸಮಸ್ತರು ಸೇರಿಕೊಂಡು ಸಂಭ್ರಮದಿಂದ ಆಚರಿಸಲಾಗುವುದು. ಎ.20 ರಂದು ಬೆಳಗ್ಗೆ 7 ಗಂಟೆಗೆ ಸಾಮೂಹಿಕ ಶಿವಯೋಗ, ನಂತರ ಶರಣ ಧ್ವಜಾರೋಹಣ ಬಳಿಕ ಸಾಹಿತಿ ರವಿ ಕಂಗಳ ಅವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಅಕ್ಕಮಹಾದೇವಿ ಮಂದಿರದ ಶರಣಮ್ಮತಾಯಿ ಅವರು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ರಾಚಣ್ಣ ಕೆರೂರ, ಕಾಶಿನಾಥ ಶೆಟ್ಟರ, ದಾನಪ್ಪ ಬಂಡಿ, ಪುತ್ರಪ್ಪ ಬೀಳಗಿ, ಶ್ರೀಕಾಂತ ಗಡೇದ, ಬಸಲಿಂಗಯ್ಯ ಕಂಬಾಳಿಮಠ, ವಿಶ್ವನಾಥ ಅಂಗಡಿ, ರವಿ ಅಂಗಡಿ, ಸುರೇಶ ರಾಜನಾಳ, ಮುರುಗೇಶ ಶೇಖಾ, ಮಹಾದೇವಯ್ಯ ನೀಲಕಂಠಮಠ, ಚಂದ್ರಶೇಖರ ತೆಗ್ಗಿ, ಶರಣಪ್ಪ ಚಿಕ್ಕನರಗುಂದ, ಶಿವಾನಂದ ಸಿಂದಗಿ, ಸಂಗಮೇಶ ಹುಳಪಲ್ಲೇದ, ಸಂಗಣ್ಣ ಪಟ್ಟಶೆಟ್ಟಿ, ಹುಚ್ಚೇಶ ಸಿಂದಗಿ, ಬಸವರಾಜ ಬರಗುಂಡಿ, ರಾಚಪ್ಪ ಯಂಡಿಗೇರಿ, ಜಯಶ್ರೀ ಬರಗುಂಡಿ, ಚನ್ನಮ್ಮ ಜವಳಿ, ಸುರೇಖಾ ಗೆದ್ದಲಮರಿ, ದ್ರಾಕ್ಷಾಯಣಿ ತೆಗ್ಗಿ, ಶ್ರೀದೇವಿ ಶೇಖಾ, ವಿಶಾಲಾಕ್ಷಿ ಗಾಳಿ ಮತ್ತಿತರರು ಇದ್ದರು.

ಸೃಷ್ಟಿ ಉಪ್ಪಾರಗೆ ಸನ್ಮಾನ



ಲೋಕಾಪುರ: ಪಟ್ಟಣದ ಬಿವಿವಿಎಸ್ ಮಹಿಳಾ ಪಪೂ ಕಾಲೇಜಿನ ವಿದ್ಯಾರ್ಥಿನಿ ಸೃಷ್ಟಿವಿಠ್ಠಲ ಉಪ್ಪಾರ 589 (ಶೇ.98.16)ರಷ್ಟು ವಾಣಿಜ್ಯ ವಿಭಾಗದಲ್ಲಿ ಮುಧೋಳ ತಾಲೂಕಿಗೆ ಪ್ರಥಮ ಹಾಗೂ ಬಾಗಲಕೋಟೆ ಜಿಲ್ಲೆಗೆ ತೃತೀಯ ಸ್ಥಾನ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿನಿಗೆ ಕಾಲೇಜು ವತಿಯಿಂದ ಪ್ರಾಚಾರ್ಯರು, ಉಪನ್ಯಾಸಕರು ಸನ್ಮಾನಿಸಿದರು. ಈ ವೇಳೆ ಕಾಲೇಜು ಪ್ರಾಚಾರ್ಯ ಎಸ್.ಎಮ್.ಹುದ್ದಾರ, ಉಪನ್ಯಾಸಕರಾದ ಎಂ.ಎಲ್.ನಾಯಕ, ಡಾ. ಸಿ.ಎಸ್.ಹಿರೇಮಠ, ಎಚ್.ಪಿ. ಶೇಬನ್ನವರ, ವಾಯ್. ಐ. ಜಂಬಗಿ, ಎಸ್. ವಾಯ್. ನರಸಾಪುರ, ಆರ್. ಎಚ್. ತೋಳಮಟ್ಟಿ, ಎ.ಸಿ.ಗಣಾಚಾರಿ ಹಾಗೂ ಶಿವಯ್ಯ ಸರಕಾರ ಇದ್ದರು.

ಯುವಕರಿಗೆ ಗ್ರಾಮದ ಬಗ್ಗೆ ಆಸಕ್ತಿ ಮೂಡಲಿ: ಸುಧೀರ



ಜಮಖಂಡಿ: ಇಂದಿನ ದಿನದಲ್ಲಿ ಮೊದಲಿದ್ದ ವಿವಾಹದ ಪದ್ಧತಿ ಬದಲಾವಣೆಯಾಗಿದೆ. ವಿವಾಹ ಪೂರ್ವ ಛಾಯಾಚಿತ್ರಣದಿಂದ ನಾವು ದೂರ ಉಳಿಯಬೇಕು. ಯುವ ಪೀಳಿಗೆಗೆ ಇದರ ಬಗ್ಗ ಅರಿವು ಮುಡಿಸಬೇಕು. ಎಲ್ಲ ಸಮಾಜದವರು ಇಂತಹ ಪದ್ಧತಿಗಳನ್ನು ನಿಲ್ಲಿಸಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಪ್ರಮುಖ ಸುಧೀರ ಘೋರ್ಪಡೆ ಹೇಳಿದರು.

ನಗರದ ಶ್ರೀ ಮಂಗಳ ಕಾರ್ಯಾಲಯದಲ್ಲಿ ಸಾಮಾಜಿಕ ಸದ್ಭಾವನಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಪೀಳಿಗೆಗೆ ಗ್ರಾಮದ ಬಗ್ಗೆ ಆಸಕ್ತಿ ಮೂಡಿಸಬೇಕು. ನಮ್ಮ ಜಮೀನು ಅನ್ಯರ ಪಾಲಾಗಬಾರದು. ಐಟಿ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುವ ಮಹಿಳೆಯರು ಜಾಗೃತವಾಗಿರಬೇಕು. ಇತ್ತೀಚೆಗೆ ಇಂತಹ ಅನಿಷ್ಠ ಘಟನೆ ಮಹಾರಾಷ್ಟ್ರ ನಾಸಿಕದಲ್ಲಿ ನಡೆದಿದೆ ಎಂದರು.

ದೇವಸ್ಥಾನಕ್ಕೆ ಹೋಗುವವರು ಹಿಂದುಗಳೇ. ಆದರೆ, ಅಲ್ಲಿ ಪೂಜಾ ವಸ್ತುಗಳ ಮಾರಾಟ ಮಾಡುವವರು ಅನ್ಯರಾಗಿದ್ದಾರೆ. ಅದು ನಿಲ್ಲಬೇಕು. ನಮ್ಮ ಸ್ಥಳಗಳಲ್ಲಿ ನಮ್ಮವರೇ ಇರಬೇಕು. ನಮ್ಮ ಸಮಾಜದ ಉತ್ತಮ ಸಂಗತಿಯನ್ನು ನಾವು ತಿಳಿದುಕೊಂಡು ನಡೆಯಬೇಕು. ಎಲ್ಲಬೇಧ ಭಾವ ಮರೆತು ಮುನ್ನುಗ್ಗಲೇ ಬೇಕು. ಈ ಕಾರ್ಯವೂ ತತಕ್ಷಣದಲ್ಲಿ ಆಗುವುದಿಲ್ಲ ಇದು ಇಂದು ಪ್ರಥಮ ಹೆಜ್ಜೆಯಾಗಿದೆ. ಪ್ರತಿಯೊಂದು ಕ್ಷಣದಲ್ಲೂ ನಾವು ಮುನ್ನಡಿಯಿಡಬೇಕು ಎಂದರು.

ಅತಿಯಾದ ಮೊಬೈಲ್ ಬಳಕೆಗೆ ಕಡಿವಾಣ ಹಾಕಲೇಬೇಕು. ಮನೆಯಲ್ಲಿ ಕೂಡಾ ದಿನದಲ್ಲಿ ಇಂತಿಷ್ಟು ಸಮಯ ಮೊಬೈಲ್‌ನ್ನು ದೂರವಿಡುವ ಅಭ್ಯಾಸವನ್ನು ಮಾಡಲೇಬೇಕು ಎಂದು ಹೇಳಿದರು.

ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ಮಾತನಾಡಿ, ಸಮಾಜವು ಒಗ್ಗೂಡಲೇ ಬೇಕು. ಮೊದಲು ಮೊಬೈಲ್ ಬಳಕೆ ಕಡಿತಗೊಳಿಸುವ ಬಗ್ಗೆ ಯೋಚಿಸಬೇಕು. ಬಳಕೆಗೆ ಕಡಿವಾಣ ಹಾಕಲೇಬೇಕು. ಅದರ ಜೊತೆಗೆ ಓದಿನ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಮೊಬೈಲ್ ಗೀಳಿನಲ್ಲಿ ಅನೇಕ ಯುವಕರು ಸಾಲ ಮಾಡಿಕೊಂಡಿದ್ದಾರೆ. ಅದು ತೀರದಿದ್ದಲ್ಲಿ ಆತ್ಮಹತ್ಯೆಗೂ ಕೂಡಾ ಶರಣಾಗಿದ್ದಾರೆ. ಅದಕ್ಕಾಗಿ ಮೊಬೈಲ್ ಬಳಕೆಗೆ ಕಡಿವಾಣ ಹಾಕಲೇಬೇಕು ಎಂದು ಹೇಳಿದರು.ಗಿರೀಶ ಮನಗೂಳಿ ಸ್ವಾಗತಿಸಿ ನಿರೂಪಿಸಿದರು. ವಿಜಯ ದಾಬಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ದೀಪಕ ಸಿಂಧೆ ವಂದಿಸಿದರು.

ಸಮ ಸಮಾಜ ನಿರ್ಮಾಣದ ಕನಸುಗಾರ

ಬೀಳಗಿ: ಸಮ ಸಮಾಜ ನಿರ್ಮಾಣದ ಕನಸುಗಾರ, ಎಲ್ಲರಿಗೂ ಸಮಾನತೆ ಹಕ್ಕು ನೀಡಿದ ದಿವ್ಯ ಚೇತನ, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರವರು ಬರೆದ ಸಂವಿಧಾನವು ವಿಶ್ವಕ್ಕೆ ಮಾದರಿಯಾಗಿದೆ ಎಂದು ತಹಶೀಲ್ದಾರ ವಿನೋದ ಹತ್ತಳ್ಳಿ ಹೇಳಿದರು.

ಪಟ್ಟಣದ ಅಂಬೇಡ್ಕರ ವೃತ್ತದಲ್ಲಿ ಸೋಮವಾರ ಡಾ. ಬಿ. ಆರ್. ಅಂಬೇಡ್ಕರ 135ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಹಾ ಮಾನವತಾವಾದಿ

ಡಾ. ಬಿ. ಆರ್. ಅಂಬೇಡ್ಕರರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಸಾಮಾಜಿಕ ಹಾಗೂ ಶೈಕ್ಷಣಿಕ ಸುಧಾರಣೆ ತರುವಲ್ಲಿ ಅವರ ಕೊಡುಗೆ ಅಪಾರ. ಅಂಬೇಡ್ಕರರವರು ಬರೆದ ಸಂವಿಧಾನದ ಅಡಿಯಲ್ಲಿ ನಾವೆಲ್ಲರೂ ಮುನ್ನಡೆಯಬೇಕಾಗಿದೆ. ಅವರು ವ್ಯಕ್ತಿ ಅಲ್ಲ, ಮನುಕುಲದ ಶಕ್ತಿ. ಅವರ ಆದರ್ಶಗಳನ್ನು ನಾವು ನಿತ್ಯ ಪಾಲನೆ ಮಾಡಬೇಕಾಗಿದೆ ಎಂದರು.

ತಾಪಂ ಪ್ರಭಾರಿ ಇಒ ಶ್ರೀನಿವಾಸ ಪಾಟೀಲ, ಬಿಇಒ ಆರ್. ಎಸ್. ಆದಾಪೂರ, ಪಪಂ ಮುಖ್ಯಾಧಿಕಾರಿ ದೇವೇಂದ್ರ ಧನಪಾಲ,ಸಿಪಿಐ ಹಣಮಂತ ಸಣಮನಿ, ಸಮಾಜ ಕಲ್ಯಾಣಾಧಿಕಾರಿ ಸಿ. ಎಸ್. ಗಡ್ಡದೇವರಮಠ, ಬಿಸಿಎಂ ಇಲಾಖೆಯ ಮುಖ್ಯ ಅಧಿಕಾರಿ ಮೀನಾಕ್ಷಿ ಕೋಟಿ, ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ವರ್ತಕರ ಸಂಘದ ಅಧ್ಯಕ್ಷ ಪ್ರವೀಣ ಪಾಟೀಲ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾ ಅಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ಜಿಪಂ ಮಾಜಿ ಅಧ್ಯಕ್ಷ ಯಮನಪ್ಪ ರೊಳ್ಳಿ, ಪಪಂ ಮಾಜಿ ಅಧ್ಯಕ್ಷ ಅನಿಲ ಗಚ್ಚಿನಮನಿ, ಮುಖಂಡರಾದ ಮಹಾದೇವ ಹಾದಿಮನಿ, ಪಡಿಯಪ್ಪ ಕರಿಗಾರ, ಬಸವರಾಜ ಹಳ್ಳದಮನಿ, ಸಿದ್ದು ಮಾದರ, ಪಡಿಯಪ್ಪ ಕಳ್ಳಿಮನಿ, ಶಿವಾನಂದ ಮಾದರ, ಶ್ರೀಶೈಲ ಅಂಟೀನ, ಹಣಮಂತ ಸೂಳಿಕೇರಿ, ಸಿದ್ದು ಮೇಟಿ, ರವಿ ಮಂಟೂರ ಮತ್ತಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ



ಕಲಾದಗಿ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ಗ್ರಾಮ ಘಟಕದ ವತಿಯಿಂದ ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಗ್ರಾಮದ ಡಾ.ಅಂಬೇಡ್ಕರ್ ವೃತ್ತದಲ್ಲಿ ತಳಿರು ತೋರಣ, ರಂಗೋಲಿ ಹಾಕಿ ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಟ್ಟು ವಿಶೇಷ ಪೂಜೆ ಸಲ್ಲಿಸಿ ಸಂಭ್ರಮದಿಂದ ಆಚರಿಲಾಯಿತು.

ಡಾ.ಅಂಬೇಡ್ಕರ್ ವೃತ್ತದಲ್ಲಿ: ಗ್ರಾಮದ ಮುಖ್ಯ ರಸ್ತೆಯಲ್ಲಿರುವ ಡಾ.ಅಂಬೇಡ್ಕರ್ ವೃತ್ತದಲ್ಲಿ ಬಾಬಾಸಾಹೇಬರ ಭಾವಚಿತ್ರಕ್ಕೆ ವಿವಿಧ ಸಂಘಟನೆಯವರು, ಗ್ರಾಮದ ಗಣ್ಯರು, ರಾಜಕೀಯ ಧುರೀಣರು ಪೂಜೆ ಸಲ್ಲಿಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸಂಶಿ, ಮೆಹಬೂಬ ನದಾಫ್ ಮಾತನಾಡಿ, ಡಾ. ಅಂಬೇಡ್ಕರ ಅವರ ಜೀವನ ತೆರೆದ ಪುಸ್ತಕವಿದ್ದಂತೆ, ತಮ್ಮ ಅಪಾರ ಜ್ಞಾನ ಭಂಡಾರದ ಮೂಲಕ ಇಡಿ ವಿಶ್ವವನ್ನು ಭಾರತದೆಡೆಗೆ ನೋಡುವಂತೆ ಮಾಡಿ ಪೆನ್ನಿನಿಂದಲೇ ಜಗತ್ತನ್ನು ಗೆದ್ದ ಏಕಮಾನ್ಯ ನಾಯಕರಾಗಿದ್ದರು, ಅಸ್ಪೃಷ್ಯತೆ ನಿರ್ಮೂಲನೆ, ಮಹಿಳಾ ಸಬಲೀಕರಣ ಸೇರಿದಂತೆ ಶಿಕ್ಷಣ, ಸಮಾನತೆ, ಸ್ವಾತಂತ್ರ್ಯ, ನ್ಯಾಯವನ್ನು ಪ್ರತಿಪಾದಿಸಿದ್ದರು ಎಂದು ಅವರು ನೀಡಿದ ಕೊಡುಗೆಯನ್ನು ಸ್ಮರಿಸಿದರು. ವಿವಿಧೆಡೆ ಆಚರಣೆ: ಗ್ರಾಮದ ಉಪ ತಹಶೀಲ್ದಾರ್ ಕಚೇರಿ, ಗ್ರಾಪಂ ಕಾರ್ಯಾಲಯ, ಶಾಲಾ-ಕಾಲೇಜುಗಳಲ್ಲಿ, ಗ್ರಾಮದ ಬಾಜಪಾ ಕಚೇರಿ, ಬ್ಲಾಕ ಕಾಂಗ್ರೆಸ್ ಕಚೇರಿ ಸೇರಿದಂತೆ ವಿವಿಧೆಡೆ ಸಂಭ್ರಮೋಲ್ಲಾಸದಿಂದ ಜಯಂತಿಯನ್ನು ಆಚರಿಸಿ ಪಟಾಕಿ ಸಿಡಿಸಿ ಸಿಹಿ ಹಂಚಲಾಯಿತು. ಅಂಬೇಡ್ಕರ ವೃತ್ತದಲ್ಲಿ ನಡೆದ ಆಚರಣೆಯಲ್ಲಿ ದಲಿತ ಸಂಘರ್ಷ ಸಮಿತಿ(ಭೀಮವಾದ)ಯ ತಾಲೂಕಾ ಸಂಚಾಲಕ ಶ್ರೀಧರ ಮಾದರ, ಕಲಾದಗಿ ಘಟಕದ ಅಧ್ಯಕ್ಷ ಯಮುನಪ್ಪ ಮಾದರ, ಅಂಜಲಿ ಬಾನು, ಆನಂದ ಮಾದರ, ಮಸ್ತಾನ ಜಲಗೇರಿ, ಮಣಿಕಂಠ ಮಾದರ, ಮಂಜು ಮಾದರ, ರಿಯಾಜ ಪೀರಜಾದೆ, ಅಕ್ರಂ ಸೌದಾಗರ, ಗಂಗಪ್ಪ ಮಾದರ, ಮಲಿಕ ಮಕಾನದಾರ, ಭೀಮಶಿ ಪೂಜಾರಿ, ಗುರುರಾಜ ಗಂಗಾಧರ, ಭೀಮಶಿ ಭಜಂತ್ರಿ, ಮಾರುತಿ ಮಾದರ, ಕೃಷ್ಣ ಮಾದರ, ಸುಬ್ಬು ಮಾದರ ಮುಂತಾದವರು ಪಾಲ್ಗೊಂಡಿದ್ದರು.

ಪಟ್ಟಣದ ವಿವಿಧೆಡೆ ಅಂಬೇಡ್ಕರ್ ಜಯಂತಿ ಆಚರಣೆ



ಸಿಂದಗಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರು ನೀಡಿದ ಅದ್ಭುತ ಸಂದೇಶಗಳು, ಇಂದಿಗೂ ಸಹ ಜನಜನಿತವಾಗಿದ್ದು, ಸಂದೇಶಗಳನ್ನು ಪಾಲಿಸುವ ಪ್ರತಿ ಪ್ರಜೆಯೂ ಜೀವನದಲ್ಲಿ ಎಂದು ಕುಗ್ಗಲಾರ ಎಂದು ಸಂಸ್ಥೆಯ ಅಧ್ಯಕ್ಷ ಆರ್ .ಡಿ.ಕುಲಕರ್ಣಿ ಹೇಳಿದರು.

ಸಿಂದಗಿ ಪಟ್ಟಣದ ರಾಂಪೂರ ರಸ್ತೆಯಲ್ಲಿರುವ ಪ್ರೇರಣಾ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಸಂಸ್ಥೆಯ ಅಧ್ಯಕ್ಷ ಆರ್ .ಡಿ.ಕುಲಕರ್ಣಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್ ಅಂಬೇಡ್ಕರ್‌ರವರ 135ನೇ ಜಯಂತಿಯಲ್ಲಿ ಮಾತನಾಡಿದ ಅವರು, ಭಾರತಕ್ಕೆ ಬಾಬಾಸಾಹೇಬರು ನೀಡಿದ ಕೊಡುಗೆ ಅನನ್ಯ.ಅವರ ತತ್ವ ಸಿದ್ಧಾಂತದ ಮೇಲೆ ನಾವೆಲ್ಲರೂ ನಡೆಯಬೇಕು ಎಂದರು. ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ಶಾಲೆಯ ಮುಖ್ಯ ಗುರುಮಾತೆ ಎಸ್.ಆಯ್.ಅಸ್ಕಿ, ಎಮ್.ಪಿ.ಬುಕ್ಕಾ, ಶಿಕ್ಷಕರಾದ ಸತೀಶ ಕುಲಕರ್ಣಿ, ಅಲ್ತಾಫ್ ತಾಂಬೋಳಿ, ಕಿರಣ ಕುಲಕರ್ಣಿ, ಸಂತೋಷ ಕುಂಟೋಜಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ ಮತ್ತು ಬಿ.ಎಸ್.ಪಾಟೀಲ, ಎಸ್.ವಿ.ಕಡಣಿ, ಎಮ್. ಎಮ್.ಜುಮನಾಳ, ಎಮ್.ಜಿ. ಧ್ಯಾಮಗೊಂಡ, ವಿ.ಎ.ನಾಯಕ, ಎಮ್.ಜಿ.ಬಳಗಾನೂರ, ಶಿಲ್ಪಾ ಎಸ್.ಪಾಟೀಲ, ವಿ.ಎ.ನಾಯಕ, ವಿಜಯಲಕ್ಷ್ಮೀ ಅಲಾಳಮಠ, ರೂಪಾ ಶಿವಸಿಂಪಿಗೇರ, ಸಾವಿತ್ರಿ ವಿರಾಪೂರ, ಆರ್.ಎಮ್. ಪಕೀರಪುರ ಸೇರಿದಂತೆ ಶಾಲೆಯ ಬೋಧಕ ಬೋಧಕೇತರ ಸಿಬ್ಬಂದಿ ಇದ್ದರು.

ಶ್ರೀ ಪದ್ಮರಾಜ ಮಹಿಳಾ ಕಾಲೇಜು: ಪಟ್ಟಣದ ಶ್ರೀ ಪದ್ಮರಾಜ ಮಹಿಳಾ ಕಾಲೇಜಿನಲ್ಲಿ ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಆಚರಣೆ ಮಾಡಲಾಯಿತು. ಪ್ರಾ. ವ್ಹಿ.ಡಿ.ಪಾಟೀಲ, ಯು.ಸಿ.ಪೂಜೇರಿ, ಮಮತಾ ಹರನಾಳ, ವಿಜಯಲಕ್ಷ್ಮೀ ಭಜಂತ್ರಿ, ಶಂಕರಕುಂಬಾರ ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು. ಮಹಿಳಾ ಸಾಂತ್ವಾನ ಸಹಾಯವಾಣಿ ಕೇಂದ್ರ: ಪಟ್ಟಣದ ಬಂದಾಳ ರಸ್ತೆಯಲ್ಲಿರುವ ಮಹಿಳಾ ಸಾಂತ್ವಾನ ಸಹಾಯವಾಣಿ ಕೇಂದ್ರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಆಚರಣೆ ಮಾಡಲಾಯಿತು. ಈ ವೇಳೆ ಸಮಾಜ ಕಾರ್ಯಕರ್ತೆ ರಶ್ಮಿ ನೂಲಾನವರ, ವಿದ್ಯಾ ದೇಸಾಯಿ ಇದ್ದರು.ಆರ್.ಡಿ.ಪಾಟೀಲ ಕಾಲೇಜು: ಪಟ್ಟಣದ ಆರ್.ಡಿ.ಪಾಟೀಲ ಪಪೂ ಮಹಾವಿದ್ಯಾಲಯದಲ್ಲಿ ವತಿಯಿಂದ ಹಮ್ಮಿಕೊಂಡ ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಆಚರಣೆ ಮಾಡಲಾಯಿತು. ಪ್ರಾ. ಭೀಮನಗೌಡ ಸಿಂಗನಳ್ಳಿ, ಉಪನ್ಯಾಸಕರಾದ ಎನ್.ಬಿ.ಪೂಜಾರಿ, ಎಸ್.ಎಚ್. ಜಾಧವ, ವ್ಹಿ.ಪಿ.ನಂದಿಕೋಲ, ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಜೀವಾಮೃತದಿಂದ ಕೃಷಿ ಜೀವಂತ

ರಬಕವಿ-ಬನಹಟ್ಟಿ: ಜೀವಾಮೃತವು ಸಗಣಿ, ಗಂಜಲ, ಬೆಲ್ಲ ಮತ್ತು ಹಿಟ್ಟಿನಿಂದ ತಯಾರಿಸಿದ ನೈಸರ್ಗಿಕ ದ್ರವ ಗೊಬ್ಬರವಾಗಿದ್ದು, ಮಣ್ಣಿನ ಫಲವತ್ತತೆ ಮತ್ತು ಸೂಕ್ಷ್ಮಜೀವಿಗಳ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಇದು ಮಣ್ಣಿನಲ್ಲಿ ಪೋಷಕಾಂಶಗಳನ್ನು ಲಭ್ಯವಾಗುವಂತೆ ಮಾಡಿ, ಬೆಳೆಗಳ ಇಳುವರಿ ಹೆಚ್ಚಿಸಲು ಮತ್ತು ರಾಸಾಯನಿಕ ಮುಕ್ತ ಕೃಷಿಗೆ ಸಹಕಾರಿಯಾಗುತ್ತದೆ ಎಂದು ಬಾಗಲಕೋಟ ತೋಟಗಾರಿಕೆ ಮಹಾವಿದ್ಯಾಲಯದ ಹಣ್ಣು ಬೆಳೆ ವಿಭಾಗದ ವಿಜ್ಞಾನಿ ಡಾ.ಬಸವರಾಜ ಪಡಶೆಟ್ಟಿ ತಿಳಿಸಿದರು.

ಮಂಗಳವಾರ ತಾಲೂಕಿನ ನಾವಲಗಿ ಗ್ರಾಮದ ರೈತ ಬಸಯ್ಯ ಹಿರೇಮಠ ಅವರ ಬಾಳೆ ತೋಟಕ್ಕೆ ಜಿಲ್ಲಾ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿಕಾರ್ಯನಿರ್ವಹಿಸುತ್ತಿರುವ ತೋಟಗಾರಿಕೆ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಪ್ರಾತ್ಯಕ್ಷಿಕ ತರಬೇತಿ ನಿಮಿತ್ತ ಭೇಟಿ ನೀಡಿ ಅವರು ಮಾತನಾಡಿದರು. ಅಲ್ಲದೆ ರೈತರಿಗೆ ನೈಸರ್ಗಿಕ ಕೃಷಿಯ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು. ವಿದ್ಯಾರ್ಥಿಗಳು ಅಂತಿಮ ವರ್ಷದವರೆಗೂ ವೈಜ್ಞಾನಿಕ ತಳಹದಿಯಲ್ಲಿ ಅಧ್ಯಯನಮಾಡಿದ ತರಬೇತಿಯನ್ನು ಪ್ರಾಯೋಗಿಕವಾಗಿ ರೈತರ ತೋಟಗಳಿಗೆಪ ್ರತ್ಯಕ್ಷಿಕಅನುಭವವನ್ನು ಅವರಿಗೆ ನೀಡಲಾಗುತ್ತದೆ. ಅವರ ಮುಂದಿನ ಭವಿಷ್ಯದಲ್ಲಿ ಭೂಮಿ ಉಳುಮೆ ಕುರಿತು ಸಂಪೂರ್ಣ ಜ್ಞಾನವನ್ನೂ ಸಹ ನೀಡಿದಂತಾಗುತ್ತದೆ ಎಂದರು.ಇದೇ ಸಂದರ್ಭದಲ್ಲಿ ಇನ್ನೋರ್ವ ವಿಜ್ಞಾನಿ ಡಾ.ಜಮೀಲ್ ಝುಲೆಗಾರ್ ಮಾತನಾಡಿ, ಜೀವಾಮೃತ ತಯಾರಿಕೆ ಬಗ್ಗೆ ಮಾಹಿತಿ ನೀಡಿದರು.ರೈತರಾದ ಬಸಯ್ಯ ಹಿರೇಮಠ ಮಾತನಾಡಿದರು. ಈ ಸಂದರ್ಭದಲ್ಲಿ ತೋಟರಾರಿಗೆ ಇಲಾಖೆ ಅಂತಿಮ ವರ್ಷದ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ ದಿನವಿಡಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರು.



ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಕೆರೂರ: ಪಟ್ಟಣದ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ 135 ನೇ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ರಮೇಶ ಮಾಡಬಾಳ ಪುಷ್ಪಾರ್ಚನೆ ಮಾಡಿ, ನಂತರ ಮಾತನಾಡಿದ ಅವರು.

ದೇಶದಲ್ಲಿ ಇಂದು ನಾವು ಶಾಂತಿ ಹಾಗೂ ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ ಎಂದರೆ,ಅದು ಬಾಬಾಸಾಹೇಬ ಅಂಬೇಡ್ಕರ್ ಅವರು ನೀಡದ ಸಂವಿಧಾನದಿಂದ ಎಂದು ಮುಖ್ಯಾಧಿಕಾರಿ ರಮೇಶ ಮಾಡಬಾಳ ಹೇಳಿದರು.

ಪಟ್ಟಣದ ಡಾ.ಅಂಬೇಡ್ಕರ್ ವೃತ್ತದಲ್ಲಿ ಎಲ್ಲ ಸರ್ಕಾರಿ ಇಲಾಖೆಯ ಅಧಿಕಾರಿಗಳು, ಮುಖಂಡರು ಸೇರಿಕೊಂಡು ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸಾರ್ವಜನಿಕವಾಗಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಿವುಕುಮಾರ ಪೂಜಾರಿ, ಗೋಪಾಲ ಪೂಜಾರಿ, ಪರಶುರಾಮ ಮಲ್ಲಾಡದ, ಪರಸಪ್ಪಜ್ಜ ಚೂರಿ, ಹನಮಂತ ಪ್ರಭಾಕರ, ಶ್ರೀಧರ ಕಾಂಬಳೆ, ಅರುಣ ಕಟ್ಟಿಮನಿ, ಮೋದಿನಸಾಬ ದೊಡಕಟ್ಟಿ, ಉಪತಹಶೀಲ್ದಾರ್ ವಿರೇಶ ಬಡಿಗೇರ, ಕಂದಾಯ ನಿರೀಕ್ಷಕ ಆನಂದ ಭಾವಿಮಠ, ಕ್ರೈ ಪಿಎಸ್ಐ ಐ.ಎಮ್.ಹಿರೇಗೌಡರ, ಪ.ಪಂ ಸಿಬ್ಬಂದಿಗಳಾದ ಮಹಾಂತೇಶ ಅಣ್ಣೆನ್ನವರ, ರಮೇಶ ಕಡ್ಲಿಮಟ್ಟಿ, ಅಶ್ವಥ ರಂಗನಗೌಡ್ರ, ಸಂಮೇಶ ಮಾದರ ಇತರರು ಇದ್ದರು.

ಮಹಿಳಾ ಸಮಾನತೆಗೆ ಹೋರಾಡಿದ್ದ ವ್ಯಕ್ತಿ ಅಂಬೇಡ್ಕರ್

ಬಸವನಬಾಗೇವಾಡಿ: ಅಂಬೇಡ್ಕರರು ಮಹಿಳಾ ಸಮಾನತೆಗೆ ಹೋರಾಡಿದರು, ಸಮಾಜದಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸಮಾನತೆ ಬರಬೇಕು ಆದಾಗ ಮಾತ್ರ ಸಮಾನತೆ ಕಾಣಲು ಸಾಧ್ಯವಾಗುತ್ತದೆ, ಒಳ್ಳೆಯ ಶಿಕ್ಷಣ ಪಡೆದಾಗ ಆದರ್ಶ ವ್ಯಕ್ತಿಗಳಾಗಿ ಬದುಕಲು ಸಾಧ್ಯ ಎಂದು ಕನ್ನೂರ ಸರ್ಕಾರಿ ಪಪೂ ಕಾಲೇಜ್ ಉಪನ್ಯಾಸಕಿ ಡಾ. ರೂಪಾ ಜೋಗಳೇಕರ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ತಾಲೂಕಾ ದಳಿತ, ತಾಪಂ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಾಬಾಸಾಹೇಬ ಅಂಬೇಡ್ಕರರ 135ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಅವರು, ಜಾತಿ ಪದ್ಧತಿಯನ್ನು ಹೋಗಲಾಡಿಸಲು ಶಿಕ್ಷಣವಂತರಾಗಿ, ಸಂಘಟಿತರಾಗಬೇಕು ಆದಾಗ ಘನತೆಯಿಂದ ಬದುಕಲು ಸಾಧ್ಯ, ಅಂಬೇಡ್ಕರರವರು ಭೀಷ್ಮರತ್ನಗಳಾಗಿದ್ದರು ಅವರ ತತ್ವಾದರ್ಶಗಳು ಅಜಾರಾಮರವಾಗಿ ಉಳಿಯುತ್ತಿವೆ ಅವುಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ತಾಪಂ ಇಒ ವೆಂಕಟೇಶ ವಂದಾಲ, ತಹಶೀಲ್ದಾರ್ ವೈ. ಎಸ್.ಸೋಮನಕಟ್ಟಿ ಅಧ್ಯಕ್ಷತೆವಹಿಸಿ ಮಾತನಾಡಿದರು. ತಾಲೂಕಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಮಹಿಬೂಬ ನಾಯ್ಕೋಡಿ, ಪೊಲೀಸ್ ಉಪವಿಭಾಗಾಧಿಕಾರಿ ಬಲ್ಲಪ್ಪ ನಂದಗಾಂವಿ ಪುರಸಭೆ ಮುಖ್ಯಾಧಿಕಾರಿ ವಿದ್ಯಾಧರ ಕಲಾದಗಿ ಇದ್ದರು.

ಸ.ಕ.ಇ ನಿರ್ದೇಶಕಿ ಮಂಜುಳಾ ಹಿರೇಮನಿ ಸಂವಿಧಾನ ಪೀಠಿಕೆ ಭೋದಿಸಿದರು, ಶಾಂತಾ ಕಸ್ತೂರಿ ನಿರೂಪಿಸಿದರು, ಎಂ.ಎಂ.ದಪೇದಾರ ಸ್ವಾಗತಿಸಿ, ವಂದಿಸಿದರು.ಎಸ್.ಸಿ, ಎಸ್.ಟಿ ಮೆಟ್ರಿಕ್ ಪೂರ್ವ ಹಾಸ್ಟೆಲದಲ್ಲಿ ಕಲಿತು ಪಿಯುಸಿ ವಿವಿಧ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ಸನ್ಮಾನಿಸಿ ಗೌರವಿಸಿದರು.



ಮೆರವಣಿಗೆ

ಅಂಬೇಡ್ಕರ್ ವೃತ್ತದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯಗಳೊಂದಿಗೆ ಅಂಬೇಡ್ಕರ್ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದರು.

ಸಮಾನತೆಯ ಹರಿಕಾರ ಡಾ.ಬಿ.ಆರ್.ಅಂಬೇಡ್ಕರ್



ತಾಳಿಕೋಟಿ: ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತದ ಏಕತೆ ಮತ್ತು ಸಮಾನತೆಗೆ ನೀಡಿದ ಕೊಡುಗೆ ಅಪಾರ. ಅವರನ್ನು ಕೇವಲ ಪೂಜೆಗೆ ಸೀಮಿತಗೊಳಿಸದೆ, ಅವರ ಬದುಕಿನ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ. ದಮ್ಮೂರಮಠ ಅವರು ತಿಳಿಸಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿಯ 135ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.ಶಿಕ್ಷಣಕ್ಕೆ ಒತ್ತು ನೀಡಲು ಕರೆ: ಅಂಬೇಡ್ಕರ್ ಅವರು ಶೋಷಿತ ವರ್ಗದ ಏಳಿಗೆಗಾಗಿ ಶಿಕ್ಷಣವನ್ನೇ ಮೂಲ ಮಂತ್ರವಾಗಿಸಿಕೊಂಡಿದ್ದರು. ಆದರೆ, ಇಂದು ನಾವು ಅವರ ಶಿಕ್ಷಣ, ಸಂಘಟನೆ, ಹೋರಾಟ ತತ್ವದಲ್ಲಿ ಶಿಕ್ಷಣವನ್ನು ನಿರ್ಲಕ್ಷಿಸಿ ಉಳಿದೆರಡನ್ನು ಮಾತ್ರ ಹಿಡಿದುಕೊಂಡಿದ್ದೇವೆ. ಸಮಾಜದಲ್ಲಿ ಸಾಕ್ಷರತೆಯ ಪ್ರಮಾಣ ಇನ್ನೂ ಹೆಚ್ಚಾಗಬೇಕಿದೆ. ಪೋಷಕರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಮೂಲಕ ಅಂಬೇಡ್ಕರ್ ಅವರಿಗೆ ನಿಜವಾದ ಗೌರವ ಸಲ್ಲಿಸಬೇಕು ಎಂದು ಅವರು ಮಾರ್ಮಿಕವಾಗಿ ನುಡಿದರು.

ಜಾತಿ ಮೀರಿದ ವಿಶ್ವನಾಯಕ: ದಲಿತ ಮುಖಂಡರಾದ ಡಿ.ಬಿ. ಹಾದಿಮನಿ ಮಾತನಾಡಿ, ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ನೋವಿನ ಸಂಗತಿ. ಅವರು ಸರ್ವ ಜನಾಂಗದ ಆಶಾಕಿರಣವಾಗಿದ್ದು, ಇಡೀ ದೇಶದ ಭವಿಷ್ಯದ ಹಿತದೃಷ್ಟಿಯಿಂದ ಬದುಕಿದವರು. ಅವರ ಪಾಂಡಿತ್ಯ ಮತ್ತು ಸಂವಿಧಾನದ ಮಹತ್ವವನ್ನು ಎಲ್ಲರೂ ಅರಿಯಬೇಕಿದೆ ಎಂದರು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿರುವ ಪುತ್ಥಳಿಗೆ ತಹಶೀಲ್ದಾರ್ ಡಾ. ವಿನಯಾ ಹೂಗಾರ ಅವರ ನೇತೃತ್ವದಲ್ಲಿ ತಾಲೂಕು ಆಡಳಿತ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಪುಷ್ಪ ನಮನ ಸಲ್ಲಿಸಲಾಯಿತು.

ತಾಲೂಕು ಪಂಚಾಯತ್ ಇಓ ಅನಸೂಯಾ ಚಲವಾದಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಪಿಎಸ್ಐ ಜ್ಯೋತಿ ಖೋತ, ನಿವೃತ್ತ ಎಸ್‌ಪಿ ಎಸ್.ಬಿ. ಕಟ್ಟಿಮನಿ, ಶಿವಲಿಂಗಪ್ಪ ಹಚಡದ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪ್ರಮುಖರಾದ ಮುತ್ತಪ್ಪ ಚಮಲಾಪೂರ, ಬಸವರಾಜ ಕಟ್ಟಿಮನಿ, ಎಂ.ಎಸ್. ಸರಶಟ್ಟಿ, ಮಲ್ಲಿಕಾರ್ಜುನ ಪಟ್ಟಣಶಟ್ಟಿ, ಹುಸೇನ ಜಮಾದಾರ, ಅಮಿತ್ ಮನಗೂಳಿ, ಪರಶುರಾಮ, ದೇವೇಂದ್ರ ಹಾದಿಮನಿ, ಮಹೇಶ ಛಲವಾದಿ, ಕಟ್ಟಿಮನಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು. ಶಿಕ್ಷಕ ರಾಜು ವಿಜಾಪುರ ಕಾರ್ಯಕ್ರಮ ನಿರೂಪಿಸಿದರು.

ಕತ್ತಲೆ ಯುಗಕ್ಕೆ ಬೆಳಕು ತಂದ ಡಾ.ಅಂಬೇಡ್ಕರ್



ತೇರದಾಳ: ಕತ್ತಲೆ ಯುಗಕ್ಕೆ ಬೆಳಕು ತಂದ ನಮ್ಮೆಲ್ಲರ ಸೂರ್ಯ ಡಾ. ಅಂಬೇಡ್ಕರವರು. ಬಾಬಾಸಾಹೇಬರು ಇಲ್ಲದಿದ್ದರೆ ನಾವೆಲ್ಲಾ ಅನಾಥರಾಗಿ ಬಿಡುತ್ತಿದ್ದೆವು. ಏ.14 ಕೇವಲ ರಜಾದಿನವಲ್ಲ ಅದು ನಮ್ಮ ದೇಶದ ಹಣೆಬರಹ ಬರೆದ ದಿನವಾಗಿದೆ. ಭ್ರಷ್ಟಾಚಾರ ರಹಿತ, ಸಮಾನತೆಯ ಬದುಕು, ಸಮರ್ಥ ಸಮಾಜವನ್ನು ಹೊಂದಲು ಸದೃಢ ಸುಸಂಸ್ಕೃತ ಯುವ ಸಮುದಾಯದ ಅವಶ್ಯಕತೆ ಇದ್ದು ಅದಕ್ಕಾಗಿ ಎಲ್ಲರೂ ಶಿಕ್ಷಣ ಪಡೆಯಬೇಕು ಎಂದು ಹೇಳಿದರು. ಬಾಬಾಸಾಹೇಬರು ತಮ್ಮೆಲ್ಲ ಬದುಕನ್ನು ಇಡೀ ದಲಿತ ಸಮಾಜದ ಉದ್ಧಾರಕ್ಕಾಗಿ ಮೀಸಲಾಗಿಟ್ಟರು. ಜಾತಿ,ಧರ್ಮ,ರಾಜ್ಯ,ಭಾಷೆ ಎಲ್ಲವನ್ನು ಮೀರಿ ಗ್ರೇಟ ಇಂಡಿಯನ್ ಆಗಿದ್ದರು. ಖಡ್ಗ ಬಂದೂಕು ಹಿಡಿಯದೆ ಸಮಾಜದಲ್ಲಿ ದೊಡ್ಡ ಬದಲಾವಣೆ ತಂದ ಕ್ರಾಂತಿಕಾರಿ, ಸತ್ತು ಹೋಗಿದ್ದ ಸಮಾಜಕ್ಕೆ ಮರುಜನ್ಮ ನೀಡಿದವರು ಎಂದರೆ ಡಾ. ಬಾಬಾಸಾಹೇಬರು ಎಂದು ಪಿ.ಎಸ್.ಮಾಸ್ತಿ ಹೇಳಿದರು.

ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ದಲ್ಲಿ ಡಾ.ಬಾಬಾ ಸಾಹೇಬರ 135ನೇ ಜನ್ಮದಿನವನ್ನು ಆಚರಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸಾಮಾನ್ಯ ವ್ಯಕ್ತಿಯಲ್ಲ ಅವರು ಸುಮಾರು 64 ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರು. ವಿದೇಶದಲ್ಲಿ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದ ಮೊಟ್ಟಮೊದಲ ಭಾರತೀಯರಾಗಿದ್ದಾರೆ. ಸುಮಾರು 9 ಭಾಷೆಗಳಲ್ಲಿ ನಿರ್ಗಳವಾಗಿ ಮಾತನಾಡುವ ಜ್ಞಾನ ಹೊಂದಿದ್ದ ಅವರನ್ನು ಕೊಲಂಬಿಯಾ ವಿಶ್ವವಿದ್ಯಾಲಯವು ಅವರನ್ನು ಜಗತ್ತಿನ ನಂ. 1 ಸ್ಕಾಲರ್ ಎಂದು ಘೋಷಣೆ ಮಾಡಿದೆ. ಅವರು ಬರೆದ '' ವೈಟಿಂಗ್ ಫಾರ ವಿಸಾ'' ಎಂಬ ಆತ್ಮಚರಿತ್ರೆಯು ಇಂದಿಗೂ ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ ಎಂದರು. ಕಾನೂನಿನ ಹೆಸರಿನಲ್ಲಿ ಶೋಷಣೆಯಾಗಬಾರದು ಎಂದು ಪ್ರತಿಪಾದಿಸಿದವರು. ಇಡೀ ಮಾನವ ಕುಲಕ್ಕೆ ಅವರ ಕೊಡುಗೆ ಅಪಾರವಾಗಿದೆ ಅವರ ಋಣವನ್ನು ನಾವೆಂದೂ ತೀರಿಸಲು ಸಾಧ್ಯವಿಲ್ಲ, ಅಂತಹ ಮಹಾಮಾನವತಾವಾದಿಯನ್ನು ಪಡೆಯಬೇಕಾದರೆ ನಮ್ಮ ದೇಶವೇ ಅದೃಷ್ಟಮಾಡಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರುಗಳಾಗದ ಪ್ರವೀಣ ನಾಡಗೌಡ, ರಮೇಶ ಧರೆಣ್ಣವರ, ನೇಮಣ್ಣ ಸಾವಂತನವರ, ಶಿಲ್ಪಾ ರೋಡಕರ, ದಯಾನಂದ ಕಾಳೆ, ಸದಾಶಿವ ದೊಡಮನಿ, ಗೌತಮ ರೋಡಕರ, ಹನುಮಂತ ರೋಡನ್ನವರ, ರಘುನಾಥ ಹಟ್ಟಿ, ಸಿದ್ದು ದೊಡಮನಿ, ಸದಾಶಿವ ಶಿಂಗೆ, ಪರಶುರಾಮ ಕಾಂಬಳೆ, ವಿಠ್ಠಲ ಶಿಂಗೆ, ದಯಾನಂದ ಧರೆಣ್ಣವರ, ಉಮೇಶ ದೊಡಮನಿ, ನಾಗಪ್ಪ ದೊಡಮನಿ, ಮಂಜು ಸರಿಕರ, ಲಕ್ಮಣ ಮಾಸ್ತಿ, ಸುರೇಶ ಹಟ್ಟೆನ್ನವರ, ರತ್ನಪ್ಪ ಕಾಂಬಳೆ ಸೇರಿದಂತೆ ಸಾಕಷ್ಟು ಮುಖಂಡರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ



◆**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ಪುಷ್ಪ ನಮನ ಸಲ್ಲಿಸಿ ಗೌರವ ಸಲ್ಲಿಸಿದರು. ಗ್ರಂಥಾಲಯ ಮುಖ್ಯಸ್ಥ ಸುನಿಲ ಯರಗಟ್ಟಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಡೆದು ಬಂದ ಹಾದಿ ಸಮಾಜ ಸುಧಾರಣೆಗೆ ಅವರ ಶ್ರಮ ಅವಿಸ್ಮರಣೀಯ ಎಂದರು. ಪ್ರೊ.ಪ್ರಕಾಶ್ ಚವ್ಹಾಣ ಮಾತನಾಡಿ, ಶೋಷಿತ ವರ್ಗದವರನ್ನು ಸಮಾಜದ ಮುಖ್ಯ ವೇದಿಕೆಗೆ ತರುವಲ್ಲಿ ಅಂಬೇಡ್ಕರ್ ಅವರ ಪಾಲು ಬಹು ಮುಖ್ಯವಾಗಿದೆ ಎಂದರು. ಈ ಸಂಧರ್ಭದಲ್ಲಿ ಡೀನ್ ಪ್ರೊ. ಮಂಜುನಾಥ್, ಪ್ರೊ. ಸುಬ್ರಮಣ್ಯ ಹೆಚ್, ಗದಿಗೆಪ್ಪಾ ಯಳ್ಳೂರ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ನಕಲಿ ಸಹಿ: ಪ್ರಕರಣ ದಾಖಲು

◆**ಹುಬ್ಬಳ್ಳಿ:** ಇಲ್ಲಿನ ಹಳೇ ಹುಬ್ಬಳ್ಳಿಯ ಕರ್ನಾಟಕ ಎಜ್ಯುಕೇಷನ್ ವೆಲ್‌ಫೇರ್ ಮತ್ತು ಕಲ್ಚರಲ್ ಸೊಸೈಟಿಯ ಸಂಸ್ಥಾಪಕ, ಕಾರ್ಯದರ್ಶಿಯ ಹೆಸರಲ್ಲಿ ಕೆಲವರು ನಕಲಿ ರಾಜೀನಾಮೆ ಪತ್ರ ಸೃಷ್ಟಿಸಿ, ನಕಲಿ ಸಹಿ ಹಾಕಿ ಅವರನ್ನೇ ಆಡಳಿತ ಮಂಡಳಿಯಿಂದ ತೆಗೆದು ಹಾಕಿರುವ ಆರೋಪದ ಕುರಿತು ಕಸಬಾಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 2009ರ ಜುಲೈನಲ್ಲಿ ಸಹಕಾರ ಸಂಘದ ಅಧಿನಿಯಮದ ಅಡಿಯಲ್ಲಿ ಸೊಸೈಟಿ ನೋಂದಣಿ ಮಾಡಿದ್ದು, ಸಯ್ಯದಲಾಲ್ ಸವಣೂರು ಅವರು ಸಂಸ್ಥಾಪಕ, ಕಾರ್ಯದರ್ಶಿ ಆಗಿದ್ದರು. 2016ರಲ್ಲಿ ಸಂಘದ ಆಡಳಿತ ಮಂಡಳಿಯ ಕೆಲವರು ಅವರ ಹೆಸರಲ್ಲಿ ನಕಲಿ ಸಹಿ, ನಕಲಿ ಠರಾವು ಹಾಗೂ ನಕಲಿ ರಾಜೀನಾಮೆ ಪತ್ರ ಸೃಷ್ಟಿಸಿ ಆಡಳಿತ ಮಂಡಳಿಯಿಂದ ತೆಗೆದು ಹಾಕಿರುತ್ತಾರೆ. ಧಾರವಾಡ ನೋಂದಣಿ ಕಚೇರಿಯಲ್ಲಿ ವಿಚಾರಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆರು ವರ್ಷದ ಬಾಲಕಿ ಅಪಹರಣ:

ಇಲ್ಲಿನ ಗದಗ ರಸ್ತೆಯ ಗೂಡ್‌ಶೆಡ್ ರೋಡ್ ವಾಟರ್ ಟ್ಯಾಂಕ್ ಬಳಿಯ ಮನೆ ಅಂಗಳದಲ್ಲಿ ಆಟವಾಡುತ್ತಿದ್ದ ಆರು ವರ್ಷದ ಬಾಲಕಿಯನ್ನು ಅಪಹರಣ ಮಾಡಿದ್ದಾರೆ ಎಂದು ಶಹರ ಠಾಣೆಯಲ್ಲಿ ರಫೀಕ್ ಶೇಖ್ ಪ್ರಕರಣ ದಾಖಲಿಸಿದ್ದಾರೆ.

ಹಲ್ಲೆ: ಪ್ರಕರಣ ದಾಖಲು

ಇಲ್ಲಿನ ಹೊಸೂರು ಬಸ್ ನಿಲ್ದಾಣದ ಹಿಂಭಾಗ ಪ್ರವೇಶದ್ವಾರದಲ್ಲಿ ಖಾಸಗಿ ವಾಹನ ಪ್ರವೇಶಿಸುವುದನ್ನು ತಡೆದಿದ್ದ ಗೃಹರಕ್ಷಕ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪಿ ವಿರುದ್ಧ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗೃಹರಕ್ಷಕ ದಳ ಸಿಬ್ಬಂದಿ ಸುರೇಶ ಜಾಧವ ಗಾಯಗೊಂಡಿದ್ದು ಕೆಎಂಸಿಆರ್‌ಐ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ವೆಂಕಟೇಶ ಕಲಬುರ್ಗಿಯು ಕಾರನ್ನು ಏಕಾಏಕಿ ನಿಲ್ದಾಣದ ಒಳಗೆ ಒಯ್ಯುತ್ತಿದ್ದಾಗ, ಸುರೇಶ ತಡೆದಿದ್ದಾರೆ. ಆದರಿಂದ ಕೋಪಗೊಂಡ ವೆಂಕಟೇಶ ಕಲ್ಲಿನಿಂದ ಅವರ ತಲೆಗೆ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ್ದ ಎಮದು ದೂರಿನಲ್ಲಿ ತಿಳಿಸಲಾಗಿದೆ.

ಕುಡಚಿಯಿಂದಲೇ ಹೋರಾಟಕ್ಕೆ ಚಾಲನೆ: ಶ್ರೀಕಾಂತ ಸಣ್ಣಕ್ಕಿ

ಅಂಬೇಡ್ಕರ್ ಹೆಸರಿನಲ್ಲಿ ರೈಲು ಓಡಾಡಲಿ

◆**ಕುಡಚಿ :** ಪಟ್ಟಣದ ಅಂಬೇಡ್ಕರ್ ನಗರದ ಸಂವಿಧಾನ ಶಿಲ್ಪಿಯ ಚಿತಾ ಭಸ್ಮ ಇರುವ ಏಕೈಕ ಸ್ಥಳ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ 135ನೇ ಜಯಂತಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕುಡಚಿ ಮತಕ್ಷೇತ್ರದ ಯುವ ನಾಯಕ ಅಮಿತ ಘಾಟಗೆ ಧ್ವಜಾರೋಣ ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಹಾನ್ ಚಿಂತಕ, ಸಮಾಜ ಸುಧಾರಕ, ಭಾರತದ ಸಂವಿಧಾನದ ಶಿಲ್ಪಿ ಬಾಬಾಸಾಹೇಬರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಚಿತಾಭಸ್ಮ ಸ್ಥಳಕ್ಕೆ ನಮನ ಸಲ್ಲಿಸಿದರು.

ಮಾಜಿ ಶಾಸಕ ಶಾಮ ಘಾಟಗೆಯವರ ಆಪ್ತ ಸಹಾಯಕ ಶ್ರೀಕಾಂತ ಸಣ್ಣಕ್ಕಿ ಮಾತನಾಡಿ, ನಮ್ಮ ದೇಶಕ್ಕೆ ಬೃಹತ್ ಸಂವಿಧಾನ ನೀಡಿದ ವಿಶ್ವನಾಯಕ ಡಾ. ಬಿ.ಆರ್.ಅಂಬೇಡ್ಕರ್ ಕೊಡುಗೆ ಅಪಾರವಾದದ್ದು, ಸರ್ಕಾರ ಬರುವ ದಿನಗಳಲ್ಲಿ ಅವರ ಸವಿನೆನಪಿಗಾಗಿ ನಮ್ಮ ಭಾಗದಲ್ಲಿ ಅವರ ಹೆಸರಿನಲ್ಲಿ ರೈಲು ಓಡಿಸಬೇಕು. ಅದಕ್ಕೆ ನಾವೆಲ್ಲರೂ ಧ್ವನಿ ಎತ್ತುವ ಕೆಲಸ ನಮ್ಮಿಂದಲೆ ಆರಂಭಿಸೋಣ ಎಂದು ಹೇಳಿದರು.

ನ್ಯಾಯವಾದಿ ತಾನಾಜಿ ಶಿಂಧೆ ಮಾತನಾಡಿ, ಬಾಬಾಸಾಹೇಬರ ಜೀವನ ನಮಗೆ ಒಂದು ಸ್ಪೂರ್ತಿ



ಅವರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಅಮೂಲ್ಯ ಮಾತುಗಳು ನಮ್ಮ ಜೀವನದ ದಿಕ್ಕನ್ನು ಬದಲಾಯಿಸುವ ಶಕ್ತಿ ಹೊಂದಿವೆ. ಇಂದಿನ ಯುವ ಜನತೆ ಅಂಬೇಡ್ಕರ್ ಅವರ ಈ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಮ್ಮ ದೇಶ ಇನ್ನಷ್ಟು ಅಭಿವೃದ್ಧಿ ಸಾಧಿಸಬೇಕಾಗಿದೆ.

ಅವರು ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಸಂಪೂರ್ಣ ಜೀವನವನ್ನು ಅರ್ಪಿಸಿ. ನಮ್ಮ ಸಮಾಜದಲ್ಲಿ ಅಸಮಾನತೆ ಮತ್ತು ಅಂಧವಿಶ್ವಾಸಗಳನ್ನು ದೂರ ಮಾಡುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಿಲೀಪ್ ಘಾಟಗೆ, ನಿವೃತ್ತ ಶಿಕ್ಷಕ ಕೇಶವ ಮದಲೆ, ನಾಮದೇವ ಮದಲೆ, ಪ್ರಕಾಶ್ ಘಾಟಗೆ, ಪರಶುರಾಮ ಶಿಂಧೆ, ಶ್ರೀಧರ ಕಂತ್ರಾಟೆ, ಪ್ರಸಾದ ಶಿಂಗೆ, ರಾವಸಾಬ್ ಶಿಂಧೆ, ರಾಜು ದರಬಾರೆ, ಬಹಿಲುಲ ರೆಡ್ಡಿ, ನ್ಯಾಯವಾದಿಗಳಾದ ಶಾಂತಿನಾಥ ಬನಸೋಡೆ, ತುಕಾರಾಮ ಮದಲೆ, ಮೋಹನ್ ಕಾಂಬಳೆ, ಆನಂದ ಘಾಟಗೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಭಾಸ್ಕರ ಸಾವಂತ್ ನಿರೂಪಿಸಿದರು.

ರಾಷ್ಟ್ರೋತ್ಥಾನದಲ್ಲಿ ಡಾ.ಅಂಬೇಡ್ಕರ್ ಜಯಂತಿ

◆**ಕಲಬುರಗಿ:** ನಗರದ ಶರಣಸಿರಸ ಗಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಇದಲ್ಲಿ ಮಂಗಳವಾರ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ವಿಜೃಂಭಣೆ ಯಿಂದ ಆಚರಿಸಲಾಯಿತು.

ಅಭ್ಯಾಗತರಾಗಿ ಆಗಮಿಸಿದ್ದ ಕ್ಯಾಂಪಸ್ ಇಂಚಾರ್ಜ್ ಭೀಮರಾಯ ಇಟಗೊಂಡಿ ಮಾತನಾಡಿ, ಮಹಾ ಮಾನವತಾವಾದಿಯಾದ ಡಾ.ಅಂಬೇಡ್ಕರ್ ಅವರ ಜೀವನದ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ಕರೆನೀಡಿದರು. ನಾವುನಂಬಿರುವಸಿದ್ಧಾಂತಕ್ಕೆಕಟಿಬದ್ಧರಾಗಿ ಸಾಧನೆ ಮಾಡುವ ಛಲವನ್ನು ಅಂಬೇಡ್ಕರ್ ಅವರಿಂದ ಕಲಿಯಬೇಕು ಎಂದು ಅವರು ತಿಳಿಸಿದರು. ಶಾಲೆಗಳು ಸಮಾಜದ ಕಿರುಚಿತ್ರಣವಾಗಿದ್ದು, ಮಕ್ಕಳಿಗೆ ಸಾಮರಸ್ಯದಿಂದ ಬದುಕುವ ಪಾಠವನ್ನು ನೀಡಬೇಕು. ಇದರ ಮೂಲಕ ಸಮಾಜದಲ್ಲಿ ಏಕತೆ ಮತ್ತು ಸಮಾನತೆಯ ಭಾವನೆ ಬೆಳೆಸಬಹುದು ಎಂದು ಹೇಳಿದರು. ನೀರು, ದೇವಸ್ಥಾನ ಹಾಗೂ ಸ್ಮಶಾನ ಎಲ್ಲರಿಗೂ ಸಮಾನವಾಗಿ ಲಭ್ಯವಾಗಬೇಕು. ಇದರಲ್ಲಿ ಯಾವುದೇ ಬೇಧಭಾವ ಇರಬಾರದು ಎಂದು ಅವರು ಅಭಿಪ್ರಾಯಪಟ್ಟರು. ಶಾಲೆಯ ಪ್ರಧಾನಾಚಾರ್ಯ ವಂಶಿಕೃಷ್ಣ, ಕರೆಸ್ಪಾಂಡೆಂಟ್ ಕೃಷ್ಣ ಜೋಶಿ, ಆಡಳಿತಾಧಿಕಾರಿ ಶ್ರೀಕಾಂತ್ ಪಾಟೀಲ ಹಾಗೂ ಶಿಕ್ಷಕರ ಸಿಬ್ಬಂದಿ ಉಪಸ್ಥಿತರಿದ್ದರು. ಶಿಕ್ಷಕಿ ಚಂದ್ರಶಶಿ ಸ್ವಾಗತಿಸಿದರು, ಸುಲೇನಾ ವಂದಿಸಿದರು ಮತ್ತು ಶ್ರೀಪಾದ ನಾಯಕರು ನಿರೂಪಿಸಿದರು.





ಹುಬ್ಬಳ್ಳಿ: ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನದ ಅಂಗವಾಗಿ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಕುಮಾರ ಶೆಟ್ಟಿ ಬಣ) ವತಿಯಿಂದ ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಜಿಲ್ಲಾಧ್ಯಕ್ಷ ಮಂಜುನಾಥ ಲೂತಿಮಠ, ತಾಲೂಕ ಅಧ್ಯಕ್ಷ ಪ್ರವೀಣ ಗಾಯಕವಾಡ ಸೇರಿದಂತೆ ಅನೇಕರಿದ್ದರು.

ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದವರು ಡಾ.ಅಂಬೇಡ್ಕರ್

◆**ಕೊಪ್ಪಳ:** ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನ ಭಾರತಕ್ಕೆ ನೀಡಿದವರು ಮಹಾನ್ ಚೇತನ ಡಾ.ಅಂಬೇಡ್ಕರ್ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನಕುಮಾರ್ ಗುಳಗಣ್ಣನವರ್ ಹೇಳಿದರು.

ಭಾರತೀಯ ಜನತಾ ಪಾರ್ಟಿ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವದಲ್ಲಿಯೇ ಒಂದು ಶ್ರೇಷ್ಠವಾದ ಸಂವಿಧಾನವನ್ನು ರಚನೆ ಮಾಡಿ ಪ್ರಜಾಪ್ರಭುತ್ವದ



ವ್ಯವಸ್ಥೆಯನ್ನು ಹುಟ್ಟು ಹಾಕಿ ದೇಶವನ್ನು ಸದೃಢವಾಗಿ ಕಟ್ಟಲು ಭದ್ರ ಬುನಾದಿ ಹಾಕಿದವರು. ಅವರು ಕಂಡ ಸಮಾನತೆಯ ಭಾರತದ ಕನಸನ್ನು ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ಸಬ್ ಕಾ ಪ್ರಯಾಸ್ ಎನ್ನುವ ಘೋಷಣೆ ಯೊಂದಿಗೆ ಭಾರತವನ್ನು ಸದೃಢವಾಗಿ ಕಟ್ಟುತ್ತಿರುವರು ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿ ನರೇಂದ್ರ ಮೋದಿ. ಪಂಚ ತೀರ್ಥ ಯೋಜನೆ ಮೂಲಕ ಡಾ.ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದ್ದು ನಮ್ಮ ಕೇಂದ್ರ ಸರಕಾರ ಎಂದರು.

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್, ಬಿಜೆಪಿ ಕೋರ್ ಕಮಿಟಿ ಸದಸ್ಯ ಬಸವರಾಜ ಕ್ಯಾವಟರ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಗಣೇಶ ಹೊರಟಾತ್ನಾಳ್, ಮಾಂತೇಶ ಮೈನಹಳ್ಳಿ, ಅಂಬರೀಷ್ ಮುರಳಿ, ವೀರೇಶ್ ಸಜ್ಜನ್, ಮಹಾಲಕ್ಷ್ಮಿ ಕಂದಾರಿ, ರಾಘುಚಾಕ್ರಿ ಮಾರುತಿ, ಕನಕ ಮೂರ್ತಿ ಚಲವಾದಿ, ಸುನಿಲ್ ಹೆಸರೂರು ಇದ್ದರು.

ಸಂವಿಧಾನ ಭಾರತೀಯರ ಆತ್ಮ



◆**ಧಾರವಾಡ:** ಇಲ್ಲಿನ ದವಳಗಿರಿ ಹತ್ತಿರದ ಶ್ರೀ ಮಂಜುನಾಥೇಶ್ವರ ತಾಂತ್ರಿಕ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು.

ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಪ್ರಾಚಾರ್ಯ ಪ್ರೊ. ರಮೇಶ ಚಕ್ರಸಾಲಿ, ಡಾ.ಅಂಬೇಡ್ಕರ್ ಭಾರತೀಯ ಸಂವಿಧಾನ ಮತ್ತು ಸಂಸ್ಕೃತಿಗೆ ನೀಡಿದ ಅಗಾಧ ಕೊಡುಗೆಗಳು ಎತ್ತಿ ತೋರಿಸಿದರು. ಸಂವಿಧಾನ ಕೇವಲ ದಾಖಲೆಯಲ್ಲ, ಭಾರತೀಯತ ಆತ್ಮ, ಅದರಲ್ಲಿರುವ ನೈತಿಕ ಮೌಲ್ಯಗಳು, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು, ಕರ್ತವ್ಯಗಳು ಎಲ್ಲರೂ ಪಾಲಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಡೀನ್ ಪ್ರೊ. ಕೇಶವ ಜೋಶಿ, ಎನ್ನೆಸ್ಸೆಸ್ ಸಂಯೋಜಕ ಡಾ. ಆನಂದ ವೈದ್ಯ, ಅಧ್ಯಾಪಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಅನೇಕರು ಪಾಲ್ಗೊಂಡಿದ್ದರು.

ಅಂಬೇಡ್ಕರರ ಸಾಮಾಜಿಕ ಮೌಲ್ಯ ಅಳವಡಿಸಿಕೊಳ್ಳಿ

◆**ಕುಂದಗೋಳ:** ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಸಾರಿದ ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳು ಪ್ರತಿಯೊಬ್ಬರ ಬದುಕಿನಲ್ಲಿ ಅಳವಡಿಕೆಯಾಗಬೇಕು. ಕೇವಲ ಭಾಷಣಗಳಲ್ಲಿ ಅವುಗಳನ್ನು ಉಲ್ಲೇಖಿಸುವುದರಿಂದ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತಾಗುವುದಿಲ್ಲ, ಅವನ್ನು ನಿತ್ಯ ಜೀವನದಲ್ಲಿ ಅನುಸರಿಸುವುದು ಅಗತ್ಯ ಎಂದು ಎಂ.ಆರ್. ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಮಂಗಳವಾರ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ ಮಾತನಾಡಿ, ವಿಶ್ವದ ಅನೇಕ ರಾಷ್ಟ್ರಗಳು ಭಾರತೀಯ ಸಂವಿಧಾನವನ್ನು ಶ್ರೇಷ್ಠವೆಂದು ಮೆಚ್ಚಿಕೊಂಡಿವೆ. ಅಂತಹ ಮಹಾನ್ ಸಂವಿಧಾನವನ್ನು ನೀಡಿದ ಅಂಬೇಡ್ಕರ್ ಅವರು ಕಷ್ಟಕರ ಜೀವನವನ್ನು ಎದುರಿಸಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರು ಸಮಾಜದಲ್ಲಿ ಅಸಮಾನತೆ ನಿವಾರಣೆ ಹಾಗೂ ಸೌಹಾರ್ದತೆ ಬೆಳೆಸುವ ದಿಸೆಯಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು. ತಹಶೀಲ್ದಾರ್ ರಾಜು ಮಾವರಕರ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಸಮಾನತೆ ಹಾಗೂ ನ್ಯಾಯವನ್ನು



ಸ್ಥಾಪಿಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸುರೇಶ ಮಾಕಪ್ಪನವರ, ಮುತ್ತಪ್ಪ ಅಣ್ಣಿಗೇರಿ, ಸಿ.ಎಸ್. ಕಡಮನವರ, ಬಸವರಾಜ ನಾಯ್ಕರ, ರಾಮಣ್ಣ ಪೂಜಾರ,ಹನುಮಂತ ಮೇಲಿನಮನಿ, ಬಸವರಾಜ ನಾಗಮ್ಮನವರ, ಲೋಕೇಶ ಬೇವಿನಮರದ, ಶರೀಫ್ ಜೋಗಮ್ಮನವರ,ಚಂದ್ರು ಕಾಳಿ,ರುದ್ರಪ್ಪ ದೊಡಮನಿ ಅಧಿಕಾರಿಗಳಾದ ಇಒ ರೇಖಾ ಗಡ್ಡದವರ, ಪಪಂ ಮುಖ್ಯಾಧಿಕಾರಿ ಸಿ.ವಿ. ಕುಲಕರ್ಣಿ, ಬಿಇಒ ಮಹಾದೇವಿ ಮಾಡಲಗೇರಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸದಾ ಬದ್ಧ: ಶಾಸಕ ಪಾಟೀಲ

◆**ಕುಷ್ಟಗಿ:** ಗ್ರಾಮೀಣ ಭಾಗದ ರಸ್ತೆಗಳ ಸರ್ವಾಂಗೀಣ ಅಭಿವೃದ್ಧಿಗೆ ಸದಾ ಬದ್ಧರಾಗಿ ಪ್ರಾಮಾಣಿಕ ಕೆಲಸ ಮಾಡಲಾಗುವುದು ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲೂಕಿನ ಕಂದಕೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಲೋಕೋಪಯೋಗಿ ಇಲಾಖೆ ಯಿಂದ ಕಂದಕೂರ -ಕುಷ್ಟಗಿವರಗೆ 3.5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಗಲೀಕರಣ ಹಾಗೂ ಡಾಂಬರೀಕರಣದ ಭೂಮಿಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಂಗಳವಾರ ಮಾತನಾಡಿದರು.

ಮತ ಕ್ಷೇತ್ರದಲ್ಲಿ ರಸ್ತೆ ಸುಧಾರಣೆಗೆ ಲೋಕಪಯೋಗಿ ಇಲಾಖೆಯಿಂದ ಡಾಂಬರ್ ಕೈಗೊಳ್ಳಲಾಗಿದೆ. ರಸ್ತೆ ನಿರ್ಮಾಣಕ್ಕೆ ಬಹುದಿನದಿಂದ ಬೇಡಿಕೆ ಇತ್ತು. ಇದೀಗ ಈಡೇರಿಸಲಾಗಿದೆ. ಸಾರ್ವಜನಿಕರು ಲಘುವಾಗಿ



ತಾಲೂಕು ಕೇಂದ್ರ ತಲುಪಲು ಸುಗಮ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿದೆ. ಸಾರ್ವಜನಿಕರು, ಸಾರಿಗೆ ಹಾಗೂ ವಾಹನ ಸವಾರರಿಗೆ ಹೋಗಿ ಬರಲು ಅನುಕೂಲ ಸಿಗಲಿದೆ .ರಸ್ತೆಗಳು ಗುಣ ಮಟ್ಟದಲ್ಲಿ ನಿರ್ಮಿಸಬೇಕಿದೆ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಮಹೇಶ್, ಲೋಕಪಯೋಗಿ ಇಲಾಖೆ ಎಇಇ ಸುಧಾಕರ್ ಕಾತರಕಿ, ಗುತ್ತಿಗೆದಾರ್ ಡಿ.ಎಸ್.ಕಂದಕೂರು, ಮುಖಂಡರಾದ ಕಲ್ಲೇಶ ತಾಳದ್, ಕಂದಕೂರಪ್ಪ ವಾಲ್ಮೀಕಿ, ಶರಣಪ್ಪ ಬಿಜಕಲ್, ವೀರಯ್ಯ ಮಠಪತಿ, ಭೀಮನಗೌಡ, ಸಲೀಂಸಾಬ್, ಬಸವರಾಜ ಕಾಮನೂರ, ಬೀಮಣ್ಣ ಬಿಜಕಲ್ಲ ಚಂದ್ರಹಾಸ ಭಾವಿಕಟ್ಟಿ, ಶರಣಪ್ಪ ಗೋಪಾಳಿ, ಆಂಜನೇಯ ಹಾದಿಮನಿ, ಮಾರುತಿ ಹಲಗಿ ಇತರರು ಇದ್ದರು.

ಅಂಬೇಡ್ಕರರ ಕೊಡುಗೆ ಅಪಾರ: ಶಾಸಕ ಮಹೇಶ ಟೆಂಗಿನಕಾಯಿ

◆**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಮಂಗಳವಾರ ಹಳೇಹುಬ್ಬಳ್ಳಿ ಹೆಗ್ಗೇರಿಯ ಡಾ. ಬಿ.ಆರ್. ಅಂಬೇಡ್ಕರ ಕ್ರೀಡಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ ಅವರ 135ನೇ ಜನ್ಮದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಡಾ. ಬಿ.ಆರ್. ಅಂಬೇಡ್ಕರ್ ಅವರು ಅಂಬೇಡ್ಕರ ತಮಗಾಗಿ ಏನೂ ಮಾಡಿಕೊಳ್ಳಲಿಲ್ಲ, ಸಮಾಜಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಅವರು ಜಾರಿಗೆ ತಂದ ಹಕ್ಕುಗಳು ಎಲ್ಲರಿಗೂ ಸಿಗಬೇಕು. ಯಾರೂ ವಂಚಿತರಾಗಬಾರದು ಎಂದು ತಿಳಿಸಿದರು.

ಡಾ. ಬಾಬಾಸಾಹೇಬ ಅಂಬೇಡ್ಕರರು ತಮ್ಮ ಜೀವನವನ್ನು ಸಮಾಜಕ್ಕಾಗಿ ಪೂರ್ಣ ಅರ್ಪಿಸಿಕೊಂಡರು. ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಶೋಷಿತ ವರ್ಗಕ್ಕಾಗಿ ಮಾತ್ರವಲ್ಲ ಎಲ್ಲಾ ಸಮುದಾಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಹೇಳಿದರು.

ಅಂಬೇಡ್ಕರರು ಜಗತ್ತಿನಲ್ಲೇ ಶ್ರೇಷ್ಠವಾದ ಸಂವಿಧಾನ ನಮಗೆ ಕೊಟ್ಟಿದ್ದಾರೆ. ಅವರು ಸಂವಿಧಾನ ರಚನೆಯಲ್ಲಿ ಸದಸ್ಯರಾಗಿರದಿದ್ದರೆ ನಮ್ಮ ಸಂವಿಧಾನ ಇಷ್ಟೊಂದು ಅತ್ಯದ್ಭುತ



ಆಗಿರುತ್ತಿರಲಿಲ್ಲ, ಹೀಗಾಗಿ ಚಹಾ ಮಾರುವ ದೇಶದ ಒಬ್ಬ ಸಾಮಾನ್ಯ ವ್ಯಕ್ತಿ ಪ್ರಧಾನಿ ಆಗಲು ಸಾಧ್ಯವಾಯಿತು ಎಂದು ತಿಳಿಸಿದರು.

ಉಪನ್ಯಾಸ ನೀಡಿದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ವಿಠ್ಠಲ ಬೆಣಗಿ, ದಲಿತರಿಗೆ ಅಧಿಕಾರ ಮತ್ತು ಮತದಾನದ ಹಕ್ಕು ನೀಡಿದರು. ಮಹಿಳೆಯರಿಗೆ ಸ್ವಾತಂತ್ರ್ಯ ಹಕ್ಕು, ಹಿಂದು ಬಿಲ್ ಕೋಡ್ ಜಾರಿಗೆ ತಂದರು. ದೇಶ ಉದ್ಧಾರ ಮಹಿಳೆಯರಿಂದ ಸಾಧ್ಯ ಎಂದು ಲಿಂಗ ಭೇದ ತಾರತಮ್ಯ ಹೋಗಲಾಡಿಸಿದರು. ಸಮಾನತೆಯ ಹಕ್ಕಿಗಾಗಿ ಹೋರಾಡಿದರು ಎಂದು ಹೇಳಿದರು.

ಭೀಮರಾವ ಅಂಬೇಡ್ಕರರು ಜನ್ಮತಾಳಿದ್ದು ದೀನದಲಿತರ, ಸ್ತ್ರೀಯರ ಉದ್ಧಾರಕ್ಕಾಗಿ. ಶಾಲಾ ಹಂತದಲ್ಲಿಯೇ ಅವರಿಗೆ ಅಸ್ಪೃಶ್ಯತೆ ಕಾಡಿತು. ಹೋರಾಟವನ್ನೇ ಬದುಕನ್ನಾಗಿಸಿದ್ದರು. ಪ್ರಜಾಪ್ರಭುತ್ವ ಎಂದರೆ ಎಲ್ಲರೂ ಸಮನಾಗಿ ಬದುಕಬೇಕು, ಗುಲಾಮಗಿರಿ ತೊಡೆದು ಹಾಕಲು ಶಿಕ್ಷಣ ದೊಡ್ಡ ಅಸ್ತ್ರವನ್ನಾಗಿಸಿ ಎಂದಿದ್ದರು. ಅವರದು ಶಿಕ್ಷಣ, ಹೋರಾಟ ಮತ್ತು ಸಂಘಟನೆ ಮೂಲಮಂತ್ರ ಆಗಿತ್ತು ಎಂದರು.

ದಲಿತ ಮುಖಂಡರಾದ ಗುರುನಾಥ ಉಳ್ಳಿಕಾಶಿ, ಮಹೇಶ ದಾಬಡೆ, ಸಂಜೀವ ದುಮ್ಮಕನಾಳ, ಪಾಲಿಕೆ ಇಂಜಿನಿಯರ್ ವಿಜಯಕುಮಾರ, ಗಿರೀಶ ತಳವಾರ, ವೀರೇಶ ಸೊಬರದ, ಗುರುಸಿದ್ಧ ಅಂಗಡಿ, ಉಮೇಶ ಸವಣೂರ ಇತರರಿದ್ದರು.


ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
[illegible]

ಜಿ. ಕ್ರಿಮಿ. ಮಿಸ್ಸ್ಯು. ನಂಬರ: 12/2026
[illegible]

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿ: 1489/2025
ಅರ್ಜಿದಾರರು : ಶ್ರೀಮತಿ ಮೌನಮ್ಮ ಗಂಡ: ದಿ| ಕಮಲೇಶಪ್ಪ [illegible]
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು, ಜನನ [illegible]

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿ: 1590/2025
ಅರ್ಜಿದಾರರು: 1)ಶ್ರೀ ವೀರೇಶ ಕುಬುಮರಿ ತಂದೆ ರಾಮಣ್ಣ [illegible]
ವಿರುದ್ಧ
ಎದುರುದಾರರು:ಜನನ ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರು ತಹಶೀಲ್ದಾರರ ಕಾರ್ಯಾಲಯ ಕನಕಗಿರಿ [illegible]

ಕಿರುಸುದ್ದಿ



ಆರೆಂಜ್ ಕ್ಯಾಪ್: ಕ್ಲಾಸೆನ್ (ಹೈದರಾಬಾದ್) 224 ರನ್
ಪರ್ಪಲ್ ಕ್ಯಾಪ್: ಪ್ರಸಿದ್ಧ ಕೃಷ್ಣ (ಗುಜರಾತ್) 10 ವಿಕೆಟ್

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಆರ್‌ಸಿಬಿ	4	3	1	0	6	+1.148
ಹೈದರಾಬಾದ್	5	2	3	0	4	+0.322
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	4	2	2	0	4	-0.427
ಮುಂಬೈ	4	1	3	0	2	-0.772
ಚೆನ್ನೈ	4	1	3	0	2	-1.532
ಕೆಕೆಆರ್	4	0	3	1	1	-1.315

ಭಾರತಕ್ಕೆ ವಾಡಾ ಅಧ್ಯಕ್ಷ ಭೇಟಿ

ಹೊಸದಿಲ್ಲಿ: ವಿಶ್ವ ಡೋಪಿಂಗ್ ವಿರೋಧಿ ಸಂಸ್ಥೆ ವಿಶ್ವ ಆಂಟಿ-ಡೋಪಿಂಗ್ ಏಜೆನ್ಸಿ (ವಾಡಾ) ಅಧ್ಯಕ್ಷ ವಿಟೋಲ್ಡ್ ಬ್ಯಾಂಕಾ ದಿಲ್ಲಿಗೆ ಆಗಮಿಸಿದ್ದು, ಭಾರತದಲ್ಲಿ ಕ್ರೀಡಾ ಪಾರದರ್ಶಕತೆ ಕಾಪಾಡುವ ಬಗ್ಗೆ ಮಹತ್ವದ ಚರ್ಚೆಗಳನ್ನು ಆರಂಭಿಸಿದ್ದಾರೆ.ಅವರು ರಾಷ್ಟ್ರೀಯ ಆಂಟಿ-ಡೋಪಿಂಗ್ ಏಜೆನ್ಸಿ (ನಾಡಾ) ಅಧಿಕಾರಿಗಳೊಂದಿಗೆ ಸಭೆ ನಡೆಸಿ, ತುರ್ತು ಮತ್ತು ಗಂಭೀರ ಚರ್ಚೆಗಳನ್ನು ನಡೆಸಿದ್ದಾರೆ. ಈ ಚರ್ಚೆಯ ಮುಖ್ಯ ಉದ್ದೇಶ ಭಾರತದಲ್ಲಿ ಡೋಪಿಂಗ್ ವಿರುದ್ಧದ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಕ್ರೀಡೆಯ ಸತ್ಯನಿಷ್ಠೆಯನ್ನು ಕಾಪಾಡುವುದು.

ದೆಹಲಿಯಲ್ಲಿ ನಡೆಯಲಿರುವ ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕಾ ಅವರು ಭಾರತದಲ್ಲಿನ ಡೋಪಿಂಗ್ ಪ್ರಕರಣಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡುವ ನಿರೀಕ್ಷೆಯಿದೆ. ಸಾಮಾಜಿಕ ಜಾಲತಾಣದಲ್ಲಿ ಅವರು, ಭಾರತದ ನಾಡಾ ಮತ್ತು ರಾಷ್ಟ್ರೀಯ ಡೋಪ್ ಪರೀಕ್ಷಾ ಪ್ರಯೋಗಾಲಯಕ್ಕೆ ಭೇಟಿ ನೀಡಿ, ಡೋಪಿಂಗ್ ವಿರುದ್ಧದ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆ ಕುರಿತು ಚರ್ಚೆ ನಡೆಸಿದೆವು, ಎಂದು ತಿಳಿಸಿದ್ದಾರೆ.

ಕಾರ್ಸ್ ಬದಲಿಗೆ ಹೈದರಾಬಾದ್‌ಗೆ ಮಧುಶಂಕ



ಹೈದರಾಬಾದ್: ಇಂಗ್ಲೆಂಡ್ ವೇಗಿ ಬ್ರೈಡನ್ ಕಾರ್ಸ್ ಬದಲಿಗೆ ಶ್ರೀಲಂಕಾದ ಎಡಗೈ ವೇಗಿ ದಿಲ್ಶನ್ ಮಧುಶಂಕ ಆಡಲಿದ್ದಾರೆ ಎಂದು ಸನ್‌ರೈಸರ್ಸ್ ಹೈದರಾಬಾದ್ ಘೋಷಿಸಿದೆ. 75 ಲಕ್ಷ ರೂ. ಮೂಲ ಬೆಲೆಗೆ ಸೇರ್ಪಡೆಗೊಳ್ಳುತ್ತಿರುವ ಮಧುಶಂಕ, ಈ ಹಿಂದೆ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸಿದ ನಂತರ ಐಪಿಎಲ್‌ನಲ್ಲಿ ಎರಡನೇ ಬಾರಿಗೆ ಆಡಲಿದ್ದಾರೆ. ಎಡಗೈ ಬೌಲರ್ ಶ್ರೀಲಂಕಾವನ್ನು ಒಂದು ಟೆಸ್ಟ್, 28 ಏಕದಿನ ಮತ್ತು 19 ಟಿ20ಗಳಲ್ಲಿ ಪ್ರತಿನಿಧಿಸಿದ್ದಾರೆ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 70 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು 2026 ರ ಟಿ20 ವಿಶ್ವಕಪ್‌ಗಾಗಿ ಶ್ರೀಲಂಕಾ ತಂಡದ ಭಾಗವಾಗಿದ್ದರು, ನಾಲ್ಕು ಪಂದ್ಯಗಳಲ್ಲಿ ಐದು ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಮೆಡ್ವೆಡೆವ್‌ಗೆ ದಂಡ

ಹೊಸದಿಲ್ಲಿ: ಮಾಂಟೆ ಕಾರ್ಲೋ ಮಾಸ್ಟರ್ಸ್‌ನಲ್ಲಿ ರಷ್ಯಾದ ಟೆನಿಸ್ ಆಟಗಾರ ಡ್ಯಾನಿಲ್ ಮೆಡ್ವೆಡೆವ್ ಅಸಭ್ಯ ವರ್ತನೆಗಾಗಿ ದಂಡಕ್ಕೊಳಗಾಗಿದ್ದಾರೆ.

ಇಟಲಿಯ ಮತ್ತಿಯೋ ಬೆರೆಟ್ಟಿನಿ ವಿರುದ್ಧ ನಡೆದ ಪಂದ್ಯದಲ್ಲಿ 6-0, 6-0 ಅಂತರದಲ್ಲಿ ಸೋತ ಮೆಡ್ವೆಡೆವ್ ತಮ್ಮ ರಾಕೆಟ್ ಅನ್ನು ಏಳು ಬಾರಿ ಒಡೆದ ಕಾರಣಕ್ಕೆ 6,000 ಯೂರೋ (ಸುಮಾರು 7,000 ಡಾಲರ್) ದಂಡ ವಿಧಿಸಲಾಗಿದೆ ಎಂದು ಎಟಿಪಿ ಟೂರ್ ತಿಳಿಸಿದೆ. ಪ್ರಸ್ತುತ ವಿಶ್ವ ರ್‍ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಮೆಡ್ವೆಡೆವ್, ಪಂದ್ಯದಲ್ಲಿ ಎರಡನೇ ಸೆಟ್ ಆರಂಭದಲ್ಲೇ ಅಂಪೈರ್‌ನಿಂದ ಅಸಭ್ಯ ವರ್ತನೆಗಾಗಿ ಕೋಡ್ ಉಲ್ಲಂಘನೆ ಎಚ್ಚರಿಕೆ ಪಡೆದರು. ಇದಕ್ಕಿಂತ ಮೊದಲು ಅವರು ಆಸ್ಟ್ರೇಲಿಯನ್ ಓಪನ್ ಮತ್ತು ಯುಎಸ್ ಓಪನ್ ಪಂದ್ಯಗಳಲ್ಲಿ ತೋರಿದ ಆಕ್ರೋಶದ ವರ್ತನೆಗಾಗಿ ಕ್ರಮವಾಗಿ 76,000 ಮತ್ತು 42,500 ಡಾಲರ್ ದಂಡ ಕಟ್ಟಿದ್ದರು.

ಮೆಡ್ವೆಡೆವ್ ಈಗಾಗಲೇ ಹಿನ್ನಡೆಯಲ್ಲಿದ್ದಾಗ, ಎರಡನೇ ಸೆಟ್‌ನಲ್ಲಿ ತಮ್ಮ ಸರ್ವಿಸ್ ಗೇಮ್ ಕಳೆದುಕೊಂಡ ಬಳಿಕ ಕೋಪಗೊಂಡು ರಾಕೆಟ್ ಅನ್ನು ನೆಲಕ್ಕೆ ಬಡಿದು, ನಂತರ ಅದನ್ನು ಕೋರ್ಟ್ ಅಂಚಿನತ್ತ ಎಸೆದರು. ಬಳಿಕ ನಿರಂತರವಾಗಿ ರಾಕೆಟ್ ಒಡೆಯುವ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

ಇಂದು ಸೂಪರ್ ಜೇಂಟ್ಸ್-ಆರ್‌ಸಿಬಿ ಪಂದ್ಯ | ರಜತ್ ಪಡೆಯಲ್ಲಿ ವಿಶ್ವಾಸ | ಪುಟಿದೇಳುವ ತವಕದಲ್ಲಿ ಪಂತ್ ಪಡೆ

ಲಖನೌ ಸವಾಲಿಗೆ ಬೆಂಗಳೂರು ಸಿದ್ಧ

ಬೆಂಗಳೂರು: ತವರು ಪಂದ್ಯದಲ್ಲಿ ಲಖನೌ ಸವಾಲಿಗೆ ಸಿದ್ಧವಾಗಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತವರು ಪಂದ್ಯ ಜಯದ ವಿಶ್ವಾಸದಲ್ಲಿದೆ.

ಶುಕ್ರವಾರದಂದು ಬೆಂಗಳೂರಿನಲ್ಲಿ ಗೆಲುವಿನ ಲಯದಲ್ಲಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸೋಲು-ಗೆಲುವಿನ ಫಲ ಪಡೆದಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್‌ನ 23ನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಆರ್‌ಸಿಬಿಗೆ ತವರಲ್ಲಿ ಸೋಲದ ಬಲವಿದ್ದರೆ ಲಖನೌಗೆ ಗೆಲುವಿನ ತವಕವಿದೆ. ಪಾಟಿದಾರ್ ನಾಯಕತ್ವದಲ್ಲಿ ಹೊಸ ಮುಖ ಪಡೆದಿರುವ ಬೆಂಗಳೂರು ತಂಡವು ತವರಲ್ಲಿ ಪಾರುಪತ್ಯ ಸಾಧಿಸಿದೆ. ಅತಿಥಿ ಹೈದರಾಬಾದ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳನ್ನು ಈಗಾಗಲೇ ಸೋಲಿಸಿ ಲಖನೌ ಬೇಟೆಗೆ ಸಿದ್ಧವಾಗಿದೆ ಆರ್‌ಸಿಬಿ. ಇತ್ತ ಲಖನೌ ಕೂಡ ಎರಡು ಸತತ ಗೆಲುವಿನ ನಂತರ ಭಾರೀ ಹಿನ್ನಡೆ ಅನುಭವಿಸಿದೆ. ಕಳೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋತಿದೆ. ಪುಟಿದೇಳುವ ಹಂಬಲದಲ್ಲಿದೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್ ಹಾಗೂ ಚೆನ್ನೈ ತಂಡವನ್ನು ತವರಿನಲ್ಲಿ ಸೋಲಿಸಿರುವ ಬೆಂಗಳೂರು ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಏಕಪಕ್ಷೀಯವಾಗಿ ಗೆದ್ದಿದೆ. ರಾಜಸ್ಥಾನ ಪಂದ್ಯದ ನಂತರ ಪುಟಿದೆದ್ದಿರುವ ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಅನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಸಾಲ್ಟ್ ಅಬ್ಬರದ ಬ್ಯಾಟಿಂಗ್ ಲಯಕ್ಕೆ ಮರಳಿದ್ದು ತಂಡದ ಬಲವನ್ನು ಹೆಚ್ಚಿಸಿದ್ದಾರೆ. ವಿರಾಟ್ ಕೊಹ್ಲಿ ಮೊದಲ ಪಂದ್ಯದಿಂದಲೂ ಆಕ್ರಮಣಕಾರಿ ಮತ್ತು ಅಬ್ಬರದ ಬ್ಯಾಟಿಂಗ್ ಮಾಡುತ್ತಿರುವುದು ತಂಡಕ್ಕೆ ಆನೆ ಬಲ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ. ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಫಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ.

ಪುಟಿದೇಳುವ ತವಕದಲ್ಲಿ ಪಂತ್ ಪಡೆ: ಹೈದರಾಬಾದ್ ಹಾಗೂ ಕೆಕೆಆರ್ ವಿರುದ್ಧದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನದೊಂದಿಗೆ ಎರಡು ಸತತ ಗೆಲುವು ಸಾಧಿಸಿದ್ದ ಲಖನೌ ಸೂಪರ್ ಜೇಂಟ್ಸ್ ಗೆಲುವಿನ ತವಕದಲ್ಲಿದೆ. ಪ್ರಮುಖ ಬ್ಯಾಟರ್‌ಗಳಾದ ಪಂತ್, ಪೂರಣ್, ಮಾರ್ಕ್ರಂ ಮತ್ತು ಮಾರ್ಷ್ ಅಲ್ಪ ಲಯಕ್ಕಾಗಿ ಪರದಾಡುತ್ತಿರುವುದೇ ತಂಡಕ್ಕೆ ಚಿಂತೆಯಾಗಿದೆ. ಇನ್ನುಳಿದಂತೆ ಶಮಿ, ಪ್ರಿನ್ಸ್, ಆವೇಶ್ ಸೇರಿದಂತೆ ಸ್ಪಿನ್ನರ್‌ಗಳಾದ ಸಿದ್ಧಾರ್ಥ್, ದಿಗ್ವೇಶ್ ಮಿಂಚಲು ಸಜ್ಜಾಗಿದ್ದಾರೆ.



ಕೊಹ್ಲಿ ಫಿಟ್!



ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಪಾದದ ಗಾಯದಿಂದ ಹೊರ ಕೂತಿದ್ದ ವಿರಾಟ್ ಕೊಹ್ಲಿ ಮರಳಿ ಮೈದಾನಕ್ಕಿಳಿದಿದ್ದಾರೆ. ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಅಭ್ಯಾಸ ಅವಧಿಯಲ್ಲಿ ಬ್ಯಾಟಿಂಗ್ ಮಾಡಿದ ಅವರು, ಸ್ಫೋಟಕ ಹೊಡೆತಗಳನ್ನು ಬಾರಿಸಿ ಮಿಂಚಿದರು. ಆದಾಗ್ಯೂ ಮಾಧ್ಯಮಗೋಷ್ಠಿಯಲ್ಲಿ ಮಾತನಾಡುವಾಗ ರಸಿಖ್ ಆಡುವ ಬಗ್ಗೆ ಖಚಿತಪಡಿಸಲಿಲ್ಲ.

ಪ್ರತಿಯೊಬ್ಬರಿಗೂ ಅವರವರ ಪಾತ್ರ ತಿಳಿದಿದೆ: ರಸಿಖ್ ದಾರ್

ಎಲ್‌ಎಸ್‌ಜಿ ಪಂದ್ಯಕ್ಕೆ ನಾವು ಸಜ್ಜು




ಮುಂಬೈ ವಿರುದ್ಧದ ಗೆಲುವು ತಂಡಕ್ಕೆ ಮಹತ್ವದ ಜಯವಾಗಿತ್ತು. ನಾವು ಎಲ್ಲರೂ ಆತ್ಮವಿಶ್ವಾಸದಲ್ಲಿದ್ದೇವೆ. ತಂಡದ ಪ್ರತಿಯೊಬ್ಬ ಸದಸ್ಯರಿಗೂ ಅವರವರ ಪಾತ್ರ ಸ್ಪಷ್ಟವಾಗಿ ತಿಳಿದಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಲ್‌ರೌಂಡರ್ ರಸಿಖ್ ಸಲಾಮ್ ದಾರ್ ತಿಳಿಸಿದರು. ಮಂಗಳವಾರದಂದು ಪಂದ್ಯ ಪೂರ್ವ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈದಾನದಲ್ಲಿ ಆಡಲು ನಾವು ಕಾತರರಾಗಿದ್ದೇವೆ, ಎಂದು ಹೇಳಿದರು.

ಸ್ವಲ್ಪ ಸಮಯದ ಬಳಿಕ ಐಪಿಎಲ್ ಪಂದ್ಯ ಆಡುತ್ತಿದ್ದರೂ ಪ್ರಕ್ರಿಯೆ ಅದೇ ಆಗಿತ್ತು. ಕಳೆದ ಒಂದು ವರ್ಷದಲ್ಲಿ ನಾವು ಮಾಡಿದ ಅಭ್ಯಾಸವು ಪಂದ್ಯ ಪರಿಸ್ಥಿತಿಗಳಿಗೆ ಸಿದ್ಧಗೊಳಿಸಿದೆ. ಹಿಂದಿನ ಪಂದ್ಯದಲ್ಲಿ ನನ್ನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗಮನ ಹರಿಸಿದೆ, ಎಂದು ಹೇಳಿದರು. ದೇಶಿ ಕ್ರಿಕೆಟ್‌ನ ತಂಡ ಬದಲಾದ ಕುರಿತು ಮಾತನಾಡಿ ಎಲ್ಲೇ ಆಡಿದರೂ ನನಗೆ ಅಭ್ಯಾಸವಾಗಿದೆ. ಎಲ್ಲಾ ಕಡೆ ನನ್ನ ಗಮನ ಪ್ರದರ್ಶನದ ಮೇಲಿತ್ತು ಎಂದಿದ್ದಾರೆ. ಅನುಭವೀ ಬೌಲಿಂಗ್ ದಳದ ಭಾಗವಾಗಿರುವ ರಸಿಖ್ ಸಲಾಂ ದಾರ್, ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜೆಲ್ವುಡ್ ಮತ್ತು ಕೃಣಾಲ್ ಪಾಂಡ್ಯ ಅವರ ಜೊತೆ ಆಡುತ್ತಿದ್ದಾರೆ. ಅನುಭವದ ಬೌಲಿಂಗ್ ಪಡೆ ನಮ್ಮಲ್ಲಿದೆ. ಹೇಜಲ್ವುಡ್, ಭುವನೇಶ್ವರ್ ಕುಮಾರ್ ಮುಂತಾದ ಆಟಗಾರರನ್ನು ನಾವು ತಂಡದಲ್ಲಿ ಹೊಂದಿದ್ದೇವೆ, ಹೀಗಿರುವಾಗ ನನಗೆ ಸಹಕಾರ ಮತ್ತು ಬೆಂಬಲ ಸಿಗುತ್ತದೆ. ಅಷ್ಟಕ್ಕೂ ಮೀರಿ ಯಾವುದೇ ಆಟಗಾರನಿಗೂ ತನ್ನಿಂದ ತಂಡಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಮನವರಿಕೆ ಇರುತ್ತದೆ. ನಾನು ಯಾವಾಗಲೂ ತಂಡಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತೇನೆ. ಜಯದಲ್ಲಿ ದೊಡ್ಡ ಇಂಪ್ಯಾಕ್ಟ್ ಮಾಡಲು ಪ್ರಯತ್ನಿಸುತ್ತೇನೆ ಎಂದಿದ್ದಾರೆ.

ಪಿಚ್ ರಿಪೋರ್ಟ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.



ಬೆಂಗಳೂರು ತಂಡ

ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹ್ಯಾಜೆಲ್ವುಡ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಓಸ್ತ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾನ್.

ಲಖನೌ: ಮಿಚೆಲ್ ಮಾರ್ಷ್, ಏಡೆನ್ ಮಾರ್ಕ್ರಂ, ರಿಷಭ್ ಪಂತ್(ನಾಯಕ), ಆಯುಷ್ ಬಡೋನಿ, ನಿಕೋಲಸ್ ಪೂರಣ್, ಅಬ್ದುಲ್ ಸಮದ್, ಮುಕುಲ್ ಚೌಧರಿ, ಮೊಹಮ್ಮದ್ ಶಮಿ, ಆವೇಶ್ ಖಾನ್, ಮಣಿಮಾರನ್ ಸಿದ್ಧಾರ್ಥ್, ದಿಗ್ವೇಶ್ ಸಿಂಗ್ ರಾಠಿ, ಪ್ರಿನ್ಸ್ ಯಾದವ್, ಮ್ಯಾಥ್ಯೂ ಬ್ರೀಟ್ಜ್ಕೆ, ಷಹಬಾಜ್ ನೊಂಬ್ ಅಹ್ಮದ್, ಶಹಬಾಜ್ ಅಹ್ಮದ್ ಮೊಹ್ಸಿನ್ ಖಾನ್, ಅರ್ಜುನ್ ತೆಂಡೂಲ್ಕರ್, ಆಕಾಶ್ ಮಹಾರಾಜ್, ರಘುವಂಶಿ, ಅರ್ಶಿನ್ ಕುಲಕರ್ಣಿ, ನಮನ್ ತಿವಾರಿ, ಜಾರ್ಜ್ ಲಿಂಡೆ, ಇಂಗ್ಲಿಸ್

ರಾಜಸ್ಥಾನ ಓಟಕ್ಕೆ ಹೈದರಾಬಾದ್ ಬ್ರೇಕ್!

ಹೈದರಾಬಾದ್: ಗೆಲುವಿನ ನಾಗಾಲೋಟದೊಂದಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಪಾರುಪತ್ಯ ಸಾಧಿಸುತ್ತಿದ್ದ ರಾಜಸ್ಥಾನ ರಾಯಲ್ಸ್ ತಂಡ ಮೊದಲ ಸೋಲನುಭವಿಸಿದೆ.

ಬಂದ ತಂಡಗಳನ್ನೆಲ್ಲಾ ದಂಡಿಸುತ್ತಾ ಮೆರೆದಾಡುತ್ತಿದ್ದ ರಾಜಸ್ಥಾನಕ್ಕೆ ಕಿಶನ್ ಬಳಗ 57 ರನ್‌ಗಳ ಸೋಲಿನಾಘಾತ ನೀಡಿತು. ಹೊಸ ಬೌಲರ್‌ಗಳಾದ ಹುಸೈನ್ ಹಾಗೂ ಪ್ರಫುಲ್ ಹಿಂಗೆ ಅವರ ಕರಾರುವಾಕ್ ಬೌಲಿಂಗ್ ಪ್ರದರ್ಶನದೊಂದೊಂದಿಗೆ ಹೈದರಾಬಾದ್ ಪಾರಮ್ಯ ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುವಾಗ ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡದ ಮೊತ್ತ ಹಿಗ್ಗಿಸಿದರು. ಇದರೊಂದಿಗೆ ಹೈದರಾಬಾದ್ ಮೊದಲು ಬ್ಯಾಟಿಂಗ್ ಮಾಡಿ 216 ರನ್ ಗಳಿಸಿತು. ಗುರಿ ಬೆನ್ನತ್ತಿದ ರಾಜಸ್ಥಾನ 159 ರನ್ ಗಳಿಸುವಷ್ಟರಲ್ಲಿ ಸುಸ್ತಾಯಿತು. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ್ದ ಪ್ರಫುಲ್ ಹಿಂಗೆ ಮತ್ತು ಸಾಕಿಬ್ ಹುಸೈನ್ ಕ್ರಿಕೆಟ್ ಲೋಕದ ಗಮನ ಸೆಳೆದರು. ಮೊದಲಿನಿಂದಲೂ ರಾಜಸ್ಥಾನ ಪಡೆಗೆ ಕಾಡಿದ ಈ ಜೋಡಿ, ಬರೋಬ್ಬರಿ 8 ವಿಕೆಟ್‌ಗಳನ್ನು ಪಡೆಯಿತು. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್, ಧ್ರುವ್ ಜುರೇಲ್, ಹೆಟ್ಮೇರ್ ಹೀಗೆ ಎಲ್ಲಾ ಬ್ಯಾಟರ್‌ಗಳನ್ನೂ ಕಟ್ಟಿ ಹಾಕಿದ ಈ ಜೋಡಿ ಎರಡನೇ ಇನ್ನಿಂಗ್ಸ್‌ನ ಆರಂಭದಲ್ಲೇ ಪಂದ್ಯ ಗೆಲ್ಲಿಸಿತು. ಕಿಶನ್ 92 ರನ್‌ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಅನ್ನಿಸಿಕೊಂಡರು.

ಹಿಂಗೆ ಸ್ಟ್ರೈಕ್: ಬೂಮ್ರಾ, ಹ್ಯಾಜೆಲ್ವುಡ್, ಪಾಂಡ್ಯ, ಭುವನೇಶ್ವರ್ ಅಂತಹ ದೊಡ್ಡ ದೊಡ್ಡ ಬೌಲರ್‌ಗಳ ಬೆವರಿಳಿಸಿದ್ದ ವೈಭವ್ ಸೂರ್ಯವಂಶಿ ಮೊದಲನೇ ಬಾಲ್‌ನಲ್ಲೇ ವಿಕೆಟ್ ಕೊಟ್ಟರು. ದೇಶಿ ಕ್ರಿಕೆಟ್‌ನಲ್ಲಿ ಗಮನ ಸೆಳೆದಿದ್ದ ಪ್ರಫುಲ್ ಅವರ ವಿಕೆಟ್ ಪಡೆದರು. ಜೈಸ್ವಾಲ್ ಆಟ ಕೂಡ 1 ರನ್‌ಗೆ ನಿಂತಿತು. ಧ್ರುವ್ ಜುರೇಲ್, ಪ್ರಿಟೋರಿಯಸ್ ಆಟ ಕೂಡ ತಂಡ 2 ರನ್ ಆನ್ನುವಷ್ಟರಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ವೇಳೆ ಬಂದ ಜಡೇಜಾ ಹಾಗೂ ಫೆರಾರಿಯಾ ಜೊತೆಯಾಟ ನಿರ್ಮಿಸಿದರು. ಅತಿ ಹಿನ್ನಡೆ ಪಡೆಯುವ ಆತಂಕದಲ್ಲಿದ್ದ ರಾಜಸ್ಥಾನ ಇವರಿಬ್ಬರ ಆಸರೆ ಪಡೆಯಿತು. ಈ ಜೋಡಿ ಬರೋಬ್ಬರಿ 118 ರನ್‌ಗಳ ಜೊತೆಯಾಟ ನಿರ್ಮಿಸಿತು. ಜಡೇಜಾ 45, ಫೆರಾರಿಯಾ 69 ರನ್ ಗಳಿಸಿದರು. ರಾಜಸ್ಥಾನ ಸ್ಥಿರ ಸ್ಥಿತಿಗೆ ಬಂದಿತು. ಆಗ ಮತ್ತೊಬ್ಬ ದೇಶಿ ಬೌಲರ್ ಸಾಕಿಬ್ ಹುಸೈನ್ ಕರಾರುವಾಕ್ ಪ್ರದರ್ಶನ ನೀಡಿದರು. ಅವರೂ 4 ವಿಕೆಟ್ ಪಡೆದುಕೊಂಡರು. ತಂಡ 159 ರನ್‌ಗಳಿಗೆ ಆಲೌಟ್ ಆಯಿತು.



ಸಂಕ್ಷಿಪ್ತ ಸ್ಕೋರ್
ಹೈದರಾಬಾದ್: 20 ಓವರ್‌ಗಳಲ್ಲಿ 216/6 ಕಿಶನ್ 91, ಕ್ಲಾಸೆನ್ 40; ಆರ್ಚರ್ 37/2
ರಾಜಸ್ಥಾನ: 19 ಓವರ್‌ಗಳಲ್ಲಿ 159/10: ಫೆರಾರಿಯಾ 69, ಜಡೇಜಾ 45; ಹುಸೈನ್ 24/4, ಹಿಂಗೆ 34/4

- ಹಿಂಗೆ-ಹುಸೈನ್ ದಾಳಿಗೆ ತತ್ತರಿಸಿದ ರಾಯಲ್ಸ್ ಪಡೆ
- ಕಿಶನ್ ಪಡೆಗೆ ಭರ್ಜರಿ ಗೆಲುವು

ಮಿಂಚಿದ ಆಯುಷ್ ಮಾಥ್ರೆ | ಬ್ರೇವಿಸ್ ಅಬ್ಬರ | ಚೆನ್ನೈ 192/5

ಕೆಕೆಆರ್‌ಗೆ ಕಠಿಣ ಸವಾಲು

ಚೆನ್ನೈ: ಆಯುಷ್ ಮಾಥ್ರೆ, ಸಂಜು ಸ್ಯಾಮ್ಸನ್ ಹಾಗೂ ಡೆವಾಲ್ಡ್ ಬ್ರೇವಿಸ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತವರು ಪಂದ್ಯದಲ್ಲಿ ಕೆಕೆಆರ್‌ಗೆ ಕಠಿಣ ಗುರಿ ನೀಡಿತು. ಮೊದಲ ಗೆಲುವು ಸಾಧಿಸಿದ ನಂತರ ಆತ್ಮವಿಶ್ವಾಸದಲ್ಲಿದ್ದ ಚೆನ್ನೈ ಬ್ಯಾಟರ್‌ಗಳು ಮಿಂಚಿನ ಹೊಡೆತಗಳೊಂದಿಗೆ ಕೆಕೆಆರ್‌ಗೆ ಕಾಟ ನೀಡಿದರು.

ಆರಂಭದಲ್ಲಿ ಸಂಜು, ಆಯುಷ್, ಮಧ್ಯಮ ಕ್ರಮಾಂಕದಲ್ಲಿ ಬ್ರೇವಿಸ್ ಹಾಗೂ ಸರ್ಫರಾಜ್ ಅಬ್ಬರಿಸಿದರು. ಈ ನಾಲ್ವರ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 192 ರನ್ ಗಳಿಸಿದೆ. ಇತ್ತ ಕೆಕೆಆರ್ ಕಾರ್ತಿಕ್ ತ್ಯಾಗಿ, ಅಂಕುಲ್ ರಾಯ್ ಮತ್ತು ಸುನಿಲ್ ನರೈನ್ ಅವರ ಕರಾರುವಾಕ್ ದಾಳಿಯೊಂದಿಗೆ ಮಿಂಚಿ ದೊಡ್ಡ ಸ್ಕೋರ್‌ಗೆ ಕಡಿವಾಣ ಹಾಕಿತು.

ಆಯುಷ್ ಅಬ್ಬರ: ಬ್ಯಾಟಿಂಗ್ ಆಹ್ವಾನ ಪಡೆದಿದ್ದ ಚೆನ್ನೈ ಸೂಪರ್ ಕಿಂಗ್ಸ್ ಅಬ್ಬರದ ಆರಂಭ ಪಡೆಯಿತು. ಮೊದಲನೇ ಮೂರು ಬಾಲ್‌ಗಳಲ್ಲಿ ಸತತ ಬೌಂಡರಿಗಳನ್ನು ಬಾರಿಸಿದ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ಗೆ ಅಡಿಪಾಯ ಹಾಕಿಕೊಟ್ಟರು. ಆದಾಗ್ಯೂ ಗಾಯಕ್ವಾಡ್ ಮತ್ತೊಮ್ಮೆ ಕೈಕೊಟ್ಟು 7 ರನ್‌ಗೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾಥ್ರೆ ಅಬ್ಬರದ ಬ್ಯಾಟಿಂಗ್ ಮಾಡಿದರು. ಕೆಕೆಆರ್ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದ ಅವರು ಪಂದ್ಯದ ಗತಿಯನ್ನೇ ಬದಲಾಯಿಸಿಬಿಟ್ಟರು. ಸ್ಫೋಟಕ ಬೌಂಡರಿ ಮತ್ತು ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಅವರು 17 ಬಾಲ್‌ಗಳಲ್ಲಿ 38 ರನ್ ಚಚ್ಚಿ ಆರೋರಾಗೆ ಕ್ಯಾಚ್ ಆದರು. ಚೆನ್ನೈ ಪವರ್ ಪ್ಲೇನಲ್ಲಿ ಬರೋಬ್ಬರಿ 72 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಂಜು ಸ್ಯಾಮ್ಸನ್ ತಮ್ಮ ಸ್ಟ್ರೈಕ್ ರೇಟ್ ಇಳಿಸಿಕೊಂಡರು. ಡೇವಾಲ್ಡ್ ಬ್ರೇವಿಸ್ ಕೂಡ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಮುಲಾಜಿಗೆಬಿದ್ದರು. ಸಿಂಗಲ್‌ಗಳ ಮೂಲಕವೇ ಇಬ್ಬರು ಇನ್ನಿಂಗ್ಸ್ ಕಟ್ಟತೊಡಗಿದರು. ಇನ್ನೇನು ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾಗುತ್ತಿದ್ದ ಸಂಜು ಸ್ಯಾಮ್ಸನ್ 32 ಬಾಲ್‌ಗಳಲ್ಲಿ 48 ರನ್ ಗಳಿಸಿದ್ದಾಗ ಬೋಲ್ಡ್ ಆದರು. ಸರ್ಫರಾಜ್ ಖಾನ್ ಹಾಗೂ ಬ್ರೇವಿಸ್ ಕೆಲಕಾಲ ನಿಧಾನ ಬ್ಯಾಟಿಂಗ್ ಮಾಡಿದರು. ಚೆನ್ನೈ ಮಧ್ಯಮ ಓವರ್‌ಗಳಲ್ಲಿ 90 ರನ್ ಮಾತ್ರ ಗಳಿಸಿತು.



ಅಂತಿಮ ಓವರ್‌ಗಳಲ್ಲಿ ಕೆಕೆಆರ್ ಕಮಾಲ್: ಕಾರ್ತಿಕ್ ತ್ಯಾಗಿ, ಸುನಿಲ್ ನರೈನ್ ಮತ್ತು ವೈಭವ್ ಅವರ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಮಿಂಚಿದ ಕೆಕೆಆರ್ ಚೆನ್ನೈ ತಂಡಕ್ಕೆ ಕಡಿವಾಣ ಹಾಕಿತು. ಸ್ಲಾಗ್ ಓವರ್‌ಗಳಲ್ಲಿ ಚೆನ್ನೈನ ದೊಡ್ಡ ದೊಡ್ಡ ಬ್ಯಾಟರ್‌ಗಳು ಯಾರ್ಕರ್‌ಗಳಿಗೆ ತತ್ತರಿಸಿದರು. ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಿದ್ದ ಬ್ರೇವಿಸ್ 41 ರನ್‌ಗಳಿಗೆ ಔಟಾದರು. ಸರ್ಫರಾಜ್ ಖಾನ್ ಕೂಡ 23 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಅಂತಿಮ ಓವರ್‌ಗಳಲ್ಲಿ ಶಿವಂ ದುಬೆ ಕೂಡ ದೊಡ್ಡ ಹೊಡೆತಗಳಿಗೆ ಪ್ರಯತ್ನಿಸಿ ವಿಫಲರಾದರು. 16-20ನೇ ಓವರ್‌ವರೆಗೆ ಚೆನ್ನೈ 30 ರನ್ ಮಾತ್ರ ಗಳಿಸಿತು. ಒಟ್ಟು 5 ವಿಕೆಟ್ ನಷ್ಟಕ್ಕೆ 192 ರನ್‌ಗಳಿಸಿ ದೊಡ್ಡ ಸ್ಕೋರ್ ನಿರ್ಮಿಸಿತು.

ಬ್ಯಾಡ್ಮಿಂಟನ್: ಆಯುಷ್ 6 ಸ್ಥಾನ ಜಿಗಿತ

ಹೊಸದಿಲ್ಲಿ: ಕಳೆದ ವಾರ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್‌ನಲ್ಲಿ ಯಶಸ್ವಿ ಓಟದ ನಂತರ ಮಂಗಳವಾರ ಬಿಡುಗಡೆಯಾದ ಇತ್ತೀಚಿನ ಬಿಡಬ್ಲ್ಯೂಎಫ್ ಶ್ರೇಯಾಂಕದಲ್ಲಿ ಭಾರತೀಯ ಶಟ್ಲರ್ ಆಯುಷ್ ಶೆಟ್ಟಿ ಏಳು ಸ್ಥಾನಗಳ ಏರಿಕೆ ಕಂಡು 18 ನೇ ಸ್ಥಾನಕ್ಕೆ ತಲುಪಿದ್ದಾರೆ. ಕಳೆದ ವರ್ಷ ಯುಎಸ್ ಓಪನ್ ಪಂದ್ಯಾವಳಿ ಗೆದ್ದಿದ್ದ ಅವರು, ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಶೆಟ್ಟಿ ಬೆಳ್ಳಿ ಪದಕದೊಂದಿಗೆ ಕೊನೆಗೊಂಡರು ಮತ್ತು 1965 ರಲ್ಲಿ ಚಿನ್ನ ಗೆದ್ದ ದಿನೇಶ್ ಖನ್ನಾ ನಂತರ ಟೂರ್ನಮೆಂಟ್‌ನ ಫೈನಲ್‌ನಲ್ಲಿ ಆಡಿದ ಎರಡನೇ ಭಾರತೀಯ ಪುರುಷರ ಸಿಂಗಲ್ಸ್ ಆಟಗಾರರಾದರು. ಲಕ್ಷ್ಯ ಸೇನ್ ಅಗ್ರ 20 ರಲ್ಲಿರುವ ಏಕೈಕ ಭಾರತೀಯರಾಗಿದ್ದು, ಒಂದು ಸ್ಥಾನ ಬಡ್ತಿ ಪಡೆದು ವಿಶ್ವದ 11 ನೇ ಸ್ಥಾನಕ್ಕೆ ತಲುಪಿದ್ದಾರೆ. ನಿಂಗ್ಬೋದಲ್ಲಿ ಚಿನ್ನ ಗೆದ್ದ ಚೀನಾದ ಶಿ ಯು ಕಿ ಒಂದು ಸ್ಥಾನ ಬಡ್ತಿ ಪಡೆದು ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೆ ತಲುಪಿದ್ದಾರೆ



ಸಂಜು ಸ್ಯಾಮ್ಸನ್‌ಗೆ ತಿಂಗಳ ಆಟಗಾರ ಗರಿ


ಮುಂಬೈ: ಭಾರತದ ಆರಂಭಿಕ ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಮಾರ್ಚ್ ತಿಂಗಳ ಐಸಿಸಿ ಪುರುಷರ ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಟಿ20 ವಿಶ್ವಕಪ್ ಜಯದಲ್ಲಿ ಮಹತ್ವದ ಪಾತ್ರವಹಿಸಿದ ಅವರಿಗೆ ಈ ಗೌರವ ಲಭಿಸಿದೆ. ಟೂರ್ನಿಯ ಆರಂಭಿಕ ಹಂತದಲ್ಲಿ ಹೆಚ್ಚು ಅವಕಾಶ ಸಿಗದಿದ್ದರೂ, ಪ್ರಮುಖ ಪಂದ್ಯಗಳಲ್ಲಿ ಸ್ಯಾಮ್ಸನ್ ಅತ್ಯುತ್ತಮ ಪ್ರದರ್ಶನ ನೀಡಿ ಭಾರತದ ಪ್ರಶಸ್ತಿ ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಪ್ರಶಸ್ತಿಯೊಂದಿಗೆ ಕಳೆದ ಐದು ತಿಂಗಳ ಅವಧಿಯಲ್ಲಿ ವಿಭಿನ್ನ ದೇಶಗಳ ಆಟಗಾರರು ಈ ಗೌರವವನ್ನು ಗೆಲ್ಲುವ ಸರಣಿಯೂ ಮುಂದುವರಿದಿದೆ. ದಕ್ಷಿಣ ಆಫ್ರಿಕಾದ ಸೈಮನ್ ಹಾರ್ಮರ್, ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್, ನ್ಯೂಜಿಲ್ಯಾಂಡ್‌ನ ಡ್ಯಾರಿಲ್ ಮಿಚೆಲ್ ಹಾಗೂ ಪಾಕಿಸ್ತಾನದ ಸಾಹಿಬ್‌ಜಾದಾ ಫರ್ಹಾನ್ ಕೂಡ ಈ ಅವಧಿಯಲ್ಲಿ ಪ್ರಶಸ್ತಿ ಪಡೆದಿದ್ದರು.

ವಿಶೇಷ ಅನುಭವ: ಸಂಜು: ಪ್ರಶಸ್ತಿ ಬಗ್ಗೆ ಮಾತನಾಡಿದ ಸ್ಯಾಮ್ಸನ್, ಐಸಿಸಿ ಪ್ರಶಸ್ತಿ ಗೆಲ್ಲುವುದು ನನಗೆ ವಿಶೇಷ ಅನುಭವ. ಟಿ20 ವಿಶ್ವಕಪ್‌ನಲ್ಲಿ ಭಾರತದ ಜಯದಲ್ಲಿ ಭಾಗಿಯಾಗುವುದು ನನ್ನ ಕನಸಿನ ಕ್ಷಣವಾಗಿತ್ತು, ಎಂದು ಹೇಳಿದರು. ಆರಂಭದಲ್ಲಿ ಸ್ಥಿರ ಸ್ಥಾನ ಇರದಿದ್ದರೂ, ಸೂಪರ್ ಎಂಟು ಹಂತದಲ್ಲಿ ಅವಕಾಶ ಪಡೆದ ಅವರು ನಂತರ ಅದನ್ನು ಸದುಪಯೋಗಪಡಿಸಿಕೊಂಡರು. ಜಿಂಬಾಬ್ವೆ ವಿರುದ್ಧ 24 ರನ್‌ಗಳಿಂದ ಆರಂಭಿಸಿದ ಅವರು, ವೆಸ್ಟ್ ಇಂಡೀಸ್ ವಿರುದ್ಧ 97 ಅಜೇಯ ರನ್ ಗಳಿಸಿ ಸೆಮಿಫೈನಲ್‌ಗೆ ತಂಡವನ್ನು ಕೊಂಡೊಯ್ದರು. ಇಂಗ್ಲೆಂಡ್ ವಿರುದ್ಧ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ 89 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದ ಅವರು, ತಂಡವನ್ನು 253/7ಕ್ಕೆ ಕೊಂಡೊಯ್ದರು. ಈ ಗುರಿ ಬೆನ್ನಟ್ಟಿದ ಇಂಗ್ಲೆಂಡ್ 7 ರನ್‌ಗಳಿಂದ ಸೋಲನುಭವಿಸಿತು. ಫೈನಲ್‌ನಲ್ಲೂ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5954

ಎಡದಿಂದ ಬಲಕ್ಕೆ
1.ಅರದ ನಡುವೆ ಎಲ್ಲೆಯಿಲ್ಲದ್ದಿದೆ (3)
3.ಶರ ಹಿಡಿದು ಬಂದ ವಾಣಿಗೆ ಕಂಡ ಪಾರ್ವತಿ (3)
5.ಆದಿಲ್-ಶಾಹಿ ಸುಲ್ತಾನರ ರಾಜ್ಯ (5)
6.ಬೆಳದಿಂಗಳಿನಂಥಹ ನಗೆ ತಿರುಗಿದೆ (4)
7.ಇಡೀ ಲೋಕಕ್ಕೆ ಸಂಬಂಧಿಸಿದ್ದು (4)
9.ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
11.ವಾಲ್ಮೀಕಿಯ ಮಹಾನ್ ಗ್ರಂಥದ ನಾಯಕ-ನಾಯಕಿ (4)
14.ರಾಕ್ಷಸರಿಗೆ ಮೃತ್ಯುದೇವತೆಯಂತಿರುವ ವಿಷ್ಣು (5)
16.ವರನ ವಿಸ್ತೃತವಾದ ಹೇಳಿಕೆ (3)
17.ಕುದುರೆಯ ಜೀನಿನ ಬಳೆಯಿದು (3)

ಮೇಲಿನಿಂದ ಕೆಳಕ್ಕೆ
1.ಸಂಸ್ಕೃತ ಮೂಲದ ಕಣ್ಣು ಎಂಬ ಪದ (2)
2. ಸೂರ್ಯ-ಶಶಿ ಕೂಡಿ ಚಲನಚಿತ್ರವಾದರು (4)
3. ಅತಿಯಾದ ರಭಸದಿಂದ ಸಾಗುವುದು (4)
4. ಮುದ್ದಾದ ಶುಕ ತಲೆಕೆಳಗಾಗಿದೆ (2)
6. ನೀರಸವಲ್ಲದ್ದು-ಆನಂದದಾಯಕವಾದುದು (3)
8. ರವಿ ರಚಿಸಿದ ಕಾವ್ಯ (3)
10. ವ್ಯಾಪಾರ ಮುಂತಾದವುಗಳಲ್ಲಿ ಭಾಗಸ್ಥ (4)
12. ಹೂವಿನಿಂದ ಜೇನು ಸಂಗ್ರಹಿಸುವ ಜೇನ್ನೊಣ (4)
13. ಬಾ ಎಂದು ಕರೆದು ರವಿಗೆ ತೋರಿಸಿದ ಕೂಪ (2)
15. ತಣ್ಣಗೆ ಇರುವ ಸ್ಥಿತಿ-ಶೀತದಿಂದ ಕೂಡಿದ್ದು (2)

5953 ಉತ್ತರ

ಎಡದಿಂದ ಬಲಕ್ಕೆ:
1.ಕೇಸರಿಕೇತನ
5.ರಸಾಯನ 7.ಕೈದಿ
8.ಚಕ್ರಧರ 9.ನಾಗಲೋಕ
10.ತ್ರೈಮಾಸಿಕ
12.ಪ್ರತಿಹಾರ
14.ರಾಸು 15.ಮದಕರಿ
17.ಕೋದಂಡಪಂಡಿತ

ಮೇಲಿನಿಂದ ಕೆಳಕ್ಕೆ :
2.ಸತ್ಯಸಂಧ 3.ನರ
4.ತಾನ 6.ಸಾರಂಗ
7.ಕೈಚಳಕ 9.ನಾಡರಸು
11.ಸಿಡುಕ 13.ತಿಳಿಗೇಡಿ
15.ಮದ್ದು 16.ಕೋರಿ

ಕಿರುಸುದ್ದಿ

ಯತ್ತಿನಹಳ್ಳಿಗೆ ಶ್ರೀಗಳು ಇಂದು

◆**ಲಕ್ಷ್ಮೇಶ್ವರ:** ತಾಲೂಕಿನ ಯತ್ತಿನಹಳ್ಳಿ ಗ್ರಾಮದಕ್ಕೆ ಶಿರಹಟ್ಟಿಯ ಫಕ್ಕೀರೇಶ್ವರ ಸಂಸ್ಥಾನ ಮಠದ 13ನೇ ಪಟ್ಟಾಧ್ಯಕ್ಷ ಫಕ್ಕೀರ ಸಿದ್ಧರಾಮೇಶ್ವರ ಶ್ರೀಗಳು ಏ.15, 16ರಂದು ಗ್ರಾಮದ ಪ್ರತಿ ಮನೆಗೆ ಬೇಟಿ ಮಾಡಿ ಭಕ್ತರು ಸಮರ್ಪಿಸುವ ಕಾಣಿಕೆಯನ್ನು ಸ್ವೀಕರಿಸಿ ಆಶೀರ್ವದಿಸುವರು. ಈ ಪವಿತ್ರ ಕಾರ್ಯದಲ್ಲಿ ಎಲ್ಲ ಭಕ್ತಾದಿಗಳು ಭಾಗವಹಿಸಿ ಶ್ರೀಗಳಿಂದ ಆಶೀರ್ವಾದ ಪಡೆಯಲು ಯತ್ತಿನಹಳ್ಳಿ ಗ್ರಾಮದ ಭಕ್ತರು ಕೋರಿಕೆಯನ್ನು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಸ್ತಕ ಬಿಡುಗಡೆ ಇಂದು

◆**ಲಕ್ಷ್ಮೇಶ್ವರ:** ಕರ್ನಾಟಕ ಸರ್ಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈಶ್ವರ ಮೆಡ್ಲೇರಿ ಅವರು ಬರೆದ ಸಾಮರಸ್ಯದ ಸುಧಾಕರ ಶಿರಹಟ್ಟಿ ಫಕ್ಕೀರೇಶ್ವರ ಎಂಬ ಪುಸ್ತಕವನ್ನು ಏ.15 ರಂದು ಬೆಂಗಳೂರಿನ ಬ್ಯಾಂಕ್ವೆಟ್ ಹಾಲ್ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಂದ ಉದ್ಘಾಟನೆಗೊಳ್ಳಲಿದೆ. ಇದಕ್ಕೆ ತಾಲೂಕಿನ ಎಲ್ಲಾ ಸಾಹಿತ್ಯ ಅಭಿಮಾನಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರ ಪ್ರವಾಸ ಇಂದು

◆**ಗದಗ :** ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದಾರೆ. ಏ.15 ರಂದು ಡಾ.ಮಾನಸ ಹಾವೇರಿಯಿಂದ ರಸ್ತೆ ಮಾರ್ಗವಾಗಿ ಬೆಳಗ್ಗೆ 10.30ಕ್ಕೆ ಗದುಗಿಗೆ ಆಗಮಿಸುವರು. ನಂತರ ಮನೆಗೊಂದು ಗ್ರಂಥಾಲಯ ಯೋಜನೆಯಡಿ ಜಿಲ್ಲೆಯ ನರೇಗಲ್, ಗಜೇಂದ್ರಗಡ ತಾಲ್ಲೂಕಿನಲ್ಲಿ ಒಟ್ಟು 15 ಮನೆಗಳಲ್ಲಿ ಏರ್ಪಡಿಸಿರುವ ಗ್ರಂಥಾಲಯಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ರಸ್ತೆ ಮಾರ್ಗವಾಗಿ ಸಂಜೆ 4.30ಕ್ಕೆ ಗದಗ ಜಿಲ್ಲೆಯಿಂದ ಯಾದಗಿರಿ ಜಿಲ್ಲೆಗೆ ಪ್ರಯಾಣಿಸುವರು ಎಂದು ಪ್ರಕಟಣೆ ತಿಳಿಸಿದೆ.

ರಕ್ತದಾನ ಶಿಬಿರ ನಾಳೆ

◆**ನರಗುಂದ:** ಪಟ್ಟಣದ ಸುಕ್ಷೇತ್ರ ವೀರಕ್ತ ಮಠದಲ್ಲಿ ಚನ್ನಬಸವ ಶ್ರೀಗಳ 157ನೇ ಸ್ಮರಣೋತ್ಸವ ಕಾರ್ಯಕ್ರಮ ಏ.16ರಿಂದ 19ರವರೆಗೆ ಜರುಗಲಿದೆ. ಏ.16ಬೆಳಗ್ಗೆ 9ರಿಂದ ಸಂಜೆ 5ವರೆಗೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ರಕ್ತದಾನ ಮಾಡಬೇಕೆಂದು ಶಿವಕುಮಾರ ಶ್ರೀಗಳು ತಿಳಿಸಿದರು.

ಕಾಂಗ್ರೆಸ್ ಪ್ರಚಾರ ಸಮಿತಿ ಪದಾಧಿಕಾರಿಗಳ ಪದಗ್ರಹಣ

◆**ಗದಗ:** ನಗರದ ಕಾಟನ್ ಸೇಲ್ ಸೊಸೈಟಿ ಆವರಣದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ಏ.19ರಂದು ಬೆಳಗ್ಗೆ 11ಕ್ಕೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಪದಾಧಿಕಾರಿಗಳ ಪದ ಗ್ರಹಣ ಹಾಗೂ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯಕುಮಾರ ಸೊರಕೆ ಹಾಗೂ



ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ, ಖನಿಜ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್. ಪಾಟೀಲ ಪದಗ್ರಹಣ ಸಮಾರಂಭ ಹಾಗೂ ತರಬೇತಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅಧ್ಯಕ್ಷತೆ ವಹಿಸುವರು. ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ, ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷ ಮುನೀರ, ಮುಖ್ಯ ಸಂಯೋಜಕ ಶಂಭು ಶೆಟ್ಟಿ, ಸಂಯೋಜಕ ಸುರೇಖಾ ಪೂಜಾರ, ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ವಿ.ಬಿ. ಸೋಮನಕಟ್ಟಿಮಠ, ಮಾಜಿ ಶಾಸಕ ಬಿ.ಆರ್. ಯಾವಗಲ್ ಭಾಗವಹಿಸುವರು ಎಂದರು.

ನಿಧನ ಸುದ್ದಿ

ಫಕೀರಶೆಟ್ಟಿ ಪಸಾರದ



◆ **ನರೇಗಲ್ಲ :** ನರೇಗಲ್ಲ ಸಮೀಪದ ಅಬ್ಬಿಗೇರಿ ಗ್ರಾಮದ ನಿವಾಸಿ ಫಕೀರಶೆಟ್ಟಿ ವೀರಪ್ಪ ಪಸಾರದ(52) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಂಕಿಬಾಯಿ ಜೈನ



◆ **ಲಕ್ಷ್ಮೇಶ್ವರ:** ಪಟ್ಟಣದ ಮಾಣಿಕ್ ಬ್ರದರ್ಸ್ ಬಟ್ಟೆ ವ್ಯಾಪಾರಸ್ಥರ ಮನೆತನದ ಹಿರಿಯ ಜೀವ ಪಂಕಿಬಾಯಿ ಪನ್ನಾಲಾಲ್ ಜೈನ(93) ನಿಧನರಾದರು. ಮೃತರಿಗೆ ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಳಗವನ್ನು ಅಗಲಿದರು. ಲಕ್ಷ್ಮೇಶ್ವರ ಜೈನ ಸಮಾಜದವರು ಸಂತಾಪ ವ್ಯಕ್ತಪಡಿಸಿದರು.



ನರಗುಂದ: ಜೈ ಭೀಮ ಆಟೋ ಚಾಲಕರ ಹಾಗೂ ಮಾಲಕರ ಸಂಘದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ನಿಮಿತ್ತ ನೂತನ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಜೈ ಭೀಮ ಆಟೋ ಚಾಲಕರ ಸಂಘದ ಅಧ್ಯಕ್ಷ ಚನ್ನಬಸಪ್ಪ ಹೊಸರನ್ನವರ, ಉಪಾಧ್ಯಕ್ಷ ಮಹಾದೇವ ಆತೇದಾರ, ದಾವಲಸಾಬ ಗಸ್ತಿ, ಸಲೀಂ ಕರಮಣಿ, ನಬಿಸಾಬ ಕಿಲ್ಲೇದಾರ, ಸಾಹೇಬ ಶೇಕ, ಮಲ್ಲಪ್ಪ ಯಾದವಾಡ, ದೇವೇಂದ್ರಪ್ಪ ಬಳ್ಳಿ, ಶೇಖಪ್ಪ ಕಟ್ಟಿಮನಿ, ಯಲ್ಲಪ್ಪ ನಾಯ್ಕರ ಅಂದಾನಯ್ಯ ಹಿರೇಮಠ, ಬಾಬು ಎಲಿಗಾರ, ಸಮೀರ ಬೋಲೇಖಾನ, ರಸೂಲಸಾಬ ಮುಲ್ಲಾ ಇದ್ದರು.

ಬೇಡಿಕೆಗೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ಇಂದು

◆**ಗದಗ:** 15 ವರ್ಷಗಳಿಂದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಈಗ ಸರ್ಕಾರ 900ಕ್ಕೂ ಹೆಚ್ಚು ಹುದ್ದೆ ಭರ್ತಿ ಮಾಡಲು ಮುಂದಾಗಿದೆ. ಇದರಿಂದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ಬೀದಿ ಬರಲಿದ್ದು, ಇದನ್ನು ಖಂಡಿಸಿ ಏ.15ರಂದು ಬೆಂಗಳೂರಿನ ಫ್ರೀಡ್‌ಂ ಪಾರ್ಕ್‌ನಲ್ಲಿ ಒಂದು ದಿನದ ಧರಣಿ ಸತ್ಯಾಗ್ರಹ ಮಾಡಲಿದ್ದೇವೆ ಎಂದು ಅಖಿಲ ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಯಶವಂತ್ ಆರೇರ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷವು ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುತ್ತೇವೆ ಅಂತ ಹೇಳಿತ್ತು. ಈಗ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಅತಿಥಿ ಉಪನ್ಯಾಸಕ ಶಿಕ್ಷಕರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ. ಸಿಎಂ ಸಿದ್ದರಾಮಯ್ಯ ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಅತಿಥಿ ಉಪನ್ಯಾಸಕರನ್ನು ಭರ್ತಿ ಮಾಡುವಂತೆ ಆಗ್ರಹಿಸಿದ್ದರು. ಈಗ ಏಕಾಏಕಿ ಹುದ್ದೆ ಭರ್ತಿಗೆ ಇಳಿದದ್ದು ಸರಿಯಲ್ಲ, ಮೊದಲು ನಮಗೆ ಸೇವಾ ಭದ್ರತೆ ನೀಡಿ ಆಮೇಲೆ ಭರ್ತಿ ಮಾಡಿಕೊಳ್ಳಲಿ. ಇಲ್ಲದಿದ್ದರೇ ಕಾನೂನು ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಅನುಭವ ಸಂಪನ್ನ ಅತಿಥಿ ಉಪನ್ಯಾಸಕರಿಗೆ ಹೊಸ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು. ಕನ್ನಡ ವಿಭಾಗದ ಅತಿಥಿ ಉಪನ್ಯಾಸಕರಿಗೆ 10 ತಿಂಗಳ ಪೂರ್ಣ ಪ್ರಮಾಣದ ವೇತನ, ಇತ್ಯಾದಿ ನ್ಯಾಯಸಮ್ಮತ ಬೇಡಿಕೆಗಳಿಗೆ ಸರ್ಕಾರದಿಂದ ಸ್ಪಂದನೆ ದೊರೆಯುತ್ತಿಲ್ಲ, ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಹಿತಾಸಕ್ತಿಗೆ ಯಾವುದೇ ರಕ್ಷಣೆ ನೀಡದೆ. ನೇರ ನೇಮಕಾತಿಗೆ ಮುಂದಾಗುತ್ತಿರುವುದು ತೀವ್ರ ಆತಂಕ ಉಂಟುಮಾಡಿದೆ ಅಂತ ಬೇಸರ ವ್ಯಕ್ತಪಡಿಸಿದರು.



ಗಜೇಂದ್ರಗಡ: ತಾಲೂಕಿನಾದ್ಯಂತ ಡಾ.ಬಿ.ಆರ್.ಅಂಬೇಡ್ಕರ 135ನೇ ಹಾಗೂ ಡಾ.ಬಾಬು ಜಗಜೀವನರಾಮ್ 119 ನೇ ಜಯಂತಯೋತ್ಸವ ತಾಲೂಕಿನ ಎಲ್ಲಾ ಸರ್ಕಾರಿ ಕಛೇರಿ, ಶಾಲಾ ಕಾಲೇಜುಗಳಲ್ಲಿ ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಅಂಬೇಡ್ಕರ್, ಬಾಬೂಜಿ ಜಯಂತಿ | ಶಾಸಕ ಸಂಕನೂರ ಅಭಿಮತ

ಅಂಬೇಡ್ಕರ್, ಬಾಬೂಜಿ ಕೊಡುಗೆ ಅಪಾರ

◆**ಗದಗ:** ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬೂಜಿ ಅವರ ಜೀವನದ ತತ್ವ- ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಬಡತನವು ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಇವರ ಜೀವನವೇ ಸ್ಪಷ್ಟ ಪಡಿಸುತ್ತದೆ ಎಂದು ಶಾಸಕ ಎಸ್.ವಿ.ಸಂಕನೂರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಆಶ್ರಯದಲ್ಲಿ ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ ಹಾಗೂ ಡಾ.ಬಾಬು ಜಗಜೀವನ ರಾಮ್ 119ನೇ ಜಯಂತಿ ಉದ್ಘಾಟಿಸಿ ಮಾತನಾಡಿ, ಅಂಬೇಡ್ಕರ್‌ರು ಬಡವರ ಹಾಗೂ ಹಿಂದುಳಿದ ವರ್ಗಗಳ ಉನ್ನತಿಗಾಗಿ ತಮ್ಮ ಸಂಪೂರ್ಣ ಜೀವನವನ್ನು ಅರ್ಪಿಸಿದ್ದು, ಸಮಾನತೆ ಆಧಾರಿತ ಸಮಾಜ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಭಾರತೀಯ ಸಂವಿಧಾನವನ್ನು ರೂಪಿಸಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಿದ ಮಹತ್ವದ ವ್ಯಕ್ತಿತ್ವ ಅವರದ್ದು ಎಂದು ಪ್ರಶಂಸಿಸಿದರು.

ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರು, ರಾಷ್ಟ್ರ ಪ್ರಶಸ್ತಿ ವಿಜೇತರು ಹಾಗೂ ಜಿಲ್ಲಾ ಸಫಾಯಿ ಕರ್ಮಚಾರಿ ಸಮಿತಿ ಸದಸ್ಯ ಎಸ್.ಎನ್. ಬಳ್ಳಾರಿ ಅವರು ಉಪನ್ಯಾಸ ನೀಡುತ್ತಾ, ಡಾ. ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರು ಬಾಲ್ಯದಿಂದಲೇ ಅಸ್ಪೃಶ್ಯತೆ ವಿರುದ್ಧ ಅಹೋರಾಟ ನಡೆಸಿದ ಮಹಾನ್ ವ್ಯಕ್ತಿ ಎಂದು ಹೇಳಿದರು.

ತಮ್ಮ ಬಾಲ್ಯದನೋವು ಮತ್ತು ಅನುಭವಗಳನ್ನು ಸಮಾಜದ ಇತರರು ಅನುಭವಿಸಬಾರದು ಎಂಬ



ಭಾವಚಿತ್ರ ಮೆರವಣಿಗೆ

ಡಾ.ಅಂಬೇಡ್ಕರ್ ಹಾಗೂ ಡಾ.ಬಾಬುಜೀ ಅವರ ಭಾವಚಿತ್ರಗಳ ಮೆರವಣಿಗೆಯು ಇಲ್ಲಿನ ನಗರಸಭೆ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಗೌರವ ಮಾಲಾರ್ಪಣೆಯೊಂದಿಗೆ ಪ್ರಾರಂಭಗೊಂಡು ಮಹಾತ್ಮಾ ಗಾಂಧೀ ವೃತ್ತ, ಮಹೇಂದ್ರಕರ್ ವೃತ್ತ,ಟಾಂಗಾ ಕೂಟ್, ಬಸವೇಶ್ವರ ವೃತ್ತ, ಗುಜ್ಜರಬಸ್ತಿ , ಮುಳಗುಂದ ನಾಕಾ ಮಾರ್ಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ಭವನಕ್ಕೆ ಬಂದು ತಲುಪಿತು.

ದೃಢ ಸಂಕಲ್ಪದಿಂದ ಅವರು ಸಮಾನತೆಗಾಗಿ ಹೋರಾಡಿದರು ಎಂದು ವಿವರಿಸಿದರು.

ನಿವೃತ್ತ ಪ್ರಾಚಾರ್ಯ ಪ್ರೊ.ಡಿ.ಜಿ. ಜೋಗಣ್ಣನವರ ಮಾತನಾಡಿದರು. ಡಾ.ಅಂಬೇಡ್ಕರ್ ಕುರಿತ ಪ್ರಬಂಧ ಸಂಕಲನವನ್ನು ಶಾಸಕ ಎಸ್.ವಿ.ಸಂಕನೂರ ಬಿಡುಗಡೆ ಮಾಡಿದರು. ಪೌರಕಾರ್ಮಿಕರಿಗೆ ಸನ್ಮಾನಿಸಿದರು.

ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಸಂವಿಧಾನ ಪ್ರಸ್ತಾವನೆ ಬೋಧಿಸಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ ಸ್ವಾಗತಿಸಿ, ಪ್ರೊ.ಬಾಹುಬಲಿ ಜೈನರ ನಿರೂಪಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ಪ್ರಮುಖರಾದ ಕೃಷ್ಣಾ ಗೌಡ ಪಾಟೀಲ, ಬಸವಾರಾಜ ಕಡೆಮನಿ, ಕೃಷ್ಣಾ ಪರಾಪೂರ, ಅಶೋಕ ಕುಡತಿನಿ, ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ ಆರ್, ಸಹಾಯಕ ಆಯುಕ್ತ ಗಂಗಪ್ಪ ಎಂ, ತಹಶೀಲ್ದಾರ್ ಶ್ರೀನಿವಾಸ್ ಮೂರ್ತಿ, ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ ಇದ್ದರು.

ಸರ್ವರಿಗೂ ಸಮಾನ ಬದುಕು ನೀಡಿದ ಅಂಬೇಡ್ಕರ್

◆**ಲಕ್ಷ್ಮೇಶ್ವರ:** ಸಮಾನತೆ, ಶಿಕ್ಷಣ, ಸ್ವಾಭಿಮಾನದ ಪ್ರತಿಪಾದಕ ಡಾ.ಬಿ.ಆರ್. ಅಂಬೇಡ್ಕರ್ ಅವರು ಇಂದಿಗೂ ಜನರಿಗೆ ಸ್ಫೂರ್ತಿಯಾಗಿದ್ದಾರೆ ಎಂದು ತಹಶೀಲ್ದಾರ್ ಧನಂಜಯ.ಎಂ. ಹೇಳಿದರು.

ತಾಲೂಕು ಆಡಳಿತ ತಾಪಂ ಪುರಸಭೆ ಸಮಾಜ ಕಲ್ಯಾಣ ಇಲಾಖೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ವಿವಿಧ ಇಲಾಖೆಯ ಸಹಯೋಗದಲ್ಲಿ ಚನ್ನಮ್ಮ ವನ ಕಲ್ಯಾಣ ಮಂಟಪದಲ್ಲಿ ನಡೆದ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ಅಂಬೇಡ್ಕರ್. ಹಾಗೂ ಡಾ.ಜಗಜೀವನ್ ರಾಂ ಸಮಾನತೆಯ ಸಮಾಜ ನಿರ್ಮಿಸಲು ಶ್ರಮಿಸಿದ್ದಾರೆ ಎಂದರು.

ಪಿಎಸ್‌ಐ ನಾಗರಾಜ ಗಡದ ಮಾತನಾಡಿ, ಭಾರತಿಯ ಪ್ರತಿಯೊಬ್ಬ ಪ್ರಜೆಗೆ ಅನುಕೂಲಕ್ಕಾಗಿ ಸಂವಿಧಾನ ಬರೆದಿದ್ದಾರೆ. ಇದರಿಂದ ಅವರಿಗೆ ಗೌರವ ಕೊಡುವುದು ನಮ್ಮ ಕರ್ತವ್ಯ. ಅವರ ತತ್ವಗಳನ್ನು ಪಾಲನೆ ಮಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ದೇಶದ ಉತ್ತಮ ಪ್ರಜೆಗಳನ್ನಾಗಿ ಮಾಡಬೇಕು ಎಂದರು.

ತಾಲೂಕ ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಧ್ಯಾಪಕ ಪೃಥ್ವಿರಾಜ್.ಎನ್ ಉಪನ್ಯಾಸ ನೀಡಿದರು. ಇಒ ಧರ್ಮರ ಕೃಷ್ಣಪ್ಪ, ದಲಿತ ಮುಖಂಡ ಕೋಟೆಪ್ಪ ವರ್ದಿ ಮಾತನಾಡಿದರು. ಸಮಾಜ ಕಲ್ಯಾಣ ಅಧಿಕಾರಿ ಎಂ.ಎಸ್.ಸಂಕನೂರ ಸಂವಿಧಾನ ಪೀಠಿಕೆ ಬೋಧಿಸಿದರು.

ಹರ್ಲಾಪುರದ ಸಾಂಬಯ್ಯ ಹಿರೇಮಠ ಅವರ ಜಾನಪದ ತಂಡದಿಂದ ಕ್ರಾಂತಿಗೀತೆ ಹಾಗೂ ದೇಶಭಕ್ತಿಗಳು ಮೊಳಗಿದವು.

ಸೋಮೇಶ್ವರ ತೇರಿನ ಮನೆ ಆವರಣದಿಂದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ ಬಾಬು ಜಗಜೀವನ ರಾಮ್ ಅವರ ಭಾವಚಿತ್ರ ಮೆರವಣಿಗೆ ನಡೆಯಿತು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡಾದರಿ, ಸಿಡಿಪಿಒ ಮೃತ್ಯುಂಜಯ ಗುಡ್ಡದ ಅನ್ವೇರಿ, ಎಪಿಎಂಸಿ ಕಾರ್ಯದರ್ಶಿ ಎಂ.ಎಸ್. ಹಳೆಮನಿ, ಹೆಸ್ಕಾಂ ಅಧಿಕಾರಿ ಅಂಜನೇಪ್ಪ, ಮಾಜಿ ಸೈನಿಕ ಸಂಘ ಅಧ್ಯಕ್ಷ ಹುಡೇದ, ಗುರುನಾಥ ದಾನಪ್ಪನವರ, ಪೂರ್ಣಾಜಿ ಕರಾಟೆ, ಬಸವೇಣೆಪ್ಪ ನಂದೆಣ್ಣವರ, ಹನುಮಂತ ನಂದೆಣ್ಣವರ, ರಾಮಣ್ಣ ಅಡಗಿಮನಿ, ರಮೇಶ ಹಂಗನಕಟ್ಟಿ, ಫಕ್ಕೀರೇಶ ಮ್ಯಾಟಣ್ಣವರ, ಫಕ್ಕೀರೇಶ ಭಜಕ್ಕನವರ, ಅಮರಿಶ ತೆಂಬದಮನಿ, ಹರೀಶ ಲಕ್ಷ್ಮೇಶ್ವರ, ಜಗದೀಶ ಹುಲಿಗೆಮ್ಮನವರ, ಬಿ.ಎನ್.ರಾಟಿ, ಕೆ.ಓ.ಹುಲಿಕಟ್ಟಿ, ಫಕ್ಕೀರೇಶ ನಂದೆಣ್ಣವರ ಇದ್ದರು. ಉಮೇಶ ನೇಕಾರ, ಸೋಮಣ್ಣ ಯತ್ತಿನಹಳ್ಳಿ ನಿರೂಪಿಸಿದರು.



ಗುರು ಶಿಷ್ಯರ ಸಂಬಂಧ ಅಮೂಲ್ಯವಾದದ್ದು

◆**ಗದಗ:** ಶಿಕ್ಷಕರು ಮತ್ತು ಶಿಷ್ಯರ ನಡುವಿನ ಸಂಬಂಧ ಅಮೂಲ್ಯವಾಗಿವಾಗಿದ್ದು, ಕಳೆದ 42 ವರ್ಷಗಳ ನಿರಂತರ ಬಾಂಧವ್ಯವು ಈ ಗುರುವಂದನಾ ಕಾರ್ಯಕ್ರಮವೇ ಸಾಕ್ಷಿಯಾಗಿದೆ ಎಂದು ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠ ಶ್ರೀಗಳು ಹೇಳಿದರು.

ತಾಲೂಕಿನ ಲಕ್ಕುಂಡಿ ಸರಕಾರಿ ಪ್ರಾಥಮಿಕ ದ್ವಿ ಭಾಷಾ ಮಾಧ್ಯಮ ಮಕ್ಕಳ ಶಾಲೆಯ ಸಭಾಂಗಣದಲ್ಲಿ 1983 –84 ನೇ ಸಾಲಿನ 10 ನೇ ತರಗತಿ ಕಲಿತ ಹಳೆಯ ವಿದ್ಯಾರ್ಥಿಗಳ ಗೆಳೆಯರ ಬಳಗವು ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಗುರು ಶಿಷ್ಯರ ನಡುವಿನ ಬಾಂಧವ್ಯ ಕ್ಷೀಣಿಸುತ್ತಿರುವ ಇಂದಿನ ತಂತ್ರಜ್ಞಾನ ಕಾಲದಲ್ಲಿ 42 ವರ್ಷಗಳ ನಂತರ ತಮ್ಮ ಜೀವನದ ಭವಿಷ್ಯಕ್ಕೆ ದಾರಿ ದೀಪವಾಗಿರುವ ಶಿಕ್ಷಕರಿಗೆ ಗುರುವಂದನೆ ಸಲ್ಲಿಸುತ್ತಿರುವ ಈ ಐತಿಹಾಸಿಕ ಕಾರ್ಯಕ್ರಮವು ಹಳೆಯ ನೆನಪುಗಳನ್ನು ಮರು ಕಳಿಸುವಂತೆ ಮಾಡಿದೆ. ಈ ಸಂಪ್ರದಾಯ ಎಲ್ಲ ಮಕ್ಕಳಲ್ಲಿ ಬೆಳೆದು ಬರಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಬಿಇಒ ಬಿ.ವಿ.ನಡುವಿನಮನಿ ಮಾತನಾಡಿ, ಈ ಕಾರ್ಯಕ್ರಮವು ಶಿಕ್ಷಕರ ಜೀವಮಾನದ ಸಮರ್ಪಣೆಗೆ ಹೃತ್ಪೂರ್ವಕ ಗೌರವವಾಗಿ ನಿಂತಿದ್ದು ಇದು ಇಡೀ ಸಮುದಾಯಕ್ಕೆ ಸ್ಮರಣೆಯ ಹಾಗೂ ಅರ್ಥಪೂರ್ಣ ಆಚರಣೆಯಾಗಿದೆ ಎಂದರು.

ಹಳೆ ವಿದ್ಯಾರ್ಥಿಗಳ 42 ವರ್ಷಗಳ ಬಾಂಧವ್ಯದ ಈ ಕಾರ್ಯಕ್ರಮವು ಕಣ್ತುಂಬಿದೆ. ಬಲವಾದ ಮತ್ತು ಪ್ರಗತಿಪರ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸಿದ್ದು, ಅವರ ಸ್ಫೂರ್ತಿದಾಯಕ ಪಾಠಗಳಿಂದ ನಾವು ನಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ನಿವೃತ್ತ ಶಿಕ್ಷಕ ಯು.ಎಸ್.ಬೆಂತೂರ, ವಿ.ಐ. ಬಡಿಗೇರ, ವಿ.ಎಸ್.ಘಳಗಿ.ಎಂ.ಎಲ್.ತಳವಾರ, ಈರಪ್ಪ ಕುದರಿ ಸನ್ಮಾನಿಸಲಾಯಿತು.

ಬಿ ವೇಳೆ ಹಳೆ ವಿದ್ಯಾರ್ಥಿ ಸಂಭಾಪೂರದ ಮಂಜುನಾಥ ಡೋಣಿ ಅವರು ಸಣ್ಣ ವೀರಪ್ಪ ಬಣವಿ ಅವರ ಕುಟುಂಬದ ಸಹಕಾರದೊಂದಿಗೆ ಪ್ರಕಟಿಸಿದ ರಚಿಸಿದ ಬಾಗಿಲು ಬುತ್ತಿ ಎಂಬ ಕಾವ್ಯ ಕೃತಿ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು.

ಜಿಪಂ ಮಾಜಿ ಸದಸ್ಯ ಎಸ್.ಬಿ.ಕಲಕೇರಿ, ಮಾಜಿ ಅಧ್ಯಕ್ಷ ಸಿದ್ದಲಿಂಗೇಶ್ವರ ಪಾಟೀಲ, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಎಸ್.ಪೂಜಾರ, ಅಶೋಕ ಬೂದಿಹಾಳ, ಪೀರಸಾಬ ನದಾಫ ಇದ್ದರು.

ಮಧು ಅಂಬಕ್ಕಿ, ಗಂಗಮ್ಮ ಹಿರೇಮಠ ಪ್ರಾರ್ಥಿಸಿದರು. ಡಿ.ಎಸ್.ಗಡಾದ, ವಿಜಯಲಕ್ಷ್ಮೀ ನೀರಲಗಿ ನಿರೂಪಿಸಿದರು. ಸಣ್ಣವೀರಪ್ಪ ಬಣವಿ ವಂದಿಸಿದರು.



ನಿರ್ದಿಷ್ಟ ಗುರಿ ಇದ್ದರೆ ಸಾಧನೆ ಸಾಧ್ಯ: ಸತೀಶ ಪಾಶಿ

◆**ಮುಂಡರಗಿ:** ಡಾ.ಬಿ.ಆರ್.ಅಂಬೇಡ್ಕರ್ ಒಂದೇ ವರ್ಗಕ್ಕೆ ಸಿಮೀತವಲ್ಲ, ಅವರು ಸರ್ವಕಾಲಿಕ ವ್ಯಕ್ತಿಯಾಗಿದ್ದಾರೆ. ಎಲ್ಲ ವರ್ಗದವರ ಪರವಾಗಿ ಸಂವಿಧಾನ ರಚಿಸಿದರು. ಭಾರತ ದೇಶಕ್ಕೆ ಅವರ ಕೊಡುಗೆ ಅಪಾರವಿದೆ ಎಂದು ನಿವೃತ್ತ ಉಪನ್ಯಾಸಕ ಸತೀಶ ಪಾಶಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ದಲಿತ ಪರ, ವಿವಿಧ ಸಂಘಟನೆಗಳ ಸಹಯೋಗದಲ್ಲಿ ಮಂಗಳವಾರ ಜರುಗಿದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಸಂವಿಧಾನದಿಂದ ಎಲ್ಲ ವರ್ಗದ ಮಹಿಳೆಯರಿಗೂ ಸ್ವಾತಂತ್ರ, ವಿಶೇಷ ಸ್ಥಾನಮಾನಗಳು ದೊರಕಿದೆ. ನಮ್ಮನ್ನು ನಾವು ಅರ್ಥೈಸಿಕೊಳ್ಳುವುದೇ ಈ ಜಯಂತಿ ಆಚರಣೆ ಉದ್ದೇಶವಾಗಬೇಕು ಎಂದರು.

ತಾಪಂ ಇಒ ವಿಶ್ವನಾಥ ಹೊಸಮನಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಹೆಮ್ಮೆಯ ಪುತ್ರರು. ನಿರ್ದಿಷ್ಟ ಗುರಿಯೊಂದಿಗೆ ಮುನ್ನಡೆದರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎನ್ನುವುದಕ್ಕೆ ಡಾ.ಅಂಬೇಡ್ಕರ್ ಅವರು ನಮಗೆ ಪ್ರೇರಣೆಯಾಗುತ್ತಾರೆ ಎಂದರು.

ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್., ವೆಂಕಟೇಶ ಗುಗ್ಗರಿ, ಮಂಜುಳಾ ಇಟಗಿ ಮಾತನಾಡಿದರು. ನಿವೃತ್ತ ಮುಖ್ಯ ಶಿಕ್ಷಕ ಎಚ್.ಡಿ.ಪೂಜಾರ ಸಂವಿಧಾನ ಪೀಠಿಕೆ ಬೋಧಿಸಿದರು. 2024–25ನೇ ಸಾಲಿನ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಆನಂದಗೌಡ ಪಾಟೀಲ, ದುರುಗಪ್ಪ ಹರಿಜನ, ರಾಮಣ್ಣ ಕೋಳಿ, ಚನ್ನಯ್ಯ ದೇವೂರ, ಸೋಮಣ್ಣ ಹೈತಾಪೂರ, ನಾಗೇಶ ಹುಬ್ಬಳ್ಳಿ, ಎ.ವೈ.ನವಲಗುಂದ, ಬಸವರಾಜ ದೇಸಾಯಿ, ಚನ್ನಪ್ಪ ವಡ್ಡಟ್ಟಿ, ಬಸವಂತಪ್ಪ ಹೊಸಮನಿ, ರಾಜು ಡಾವಣಗೇರಿ, ಪವನ್ ಮೇಟಿ, ನಿಂಗರಾಜ ಹಾಲಿನವರ, ಲಕ್ಷ್ಮಣ ತಗಡಿನಮನಿ, ನಾಗರಾಜ ಹೊಸಮನಿ, ಸುರೇಶ ಮಾಗಡಿ ಇದ್ದರು. ಉದಯಕುಮಾರ ಯಲಿವಾಳ ಸ್ವಾಗತಿಸಿ ಮಾತನಾಡಿದರು. ಶ್ರೀಕಾಂತ ಅರಹುಣಸಿ ನಿರೂಪಿಸಿ, ಯಲ್ಲಪ್ಪ ನಾಗಮ್ಮನವರ ವಂದಿಸಿದರು.



ಅಂಬೇಡ್ಕರರ ಬದುಕು, ಜೀವನ ಶೈಲಿ ಪ್ರತಿಯೊಬ್ಬರ ಜೀವನಾಡಿ: ಐಶ್ವರ್ಯ

◆**ನರೇಗಲ್ಲ:** ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು, ಜೀವನ ಶೈಲಿ, ಅವರ ಕೊಡುಗೆಗಳು ಎಲ್ಲರಿಗೂ ಸ್ಫೂರ್ತಿ ನೀಡುತ್ತವೆ. ಅವರ ಕೊಡುಗೆ ಭಾರತ ಜನತೆಯ ಜೀವನಾಡಿ ಇದ್ದಂತೆ ಎಂದು ನರೇಗಲ್ಲ ಪಿಎಸ್‌ಐ ಐಶ್ವರ್ಯ ನಾಗರಾಳ ಹೇಳಿದರು.

ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆಯಲ್ಲಿ ಮಾತನಾಡಿ, ರಾಷ್ಟ್ರದ ಶ್ರೇಷ್ಠ ಪ್ರಗತಿಪರ ಚಿಂತಕರು ಆರ್ಥಿಕ ತಜ್ಞ ಅಪ್ರತಿಮ ಸಂಶೋಧಕ ನೇರ ನುಡಿಯ ಪತ್ರಕರ್ತ ಅಗ್ರಮಾನ್ಯ ದೇಶಭಕ್ತ ವೈಜ್ಞಾನಿಕ ಪ್ರತಿಪಾದಕರು ದೇಶಪ್ರೇಮಿಯಾಗಿ ತಮ್ಮನ್ನ ತಾವು ಹಲವು ಕ್ಷೇತ್ರದಲ್ಲಿ ತೊಡಗಿಸಿಕೊಂಡು ಬೃಹತ್ ಮತ್ತು ಸೂಕ್ಷ್ಮ ಕೊಡುಗೆಗಳಿಂದಲೇ ಇಂದು ದೇಶದ ಎಲ್ಲ ಜನತೆಗೆ ಸಮಾನತೆಯಿಂದ ಬದುಕುತ್ತಿದ್ದಾರೆ ಎಂದರು.

ದೇಶದ ಸಂವಿಧಾನವನ್ನು ರಚಿಸುವಲ್ಲಿ ಅವರು ಮಾಡಿದ ತ್ಯಾಗ ಅಪಾರವಾಗಿದೆ. ಸಂವಿಧಾನದ ಅರಿವು ತಿಳಿದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಅವರ ತತ್ವ-ಸಿದ್ಧಾಂತಗಳನ್ನು ನಾವುಗಳು ಮುಂದುವರಿಸಿಕೊಂಡು ಹೋಗಬೇಕು. ದೇಶದ ಜನತೆಗೆ ಸಮಾನತೆ, ಹಕ್ಕು ನೀಡಿದ ಮಹಾ ಮಾನವತವಾದಿ. ಬಾಬಾ ಸಾಹೇಬರ ಚಿಂತನೆಗಳು ಇಂದಿಗೂ ಜೀವಂತ ಎಂದು ಐಶ್ವರ್ಯ ನಾಗರಾಳ ತಿಳಿಸಿದರು.

ಈವೇಳೆ ಎಎಸ್‌ಐ ಎಸ್. ಎಲ್.ಹೊಸಳ್ಳಿ, ಎಸ್.ಎಸ್.ಅಯ್ಯನಗೌಡರ, ಕರವೇ ಜಿಲ್ಲಾ ಅಧ್ಯಕ್ಷ ಹನಮಂತ ಅಬ್ಬಿಗರಿ ಪೊಲೀಸ್ ಅಧಿಕಾರಿಗಳಾದ ವಿ.ಎಸ್. ಗೋದಿಗನೂರ, ಪಿ.ಕೆ.ದಾಸರ, ಉಮೇಶ ಬಂಗಾರಿ, ವಿ.ಚಿ.ಚೆಗರೆಡ್ಡಿ, ಎಸ್.ವಿ.ಶಿವಶಿಂಪರ ಇದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಬಡವರ ಬಾಳಿನ ಆಶಾಕಿರಣ

◆**ಶಿರಹಟ್ಟಿ:** ಎಲ್ಲರಿಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಾನಮಾನ ಹೊಂದಲು ಮತ್ತು ಮೇಲುಕೀಳು ಎಂಬ ಜಾತಿ ವ್ಯವಸ್ಥೆ ತೊಡೆದು ಹಾಕಿ, ಸರ್ವರಿಗೂ ಸಮಾನ ಅವಕಾಶ ಕಲ್ಪಿಸುವಂತಹ ಸಂವಿಧಾನ ರಚಿಸಿದ ಮಹಾಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.



ಸ್ಥಳೀಯ ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತಿ, ಪಟ್ಟಣ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕಿನ ವಿವಿಧ ಇಲಾಖೆಗಳ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಮ್ ರವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಾಮಾಣಿಕತೆ, ದೇಶಭಕ್ತಿ ಅಪಾರವಾಗಿದ್ದರೂ ಜಾತಿವಾದಿಗಳು ಇಂದಿಗೂ ಇವರನ್ನು ಕೀಳಾಗಿ ನೋಡುತ್ತಿರುವುದು ಈ ದೇಶದ ವಿಪರ್ಯಾಸ. ಈ ದೇಶದ ಉದ್ಧಾರಕ್ಕಾಗಿ, ಜನರ ಏಳಿಗೆಗಾಗಿ ತನ್ನ ಬದುಕನ್ನೇ ಮೀಸಲಾಗಿಟ್ಟು ದುಡಿದವರು. ಜಾತಿ ಜಾತಿಗಳಲ್ಲಿದ್ದ ವೈರತ್ವಗಳನ್ನು ತೊಲಗಿಸಿ ಎಲ್ಲರೂ ಸಾಮರಸ್ಯದಿಂದ ಬದುಕಬೇಕೆಂಬ ಗುರಿಯೊಂದಿಗೆ ಸಂವಿಧಾನದಲ್ಲಿ ಶೋಷಿತರಿಗಾಗಿ, ಬಡವರಿಗಾಗಿ, ಮಹಿಳೆಯರಿಗಾಗಿ, ಹಿಂದುಳಿದ ಜಾತಿಗಳ ಜನರ ಏಳಿಗೆಗಾಗಿ, ದೇಶದ ಹಲವಾರು ಜನಪರ ಹಕ್ಕುಗಳನ್ನು ನೀಡಿದರು ಎಂದು ಹೇಳಿದರು.

ಉಪನ್ಯಾಸಕ ಐ.ಎಸ್.ಮಾದರ ಮಾತನಾಡಿ, ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂರು ಸೂತ್ರಗಳನ್ನು ಹಾಕಿ ಜನರು ಜಾಗೃತರಾಗಿ ಮೇಲೆ ಬರಲು ಕಾರಣರಾದರು. ಹರಿಜನರು ಎಲ್ಲ ಜಾತಿ ಜನರ ಹಿಂಸೆಗೆ ಮೈಯೊಡ್ಡಿ ನಿಂತು ನರಕದಿಂದಲೇ ಬದುಕಿ ಸ್ವಾತಂತ್ರ್ಯ ಕಾಣದೇ ದರ್ಪ, ದೌರ್ಜನ್ಯ, 'ದಬ್ಬಾಳಿಕೆಗೆ ಮತ್ತು ಗುಲಾಮಗಿರಿಗೆ ತುತ್ತಾಗಿ ಬಳಲಿ ಸತ್ತವರೆಷ್ಟೋ. ಇಂತವರ ಬದುಕನ್ನು ಎಲ್ಲ ಜಾತಿ ಜನರ ಸರಿಸಮಾನಕ್ಕೆ ತಿರುಗಾಡುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ನಗರದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಅದ್ದೂರಿಯಿಂದ ನಡೆಯಿತು.

ಈ ವೇಳೆ ತಹಶೀಲ್ದಾರ್ ಕೆ.ರಾಘವೇಂದ್ರ ರಾವು, ತಾಪಂ ಇಒ ರಾಮಣ್ಣ ದೊಡ್ಡಮನಿ, ಸಿಪಿಐ ಬಿ.ವಿ.ನ್ಯಾಮಗೌಡ, ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗೋಪಾಲ ಲಮಾಣಿ, ಡಿ.ಕೆ.ಹೊನ್ನಪ್ಪನವರ, ರಾಘವೇಂದ್ರ ದೊಡ್ಡಮನಿ, ವೀರಯ್ಯ ಮಠಪತಿ, ಬಿಇಒ ನಾಣಕೀ ನಾಯಕ, ನಾಗರಾಜ ಲಕ್ಕುಂಡಿ, ಮೋಹನ ಗುತ್ತೆಮ್ಮನವರ, ಅಕ್ಬರ ಯಾದಗಿರಿ, ಗಾಳೆಪ್ಪ ಹರಿಜನ, ರವಿ ಗುಡಿಮನಿ, ಮುತ್ತರಾಜ ಬಾವಿಮನಿ, ಬಸವರಾಜ ವಡವಿ, ಶಿರಹಟ್ಟಿ ತಾಲೂಕಿನ ದಲಿತಪರ ಸಂಘ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು, ತಾಲೂಕಿನ ಪ್ರಗತಿಪರ, ಮಹಿಳಾಪರ, ಕನ್ನಡಪರ, ರೈತಪರ, ವಿವಿಧ ಸಂಘಟನೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಇದ್ದರು.

ಅಂಬೇಡ್ಕರರು ದೇಶದ ದೊಡ್ಡ ಶಕ್ತಿ: ನಾಗರಾಜ

◆**ರೋಣ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಭವ್ಯ ಭಾರತ ದೇಶದ ಅತ್ಯಂತ ದೊಡ್ಡ ಶಕ್ತಿಯಾಗಿದ್ದಾರೆ. ಅವರು ವಿಶ್ವ ಮೆಚ್ಚುವಂತಹ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ ಎಂದು ತಹಶೀಲ್ದಾರ್ ನಾಗರಾಜ ಕೆ. ಹೇಳಿದರು.

ತಾಲೂಕಾಡಳಿತದಿಂದ ಜರುಗಿದ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂಅವರಜಯಂತ್ಯೋತ್ಸವಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್‌ರವರು ದೇಶ ಪ್ರತಿಯೊಬ್ಬ ಪ್ರಜೆನೂ ನೆಮ್ಮದಿ ಬಾಳನ್ನು ಬಾಳಬೇಕು ಎಂಬ ಮಹತ್ವದ ಇಚ್ಛೆಯನ್ನು ಹೊಂದಿ, ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು ಎಂಬ ತತ್ವದಡಿಯಲ್ಲಿ ಸಂವಿಧಾನವನ್ನು ರೂಪಿಸಿ ಬಲಿಷ್ಠ ಕಾನೂನುಗಳನ್ನು ಜಾರಿಗೆ ತಂದವರು.ಇನ್ನು ಬಾಬು ಜಗಜೀವನ ರಾಂ ರವರು ಕೃಷಿಯಲ್ಲಿ ಮಹತ್ವದ ಬದಲಾವಣೆಯನ್ನು ಜಾರಿಗೊಳಿಸಿದರು. ಇಬ್ಬರು ದೇಶದ ಚೇತನಗಳು ಎಂದರು.

ಜೆ.ಬಿ.ಗುಡಿಮನಿ, ಪುಂಡಲಿಕ ಮಾದರ ಉಪನ್ಯಾಸ ನೀಡಿದರು.

ಈ ವೇಳೆ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮುಖ್ಯಾಧಿಕಾರಿ ರಮೇಶ ಹೊಸಮನಿ, ಪಿಎಸ್‌ಐ ಪ್ರಕಾಶ ಬಣಕಾರ, ವಿ.ಬಿ. ಸೋಮನಕಟ್ಟಿಮಠ, ಸಂಜಯ ದೊಡ್ಡಮನಿ, ಸೋಮು ನಾಗರಾಜ, ಪ್ರಕಾಶ ಹೊಸಳ್ಳಿ, ಬಸವರಾಜ ತಳವಾರ, ದೇವಂದ್ರಪ್ಪ ಕೊಳಪ್ಪನವರ, ಬಸವರಾಜ ಕಾಳೆ, ಬಿಸಿಎಂ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ದಲಿತ ಸಂಘಟನೆಗಳ ಪದಾಧಿಕಾರಿಗಳು ಇದ್ದರು.



ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ



◆**ನರಗುಂದ:** ಪಟ್ಟಣದ ಹಾಲಬಾವಿ ಕೆರೆ ಓಣಿಯ ಕೊಳಚೆ ಪ್ರದೇಶದಲ್ಲಿ ಪರಿಸರ ಪ್ರೇಮಿ ಜಗದೀಶ ಗೊಂಡಬಾಳ ಅವರ ಮನೆ ಆವರಣದಲ್ಲಿ ಮನೆಪಾಠದ ಉಚಿತ ಕೇಂದ್ರ ಹಾಗೂ ಗುರು ಹಿರಿಯರು ಮತ್ತು ಮಕ್ಕಳು ಸೇರಿಕೊಂಡು ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ ಅವರ ಜಯಂತ್ಯುತ್ಸವವನ್ನು ಸಿಹಿ ಹಂಚಿ ಸಂಭ್ರಮದೊಂದಿಗೆ ಆಚರಿಸಿದರು.

ಈ ವೇಳೆ ಈರಪ್ಪ ಹೂಗಾರ, ಗೂಳಪ್ಪ ಸುಣಗಾರ, ಶರಣಪ್ಪ ಸುಣಗಾರ, ಹಾಲಪ್ಪ ಕೊರಳ್ಳಿ, ಜಗದೀಶ ಗೊಂಡಬಾಳ, ಮಹೇಶ್ವರ, ಪ್ರಿಯಾಂಕ, ರಂಜಿತಾ, ರಮೇಶ, ಭುವನೇಶ್ವರಿ, ರಾಜೇಶ್ವರಿ, ಮಕ್ತುಂಬಿ, ಸಂಜನಾ, ಹಾಜೀರ್, ದುರ್ಗಪ್ಪ ದೊಡ್ಡಮನಿ ಇದ್ದರು.

ಬತ್ತಿದ ನದಿಗಳು | ಜೀವಜಲಕ್ಕೆ ಹಾಹಾಕಾರ

ಬಿಸಿಲಿಗೆ ತತ್ತರಿಸಿದ ಜನತೆ

▸ ಲಕ್ಷ್ಮೀಕಾಂತ್ ಕುಲಕರ್ಣಿ

ದಿಗಂತ ವಿಶೇಷ



◆ **ಯಾದಗಿರಿ:** ಪ್ರಸಕ್ತ ವರ್ಷದ ಬೇಸಿಗೆ ಕಾಲ ಆರಂಭಗೊಂಡಿದ್ದು, ಕಲ್ಯಾಣ ಭಾಗದ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ ದಾಖಲಾಗುತ್ತಿದ್ದು, ಜನರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ.

ಕಳೆದ ಮೂರ್ನಾಲ್ಕು ದಿನಗಳಿಂದ ಕಲ್ಯಾಣ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉರಿಬಿಸಿಲು ತಾಂಡವವಾಡುತ್ತಿದ್ದು, ಬೆಳಗ್ಗೆ 8 ಗಂಟೆಯಿಂದಲೇ ಬಿಸಿಲಿನ ಝಳ ಜನರನ್ನು ಹೈರಾಣ ಮಾಡುತ್ತಿದೆ. ಬಿಸಿಗಾಳಿಯ ಜತೆ ಕೆಂಡದ ಮುಂದೆ ಕುಳಿತ ಅನುಭವವಾಗುತ್ತಿದ್ದು, ಜನತೆ ಮನೆ ಬಿಟ್ಟು ಹೊರಗಡೆ ಬರದ ಸ್ಥಿತಿ ನಿರ್ಮಾಣಗೊಂಡಿದೆ.

ಯಾದಗಿರಿಯಲ್ಲಿ ಭಾನುವಾರ 41 ಡಿಗ್ರಿ ಸೆಲ್ಸಿಯಸ್ ಬಿಸಿಲು ದಾಖಲಾದರೆ, ಸೋಮವಾರ ಬೀದರ್ ಜಿಲ್ಲೆಯಲ್ಲಿ 42ರ ಗಡಿ ದಾಟಿದೆ. ಅಲ್ಲದೆ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮುಂದಿನ ಒಂದೆರಡು ವಾರಗಳಲ್ಲಿ ತಾಪಮಾನ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕುಳಿತಲ್ಲೇ ಬೆವರುವ ಸ್ಥಿತಿ: ಕಳೆದ ಬಾರಿ ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ 46 ಡಿಗ್ರಿ ಸೆಲ್ಸಿಯಸ್ ಬಿಸಿಲು ದಾಖಲಾಗಿತ್ತು. ಈ ಬಾರಿ ಈ ಪ್ರಮಾಣ ಮತ್ತಷ್ಟು ಏರಿಕೆಯಾಗುವ ಲಕ್ಷಣಗಳು ಗೋಚರಿಸುತ್ತದೆ. ಏಪ್ರಿಲ್ ತಿಂಗಳ ಅಂತ್ಯದೊಳಗೆ ಕಲ್ಯಾಣ ಭಾಗದ ಜಿಲ್ಲೆಗಳು ಕಾದು ಕೆಂಡದಂತಾಗಿದ್ದು, ಇನ್ನೂ ಮೇ ತಿಂಗಳು ನೆನೆಸಿಕೊಂಡರೆ, ಕುಳಿತಲ್ಲೇ ಬೆವರುವಂತಾಗಿದೆ.

ಬಾಯಾರಿದ ಜಲ ಮೂಲಗಳು: ತಾಪಮಾನ ಹೆಚ್ಚಳವಾದ ಕಾರಣ ಜಿಲ್ಲೆಯ ಕೃಷ್ಣಾ, ಭೀಮಾ ನದಿಗಳ ಒಡಲು ಬತ್ತಿ ನಿಂತರೆ, ಹಳ್ಳಕೊಳ್ಳಗಳು ಬಾಯಾರಿವೆ. ಗ್ರಾಮೀಣ ಭಾಗದಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೆ ಹಾಹಾಕಾರ ಏಳುವ ಭೀತಿ ನಿರ್ಮಾಣಗೊಂಡಿದೆ.

ವರ್ಷದಿಂದ ವರ್ಷಕ್ಕೆ ಬಿಸಿಲಿನ ಝಳ ಹೆಚ್ಚುತ್ತಲೇ ಇದ್ದು ಚಿಕ್ಕ ಮಕ್ಕಳು ಮತ್ತು ವಯೋವೃದ್ಧರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದರೆ, ಯುವಕರಲ್ಲಿ ಸ್ಟ್ರೋಕ್ ಸಮಸ್ಯೆ ಕಾಡುತ್ತಿದೆ.

> **ಪ್ರಸಕ್ತ ಸಾಲಿನಲ್ಲಿ ಬೇಸಿಗೆ ಬಿಸಿಲು ಹೆಚ್ಚಿದ್ದ ಕಾರಣ ಜನತೆ ಅನಗತ್ಯವಾಗಿ ಹೊರಗಡೆ ಸಂಚರಿಸದಂತೆ ಸಲಹೆ ನೀಡಲಾಗಿದೆ. ಆದಷ್ಟು ಜಾಗೃತೆಯಿಂದ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು.**
> ■ **ಹರ್ಷಲ್ ಭೋಯರ್, ಜಿಲ್ಲಾಧಿಕಾರಿ**

ಜಂಕ್ ಫುಡ್‌ಗಳಿಂದ ಮಕಳನು ದೂರವಿಡಿ

ಪಾಲಕರು ಮಕ್ಕಳಿಗೆ ಜಂಕ್ ಫುಡ್, ಬೇಕರಿ ಫುಡ್, ಕೂಲ್ ಡ್ರಿಂಕ್ಸ್ ಕೊಡಿಸಬೇಡಿ. ಆದಷ್ಟು ತೆಳುವಾದ ಬಟ್ಟೆ ಧರಿಸುವಂತೆ ಖ್ಯಾತ ವೈದ್ಯ ಡಾ.ವೀರೇಶ ಜಾಕಾ ಸಲಹೆ ಮಾಡಿದ್ದಾರೆ. ಗರ್ಭಿಣಿಯರು ಹಾಗೂ ವೃದ್ಧರಲ್ಲಿ ನಿರ್ಜಲೀಕರಣ ಸಮಸ್ಯೆ ಕಾಡುತ್ತದೆ. ಹೀಗಾಗಿ ದ್ರವ ಆಹಾರ ಸೇವನೆ ಮಾಡುವುದು ಉತ್ತಮ. ಬಿಸಿ ಆಹಾರ ಸೇವನೆ ಮಾಡಿ. ಆದಷ್ಟು ತಂಪಾದ ವಾತಾವರಣದಲ್ಲಿ ಇರಲು ಪ್ರಯತ್ನಿಸಿ. ನಿಮ್ಮ ಕೆಲಸ ಕಾರ್ಯಗಳನ್ನು ಮಧ್ಯಾಹ್ನ 12 ಗಂಟೆಯೊಳಗೆ ಮುಗಿಸಿ ಎಂದು ಕಿವಿಮಾತು ಹೇಳಿದ್ದಾರೆ.

ಜಲಾಶಯಗಳ ಸುರಕ್ಷತಾ ತಜ್ಞ ಎನ್.ಕನ್ನಯ್ಯ ನಾಯ್ಡು ಹೇಳಿಕೆ

ಮೇ ಅಂತ್ಯಕ್ಕೆ ಎಲ್ಲ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣ

◆ **ವಿಜಯನಗರ:** ತುಂಗಭದ್ರಾ ಜಲಾಶಯದಲ್ಲಿ ಹೊಸ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ಬಹುತೇಕ ಮುಕ್ತಾಯಗೊಂಡಿದ್ದು, ಹೊಸ ಚೈನ್‌ಗಳ ಅಳವಡಿಕೆ ಸೇರಿದಂತೆ ಮೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. ಅನಂತರ ಎಂದಿನಂತೆ ಅಣೆಕಟ್ಟೆಯಲ್ಲಿ ನೀರು ಸಂಗ್ರಹಿಸಬಹುದಾಗಿದ್ದು, ಈ ಭಾಗದ ರೈತರಿಗೆ ಸರ್ಕಾರಗಳು ನೀಡಿದ ಬಹುದೊಡ್ಡ ಕೊಡುಗೆ ಇದು ಎಂದು ಜಲಾಶಯಗಳ ಸುರಕ್ಷತಾ ತಜ್ಞ ಎನ್.ಕನ್ನಯ್ಯ ನಾಯ್ಡು ಸಂತಸ ಹಂಚಿಕೊಂಡರು.



ಹೊಸಪೇಟೆಯ ತುಂಗಭದ್ರಾ ಜಲಾಶಯದ ವೈಕುಂಠ ಅತಿಥಿಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟಿಬಿ ಡ್ಯಾಂನ 33 ಕ್ರಸ್ಟ್‌ಗೇಟ್‌ಗಳ ಪೈಕಿ ಕೊನೆಯ ಒಂದು ಗೇಟ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದ್ದು, ಶನಿವಾರದಂದು ಪೂರ್ಣಗೊಳ್ಳಲಿದೆ. ಈಗಾಗಲೇ 15 ಗೇಟ್‌ಗಳ ರಬ್ಬರಿಂಗ್ ಮಾಡಲಾಗಿದೆ. ಅಳವಡಿಕೆಯಾಗಿರುವ ಕ್ರಸ್ಟ್ ಗೇಟ್‌ಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ, ಅವುಗಳ ಕಾರ್ಯನಿರ್ವಹಣೆಯನ್ನು ಖಾತರಿ ಪಡಿಸಿಕೊಳ್ಳಲಾಗಿದೆ.

ಕ್ರಸ್ಟ್‌ಗೇಟ್‌ಗಳ ಹೊಸ ಲಿಂಕ್ ಚೈನ್‌ಗಳನ್ನು ಚನ್ನೈ ಮೂಲದ ಕಂಪನಿ ತಯಾರಿಸುತ್ತಿದೆ. ಮೇ 15ರ ಒಳಗಾಗಿ ಅವುಗಳು ಪೂರೈಕೆಯಾಗಲಿದ್ದು, ಮೇ ಕೊನೆಯ ವಾರದ ಒಳಗಾಗಿ ಅವುಗಳನ್ನೂ ಜೋಡಿಸಲಾಗುತ್ತದೆ ಎಂದು ತಿಳಿಸಿದರು.

ಹೊಸ ಕ್ರಸ್ಟ್‌ಗೇಟ್‌ಗಳ ಅಳವಡಿಸಿದ್ದರಿಂದ ಜಲಾಶಯ ಮುಂದಿನ 70 ವರ್ಷಗಳಿಗೆ ಅದರ ಬಾಳಿಕೆ ಅವಧಿ ವಿಸ್ತರಣೆಯಾಗಿದೆ. ಜಲಾಯಶದ ನಿರ್ಮಾಣದ ವೇಳೆ ಅಂದಾಜಿಸಿದಂತೆ 50 ವರ್ಷಗಳ ಬಳಿಕ ಎಲ್ಲ ಕ್ರಸ್ಟ್‌ಗೇಟ್‌ಗಳನ್ನು ಬದಲಾವಣೆ ಮಾಡಬೇಕಿತ್ತು. ಅದನ್ನು ರಾಷ್ಟ್ರೀಯ ಜಲಾಶಯಗಳ ಸುರಕ್ಷತಾ ಪ್ರಾಧಿಕಾರದ ತಜ್ಞರೂ ಸೂಚಿಸಿದ್ದರು. ಆದರೆ, ಅವುಗಳು ಗಟ್ಟಿಮುಟ್ಟಾಗಿರುವುದರಿಂದ ಗೇಟ್‌ಗಳ ಅವಳಡಿಕೆಯನ್ನು ಮುಂದೂಡಲಾಗಿತ್ತು. ಅನಂತರ 19ನೇ ಕ್ರಸ್ಟ್ ಗೇಟ್ ಕಳಚಿ ಬೀಳುವ ಮೂಲಕ ಎಚ್ಚರಿಕೆಯ ಸಂದೇಶ ನೀಡಿತು. ಅದಕ್ಕೆ ತಕ್ಷಣ ಜಲಾಶಯದ 19ನೇ ಕ್ರಸ್ಟ್ ಗೇಟ್ ಕೊಚ್ಚಿಕೊಂಡು ಹೋದಾಗ ತಾತ್ಕಾಲಿಕವಾಗಿ ಸ್ಟಾಪ್ಲರ್ ಗೇಟ್ ಅಳವಡಿಕೆ ಮಾಡಿ, ತಾತ್ಕಾಲಿಕ ಪರಿಹಾರ ಕ್ರಮ ವಹಿಸಲಾಯಿತು.

ಬಳಿಕ ಕ್ರಸ್ಟ್‌ಗೇಟ್‌ಗಳನ್ನು ಅಲ್ಟ್ರಾಸೌಂಡ್ ಪರೀಕ್ಷೆಗೊಳಪಡಿಸಿದಾಗ ಗೇಟ್‌ಗಳು ನೀರಿನ ಅಲೆಗಳ ಹೊಡೆತದಿಂದ ಹಿಂಭಾಗದಲ್ಲಿ ಸವಕಳಿಯಾಗಿರುವುದು ದೃಢಪಟ್ಟಿತು. ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯ ಸರ್ಕಾರಗಳ ಸಹಕಾರದಿಂದ ಎಲ್ಲ ಕ್ರಸ್ಟ್‌ಗೇಟ್‌ಗಳ ಬದಲಾವಣೆ ಸಾಧ್ಯವಾಯಿತು. ಆರಂಭದಲ್ಲಿ ಕ್ರಸ್ಟ್‌ಗೇಟ್‌ಗಳ ಅಳವಡಿಕೆಗೆ ಎದುರಾದ ಹಣಕಾಸು ಮತ್ತು ತಾಂತ್ರಿಕ ಸಮಸ್ಯೆಯಿಂದ ಕಾಮಗಾರಿ ಕೊಂಚ ವಿಳಂಬವಾಯಿತಾದರೂ, ಅನಂತರ ಎಲ್ಲವೂ ನಿರೀಕ್ಷೆಯಂತೆ ನಿಗದಿತ ಅವಧಿಯಲ್ಲಿ ಪೂರ್ಣಗೊಂಡಿದೆ. ಅದಕ್ಕಾಗಿ ನೂರಾರು ಕಾರ್ಮಿಕರು ಹಗಲಿರುಳು ಶ್ರಮಿಸಿದ್ದಾರೆ. ಇಂತಹ ಮಹತ್ತರ ಕಾಮಗಾರಿಯಲ್ಲಿ ಭಾಗಿಯಾಗಿರುವುದಕ್ಕೆ ನನಗೂ ಸಂತಸವಾಗುತ್ತಿದೆ ಎಂದು ಹೇಳಿದರು.

ತುಂಗಭದ್ರ ಮಂಡಳಿ ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ, ಟಿಬಿ ಬೋರ್ಡ್ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ಎನ್. ಚಂದ್ರಶೇಖರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್. ನಾರಾಯಣ ನಾಯ್ಕ್ ಇತರರು ಇದ್ದರು.

ತುಂಗಭದ್ರಾ: 100 ಟಿಎಂಸಿಗೆ ಇಳಿಕೆ

ತುಂಗಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಸದ್ಯ 105.788 ಟಿಎಂಸಿ ಇದೆ. ಆದರೆ, 70 ವರ್ಷಗಳ ಹಳೆಯ ಜಲಾಶಯದ ತಡೆಗೋಡೆಗಳ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು ಅದನ್ನು ನೀರಿನ ಸಂಗ್ರಹವನ್ನು ಗರಿಷ್ಠ 100 ಟಿಎಂಸಿಗೆ ಇಳಿಕೆ ಮಾಡುವಂತೆ ತುಂಗಭದ್ರ ಮಂಡಳಿಗೆ ಶಿಫಾರಸ್ಸು ಮಾಡಿದ್ದೇವೆ. ಇದರಿಂದ ಕೆಳ ಭಾಗದ ರೈತರ ಎರಡು ಬೆಳೆಗಳಿಗೆ ನೀರು ಒದಗಿಸಲು ಯಾವುದೇ ಸಮಸ್ಯೆಯಾಗುವುದಿಲ್ಲ. ಕ್ರಸ್ಟ್‌ಗೇಟ್‌ಗಳ ಅಳವಡಿಕೆ ನಿರೀಕ್ಷೆಯಂತೆ ಎಲ್ಲ ಸರ್ಕಾರಗಳು ತಮ್ಮ ಪಾಲಿನ ಅನುದಾನ ಒದಗಿಸಿವೆ ಎಂದು ಇದೇ ವೇಳೆ ಎನ್.ಕನ್ನಯ್ಯ ನಾಯ್ಡು ಸ್ಪಷ್ಟಪಡಿಸಿದರು.

ಕಿರುಸುದ್ಧಿ

ಬಾನುಲಿ ಕಾರ್ಯಕ್ರಮದಲ್ಲಿ ವಿತಾವಿ ಕುಲಪತಿ ಡಾ.ವಿದ್ಯಾಶಂಕರ್

◆ **ಹಳಿಯಾಳ:** ವಿತಾವಿ ಬೆಳಗಾವಿಯ ಕುಲಪತಿ ಡಾ.ಎಸ್ ವಿದ್ಯಾಶಂಕರ್ ಏಪ್ರಿಲ್ 15ರಂದು ಆಕಾಶವಾಣಿ ಧಾರವಾಡ ಬಾನುಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ.



ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯ ಪ್ರಾಯೋಜಿತ ಕಾರ್ಯಕ್ರಮ 'ಜನ ಸಾಮಾನ್ಯರಿಗಾಗಿ ತಂತ್ರಜ್ಞಾನ'ದ ಉದ್ಘಾಟನಾ ಸಂಚಿಕೆಯಲ್ಲಿ ಪಾಲ್ಗೊಂಡು ಮಾತನಾಡಲಿದ್ದಾರೆ. ಜನಸಾಮಾನ್ಯರಿಗೆ ತಂತ್ರಜ್ಞಾನ ಕುರಿತಾಗಿ ಮಾಹಿತಿ ನೀಡುವ ಕಾರ್ಯಕ್ರಮ ಇದಾಗಿದ್ದು, ಮಹಾವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಮಾಜಿ ವಿದ್ಯಾರ್ಥಿಗಳು, ಶಿಕ್ಷಣ ಕ್ಷೇತ್ರದ ಪರಿಣಿತರು ಮತ್ತು ಕೈಗಾರಿಕಾ ತಂತ್ರಜ್ಞರು ಈ ಬಾನುಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಲಿದ್ದಾರೆ. ಧಾರವಾಡ ಆಕಾಶವಾಣಿ ಕೇಂದ್ರದಿಂದ 765kHz ಹಾಗೂ 103MHz ಕಂಪನಾಂಕದಲ್ಲಿ 90 ದಿನಗಳವರೆಗೆ ಮುಂಜಾನೆ 6.50ರಿಂದ ಈ ಕಾರ್ಯಕ್ರಮ ಪ್ರಸಾರವಾಗಲಿದೆ ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ತಿಳಿಸಿದ್ದಾರೆ.

ಬಿಜೆಪಿಗರಲ್ಲಿ ಗೊಂದಲ: ಲಾಡ್ ವ್ಯಂಗ್ಯ

ಮಹಿಳಾ ಮೀಸಲು ಮಸೂದೆ ಸ್ವಾಗತ

◆ **ಧಾರವಾಡ:** ಮಹಿಳಾ ಮೀಸಲಾತಿ ಮಸೂದೆ ಸ್ವಾಗತಿಸುತ್ತೇನೆ. 12 ವರ್ಷದಿಂದ ಮಹಿಳಾ ಮೀಸಲಾತಿ, ಡಿಲಿಮಿಟೇಶನ್ ಕುರಿತು ಚಕಾರವೇ ಎತ್ತದ ಬಿಜೆಪಿಗರಲ್ಲಿ ಈ ಬಗ್ಗೆ ಗೊಂದಲವಿದೆ ಎಂದು ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ವ್ಯಂಗ್ಯವಾಡಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯಸಭೆಯಲ್ಲಿ ನಮಗೆ ಬಹುಮತ ಇರಲಿಲ್ಲ. ಹೀಗಾಗಿ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಪ್ರಯತ್ನಿಸಿದ್ದೇವೆ. ವಿಷಯ ತಿರುಚುವಲ್ಲಿ ಬಿಜೆಪಿಗರು ನಿಸ್ಸೀಮರು ಎಂದು ವಾಗ್ದಾಳಿ ನಡೆಸಿದರು.

ಮಧ್ಯಪ್ರಾಚ್ಯ ಯುದ್ಧದ ಪ್ರತಿಕ್ರಿಯಿಸಿದ ಲಾಡ್, ಅಮೆರಿಕ ಅಧ್ಯಕ್ಷ ಟ್ರಂಪ್‌ನಿಂದ ಪ್ರಪಂಚಕ್ಕೆ ಅನಾನುಕೂಲವಾಗಿದೆ. ಆದರೆ, ನಮ್ಮ ನಿಲವು ದೃಢವಾರಿಬೇಕು. ನಮ್ಮ ದೇಶಕ್ಕೆ ಅನುಕೂಲ ಆಗುವ ದೇಶಗಳೊಂದಿಗೆ ಮಾತ್ರ ವ್ಯವಹರಿಸಬೇಕು ಎಂದು ಹೇಳಿದರು.

ಆಡಿಯೋ ಕೇಳಿಲ್ಲ

ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣ ಹಾಗೂ ಇಸ್ಮಾಯಿಲ್ ತಮಟಗಾರ ಆಡಿಯೋ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಲಾಡ್, ನಾನು ಮತ್ತು ಜಮೀರ್ ಅಹ್ಮದ್ ರಾಜಕೀಯವಾಗಿ ಬಳಸಿಕೊಂಡ ಆಡಿಯೋ ಕೇಳಿಲ್ಲ. ಈ ಬಗ್ಗೆ ಅವರನ್ನೇ ಕೇಳಿ. ನನ್ನ ಕ್ಷೇತ್ರವೇ ಬೇರೆ, ಅವರ ಕ್ಷೇತ್ರವೇ ಬೇರೆ. ಪಕ್ಷಕ್ಕಾಗಿ ಎಲ್ಲರೂ ಕೆಲಸ ಮಾಡುತ್ತಾರೆ ಎಂದ ಲಾಡ್, ಇದು ಸಮುದಾಯ ಗಲಾಟೆ ಅಲ್ಲ, ಅದು ಸ್ನೇಹಿತರಲ್ಲಿ ನಡೆದ ಕೊಲೆ. ಆದರೆ ಆಡಿಯೋ ಕೇಳಿಲ್ಲ ಎಂದು ಪುನಃ ಸ್ಪಷ್ಟನೆ ನೀಡಿದರು.

> **ಪ್ರತಿಯೊಬ್ಬ ಶಾಸಕರು ಸಚಿವ ಸ್ಥಾನ ಕೇಳುವುದು ತಪ್ಪಲ್ಲ. ಅದು ಅವರ ಹಕ್ಕಾಗಿದೆ. ಆದರೆ, ಪಕ್ಷದ ಶಿಷ್ಟಾಚಾರ ಉಲ್ಲಂಘಿಸಿ, ಪಕ್ಷದ ಯಾವುದೇ ಶಾಸಕರು, ಏನನ್ನು ಮಾತನಾಡಬಾರದು. ಬೇಕಾಬಿಟ್ಟಿ ಮಾತನಾಡುವುದು ಶಾಸಕರಿಗೆ ಶೋಭೆ ತರಲ್ಲ.**
> ■ **ಸಂತೋಷ ಲಾಡ್, ಕಾರ್ಮಿಕ ಇಲಾಖೆ ಸಚಿವರು**

ಖಾಲಿ ಹುದ್ದೆಗಳ ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆಗೆ ಯತ್ನ

ವಿದ್ಯಾರ್ಥಿ ಮುಖಂಡರ ಬಂಧನ: ಆಕ್ರೋಶ

◆ **ಧಾರವಾಡ:** ಸರ್ಕಾರಿ ಇಲಾಖೆಗಳ ಖಾಲಿ ಹುದ್ದೆಗಳ ಭರ್ತಿ ಹಾಗೂ ಕೆಪಿಎಸ್‌ಸಿ ಪರೀಕ್ಷಾ ಅಕ್ರಮ ತನಿಖೆಗೆ ಆಗ್ರಹಿಸಿ ಕರ್ನಾಟಕ ವಿದ್ಯಾರ್ಥಿ ಸಂಘ ಕೈಗೊಂಡಿದ್ದ ಅಹೋರಾತ್ರಿ ಧರಣಿಗೂ ಮೊದಲೇ, ಪೊಲೀಸರು ಮುಖಂಡರನ್ನು ವಶಕ್ಕೆ ಪಡೆದ ಘಟನೆ ನಡೆದಿದೆ.



ನಗರದ ಶಾರದಾ ಸ್ಕೂಲ್ ಪಕ್ಕದಲ್ಲಿ ಕರ್ನಾಟಕ ವಿದ್ಯಾರ್ಥಿ ಸಂಘ ಅಹೋರಾತ್ರಿ ಧರಣಿಗೆ ಕರೆ ನೀಡಿತ್ತು. ಆದರೆ, ಜಿಲ್ಲಾ ಪೊಲೀಸ್ ಇಲಾಖೆ ಧರಣಿಗೆ ಅನುಮತಿ ನಿರಾಕರಿಸಿತ್ತು. ಮಂಗಳವಾರ ಅನುಮತಿ ನಿರಾಕರಣೆ ನಡುವೆಯೂ ಸತ್ಯಾಗ್ರಹಕ್ಕೆ ಸಂಘ ಮುಂದಾಗಿತ್ತು.

ಸರ್ಕಾರದ ವಿರುದ್ಧ ಆಕ್ರೋಶ: ನೂರಾರು ನಿರುದ್ಯೋಗಿ ಯುವಕರು ಮತ್ತು ವಿವಿಧ ಸಂಘಟನೆಗಳ ಮುಖಂಡರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಕೆಲಸ ಕೊಡಿ ಇಲ್ಲವೇ ರಾಜೀನಾಮೆ ಕೊಡಿ' ಎಂಬ ಫಲಕಗಳನ್ನು ಪ್ರದರ್ಶಿಸುವುದರ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಮಾತಿನ ಚಕಮಕಿ: ಸ್ಥಳಕ್ಕೆ ಆಗಮಿಸಿದ ಪೊಲೀಸರು ಧರಣಿಗೆ ಅನುಮತಿ ನೀಡಿಲ್ಲ. ಅಲ್ಲದೇ, ಧರಣಿ ನಡೆದಂತೆ ನೋಟಿಸ್ ನೀಡಿರುವುದು ಮನವರಿಕೆ ಮಾಡಿದರು. ಧರಣಿ ತಡೆಯಲು ಯತ್ನಿಸಿದಾಗ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು.

ಮುಖಂಡರ ಬಂಧನ: ಪರಿಸ್ಥಿತಿ ನಿಯಂತ್ರಣ ತಪ್ಪುವುದು ಗಮನಿಸಿದ ಪೊಲೀಸರು, ನೇತೃತ್ವ ವಹಿಸಿದ್ದ ಯಲ್ಲಪ್ಪ ಹೆಗಡೆ, ಚಾಣಕ್ಯ, ನಾಗರಾಜ ಚಲವಾದಿ ಸೇರಿ ಹಲವು ಮುಖಂಡರನ್ನು ಬಲವಂತವಾಗಿ ಬಂಧಿಸಿದರು. ಇದಕ್ಕೆ ಕೆಲವರು ವಿರೋಧಿಸಿ ರಸ್ತೆಯಲ್ಲಿ ಕುಳಿತು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಬಂದೋಬಸ್ತ್: ಮುಂಜಾಗ್ರತ ಕ್ರಮವಾಗಿ ಪೊಲೀಸ್ ಇಲಾಖೆ ಜಯನಗರ, ಶ್ರೀನಗರ ಸರ್ಕಲ್, ಸಪ್ತಾಪುರ ಸೇರಿದಂತೆ ವಿವಿಧ ಆಯಕಟ್ಟಿನ ಪ್ರದೇಶಗಳಲ್ಲಿ ಧರಣಿ ನಡೆಸದಂತೆ ಕಟ್ಟೆಚ್ಚರ ವಹಿಸಲು ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು. ಇದರಿಂದಾಗಿ ಸತ್ಯಾಗ್ರಹ ನಡೆಯಲಿಲ್ಲ.

ದಮನಕಾರಿ ನೀತಿ

ಉದ್ಯೋಗದ ಹಕ್ಕಿಗಾಗಿ ಶಾಂತಿಯುತ ಹೋರಾಟ ಮಾಡುತ್ತಿದ್ದೇವೆ. ಆದರೆ, ಈ ಸರ್ಕಾರ ದಮನಕಾರಿ ನೀತಿ ಅನುಸರಿಸುತ್ತಿದೆ. ನೇಮಕಾತಿ ಅಕ್ರಮಗಳು ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡುತ್ತಿವೆ ಎಂದು ಮುಖಂಡ ಯಲ್ಲಪ್ಪ ಹೆಗಡೆ ಕಿಡಿಕಾರಿದರು.

> **ನಾನೂ ಉದ್ಯೋಗಕಾಂಕ್ಷಿಗಳ ಪರವಾಗಿದ್ದೇನೆ. ಸರ್ಕಾರವೂ ಸಂಪರ್ಕಿಸಿದ್ದೇವೆ. ಅಧಿವೇಶನದಲ್ಲಿ ಚರ್ಚೆ ಆಗಿದೆ. ಒಳಮೀಸಲಾತಿ ವಿಚಾರ ಎಲ್ಲರಿಗೂ ಗೊತ್ತಿರುವ ಸಂಗತಿ. ನೇಮಕಾತಿಗೆ ಕೆಲವು ತಾಂತ್ರಿಕ ಸಮಸ್ಯೆಗಳಿವೆ. ಹೀಗಾಗಿ ಸ್ವಲ್ಪ ತಾಳ್ಮೆ ವಹಿಸಬೇಕು.**
> ■ **ಸಂತೋಷ ಲಾಡ್, ಜಿಲ್ಲಾ ಉಸ್ತುವಾರಿ ಸಚಿವರು**

> **ಪ್ರತಿಭಟನೆ, ರ್ಯಾಲಿ ನಡೆಸಲು ಯಾವುದೇ ವಿದ್ಯಾರ್ಥಿ ಸಂಘಟನೆಗೆ ಅನುಮತಿ ನೀಡಿಲ್ಲ. ಧರಣಿ ನಡೆಸಿದಂತೆ ನೋಟಿಸ್ ಕೂಡ ನೀಡಿದೆ. ಹೀಗಾಗಿ ಕಾನೂನು ಬಾಹಿರ ಧರಣಿಗೆ ಮುಂದಾದ ವಿದ್ಯಾರ್ಥಿ ಸಂಘಟನೆ ಮುಖಂಡರನ್ನು ಬಂಧಿಸಿದೆ.**
> ■ **ಎನ್.ಶಶಿಕುಮಾರ್, ಹು-ಧಾ ಪೊಲೀಸ್ ಆಯುಕ್ತರು**

ಬೆಳಗಾವಿಯ ಮೊದಲ ಮರ್ಯಾದಾ ಹತ್ಯೆ ಪ್ರಕರಣ ಬಯಲಿಗೆ

◆ **ಬೆಳಗಾವಿ:** ಮದುವೆಯಾಗಿರುವ ಮಗಳು ಪ್ರೀತಿಸಿದವನ ಜೊತೆ ಓಡಿ ಹೋಗಿದ್ದಾಳೆ ಎಂಬ ಕಾರಣಕ್ಕೆ ಮಗಳನ್ನು ಕೊಲೆ ಮಾಡಿ, ಬಳಿಕ ಸುಟ್ಟು ಹಾಕಿರುವ ಮರ್ಯಾದೆಗೇಡು ಹತ್ಯೆ ಬೆಳಗಾವಿಯಲ್ಲಿ ನಡೆದಿದ್ದು, ಇಡೀ ರಾಜ್ಯವೇ ಬೆಚ್ಚಿ ಬಿದ್ದಿದೆ.

ಬೆಳಗಾವಿ ಜಿಲ್ಲೆಯಲ್ಲಿ ಬೆಳಕಿಗೆ ಬಂದ ಮೊಟ್ಟ ಮೊದಲ ಮರ್ಯಾದೆಗೇಡು ಹತ್ಯೆ ಇದು. ತನ್ನ ಗಂಡನನ್ನು ಬಿಟ್ಟು ಪ್ರಿಯಕರನೊಂದಿಗೆ ಓಡಿ ಹೋಗಿದ್ದಾಳೆ ಎಂಬ ಕಾರಣಕ್ಕೆ ಸ್ವಂತ ಕುಟುಂಬದವರೇ ಯುವತಿಗೆ ವಿಷ ಕುಡಿಸಿ ಕೊಲೆ ಮಾಡಿ, ಸಾಕ್ಷ್ಯ ನಾಶಪಡಿಸಲು ಮೃತದೇಹವನ್ನು ಸುಟ್ಟು ಹಾಕಿರುವ ಭೀಕರ ಘಟನೆ ಬೆಳಕಿಗೆ ಬಂದಿದೆ. ಇದೀಗ ಆರೋಪಿಗಳನ್ನು ಬಂಧಿಸಲಾಗಿದೆ.

ಮುಚ್ಚಿ ಹಾಕಲಾಗಿದ್ದ ಪ್ರಕರಣವನ್ನು ಯಮಕನಮರಡಿ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಜಾವೀದ್ ಮುಶಾಪುರೆ ಚಾಣಾಕ್ಷತನದಿಂದ ಬಯಲಿಗೆಳೆದಿದ್ದಾರೆ.



ಹುಕ್ಕೇರಿ ತಾಲೂಕಿನ ನದಿಗುಡಿ ಕ್ಷೇತ್ರದ, 24 ವರ್ಷದ ಸತ್ಯವ್ವ ಸಂತೋಷ ಹೆಳವಿ ಎಂಬುವವಳೇ ಕೊಲೆಯಾದ ದುರ್ದೈವಿ. ಸತ್ಯವ್ವಳಿಗೆ ರಾಯಬಾಗ ತಾಲೂಕಿನ ಹಣಬರಟ್ಟಿಯ ಸಂತೋಷ ಹೆಳವಿ ಎನ್ನುವವನ ಜೊತೆ ಮದುವೆಯಾಗಿತ್ತು. ಆದರೆ, ನದಿಗುಡಿ ಕ್ಷೇತ್ರದ ಕ್ಷತ್ರೀಯ ಜಾತಿಗೆ ಸೇರಿದ ಕೃಷ್ಣಾ ಸಹದೇವ ಪಾಟೀಲ ಎಂಬಾತನನ್ನು ಪ್ರೀತಿಸುತ್ತಿದ್ದ ಆಕೆ, ಇತ್ತೀಚೆಗೆ ತನ್ನ ಪತಿಯನ್ನು ಬಿಟ್ಟು ಆತನ ಜೊತೆ ಹೋಗಿದ್ದಳು.

ಇದರಿಂದ ತಮ್ಮ ಕುಟುಂಬದ ಮರ್ಯಾದೆ ಹರಾಜಾಗಿದೆ ಎಂದು ಆಕ್ರೋಶಗೊಂಡಿದ್ದ ತವರು ಮನೆಯವರು ಆಕೆಗಾಗಿ ಹುಡುಕಾಟ ನಡೆಸಿದ್ದರು.

ಮಾರ್ಚ್ 13ರಂದು ಸತ್ಯವ್ವಳನ್ನು ಪತ್ತೆ ಹಚ್ಚಿದ ಕುಟುಂಬಸ್ಥರು, ಆಕೆಯ ಮನವೊಲಿಸಲು ಪ್ರಯತ್ನಿಸಿದ್ದಾರೆ. ಮಹಾರಾಷ್ಟ್ರದ ಶಿರೋಳಕ್ಕೆ ಕರೆದುಕೊಂಡು ಹೋಗಿ ಟೆಂಟ್ ಹಾಕಿ ಇಟ್ಟುಕೊಂಡು ಸತತ ಪ್ರಯತ್ನಿಸಿದರೂ ಆಕೆ ಒಪ್ಪಲಿಲ್ಲ. ತಮ್ಮದೇ ಜಾತಿಯ ಬೇರೆ ಹುಡುಗನ ಜೊತೆ ಮದುವೆ ಮಾಡುವುದಾಗೂ ಹೇಳಿದರು. ಆದರೂ ಒಪ್ಪದಿದ್ದಾಗ ಅರಗಕ್ಕೆ ಕರೆದುಕೊಂಡು ಹೋಗಿ ಆಕೆಗೆ ಮಧ್ಯರಾತ್ರಿ ಬಲವಂತವಾಗಿ ವಿಷ ಕುಡಿಸಿ, ಆಕೆಯನ್ನು ಭೀಕರವಾಗಿ ಹತ್ಯೆ ಮಾಡಿದ್ದಾರೆ. ಬಳಿಕ ಯಾರಿಗೂ ಸುಳಿವು ಸಿಗಬಾರದೆಂಬ ಉದ್ದೇಶದಿಂದ ಶವವನ್ನು ಅರಗದ ಸ್ಮಶಾನದಲ್ಲಿ ಸುಟ್ಟು ಹಾಕಿದ್ದಾರೆ.

ಈ ಬಗ್ಗೆ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೆತ್ತಿಕೊಂಡು ಅಮಾನವೀಯ ಕೃತ್ಯ ಬಯಲು ಮಾಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಯುವತಿಯ ಚಿಕ್ಕಪ್ಪ ಪ್ರಕಾಶ ಭೀಮಪ್ಪ ಹೆಳವರ (46), ಸಹೋದರ ಶಾನೂರ ಸದಾಶಿವ ಹೆಳವರ (35) ಮತ್ತು ಬಾವ ಮೊರಬದ ಕಲ್ಲಪ್ಪ ಮಾಯಪ್ಪ ಹೆಳವಿ (40) ಇವರನ್ನು ಬಂಧಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಂದ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ.

ಬಾಲಕನ ಜೀವ ತೆಗೆದ ಸೊಳ್ಳೆ ಬತ್ತಿ

◆ **ಗದಗ:** ಕ್ರೂಸರ್ ವಾಹನದಲ್ಲಿ ಮಲಗಿದ್ದ ಬಾಲಕನೊಬ್ಬ ಬೆಂಕಿಗೆ ಆಹುತಿಯಾದ ಘಟನೆ ತಾಲೂಕಿನ ಹೊಂಬಳ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಹುಬ್ಬಳ್ಳಿ ತಾಲೂಕಿನ ತಾರಿಹಾಳ ಗ್ರಾಮದ ಸದಾನಂದ ಉಪ್ಪಾರ (14) ಮೃತ ಬಾಲಕ. ಈತ ಹೊಂಬಳದಲ್ಲಿರುವ ಅಜ್ಜಿ ಮನೆಯಲ್ಲಿ ಇದ್ದುಕೊಂಡು ಓದುತ್ತಿದ್ದ ಎನ್ನಲಾಗಿದೆ.

'ಬೇಸಿಗೆ ಕಾರಣಕ್ಕೆ ಬಾಲಕ ಸದಾನಂದ ಉಪ್ಪಾರ ಮನೆಯ ಹೊರಗೆ ನಿಲ್ಲಿಸಿದ್ದ ಕ್ರೂಸರ್ ವಾಹನದೊಳಗೆ ಸೊಳ್ಳೆ ಬತ್ತಿ ಹಚ್ಚಿಕೊಂಡು ಮಲಗಿದ್ದ. ಈ ವೇಳೆ ಸೀಟುಗಳಿಗೆ ಬೆಂಕಿ ಹತ್ತಿಕೊಂಡಿದ್ದು ಬಾಲಕ ಸಜೀವ ದಹನವಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನದ ಮೇಲ್ಭಾಗದಲ್ಲಿ ಮಲಗಿದ್ದ ಬಾಲಕನ ಅಣ್ಣ ಮೈಲಾರಿ ಉಪ್ಪಾರ (16) ಬೆಂಕಿ ಕಾಣಿಸಿಕೊಂಡ ತಕ್ಷಣ ಕೆಳಕ್ಕೆ ಜಿಗಿದು ಪಾರಾಗಿದ್ದಾನೆ. ಗದಗ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

▸▸ ಕ್ರೂಸರ್ ವಾಹನದಲ್ಲಿ ಸೊಳ್ಳೆ ಬತ್ತಿ ಹಚ್ಚಿಕೊಂಡು ಮಲಗಿದ್ದ. ಈ ವೇಳೆ ಸೀಟುಗಳಿಗೆ ಬೆಂಕಿ ಹತ್ತಿಕೊಂಡಿದ್ದು ಬಾಲಕ ಸಜೀವ ದಹನ

ತುಷ್ಟೀಕರಣದಲ್ಲಿ ಮುಳುಗಿದ ಕಾಂಗ್ರೆಸ್: ಮುತಾಲಿಕ್

◆ **ಹುಬ್ಬಳ್ಳಿ:** ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರ ಮುಖ್ಯವೇ ಹೊರತು ಸಂಸ್ಕೃತಿ ಹಾಗೂ ಹೆಣ್ಣು ಮಕ್ಕಳ ರಕ್ಷಣೆ ಮುಖ್ಯವಲ್ಲ. ತುಷ್ಟೀಕರಣದಲ್ಲಿ ಮುಳುಗಿದ ಅವರು ಲವ್ ಜಿಹಾದ್, ಹೆಣ್ಣು ಮಕ್ಕಳ ದೌರ್ಜನ್ಯದ ಬಗ್ಗೆ ಏನು ಮಾತನಾಡಲ್ಲ ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಕಿಡಿಕಾರಿದರು.



ನಗರದಲ್ಲಿ ಮಂಗಳವಾರ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಇಲ್ಲಿಯ ಸ್ಟೇಶನ್ ರಸ್ತೆಯಲ್ಲಿ ಬಿ.ಆರ್.ಅಂಬೇಡ್ಕರ್ ಅವರು ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಅವರ ಮನೆಯ ಹೆಣ್ಣು ಮಕ್ಕಳಿಗೂ ಏನಾದರೂ ಸುಮ್ಮನಿರುತ್ತಾರೆ. ಸರ್ಕಾರದಿಂದ ಏನು ಕ್ರಮವಾಗಲ್ಲ. ಆದ್ದರಿಂದ ಲವ್ ಜಿಹಾದ್ ವಿರುದ್ಧ ಕಠಿಣ ಕಾಯ್ದೆ ಜಾರಿಗೆ ತರಬೇಕು ಎಂದು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.

ಲವ್ ಜಿಹಾದ್ ವೈರಸ್‌ನಂತೆ ದೊಡ್ಡ ಪ್ರಮಾಣದಲ್ಲಿ ಹರಡಿದೆ. ಇದನ್ನು ತಡೆಯಲು ಸಮಾಜ ಹಾಗೂ ಪಾಲಕರು ಜಾಗೃತರಾಗಬೇಕು. ಹಿಂದು ಸಂಘಟಕರು ನಿರಂತರವಾಗಿ ಈ ಕಾರ್ಯದಲ್ಲಿ ತೊಡಗಿದ್ದು, ಜಾಗೃತಿ ಮೂಡಿಸುತ್ತಿದ್ದಾರೆ. ಶ್ರೀರಾಮ ಸೇನೆ ಹೆಲ್ಪ್‌ಲೈನ್ ಆರಂಭಿಸಿದ್ದು, 8 ಸಾವಿರ ಕರೆಗಳು ಬಂದಿವೆ ಎಂದು ತಿಳಿಸಿದರು.

ಮಹಾರಾಷ್ಟ್ರದ ಐಟಿ ಕಂಪನಿಯೊಂದರಲ್ಲಿ ಲವ್ ಜಿಹಾದ್ ಹಾಗೂ ಮತಾಂತರ ಮಾಡುತ್ತಿದ್ದ 7 ಜನರ ಬಂಧಿಸಲಾಗಿದೆ. ಇಡೀ ದೇಶದಲ್ಲಿ ಎಲ್ಲ ಕಂಪನಿಗಳಲ್ಲಿ ನಡೆಯುತ್ತಿದೆ. ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಜಿಮ್‌ಗಳ ಮೇಲೆ ಪೊಲೀಸರು ಹಾಗೂ ಸರ್ಕಾರ ಕಣ್ಣು ಇರುತ್ತದೆಯೋ ಗೊತ್ತಿಲ್ಲ. ಹಿಂದು ಸಂಘಟಕರು ಕಣ್ಣು ಇರುತ್ತದೆ. ಮುಂದೆ ನಾವು ಪೊಲೀಸರಿಗೆ ದೂರು ನೀಡಲ್ಲ, ಅಂತ ಕೃತ್ಯಗಳು ನಡೆದರೆ ಜಿಮ್‌ಗೆ ಹೊಕ್ಕು ಹೊಡೆಯುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಯುವತಿಯರ ಮೇಲೆ ದೌರ್ಜನ್ಯ, ಬರ್ಬರ ಹತ್ಯೆಗಳು, ಲವ್ ಜಿಹಾದ್ ಹಾಗೂ ಮತಾಂತರ ನಡೆಯುತ್ತಿದ್ದರೂ ಸಹ ಹಿಂದು ಯುವತಿಯರು ಅನ್ಯ ಸಮುದಾಯ ಯುವಕರ ಬಲೆ ಬೀಳುತ್ತಿದ್ದಾರೆ. ಈಗಲಾದರೂ ಹಿಂದು ಯುವತಿಯರು ಎಚ್ಚೆತ್ತುಕೊಳ್ಳಬೇಕು ಎಂದು ಒತ್ತಾಯಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸು ನನಸಾಗಿಲ್ಲ. ದೇಶದಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ. ದಲಿತದ ಮೇಲೆ ದೌರ್ಜನ್ಯ ನಡೆಯುತ್ತಿದೆ. ಸಮಾನತೆ ಪೂರ್ಣವಾಗಿಲ್ಲ. ನಾವೆಲ್ಲರೂ ಒಟ್ಟಿಗೆ ಸೇರಿ ಅವರ ಕನಸು ನನಸು ಮಾಡಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳಿಂದ ಹಣ ಪಡೆದ ಪ್ರಕರಣ: ಶಿಕ್ಷಕ ಅಮಾನತು

◆ **ಸಿಂದಗಿ:** ನಗರದ ಸರ್ಕಾರಿ ಆದರ್ಶ ವಿದ್ಯಾಲಯದ ಶಿಕ್ಷಕ ರಮೇಶ ಚಟ್ಟರಕಿ ಅವರನ್ನು ಶಾಲಾ ಶಿಕ್ಷಣ ಇಲಾಖೆ ಉಪ-ನಿರ್ದೇಶಕರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ತಮಗೆ ಬೇಕಾಗಿರುವ ಪರೀಕ್ಷಾ ಕೇಂದ್ರ ಹಾಕಿಸಿ ಕೊಡುವ ವಿಚಾರವಾಗಿ ವಿದ್ಯಾರ್ಥಿಗಳಿಂದ ಹಣ ಪಡೆದ ವಿಚಾರವಾಗಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿರುವ ಆಡಿಯೋ ಸಾಮಾಜಿಕ ಜಾಲತಾಣ ಹಾಗೂ ಸುದ್ದಿ ವಾಹಿನಿಗಳಲ್ಲಿ ಹರಿದಾಡಿದ್ದು ಗಮನಿಸಲಾಗಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಮಯದಲ್ಲಿ ವಿನಾಕಾರಣ ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿ ಮಾಡುವ ಮೂಲಕ ಶಿಕ್ಷಕರಿಗೆ ಸರಿಯಲ್ಲದ ರೀತಿಯಲ್ಲಿ ವರ್ತನೆ ಮಾಡಿರುವುದು ಮೇಲ್ನೋಟಕ್ಕೆ ಕಂಡ ಬಂದ ದಿಸೆಯಲ್ಲಿ ಈ ವಿಷಯ ಇಲಾಖೆಗೆ ಮುಜಗರ ಉಂಟು ಮಾಡಿದೆ.

ಇದನ್ನು ಗಂಭೀರವಾಗಿ ಪರಿಗಣಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಬಿ.ಯಡ್ರಾಮಿ ಅವರು ಸ್ಪಷ್ಟ ಅಭಿಪ್ರಾಯ ಕಾರ್ಯಾಲಯಕ್ಕೆ ಸಲ್ಲಿಸಿದ್ದಾರೆ. ಆರೋಪಗಳ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ-ನಿರ್ದೇಶಕರು ಆದೇಶಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ-ವಿಭಾಗದ ವ್ಯಾಪ್ತಿಯಲ್ಲಿ ಹೆಚ್.ಟಿ. ವಾಹಕ ಬದಲಾವಣೆ, ಮತ್ತು ನಿರ್ವಹಣೆಯ ನಿಮಿತ್ತ ಏ.15ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ , ಕಾರವಾರ ಟೌನ್, ಹಬ್ಬುವಾಡ, ಕೆ.ಹೆಚ್.ಬಿ. ನಂದನಗದ್ದಾ, ಸುಂಕೇರಿ, ತೆಲಂಗರೋಡ್, ಶಿರವಾಡ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ. ಜಗಜೀವನ ರಾಂ, ಅಂಬೇಡ್ಕರ್ ಜಯಂತಿ



ಹೊನ್ನಾವರ: ತಾಲೂಕ ಆಡಳಿತ, ತಾಪಂ ಸಮಾಜ ಕಲ್ಯಾಣ ಆಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮದಿನಾಚರಣೆ ಮತ್ತು ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬೂ ಜಗಜೀವನ ರಾವ್ ಅವರ 119ನೇ ಜನ್ಮದಿನಾಚರಣೆಯನ್ನು ಪಪಂ ಸಭಾಭವನದಲ್ಲಿ ಮಂಗಳವಾರ ಆಚರಿಸಲಾಯಿತು.ತಹಶೀಲ್ದಾರ್ ಪ್ರವೀಣ ಕರಾಂಡೆ, ಪಪಂ ಮುಖ್ಯಾಧಿಕಾರಿ ಎಸು ಬೆಂಗಳೂರು,ಪ್ರೊ. ವಿಶಾಲ್ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಜಿ.ಸತೀಶ, ಸಿಡಿಪಿಓ ವನಿತಾ ದೇಶಭಂಡಾರಿ, ಬಿಇಓ ಜಯಶ್ರೀ ನಾಯ್ಕ, ಕರವೇ ಅಧ್ಯಕ್ಷ ಮಂಜುನಾಥ್ ಗೌಡ, ಜಿಲ್ಲಾ ಮುಕ್ರಿ ಸಮಾಜದ ಜಿಲ್ಲಾಧ್ಯಕ್ಷೆ ಮಂಜುಳಾ ಮುಕ್ರಿ, ಹೊನ್ನಾವರ ಉಳಿಸಿ ಬೆಳೆಸಿ ಅಧ್ಯಕ್ಷ ಜಿ.ಎನ್. ಗೌಡ, ಡಾ.ಜಿ. ಪಿ. ಪಾಠಣಕರ, ಇದ್ದರು.ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 60% ಕ್ಕಿಂತ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪೌರಕಾರ್ಮಿಕರನ್ನು ಸನ್ಮಾನಿಸಿಲಾಯಿತು. ಸುಮಂಗಲಾ ಭಟ್ ಸ್ವಾಗತಿಸಿದರು. ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಜಿ ಸತೀಶ, ಯುವಜನಸೇವಾ ಕ್ರೀಡಾಧಿಕಾರಿ ಸುಧೀಶ ನಾಯ್ಕ ಕಾರ್ಯಕ್ರಮ ನಿರ್ವಹಿಸಿದರು.

ಸಮಾನತೆಯ ಸಂದೇಶ ಸಾರಿದ ನಾಯಕ: ಅಂಬೇಡ್ಕರ್



ಕುಮಟಾ: ಭಾರತದಾದ್ಯಂತ ಜನರು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಕಡೆಗೆ ಚಿಂತನೆ ನಡೆಸಿ, ಡಾ.ಅಂಬೇಡ್ಕರ್ ಅವರ ಅವಿಶ್ರಾಂತ ಪ್ರಯತ್ನಗಳನ್ನು ಸ್ಮರಿಸುವ ದಿನ ಇದು. ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಮಾನತೆಯ ಹಕ್ಕನ್ನು ನೀಡಬಲ್ಲ ಕಾನೂನಿನಿಂದ ಪ್ರತಿಯೊಬ್ಬರೂ ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು. ಪಟ್ಟಣದ ತಾಪಂ ಸಭಾಭವನದಲ್ಲಿ ಮಂಗಳವಾರ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಹಾಗು ಡಾ.ಬಾಬೂ ಜಗ್ ಜೀವನ್ ರಾಮ್ ಅವರ 119ನೇ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಹಿಂದೂ ಮುಕ್ರಿ ಸಮಾಜದ ವತಿಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯ ಅಂಗವಾಗಿ ಪಟ್ಟಣದ ಗಿಬ್ ಹೈಸ್ಕೂಲ್ ವೃತ್ತದಿಂದ ಬೃಹತ್ ಬೈಕ್ ರ್‍ಯಾಲಿ ನಡೆಸಲಾಯಿತು. ಅಲ್ಲದೇ ಬೃಹತ್ ಅಂಬೇಡ್ಕರ್ ಭಾವಚಿತ್ರವುಳ್ಳ ವಾಹನದ ಮೂಲಕ ಮೆರವಣಿಗೆ ನಡೆಸಲಾಯಿತು. ಕುಮಟಾದಿಂದ ಹೊನ್ನಾವರದವರೆಗೆ ಬೈಕ್ ರ್‍ಯಾಲಿ ಸಂಚರಿಸಿತು.ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗು ಸಾಧಕರಿಗೆ ಸನ್ಮಾನಿಸಲಾಯಿತು. ಉಪವಿಭಾಗಾಧಿಕಾರಿ ಪಿ.ಶ್ರವಣಕುಮಾರ್, ತಹಶೀಲ್ದಾರ್ ಶ್ರೀಕೃಷ್ಣ ಕಾಮುಕರ್, ತಾಪಂ ಆಡಳಿತಾಧಿಕಾರಿ ಪ್ರಕಾಶ ಹಾಲಮ್ಮನವರ್, ಪುರಸಭೆ ಮುಖ್ಯಾಧಿಕಾರಿ ಎಂ.ಆರ್.ಸ್ವಾಮಿ, ತಾಪಂ ಇಒ ಆರ್.ಎಲ್.ಭಟ್ಟ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಭಾರತಿ ಆಚಾರಿ, ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಪ್ರೀತಿ ಭಂಡಾರಕರ್, ಬಿಇಓ ಉದಯ ನಾಯ್ಕ, ಎಸ್.ಸಿ, ಎಸ್.ಟಿ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು. ಪ್ರೊ.ಪ್ರಶಾಂತ ಮೂಡಲಮನೆ, ಚಿದಾನಂದ ಭಂಡಾರಿ ಕಾಗಲ ವಿಶೇಷ ಉಪನ್ಯಾಸ ನೀಡಿದರು. ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯ ಅಂಗವಾಗಿ ಕುಮಟಾದಿಂದ ಹೊನ್ನಾವರದವರೆಗೆ ಬೈಕ್ ರ್‍ಯಾಲಿ ಯಶಸ್ವಿಯಾಗಿ ನಡೆಯಿತು.



ಕಾರವಾರ: ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯ ಅಂಗವಾಗಿ ಜಿಲ್ಲಾ ಪಂಚಾಯತ್ ಆವರಣದಲ್ಲಿ ಸಂವಿಧಾನ ಪೀಠಿಕೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಡಾ.ದಿಲೀಷ್ ಶಶಿ ಉದ್ಘಾಟಿಸಿದರು. ಜಿಪಂ ಆಡಳಿತ ವಿಭಾಗದ ಉಪ ಕಾರ್ಯದರ್ಶಿ ಎಮ್.ಎಸ್.ಅಲ್ಲಾಬಕಷ್, ಜಿಪಂ ಮುಖ್ಯ ಯೋಜನಾಧಿಕಾರಿಗಳಾದ ಸೋಮಶೇಖರ್ ಮೇಸ್ತ, ಜಿಪಂ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ವಿವಿಧೆಡೆ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ

ಗೋಕರ್ಣ: ಇಲ್ಲಿನ ವಿವಿಧೆಡೆ ಅಂಬೇಡ್ಕ ಜಯಂತಿಯನ್ನ ಮಂಗಳವಾರ ಆಚರಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಸಮಾನತೆಯ ಮೂಲಕ ಸಮಾಜದ ಸುಧಾರಣೆಯ ಕಾರ್ಯ ಮಾಡಿದ ಅವರನ್ನು ಸ್ಮರಿಸಲಾಯಿತು. ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ. ಜಗದೀಶ ನಾಯ್ಕ, ಡಾ. ಚಿನುವಾಸನ್, ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಆಡುಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಕಾರ್ಯಕ್ರಮದಲ್ಲಿ ಬಾಬಾ ಸಾಹೇಬ ಅಂಬೇಡ್ಕರವರ ಜೀವನ ಚರಿತ್ರೆ ,ಅವರಿಂದ ದೇಶಕ್ಕೆ ನೀಡಿದ ಕೊಡುಗೆಯನ್ನ ವಿವರಿಸಲಾಯಿತು. ಇದಕ್ಕೂ ಮೊದಲು ಭಾವಚಿತ್ರಕ್ಕೆ ಪುಷ್ಪರ್ಚನೆ ಮಾಡಲಾಯಿತು. ಭದ್ರಕಾಳಿ ಸಂಯುಕ್ತ ಪದವಿಪೂರ್ವ ಕಾಲೇಜು ಹಾಗೂ ಪೌಢಶಾಲಾ ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಕಾರ್ಯದರ್ಶಿ ಜಿ.ಎನ್. ನಾಯಕ ಮಾತನಾಡಿ ಡಾ.ಬಿ.ಆರ್. ಅಂಬೇಡ್ಕರರವರು ಸಂವಿಧಾನದಲ್ಲಿರುವ ಮೂಲಭೂತ ಹಕ್ಕು ದೇಶದ ಪ್ರತಿಯೊಬ್ಬ ಪ್ರಜೆಗೂ ಪ್ರಜಾಪ್ರಭುತ್ವದ ಸರ್ಕಾರದ ಅಡಿಯಲ್ಲಿ ಯಾವುದೇ ತಾರತಮ್ಯವಿಲ್ಲದೆ ಬದುಕುವ ಸ್ವಾತಂತ್ರ್ಯವನ್ನ ಕೊಟ್ಟು ಜಗತ್ತಿಗೆ ಮಾದರಿಯಾಗಿದ್ದಾರೆ ಎಂದರು. ಈ ವೇಳೆ ಪ್ರಾಚಾರ್ಯ ಎಸ.ಸಿ. ನಾಯ್ಕ, ಪೌಢಶಾಲೆ ಮುಖ್ಯಾಧ್ಯಾಪಕ ಸಿ.ಜಿ.ನಾಯಕದೊರೆ, ಸತ್ಯನಾರಾಯಣ ಎನ್.ಎಂ.,ರಾಜಶೇಖರ ಬಾಗೇವಾಡಿ,ಅಶ್ವಿನಿ ಚಿತ್ತಾಲ,ಸಹಜಾ ವಿ.ಸಿ.,ಸಂತೋಷ ನಾಯಕ,ರೋಹಿತ ನಾಯಕ, ಪ್ರದೀಪ ನಾಯ್ಕ,ಮಂಜು ಮುಕ್ರಿ , ಸಿಬ್ಬಂದಿ ವರ್ಗದವರು ಹಾಜರಿದ್ದರು. ಉಳಿದೆಡೆಯ ಸರ್ಕಾರಿ -ಖಾಸಗಿ, ಶಾಲೆ- ಕಾಲೇಜು, ಕಚೇರಿಗಳಲ್ಲಿ ಅಂಬೇಡ್ಕರ ಜಯಂತಿ ಆಚರಿಸಲಾಯಿತು.



ಗೋಕರ್ಣ: ಇಲ್ಲಿನ ವಿವಿಧೆಡೆ ಅಂಬೇಡ್ಕ ಜಯಂತಿಯನ್ನ ಮಂಗಳವಾರ ಆಚರಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ. ಜಗದೀಶ ನಾಯ್ಕ, ಡಾ. ಚಿನುವಾಸನ್, ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅಭಿಮತ

ಅಂಬೇಡ್ಕರರ ಸಮಾನತೆಯ ಸಂದೇಶ ಪಾಲಿಸಿ

ಕಾರವಾರ: ಡಾ.ಬಿ.ಆರ್.ಅಂಬೇಡ್ಕರ್ ಅವರು ಇಡೀ ಮಾನವ ಸಮುದಾಯಕ್ಕೆ ನೀಡಿರುವ ಸಮಾನತೆಯ ಸಂದೇಶವನ್ನು ಪ್ರತಿಯೊಬ್ಬರೂ ಅನುಸರಿಸಿ, ಅದರಂತೆ ನಡೆಯುವ ಮೂಲಕ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿ, ಪ್ರತಿದಿನವೂ ಅವರನ್ನು ನೆನೆಯಬೇಕು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದರು.

ಅವರು ಮಂಗಳವಾರ, ಜಿಲ್ಲಾಡಳಿತ ಜಿಪಂ, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಕಾರವಾರದ ದೋಭಿಘಾಟ್ ರಸ್ತೆಯ ದೈವಜ್ಞ ಕಲ್ಯಾಣ ಮಂಟಪದಲ್ಲಿ ನಡೆದ, ಡಾ.ಬಿ.ಆರ್ ಅಂಬೇಡ್ಕರ್‌ರವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮವು ಉದ್ಘಾಟಿಸಿ ಮಾತನಾಡಿದರು.

ದೇಶದ ಎಲ್ಲಾ ಸಮುದಾಯಗಳು,ಎಲ್ಲಾ ಕ್ಷೇತ್ರಗಳಲ್ಲೂ ಸಮಾನವಾಗಿ ಅಭಿವೃದ್ಧಿ ಹೊಂದಲಿ ಎಂಬ ಉದ್ದೇಶದಿಂದ ಅಂಬೇಡ್ಕರ್ ಅವರು ಮಹಿಳೆಯರು, ಕಾರ್ಮಿಕರು, ಹಿಂದುಳಿದ ವರ್ಗದ ಜನತೆ ಸೇರಿದಂತೆ ಪ್ರತಿಯೊಬ್ಬರಿಗೂ ಸಂವಿಧಾನದ ಮೂಲಕ ಸಮಾನ ಅವಕಾಶಗಳು ದೊರೆಯುವಂತೆ ಮಾಡಿದ್ದಾರೆ. ಅವರ ಈ ಸಮಾನತೆಯ ಸಂದೇಶವನ್ನು ಪ್ರತಿಯೊಬ್ಬರೂ ದೈನಂದಿನ ಚಟುವಟಿಕೆಗಳ ಎಲ್ಲಾ ಕ್ಷೇತ್ರಗಳಲ್ಲೂ ಅಳವಡಿಸಿಕೊಂಡು, ತಮಗಿಂತ ಹಿಂದುಳಿದವರು ತಮ್ಮ ಜೊತೆಗೆ ಸಮಾನವಾಗಿ ಅಭಿವೃದ್ಧಿ ಹೊಂದಲು ಅಗತ್ಯವಿರುವ ಅವಕಾಶಗಳನ್ನು ಒದಗಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಮಾತನಾಡಿ, ಅಂಬೇಡ್ಕರ್ ಅವರು ನೀಡಿರುವ, ಶಿಕ್ಷಣ, ಸಂಘಟನೆ, ಹೋರಾಟದ ಸಂದೇಶಗಳ ಮೂಲಕ ಅವಕಾಶ ವಂಚಿತರ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ನಮ್ಮ ಸಂವಿಧಾನ ಪೀಠಿಕೆಯಲ್ಲಿನ ಅಂಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು.

ಡಾ.ಬಿ.ಆರ್. ಅಂಬೇಡ್ಕರ್ ಕುರಿತು ವಿಶೇಷ ಉಪನ್ಯಾಸ ನೀಡಿದ ಅಂಕೋಲಾದ ಕೆ.ಎಲ್.ಇ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಮಂಜುನಾಥ ಇಟಗಿ ಮಾತನಾಡಿ, ಅಂಬೇಡ್ಕರ್ ಮತ್ತು ಸಂವಿಧಾನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಸಂವಿಧಾನವು ದೇಶಕ್ಕೆ ದಾರಿದೀಪವಾಗಿದ್ದು, ಸಂವಿಧಾನ ರಚನೆಯ ಮೂಲಕ ಭಾರತವು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ಕೀರ್ತಿ ಅಂಬೇಡ್ಕರ್ ಅವರದ್ದು. ದೇಶದ ಅರ್ಥ ವ್ಯವಸ್ಥೆಯನ್ನು ಬಲಪಡಿಸಿದ್ದಾರೆ. 32 ಪದವಿಗಳನ್ನು ಪಡೆದಿದ್ದ ಅವರು, 20000 ಹಸ್ತಪ್ರತಿಗಳನ್ನು ಮಾಡಿದ್ದರು, ಅವರ ಬದುಕು ಎಲ್ಲರಿಗೂ ದಾರಿದೀಪವಾಗಿದ್ದು ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ತಿಳಿಸಿದರು. ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ಜಿಲ್ಲೆಯ ಅಭ್ಯರ್ಥಿಗಳಿಗೆ ಸನ್ಮಾನ ಮತ್ತು ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಮುದಾಯದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಜಿ.ಪಂ. ಉಪ ಕಾರ್ಯದರ್ಶಿ ಅಲ್ಲಾ ಭಕ್ಷ, ಮುಖ್ಯ ಯೋಜನಾಧಿಕಾರಿ ಸೋಮಶೇಖರ್ ಮೇಸ್ತಾ, ನಗರಸಭೆ ಪೌರಾಯುಕ್ತ ಜಗದೀಶ್ ಹುಲಗಜ್ಜಿ, ಕೈಗಾರಿಕೆ ಇಲಾಖೆ ಜಂಟಿ ನಿರ್ದೇಶಕ ನಾಗರಾಜ ನಾಯ್ಕ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ವೈ.ಕೆ.ಉಮೇಶ್, ಪ.ಜಾತಿ ಪಂಗಡದ ಮುಖಂಡರಾದ ದೀಪಕ್ ಕುಡಾಲಕರ್, ಎಲಿಷಾ ಪಾಟೀಲ್, ನಾಗರಾಜ ತಳವಾರ, ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ಮತ್ತಿತರರಿದ್ದರು.



> ಸರ್ಕಾರಿ ಅಧಿಕಾರಿಗಳು ಸಂವಿಧಾನ ನೀಡಿರುವ ಸಮಾನತೆಯ ಸಂದೇಶವನ್ನು ಪಾಲಿಸಿ, ಸಂವಿಧಾನದ ತತ್ವಗಳಡಿಯಲ್ಲಿ ತಮ್ಮ ಜವಾಬ್ದಾರಿಗಳನ್ನು ಅರಿತು ಕರ್ತವ್ಯ ನಿರ್ವಹಿಸಬೇಕು.
>
> ■ ಡಾ. ದಿಲೀಷ್ ಶಶಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಭಾವಚಿತ್ರ ಮೆರವಣಿಗೆ

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್‌ಹಾಗೂ ಡಾ. ಬಾಬುಜಗಜೀವನ ರಾಮ್ ಅವರ ಭಾವಚಿತ್ರಗಳ ಮೆರವಣಿಗೆಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಚಾಲನೆ ನೀಡಿದರು. ವಿವಿಧ ಕಲಾತಂಡಗಳೊಂದಿಗೆ ನಡೆದ ಮೆರವಣಿಗೆಯಲ್ಲಿಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಹಾನ್ ನಾಯಕರ ಸ್ಮರಣೆ ಪ್ರತಿಯೊಬ್ಬರ ಕರ್ತವ್ಯ

ಅಂಕೋಲಾ: ತಾಲೂಕು ಆಡಳಿತ ಅಂಕೋಲಾ, ತಾಪಂ, ಪುರಸಭೆ ಮತ್ತು ಸಮಾಜ ಕಲ್ಯಾಣ ಇಲಾಖೆ ಅಂಕೋಲಾ ಇವರ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಹಾಗೂ ಮಾಜಿ ಉಪ ಪ್ರಧಾನಿ ಬಾಬು ಜಗಜೀವನರಾಮ್ ಅವರ 119 ನೇ ಜಯಂತಿಯನ್ನು ಆಚರಿಸಲಾಯಿತು.

ತಾಪಂ ಕಾರ್ಯನಿರ್ವಹಣಾಧಿಕಾರಿ ರಾಮು ಗುನಗಿ, ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಮತ್ತಿತರ ಅಧಿಕಾರಿಗಳು ಅಂಬೇಡ್ಕರ್ ಮತ್ತು ಜಗಜೀವನರಾಮ್ ಅವರ ಭಾವಚಿತ್ರಗಳಿಗೆ ಪುಷ್ಪ ಸಮರ್ಪಿಸಿ ಸಂವಿಧಾನ ಪೀಠಿಕೆಯ ಪ್ರಮಾಣ ಸ್ವೀಕರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ತಾಪಂ ಕಾರ್ಯ ನಿರ್ವಹಣಾಧಿಕಾರಿ ರಾಮು ಗುನಗಿ ಮಾತನಾಡಿ ಏಕತೆ, ಸಮಾನತೆ ಮತ್ತು ಸಮಗ್ರತೆಯನ್ನು ಪ್ರತಿಪಾದಿಸುವ ಭಾರತದ ಸಂವಿಧಾನ ಇತರ ದೇಶಗಳಿಗೂ ಮಾದರಿಯಾಗಿದ್ದು, ಇಂಥ ಸಂವಿಧಾನದ ಶಿಲ್ಪಿಯಾಗಿರುವ ಅಂಬೇಡ್ಕರ್ ಅವರ ಚಿಂತನೆಗಳು ಪ್ರಜಾಪ್ರಭುತ್ವದಲ್ಲಿ ಅತ್ಯಗತ್ಯವಾದುದು ಎಂದರು.

ಬಾಲ್ಯದಲ್ಲಿ ಸಮಾಜದ ತಾರತಮ್ಯತೆಯನ್ನು ಅನುಭವಿಸಿದ ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸಿದ ಮಹಾನುಭಾವರು ಎಂದ ಅವರು ದೇಶದ ಉಪ ಪ್ರಧಾನಿಯಾಗಿ ಹಸಿರು ಕ್ರಾಂತಿಯ ಹರಿಕಾರ ಎನಿಸಿಕೊಂಡಿರುವ ಬಾಬು ಜಗಜೀವನರಾಮ್ ಅವರು ಸಹ ಶೋಷಿತರ ಸಮಾನತೆಗೆ ಹೋರಾಡಿದ ಮಹಾನ್ ನಾಯಕ ಎಂದರು.

ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ ಮಾತನಾಡಿ, ಅಂಬೇಡ್ಕರ್ ಅವರ ಸಂವಿಧಾನದವನ್ನು ಅರ್ಥೈಸಿಕೊಂಡು ನಡೆಯುವ ಮೂಲಕ ಯುವ ಜನರು ದೇಶದ ಏಕತೆಗೆ ಕೊಡುಗೆ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಮಾತನಾಡಿ, ದೇಶಕ್ಕೆ ಕೊಡುಗೆ ನೀಡಿರುವ ಮಹಾನ್ ನಾಯಕರನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಉತ್ತಮ ರಾಷ್ಟ್ರ

ನಿರ್ಮಾಣಕ್ಕೆ ಸಮಾನತೆ, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳಿಗೆ ಹೋರಾಟ ನಡೆಸಿದ್ದ ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ಅವರ ಬದುಕು ಎಲ್ಲರಿಗೂ ಪ್ರೇರಣೆಯಾಗಲಿ ಎಂದರು. ಉಪನ್ಯಾಸಕ ಚಂದ್ರಕಾಂತ ನಡುಕಿನಮನಿ ಅವರು ವಿಶೇಷ ಉಪನ್ಯಾಸ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವಿನಾಯಕ ನಾಯ್ಕ ಉಪಸ್ಥಿತರಿದ್ದರು.



ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಲು ಒತ್ತಾಯ

ಅಂಕೋಲಾ: ಉಕ ಜಿಲ್ಲಾ ಜೈ ಭೀಮ್ ಮಹಾರ್ ಜನಸೇವಾ ಸಂಘದವರು ಅಂಬೇಡ್ಕರ್ ಜಯಂತಿ ಆಚರಿಸಿ ಪಟ್ಟಣದಲ್ಲಿ ಬೈಕ್ ರ್‍ಯಾಲಿ ನಡೆಸಿ ಅಂಕೋಲಾ ತಾಲೂಕಿನ ನೀಲಂಪುರ ಅಂಬೇಡ್ಕರ್ ಕಾಲನಿಯ ಸಮಸ್ಯೆಗಳನ್ನು ಪರಿಹರಿಸುವಂತೆ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರು.

ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದ ಅನ್ಯಾಯಕ್ಕೊಳಗಾಗಿರುವ ಅಂಬೇಡ್ಕರ್ ಕಾಲನಿಯ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸುವಂತೆ ಸಂಘಟನೆಯ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಬಾಳೆಗುಳಿ ಸರ್ವೆ ನಂಬರ್ 4 ರ 37 ನಿವೇಶನಗಳನ್ನು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಭೂ ಸ್ವಾಧೀನ ಮಾಡಲಾಗಿದ್ದು, ದಲಿತ ಸಮುದಾಯದ ಕುಟುಂಬಗಳು ವಾಸವಾಗಿದ್ದ ನಿವೇಶನಗಳಿಗೆ 100 ಚದುರ ಮೀಟರಿಗೆ 105 ಲಕ್ಷ ಪರಿಹಾರ ನೀಡಲಾಗಿದ್ದು, ಈ ಮೊತ್ತದಲ್ಲಿ ಬದಲಿ ಜಮೀನು ಖರೀದಿ ಅಸಾಧ್ಯ ಆಗಿರುವ ಕಾರಣ ಸರ್ಕಾರದಿಂದ ಜಮೀನು ನೀಡಬೇಕು ಅಥವಾ ಪರಿಹಾರದ ಮೊತ್ತವನ್ನು ಐದು ಪಟ್ಟು ಹೆಚ್ಚಿಸಬೇಕು ಎಂದು ಮನವಿ ಮೂಲಕ ಆಗ್ರಹಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಅಂಬೇಡ್ಕರ್ ದಲಿತರ ಕಾಲನಿಯ ಸಂಪರ್ಕ ರಸ್ತೆಗಳು, ಬೀದಿ ದೀಪದ ಕಂಬಗಳು,ನೀರು ಸರಬರಾಜು ಪೈಪ್ ಲೈನುಗಳು ಧ್ವಂಸಗೊಂಡು ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳ ಸಮಸ್ಯೆಯಾಗಿದ್ದು, ವಾಸವಿರುವ ಜಮೀನಿನ ಮುಂಬಾಗದಲ್ಲಿ ಆಳವಾಗಿ ಅಗೆದಿರುವುದರಿಂದ ವಾಸ್ತವ್ಯ ಕಷ್ಟಕರವಾಗಿದೆ ಸುಮಾರು 110 ವರ್ಷಗಳಿಂದ ಕುಡಿಯುವ ನೀರಿಗೆ ಬಳಸುವ ತೆರೆದ ಬಾವಿಯನ್ನು ಮುಚ್ಚಲಾಗುತ್ತಿದೆ ಆದ್ದರಿಂದ ಈ ಅನ್ಯಾಯವನ್ನು ಪರಿಶೀಲಿಸಿ ಹೊಸ ಬಾವಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ತಿಳಿಸಲಾಗಿದ್ದು, ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಇರುವ ಅಂಬೇಡ್ಕರ್ ಭವನ ತೆರವುಗೊಳಿಸುವ ಪೂರ್ವದಲ್ಲಿ ಹಣ ಬಿಡುಗಡೆ ಮಾಡಬೇಕು, ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಉದ್ದೇಶದಿಂದ ಕತ್ತರಿಸಲಾದ ಗಿಡ ಮರಗಳಿಗೆ ಪರ್ಯಾಯವಾಗಿ ಮೂರು ಪಟ್ಟು ಹೆಚ್ಚಿನ ಗಿಡ ಮರಗಳನ್ನು ಬೆಳೆಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಜೈ ಭೀಮ್ ಮಹಾರ ಜನಸೇವಾ ಸಂಘದ ಅಧ್ಯಕ್ಷ ಶಾಂತಾರಾಮ ಹುಲಸ್ವಾರ, ಕಾರ್ಯದರ್ಶಿ ಶ್ಯಾಮಸುಂದರ ಕಾರವಾರ, ಪ್ರಶಾಂತ ಅಂಕೋಲೆಕರ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು.



ಅಂಬೇಡ್ಕರರ ತತ್ವಾದರ್ಶ ಪಾಲಿಸಿ: ಪಿಎಸ್ಐ ಕುಂಬಾರ

ಬನವಾಸಿ: ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರಿಂದ ರಚನೆಗೊಂಡಿರುವ ಸಂವಿಧಾನ ಕೇವಲ ಒಂದು ಸಮಾಜಕ್ಕೆ ಸೀಮಿತವಾಗಿರದೇ ಅದರಲ್ಲಿ ಸರ್ವ ಸಮಾಜದ ಹಿತ, ಕಾಳಜಿ ಅಡಗಿದೆ ಎಂದು ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಹೇಳಿದರು.

ಸಮೀಪದ ಭಾಶಿ ಗ್ರಾಮದ ಶ್ರೀ ಹಕ್ಕಲ ಮಾರಿಕಾಂಬ ಸಭಾಭವನದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ನಾವೆಲ್ಲರೂ ಪಾಲನೆ ಮಾಡಿದಾಗ ಮಾತ್ರ ಅವರ ಜಯಂತಿಗೆ ಅರ್ಥ ಸಿಗಲಿದೆ ಎಂದರು.

ಭಾಶಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಶಾ ಗೌಡ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಜಗತ್ತಿನ ಮಹಾನ್ ಶಕ್ತಿಯಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಹಕ್ಕಲ ಮಾರಿಕಾಂಬಾ ದೇವಸ್ಥಾನದ ಮಾಜಿ ಅಧ್ಯಕ್ಷ ಧಾಕ್ಕಪ್ಪ ಚನ್ನಯ್ಯ, ಎನ್. ಕೆ.ಗೌಡ, ಬಸವರಾಜ ಜಿ ಚನ್ನಯ್ಯ, ಶಿವಪ್ಪ ಚನ್ನಯ್ಯ, ಗಣಪತಿ ಚನ್ನಯ್ಯ, ಬಸವರಾಜ ಚನ್ನಯ್ಯ, ರಮೇಶ ಚನ್ನಯ್ಯ, ಜಗದೀಶ್ ಚನ್ನಯ್ಯ, ಪ್ರಶಾಂತ್ ಚನ್ನಯ್ಯ, ರಮೇಶ್ ಚನ್ನಯ್ಯ, ರಾಜೇಂದ್ರ ಚನ್ನಯ್ಯ, ಸೂರ್ಯ ಚನ್ನಯ್ಯ, ರವೀಂದ್ರ ಚನ್ನಯ್ಯ, ಶ್ರೀಧರ್ ಚನ್ನಯ್ಯ, ದೇವರಾಜ್ ಚನ್ನಯ್ಯ, ಪ್ರಕಾಶ್ ಚನ್ನಯ್ಯ, ಅಣ್ಣಪ್ಪ ಚನ್ನಯ್ಯ, ವಿರೂಪಾಕ್ಷ ಚನ್ನಯ್ಯ ನಾಗರಾಜ ಚನ್ನಯ್ಯ, ಸಂದೀಪ್, ಸುದರ್ಶನ್, ನಿಖಿಲ್, ಸಂಜಯ, ಸಮರ್ಥ್, ಸ್ವಾಮಿ, ವರುಣ್, ಸೃಜನ್, ನಿಶಾಂತ್, ತನ್ಮಯ್, ಪುನೀತ, ಸುಧನ್, ನಿರಂಜನ್, ವೇದಾಂತ್, ಭುವನ್ ಮತ್ತು ಅಂಬೇಡ್ಕರ್ ಅನುವಾಯಿಗಳು ಭಾಗವಹಿಸಿದ್ದರು.



ಸಂವಿಧಾನ ಓದು ಪುಸ್ತಕ ವಿತರಣೆ

ಅಂಕೋಲಾ : ಎದ್ದೇಳು ಕರ್ನಾಟಕ ಸಂವಿಧಾನ ಸಂರಕ್ಷಣಾ ಕಾರ್ಯಪಡೆ ಸಂವಿಧಾನ ಉಳಿವಿಗಾಗಿ ಕರ್ನಾಟಕ, ಉಕ ಜಿಲ್ಲಾ ಘಟಕ ಹಾಗೂ ಸಂಗಾತಿ ರಂಗಭೂಮಿ ಅಂಕೋಲಾ ಇವರ ಸಾರಥ್ಯದಲ್ಲಿ ಸಂವಿಧಾನ ಅರಿವು ರಾಜ್ಯ ಸಂಚಾರ ಅಭಿಯಾನದ ಮುಂದುವರಿದ ಭಾಗವಾಗಿ ಪಟ್ಟಣದ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ಸಂವಿಧಾನ ಶಿಲ್ಪಿ, ಮಹಾನ್ ಮಾನವತಾವಾದಿ ಬಾಬಾ ಸಾಹೇಬ ಡಾ.ಬಿ.ಆರ್. ಅಂಬೇಡ್ಕರ ಜಯಂತಿ ಪ್ರಯುಕ್ತ 10 ಸಹಸ್ರ ಸಂವಿಧಾನ ಓದು ಪುಸ್ತಕ ವಿತರಣೆ, ನಮ್ಮ ಸಂವಿಧಾನ ನಾಟಕ ಪ್ರದರ್ಶನ, ಸಂವಿಧಾನ ಅರಿವು ಜಾಗೃತಿ ಗೀತೆ ಮತ್ತು ವಿಚಾರ ಸಂಕಿರಣ ಹಾಗೂ ಸದಸ್ಯತ್ವ ಅಭಿಯಾನ ಒಳಗೊಂಡ ಸಂವಿಧಾನ ಮಹಾಯಾನದ ಉದ್ಘಾಟನಾ ಸಮಾರಂಭ ಅದ್ದೂರಿಯಾಗಿ ನಡೆಯಿತು. ಸಂವಿಧಾನ ಅರಿವು ರಾಜ್ಯ ಸಂಚಾರ ರಾಜ್ಯಾಧ್ಯಕ್ಷರು ಹಾಗೂ ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಜಾರ್ಜ್ ಫರ್ನಾಂಡಿಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭಗವದ್ಗೀತೆ, ಬೈಬಲ್, ಕುರಾನನಂತಹ ಧಾರ್ಮಿಕ ಗ್ರಂಥಗಳಿಗೆ ನೀಡಿದ ಮಹತ್ವವನ್ನು ಸಂವಿಧಾನ ಪುಸ್ತಕಗಳಿಗೂ ನೀಡಬೇಕು. ಓದಿನ ಮೂಲಕ ಸಂವಿಧಾನದ ಬಗ್ಗೆ ಅರಿಯಬೇಕು. ಸಂವಿಧಾನದಲ್ಲಿ ಅಡಕವಾಗಿರುವ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಅಧ್ಯಾಪಕರಾದ ವಿ.ಡಿ.ನಾಯಕ, ಸಂವಿಧಾನ ಅರಿವು ರಾಜ್ಯ ಸಂಚಾರದ ಗೌರವಾಧ್ಯಕ್ಷ ಹಾಗೂ ವಿಶ್ರಾಂತ ಪ್ರಾಚಾರ್ಯ ಡಾ. ಮಹೇಶ ಗೋಳಿಕಟ್ಟೆ ಮಾತನಾಡಿದರು. ಸಂ.ಅ.ರಾ.ಸಂ ಗೌರವ ಸಲಹೆಗಾರರು ಹಾಗೂ ವಿಶ್ರಾಂತ ಅಧ್ಯಾಪಕರಾದ ಶ್ರೀಧರ.ಬಿ.ನಾಯಕ, ಕೆಎಲ್‌ಇ ನರ್ಸಿಂಗ್ ಕಾಲೇಜಿನ ಪ್ರಭಾರಿ ಪ್ರಾ. ಮಂಜುನಾಥ ನಾಯಕ, ವಿಶ್ವದರ್ಶನ ನರ್ಸಿಂಗ್ ಕಾಲೇಜಿನ ಪ್ರಾ.ಶಂಕರ ಕಡೆಮನೆ ಮಾತನಾಡಿದರು.ಕೆಎಲ್‌ಇ ಬಿಎಡ್ ಕಾಲೇಜಿನ ಪ್ರಾ. ಡಾ.ವಿನಾಯಕ ಹೆಗಡೆ, ಡಿ.ಎಡ್. ಕಾಲೇಜಿನ ಪ್ರಾ.ಸರೋಜಿನಿ ಹಾರವಾಡೇಕರ, ಸೇಂಟ ಮಿಲಾಗ್ರಿಸ್ ಐಟಿ ಸೆಕ್ಷನ್ ಹೆಡ್ ರೊಯನ್, ಟಿವಿ ನಿರೂಪಕ ನಾಗರಾಜ ಭಟ್ಕಳ, ಸಂಘಟನೆಯ ಪದಾಧಿಕಾರಿಗಳಾದ ಮಂಗಲಾ ಹರಿಕಂತ್ರ, ಭಾಗ್ಯಶ್ರೀ ನಾಯಕ, ಪ್ರವೀಣಾ ದೊಡ್ಮನಿ, ಆರುಂಧತಿ ಅರೆರಾ ಉಪಸ್ಥಿತರಿದ್ದರು. ಜಾರ್ಜ್ ಫರ್ನಾಂಡಿಸ್ ಅವರು ಸೇಂಟ್ ಮಿಲಾಗ್ರಿಸ್ ಕೋ ಆಪ್ ಸೊಸೈಟಿಯ ಸಿಬ್ಬಂದಿಗೆ ಸಂವಿಧಾನ ಓದು ಪುಸ್ತಕಗಳನ್ನು ಹಸ್ತಾಂತರಿಸುವದರ ಮೂಲಕ 10 ಸಾವಿರ ಪುಸ್ತಕಗಳ ವಿತರಣೆಗೆ ಚಾಲನೆ ನೀಡಿದರು.ಸಂವಿಧಾನ ಅರಿವು ರಾಜ್ಯ ಸಂಚಾರದ ಪ್ರಧಾನ ಸಂಚಾಲಕ ಕೆ. ರಮೇಶ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು. ಪತ್ರಕರ್ತರಾದ ಮೋಹನ ದುರ್ಗೇಕರ ಸಂವಿಧಾನ ಪೀಠಿಕೆಯನ್ನು ವಾಚಿಸಿದರು. ಅರುಣ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.



ಸಂವಿಧಾನದಿಂದ ಸಮಾಜಕ್ಕೆ ನ್ಯಾಯ



ಹಳಿಯಾಳ: ಸಮಾಜಕ್ಕೆ ನ್ಯಾಯ ದೊರಕಿಸಿ ಕೊಟ್ಟಿದ್ದು ಕೂಡ ಅಂಬೇಡ್ಕರ ಅವರು ರಚಿಸಿದ ಸಂವಿಧಾನದಿಂದಲೇ ಎಂದು ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ಹೇಳಿದರು.ತಾಪಂ, ತಾಲೂಕಾಡಳಿತ, ಸಮಾಜಕಲ್ಯಾಣ ಇಲಾಖೆ , ಪುರಸಭೆ ಹಾಗೂ ಇನ್ನಿತರ ಸಂಘಟನೆಗಳ ಮೂಲಕ ಆಯೋಜಿಸಲಾಗಿದ್ದ ಡಾ.ಭೀಮರಾವ್ ಅಂಬೇಡ್ಕರ್‌ರವರ 135ನೇ ಹಾಗೂ ಬಾಬು ಜಗಜೀವನ್ ರಾಮ್‌ರವರ 119ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿದರು.ಮರಾಠಾ ಸಮಾಜದ ಹಾಗೂ ರೈತ ಮುಖಂಡ ನಾಗೇಂದ್ರ ಜಿವೋಜಿ ಮಾತನಾಡಿ, ಪ್ರತಿಯೊಂದು ಮಹಾ ಪುರುಷರ ಜಯಂತಿಗಳು ಕೇವಲ ಆಯಾ ಸಮಾಜಕ್ಕೆ ಸೀಮಿತವಾಗದೇ ಸರ್ವ ಜನಾಂಗದವರೂ ಪಾಲ್ಗೊಳ್ಳುವ ನಿಟ್ಟಿನಲ್ಲಿ ಹೊಸತನವನ್ನು ನಮ್ಮ ತಾಲೂಕಿನ ಯುವ ತಹಶೀಲ್ದಾರರು ಜಾರಿಗೆ ತರುವಂತಾಗಲಿ ಎಂದರು. ಶಾಂತಾರಾಮ ಚಿಬ್ಬುಲ್ಕರ್ ವಿಶೇಷ ಉಪನ್ಯಾಸ ನೀಡಿದರು.ದಲಿತ ಮುಖಂಡ ಕೋಮನ್ನ ದಾನಪ್ಪನವರ ಹಾಗೂ ಮಹಿಳಾ ನಾಯಕಿ ಹಾಗೂ ಪುರಸಭೆಯ ಮಾಜಿ ಉಪಾಧ್ಯಕ್ಷೆ ಸುವರ್ಣಾ ಮಾದರ ಮಾತನಾಡಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಸಿದ್ದಿ ಬುಡಕಟ್ಟು ಜನಾಂಗದ ಕಲಾವಿದರಿಂದ ಕಲಾ ಪ್ರದರ್ಶನಗಳು ದಾರಿಯುದ್ದಕ್ಕೂ ನೆರವೇರಿದವು. ನಡುವೆ ದಲಿತ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಹಾಗೂ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದಂತಹವರನ್ನು ಸನ್ಮಾನಿಸಲಾಯಿತು.ತಾಪಂ ಕಾರ್ಯ ನಿರ್ವಹಣಾಧಿಕಾರಿ ವಿಲಾಸ ರಾಜ್ ಪ್ರಸನ್ನ, ಸಿಪಿಐ ಜಯಪಾಲ್ ಪಟೇಲ್, ಪುರಸಭೆ ಮುಖ್ಯಾಧಿಕಾರಿ ಅಶೋಕ ಸಾಳೇನವರ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಅಶೋಕ ಪವಾರ್, ಮಾಜಿ ಪುರಸಭೆ ಸದಸ್ಯ ಗಜಾಕೋಶ, ಜಯಶ್ರೀ ಚವ್ಹಾಣ, ಹನುಮಂತ ಮೇತ್ರಿ ಮತ್ತಿತರರಿದ್ದರು.

ಭೀಮರಾವರ ಚಿಂತನೆ ಜಗತ್ತಿಗೆ ಮಾದರಿ

ಶಿರಸಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ವೈಚಾರಿಕ ಚಿಂತನೆಗಳು ಮತ್ತು ಪಾಂಡಿತ್ಯವು ಜಗತ್ತಿಗೆ ಮಾದರಿಯಾಗಿದ್ದು, ಇಂದಿನ ಯುವ ಪೀಳಿಗೆ ಅವರ ತತ್ವಗಳನ್ನು ಅನುಸರಿಸಿ ಮುನ್ನಡೆಯಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಲಾಗಿದ್ದ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಅನುಭವಿಸಿದ ಕಷ್ಟಗಳೇ ಶ್ರೇಷ್ಠ ಸಂವಿಧಾನ ರಚನೆಗೆ ಪ್ರೇರಣೆಯಾದವು. ಲಂಡನ್‌ನ ದುಂಡುಮೇಜಿನ ಪರಿಷತ್ತಿನಲ್ಲಿ ದೇಶವನ್ನು ಪ್ರತಿನಿಧಿಸಿದ್ದ ಅವರು, ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ನೀಡುವ ಮೂಲಕ ಸ್ತ್ರೀ ಕುಲಕ್ಕೆ ಗೌರವ ತಂದಿದ್ದಾರೆ ಎಂದು ಸ್ಮರಿಸಿದರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಭೀಮಣ್ಣ ನಾಯ್ಕ ಮಾತನಾಡಿದರು. ಉಪನ್ಯಾಸಕ ಹನುಮಂತಪ್ಪ ಹೊಕ್ಕಳಬೈಲ್ ವಿಶೇಷ ಉಪನ್ಯಾಸ ನೀಡಿದರು. ಸಾಧಕರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.ಎಸಿ ಚಂದ್ರಶೇಖರ ಆರ್.ಜಿ, ಡಿವೈಎಸ್‌ಪಿ ಗೀತಾ ಪಾಟೀಲ್, ತಹಶೀಲ್ದಾರ್ ಪಟ್ಟರಾಜ ಗೌಡಾ, ಪೌರಾಯುಕ್ತ ಪ್ರಕಾಶ ಚನ್ನಪ್ಪನವರ್, ಇಒ ಚನ್ನಬಸಪ್ಪ ಹಾವಣಗಿ, ಸಮಾಜ ಕಲ್ಯಾಣ ಇಲಾಖೆಯ ಬಸವರಾಜ ಬಂಡೇರ್, ಡಿಡಿಪಿಐ ಡಿ.ಆರ್. ನಾಯ್ಕ, ಆಡಳಿತಾಧಿಕಾರಿ ಬಿ.ಪಿ. ಸತೀಶ ಹಾಗೂ ಮುಖಂಡ ರಘು ಕಾನಡೆ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಅಂಬೇಡ್ಕರ್ ವೃತ್ತದಿಂದ ಭವನದವರೆಗೆ ಅದ್ದೂರಿ ಭಾವಚಿತ್ರ ಮೆರವಣಿಗೆ ಜರುಗಿತು.



ಅಂಬೇಡ್ಕರ್ ರಾಷ್ಟ್ರಪ್ರೇಮ ಎಲ್ಲರಿಗೂ ಪ್ರೇರಣೆ



ಯಲ್ಲಾಪುರ: ಪರಿಶಿಷ್ಟ ಜಾತಿ ಮತ್ತು ಪಂಗಡ ಎರಡು ಸೇರಿ 151 ಜಾತಿಗಳಿವೆ. ಹೀಗಾಗಿ ರಾಜಕಾರಣಕ್ಕಾಗಿ ಅವುಗಳ ಪರಂಪರೆ ಸಂಸ್ಕೃತಿ ಉಳಿಸಿಕೊಳ್ಳಲು ಏನೇ ಪ್ರಯತ್ನ ಒಳಭಾವನೆಗಳು ಇದ್ದರೂ ಕೂಡ ಒಟ್ಟಾರೆಯಾಗಿ ಸಾಮೂಹಿಕವಾಗಿ ಯೋಚನೆ ಮಾಡಿದರೆ ನಾವೆಲ್ಲರೂ ದಲಿತರು ಎಂದು ನೆನಪಿಟ್ಟುಕೊಳ್ಳಬೇಕು ಎಂದು ವಿಧಾನ ಪರಿಷತ ಸದಸ್ಯ ಶಾಂತಾರಾಮ ಸಿದ್ದಿ ಹೇಳಿದರು.

ಅವರು ಪಟ್ಟಣದ ಗಾಂಧಿಕುಟೀರದಲ್ಲಿ ತಾಲೂಕಾಡಳಿತ, ಸಮಾಜಕಲ್ಯಾಣ, ವಿವಿಧ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಬಾಬಾ ಸಾಹೇಬ ಅಂಬೇಡ್ಕರ ಜಯಂತಿ ಉದ್ಘಾಟಿಸಿ ಮಾತನಾಡಿ, ನಾವೆಲ್ಲರೂ ಒಂದು ಎಂಬ ಭಾವನೆ ಎಲ್ಲಿಯವರೆಗೆ ಇರುವದಿಲ್ಲವೋ ಅಲ್ಲಿಯವರೆಗೂ ನಮ್ಮಲ್ಲಿ ಮತ್ತೆ ಗೊಂದಲಗಳು ಶುರುವಾಗುತ್ತವೆ. ನಾವೆಲ್ಲರೂ ಒಂದು ಎಂಬ ಸಂಕಲ್ಪ ಮಾಡಿಕೊಂಡು ಅದೇ ರೀತಿ ನಡೆದುಕೊಳ್ಳಬೇಕು ಎಂದರು. ಶಿಕ್ಷಕ ನವೀನಕುಮಾರ ಉಪನ್ಯಾಸ ನೀಡಿದರು. ತಹಶೀಲ್ದಾರ್ ಚಂದ್ರಶೇಖರ ಹೊಸಮನಿ, ತಾಪಂ ಸಿಇಓ ರಾಜೇಶ ಧನವಾಡಕರ,ಪಪಂ ಮುಖ್ಯಾಧಿಕಾರಿ ಕೇಶವ ಚೌಗಲೆ, ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ ಇದ್ದರು. ನಯನ ಹಾಗೂ ಸತ್ಯಭಾಮಾ ಸಂಗಡಿಗರು ನಾಡಗೀತೆ ಹಾಡಿದರು. ಶಿಕ್ಷಕ ಚಂದ್ರಹಾಸ ನಾಯ್ಕ ನಿರೂಪಿಸಿದರು. ಸಮಾಜ ಕಲ್ಯಾಣಾಧಿಕಾರಿ ಜ್ಯೋತಿ ನರೋಟ್ಟಿ ಸ್ವಾಗತಿಸಿದರು. ಸಾಧಕರಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಮಾಡಲಾಯಿತು.ಸಭಾ ಕಾಯಕ್ರಮಕ್ಕೂ ಮುನ್ನ ಶಾಸಕ ಶಿವರಾಮ ಹೆಬ್ಬಾರ ಅಂಬೇಡ್ಕರ ಭಾವಚಿತ್ರ ಮೇರವಣಿಗೆಗೆ ಚಾಲನೆ ನೀಡಿದ್ದರು. ವಿವಿಧ ಛದ್ಮವೇಶ, ವಾದ್ಯತಂಡದೊಂದಿಗೆ ಮೆರವಣಿಗೆಯು ಪಟ್ಟಣದ ಪ್ರಮುಖ ರಸ್ತೆಯಲ್ಲಿ ಸಾಗಿ ತಾಪಂ ಗಾಂಧಿಕುಟೀರದಲ್ಲಿ ಮುಕ್ತಾಯಗೊಂಡಿತು.

ಅಂಬೇಡ್ಕರ್ ಜಯಂತಿ ಆಚರಣೆ

ಬನವಾಸಿ: ಇಲ್ಲಿಯ ಅಂಬೇಡ್ಕರ್ ಭವನದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು.

ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಅವರು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಭಗವಾನ್ ಬುದ್ಧರ ಭಾವಚಿತ್ರಗಳಿಗೆ ಪುಷ್ಪ ಸಮರ್ಪಣೆ ಮಾಡುವುದರ ಮೂಲಕ ಅಂಬೇಡ್ಕರ್ ಜಯಂತಿಗೆ ಚಾಲನೆಯನ್ನು ನೀಡಿದರು.

ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಶಿವಾಜಿ ಬನವಾಸಿ, ಶಾಂತಕುಮಾರ ಅಜ್ಜರಣಿ, ಸದಾನಂದ ತಿಗಣಿ, ಬಸವರಾಜ್ ಎಮ್, ರಾಜು ತಾವರೇರ್, ಶ್ರೀಲತಾ ಕಾಳೇರಮನೆ, ವಿರುಪಾಕ್ಷಿ ಚನ್ನಯ್ಯ, ಸುರೇಶ್ ಚೆನ್ನಯ್ಯ, ಸೋಮು ಚೆನ್ನಯ್ಯ, ಮಲಿಕೇಶ ಅಜ್ಜರಣಿ, ಬಸವರಾಜ ಅಜ್ಜರಣಿ, ವಸಂತ್ ಚೆನ್ನಯ್ಯ, ಚಂದ್ರು ಚೆನ್ನಯ್ಯ, ಮೋಹನ್ ಚೆನ್ನಯ್ಯ, ಬಸವರಾಜ್ ತಾವರೇರ್, ಮಂಜಣ್ಣ ಹಂಚಿನ ಮನೆ ಉಪಸ್ಥಿತರಿದ್ದರು.



ಕಿರುಸುದ್ದಿ



ಹಾವೇರಿ : ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ 80ನೇ ಹುಟ್ಟುಹಬ್ಬದ ಪ್ರಯುಕ್ತ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘದ ವತಿಯಿಂದ ನಗರದ ನಾಗೇಂದ್ರಮಟ್ಟಿಯಲ್ಲಿರುವ ಶಕ್ತಿ ವೃದ್ಧಾಶ್ರಮಕ್ಕೆ ಭೇಟಿ ನೀಡಿ, ಹೊರಟ್ಟಿ ಅವರ ಜನ್ಮದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಲ್ಲಿನ ನಿವಾಸಿಗಳಿಗೆ ಹಣ್ಣು ಹಂಪಲ ಮತ್ತು ಔಷಧವನ್ನು ವಿತರಿಸಲಾಯಿತು. ಜಿಲ್ಲಾ ಕಾರ್ಯಾಧ್ಯಕ್ಷ ಆರ್.ಎಚ್. ಬೆಟ್ಟಳ್ಳರ, ಎನ್.ಎನ್. ಕುಂದುರ, ಎಮ್.ಎಸ್. ಕೆಂಚನಗೌಡರ, ಎಸ್.ಎಲ್. ಕಾಡದೇವರಮಠ, ಎಂ.ಬಿ. ರಮೇಶ್, ಶರಣಪ್ಪ ಇಟಗಿ, ಎಸ್.ಡಿ. ಪರಡ್ಡಿ, ಶಿವಬಸವ ಮರಳಿಹಳ್ಳಿ, ರಾಘವೇಂದ್ರ ಬಾಸುರ, ಡಿ.ಡಿ. ಲಂಗೋಟಿ, ಗಿರೀಶ್ ಮತ್ತಿಹಳ್ಳಿ, ಉಮೇಶ ಛತ್ರದ, ಮಹಾಂತೇಶ ಮುದುಕಪ್ಪನವರ ಮತ್ತಿತರರು ಇದ್ದರು.

ಅಂಬೇಡ್ಕರ್‌ರ ಜಯಂತಿ ದಿನಾಚರಣೆ



ರಾಣೇಬೆನ್ನೂರ: ತಾಲೂಕು ಚಳಗೇರಿಯ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ. ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಆಚರಿಸಲಾಯಿತು.ಪಿಡಿಒ. ಶಹಾನಬಿ ಕಲಕೋಟಿ, ಕಾರ್ಯದರ್ಶಿ ಪಕ್ಕೀರಪ್ಪ ಯತ್ನಳ್ಳಿ, ಲೆಕ್ಕಾಧಿಕಾರಿ ಮಹೇಶ ರಾಮಲಿಂಗಣ್ಣನವರ, ಶಿವಪ್ಪ ಬಣಕಾರ, ರಾಘವೇಂದ್ರ ಪೂಜಾರ, ಖಂಡೆಪ್ಪ ಬಾರ್ಕಿ, ಶಿವಾಜಿ ಕಮದೊಡ, ಬಸವರಾಜ ಬೆನಕನಕೊಂಡ, ಮಲ್ಲಿಕಾರ್ಜುನ ಕೆಂಚರೆಡ್ಡಿ, ಯಶೋಧ ಬಕ್ಕಜ್ಜಿ ಹೊನ್ನಪ್ಪ ಕಮದೊಡ ಸೇರಿದಂತೆ ಮತ್ತಿತರರಿದ್ದರು.

ಏ.18ಕ್ಕೆ ಉದ್ಯೋಗ ನೇಮಕಾತಿ ಸಂದರ್ಶನ

ರಾಣೇಬೆನ್ನೂರ: ನಗರದ ಹೊರ ವಲಯದ ಶ್ರೀನಿವಾಸಪುರದಲ್ಲಿರುವ ಕೆ.ವ್ಹಿ. ಪಾಲಿಟೆಕ್ನಿಕ್ ಡಿಪ್ಲೋಮಾ ಕಾಲೇಜಿನಲ್ಲಿ ಬೆಂಗಳೂರಿನ ಚಿನ್ಮಯಿ ಎಂಟರ್ ಪ್ರೈಸಸ್ ಇವರ ಸಹಯೋಗದಲ್ಲಿ ಏ.18ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ರವರೆಗೆ ಉದ್ಯೋಗ ನೇಮಕಾತಿ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಮೇಳದಲ್ಲಿ ಪ್ರತಿಷ್ಠಿತ ಕಂಪನಿಗಳಾದ ಟಿ.ವ್ಹಿ. ಎಸ್., ಜಿ.ಆರ್.ಎಂಟರ್ ಪ್ರೈಸಸ್, ಕೈಜಿನ್ ಸಿಎನ್‌ಸಿ, ಪೂಜಾ ಮೆಟಾಲಿಕ್, ಫಾಸ್ಟಾನ್, ವೇಮ್ ಗ್ರೂಪ್ಸ್, ಎಮ್.ಎಸ್.ಜಿ.ಕ್ಯೂ ಸರ್ವಿಸಸ್ ಟೆಕ್ನಾಲಾಜಿ, ಸಿಡ್ವಿನ್ ಇಂಜನೀಯರಿಂಗ್ ಮುಂತಾದ ಕಂಪನಿಗಳಿಗೆ ಉದ್ಯೋಗ ನೇಮಕಾತಿ ನಡೆಯಲಿದೆ. ಆಸಕ್ತ ಎಸ್ಎಸ್ಎಲ್‌ಸಿ, ಪಿ.ಯು.ಸಿ, ಐಟಿಐ, ಡಿಪ್ಲೋಮಾ (ಅಂತಿಮ ವರ್ಷದ ಪಾಸಾದ), ಬಿ.ಇ. (ಅಂತಿಮ ವರ್ಷದ ಪಾಸಾದ), ವಿದ್ಯಾರ್ಥಿಗಳು ಮೇಳದಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆಯಬಹುದು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಶಿವದೀಕ್ಷಾ ಕಾರ್ಯಕ್ರಮ ಮೇ 3ರಂದು

ಹಾವೇರಿ: ತಾಲೂಕಿನ ನೆಗಳೂರ ಗ್ರಾಮದ ಸಂಸ್ಥಾನ ಹಿರೇಮಠದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ ಭಕ್ತಾದಿಗಳಿಗೆ ಶಿವದೀಕ್ಷಾ ಸಂಸ್ಕಾರ ಕಾರ್ಯಕ್ರಮವನ್ನು ಮೇ 3ರಂದು ಆಯೋಜಿಸಲಾಗಿದೆ. ದೀಕ್ಷಾ ಸಂಸ್ಕಾರ ಪಡೆಯಲು ಇಚ್ಛಿಸುವವರು ಮೇ 1ರೊಳಗಾಗಿ ತಮ್ಮ ಹೆಸರನ್ನು ಶ್ರೀ ಮಠದಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ: 9741117174, 9731381099 ಸಂಪರ್ಕಿಸಲು ಶ್ರೀಮಠದ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಣೇಬೆನ್ನೂರ: ತಾಲೂಕಿನ ಕೋಡಿಯಾಲ ಗ್ರಾಮದ ಅಮೃತ ವರ್ಷಿಣಿ ವಿದ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪಿ.ಕೆ. ಪ್ರಕಾಶ್‌ರಾವ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಅಂಬೇಡ್ಕರ್, ಡಾ.ಬಾಬೂಜಿ ಜಯಂತಿ ಆಚರಣೆ

ಭಟ್ಕಳ: ತಾಲೂಕು ಆಡಳಿತ, ತಾಪಂ, ನಗರಸಭೆ ಭಟ್ಕಳ, ಜಾಲಿ ಪಟ್ಟಣ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂಅವರ 119ನೇ ಜನ್ಮ ದಿನಾಚರಣೆ ಇಲ್ಲಿನ ಅರ್ಬನ್ ಬ್ಯಾಂಕ್ ಸಭಾಭವನದಲ್ಲಿ ಜರುಗಿತು.ಕಾರ್ಯಕ್ರಮ ಉದ್ಘಾಟಿಸಿದ ಡಿವೈಎಸ್ಪಿ ಬಿ. ಗಿರೀಶ್ ಮಾತನಾಡಿ, ಸ್ವಾತಂತ್ರ್ಯಾನಂತರ ಭಾರತಕ್ಕೆ ಅತ್ಯಂತ ಸಮಗ್ರ ಮತ್ತು ಪ್ರಗತಿಪರ ಸಂವಿಧಾನವನ್ನು ನೀಡಿದಮಹಾನ್ ವ್ಯಕ್ತಿ ಡಾ. ಅಂಬೇಡ್ಕರ್ ಆಗಿದ್ದಾರೆ. ಅಪಾರ ವಿದ್ಯಾಭ್ಯಾಸದ ಮೂಲಕ ಹಲವು ಪದವಿಗಳನ್ನು ಪಡೆದ ಅವರು ದೇಶದ ಭವಿಷ್ಯವನ್ನು ಮನನ ಮಾಡಿ ಸಂವಿಧಾನ ರೂಪಿಸಿದ್ದು, ಅದರಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯತತ್ವಗಳನ್ನು ಪ್ರತಿಪಾದಿಸಲಾಗಿದೆ ಎಂದರು. ಶಿಕ್ಷಕ ಗುಡ್ಡಪ್ಪ ಹರಿಜನ ಅವರು ಡಾ. ಅಂಬೇಡ್ಕರ್ ಕುರಿತು ಉಪನ್ಯಾಸ ನೀಡಿದರೆ, ಸರ್ಕಾರಿ ಡಿಗ್ರಿ ಕಾಲೇಜಿನ ಪ್ರಾಂಶುಪಾಲ ನಾಗೇಶ್ ಶೆಟ್ಟಿ ಅವರು ಡಾ. ಜಗಜೀವನರಾಂ ಕುರಿತು ಉಪನ್ಯಾಸ ನೀಡಿದರು. ನಗರಸಭೆ ಪೌರಾಯುಕ್ತ ಬಾಬಾಸಾಹೇಬ್ ಮಾನೆ, ತಾಪಂ ಪ್ರಭಾರೆ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಮಹಾಲೆ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಗೀತಾ ಜಿ. ಹೆಗಡೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಎನ್. ನಾಯ್ಕ ಇದ್ದರು. ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.



ತಡಸ: ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಮಂಗಳವಾರ ಗ್ರಾಮದ ಅಂಬೇಡ್ಕರ್ ನಗರದಲ್ಲಿ ಅತ್ಯಂತ ಸಡಗರದಿಂದ ಆಚರಿಸಲಾಯಿತು. ಗ್ರಾಮದ ಅಂಬೇಡ್ಕರ್ ಓಣಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಗ್ರಾಮದ ಅಭಿವೃದ್ಧಿ ಅಧಿಕಾರಿ ಈರಣ್ಣ ಗಾಣಿಗಿ, ಗಂಗಾಧರ್ ಬೆಂಡಲಗಟ್ಟಿ, ರಮೇಶ್ ಶೆಕಾಯಿ ಅಹ್ಮದ್ ಬಾಷಾ, ಬೆಳಗಲಿ ಚಂದ್ರು, ಪೂಜಾರ ಶಿವಪ್ಪ ದೊಡ್ಮನಿ, ಮಂಜುನಾಥ, ಆನಂದ್, ಸಂತೋಷ್ ತಿಪ್ಪಣ್ಣ ಹಾಗೂ ಇತರರಿದ್ದರು.

ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅಭಿಮತ

ಉಭಯ ನಾಯಕರ ಜೀವನಾದರ್ಶ ಮಾದರಿ

ಹಾವೇರಿ: ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರರು ಈ ದೇಶದ ಎರಡು ಕಣ್ಣುಗಳಿದ್ದಂತೆ. ಬಾಬಾಸಾಹೇಬ್ ಅಂಬೇಡ್ಕರರು ದೇಶಕ್ಕೆ ಕೊಟ್ಟ ಸಂವಿಧಾನವು ಶಾಂತಿ, ಸಮಾಧಾನ, ಸಹಬಾಳ್ವೆಯಿಂದ ಎಲ್ಲರೂ ಒಗ್ಗಟ್ಟಾಗಿ ಬದುಕಲು ದಾರಿ ದೀಪವಾಗಿದೆ ಎಂದು ವಿಧಾನಸಭೆ ಉಪ ಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಹಾಗೂ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ದೇಶದ ಉಪ ಪ್ರಧಾನಿಯಾಗಿ ಬಾಬು ಜಗಜೀವನರಾಂ ಅವರು ಬಹಳಷ್ಟು ಸಾಧನೆಗಳನ್ನು ಮಾಡಿದ್ದಾರೆ. ಡಾ.ಬಿ.ಆರ್ ಅಂಬೇಡ್ಕರ್ ದೇಶಕ್ಕೆ ಸಂವಿಧಾನ ಕೊಟ್ಟು ನಮ್ಮೆಲ್ಲರಿಗೂ ಶಾಂತಿ, ಸಹಬಾಳ್ವೆಯಿಂದ ಬದುಕಲು ಸಂವಿಧಾನ ಕೊಟ್ಟು ಎಲ್ಲರ ಬಾಳಿಗೆ ಬೆಳಕಾಗಿದ್ದಾರೆ. ನಾವೆಲ್ಲರು ಈ ಉಭಯ ನಾಯಕರ ಜೀವನ ಚರಿತ್ರೆ, ಮಾಡಿದ ತ್ಯಾಗ, ಸಾಧನೆಗಳನ್ನು ಓದಿ ತಿಳಿದುಕೊಂಡು, ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತಿಯುತರಾಗಿ ಬದುಕಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರರು ರಾಷ್ಟ್ರೀಯವಾದಿ, ಕಾನೂನು ತಜ್ಞರಾಗಿ, ಇತಿಹಾಸಕಾರರಾಗಿ, ಮಹಾನ್ ದಾರ್ಶನಿಕರಾಗಿ, ಅಪ್ರತಿಮ ಚಿಂತಕ, ಮಾನವ ಶಾಸ್ತ್ರಜ್ಞ, ಕ್ರಾಂತಿಕಾರಿಯಾಗಿ, ಭಾರತ ಸಂವಿಧಾನದ ಶಿಲ್ಪಿಯಾಗಿ ಮಹತ್ತರ ಸಾಧನೆ ಮಾಡಿದ್ದಾರೆ. ಅದೇ ರೀತಿ ಬಾಬು ಜಗಜೀವನರಾಂ ಅವರು ಸಹಿತ ಸ್ವತಂತ್ರ ಸೇನಾನಿ, ಶೋಷಣೆ ರಹಿತ, ಗಾಂಧಾದಿ, ಸಾಮಾಜಿಕ, ರಾಜಕೀಯ, ನವಭಾರತ ನಿರ್ಮಾಣಕ್ಕೆ ಶ್ರಮಿಸಿದ ಧೀಮಂತ ನಾಯಕರಾಗಿದ್ದಾರೆ ಎಂದರು.

ಸಾಹಿತಿ ಹನುಮಂತಗೌಡ ಗೊಲ್ಲರ ಅವರು ಡಾ. ಬಿ.ಆರ್ ಅಂಬೇಡ್ಕರ್ ಕುರಿತು, ಶಿಕ್ಷಕ ಮಹದೇವಪ್ಪ ಕರಿಯಣ್ಣವರ ಡಾ.ಬಾಬು ಜಗಜೀವನರಾಂ ಕುರಿತು ಉಪನ್ಯಾಸ ನೀಡಿದರು. ಕಳೆದ ಸಾಲಿನ ಎಸ್ಸೆಸ್ಸೆಲ್ಸಿ, ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಹುಡಾ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿ ಗೌಡ್ರ, ಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಎಂ.ಎಂ.ಮೈದೂರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಎಸ್ಪಿ ಯಶೋಧಾ ವಂಟಗೋಡಿ, ಅಪರ ಡಿಸಿ ಡಾ.ನಾಗರಾಜ ಎಲ್., ಎಸಿ ಕಲ್ಯಾಣಿ ಕಾಂಬ್ಳೆ, ತಹಸೀಲ್ದಾರ್ ಶರಣಮ್ಮ ಕೆ., ಮುಖಂಡರಾದ ಬಸವರಾಜ ಹೆಡಿಗ್ಗೊಂಡ, ಪರಮೇಶ್ವರಪ್ಪ ಮೇಗಳಮನಿ, ಉಡಚಪ್ಪ ಮಾಳಗಿ, ಮಲ್ಲಿಕಾರ್ಜುನ ಸಾತೇನಹಳ್ಳಿ, ಸುರೇಶ ಛಲವಾದಿ, ರಮೇಶ ಆನವಟ್ಟಿ, ಸುಭಾಸ್ ಬೆಂಗಳೂರು, ಸಂಜಯಗಾಂಧಿ ಸಂಜೀವಣ್ಣನವರ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಪ್ರಶಾಂತ್ ವರಗಪ್ಪನವರ ಸ್ವಾಗತಿಸಿದರು. ಶಿಕ್ಷಕ ನಾಗರಾಜ ನಡುವಿನಮಠ ನಿರೂಪಿಸಿದರು.



ಭಾವಚಿತ್ರ ಮೆರವಣಿಗೆ

ವೇದಿಕೆ ಕಾರ್ಯಕ್ರಮ ಆರಂಭಕ್ಕೂ ಮುನ್ನ ನಗರದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿರುವ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು. ನಂತರ ಉಭಯ ನಾಯಕರ ಭಾವಚಿತ್ರವನ್ನು ಸಾರೋಟದಲ್ಲಿರಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಂಚರಿಸಿ ಅಂಬೇಡ್ಕರ್ ಭವನ ತಲುಪಿತು. ಈ ವೇಳೆ ಬೈಕ್ ರ್‍ಯಾಲಿ ನಡೆಸಲಾಯಿತು. ವಿವಿಧ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿ ಆಚರಣೆ

ಬ್ಯಾಡಗಿ: ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತ ದೇಶವು, ತನ್ನ ಬಹುತ್ವ ಸಂಸ್ಕೃತಿ ಕಾಪಾಡಿಕೊಂಡು, ಸಮಾನತೆಯೊಂದಿಗೆ ಪ್ರಗತಿಸಾಧಿಸುತ್ತಿದೆ. ಈ ಸಾಧನೆಗೆ ದೇಶದ ಸಂವಿಧಾನ ಭದ್ರ ಬುನಾದಿ ಒದಗಿಸಿದೆ ಎಂದು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ ಹೇಳಿದರು.

ಪಟ್ಟಣದ ಗಾಂಧಿನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಏರ್ಪಡಿಸಿದ್ದ ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಕೊಡುಗೆಗಳು ಶೋಷಿತರಿಗೆ ಮಾತ್ರ ಸೀಮಿತವಾಗಿಲ್ಲ, ಮಹಿಳಾ ಸಮಾನತೆ, ಕಾರ್ಮಿಕ ಹಕ್ಕುಗಳು,ಅಲ್ಪಸಂಖ್ಯಾತರ ರಕ್ಷಣೆ ಅವರು ನೀಡಿದ ಕೊಡುಗೆಗಳು ಅಪಾರವಾಗಿವೆ ಎಂದರು.

ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಮಾತನಾಡಿ, ಜಗತ್ತಿನ ಶ್ರೇಷ್ಠ ಜ್ಞಾನಿಯಾಗಿದ್ದ ಅಂಬೇಡ್ಕರ್ ಅವರು ತಮ್ಮ ಪ್ರತಿಭೆಯನ್ನು ಮನುಕುಲದ ಉದ್ಧಾರಕ್ಕಾಗಿ ಮುಡಿಪಾಗಿಟ್ಟರು. ಅವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು ಎಂದರು.

ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಜಗಜೀವನ್ ರಾವ್ ಅವರ ಭಾವಚಿತ್ರದ ಮೆರವಣಿಗೆಗೆ ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಚಾಲನೆ ನೀಡಿ ಟ್ರ್ಯಾಕ್ಟರ್ ಮೂಲಕ ಮುಖ್ಯರಸ್ತೆ ಮಾರ್ಗವಾಗಿ ಅಂಬೇಡ್ಕರ್ ಭವನದವರಿಗೆ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ವಿವಿಧ ವಾದ್ಯ ವೈಭವಗಳು ಪಾಲ್ಗೊಂಡಿದ್ದರು. ಹಾಗೂ ಸರ್ಕಾರಿ ಇಲಾಖೆ ಎಲ್ಲಾ ಅಧಿಕಾರಿಗಳು ಸಮಾಜದ ಬಾಂಧವರು ವಿವಿಧ ಸಂಘಟನೆ ಅವರು ಪಾಲ್ಗೊಂಡಿದ್ದರು.

ತಾಲೂಕು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆಎಂ ಮಲ್ಲಿಕಾರ್ಜುನ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಎಂಎಫ್ ನದಾಫ್, ತಾಲೂಕು ಕಾಂಗ್ರೆಸ್ ಅಧ್ಯಕ್ಷ ದಾನಪ್ಪ ಚೂರಿ, ಪ್ರಧಾನ ಕಾರ್ಯದರ್ಶಿ ರಮೇಶ್ ಸುತ್ತುಕೋಟಿ, ಸಮಾಜದ ಮುಖಂಡರಾದ ಸುರೇಶ್ ಆಸಾದಿ, ದುರ್ಗೇಶ್ ಗೋಣೆಮ್ಮನವರ್, ರಮೇಶ್ ಕೋಟಿ, ಜೈ ಭೀಮ ರಾರಾವಿ, ಸುಭಾಷ್ ಮಾಳಗಿ, ವಿಜಯ್ ಮಾಳಗಿ, ಹೈದರಾಲಿ ಬೆಂಗಳೂರಿ, ಮಂಜೂರ್ ಅಲಿ ಹಕೀಮ್, ಅಧಿಕಾರಿಗಳಾದ ಸಿಪಿಐ ಮಂಜುನಾಥ್. ಸಿಡಿಪಿಓ. ಚಂದ್ರಶೇಖರ್. ನೀರು ಮತ್ತು ನೈರ್ಮಲ್ಯ ಅಧಿಕಾರಿ ಸುರೇಶ್ ಬೇಡರ, ಗಣೇಶ್ ಕಮ್ಮಾರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಬಸವಣ್ಣನವರ ಜಯಂತ್ಯುತ್ಸವ: ರಥಯಾತ್ರೆಗೆ ಚಾಲನೆ

ಹಾವೇರಿ: ವಿಶ್ವಗುರು ಬಸವಣ್ಣನವರ 893ನೇ ಜಯಂತ್ಯುತ್ಸವ ನಿಮಿತ್ತ ಹುಕ್ಕೇರಿಮಠದ ಮಠಾಧ್ಯಕ್ಷ ಸದಾಶಿವ ಶ್ರೀಗಳ ಸಾನಿಧ್ಯದಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳಿಗೆ ಹಾಗೂ ಬಸವ ಜಾಗೃತಿ ಸಂದೇಶ ಸಾರುವ ರಥಯಾತ್ರೆಗೆ ಮಂಗಳವಾರ ಹೊಸಮಠದ ಬಸವ ಶಾಂತಲಿಂಗ ಶ್ರೀಗಳು ಚಾಲನೆ ನೀಡಿದರು.

ನಗರದ ಹುಕ್ಕೇರಿಮಠ ಮುಂಭಾಗದಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ, ನಗರದ ಬೀದಿ ಬೀದಿಗಳಲ್ಲಿ ಹಾಗೂ ಎಲ್ಲ ಓಣಿಗಳಲ್ಲಿ ಬಸವ ಅಭಿಮಾನಿಗಳಿಗೆ ಹಾಗೂ ಮಠದ ಭಕ್ತರಿಗೆ ಬಸವಣ್ಣನವರ ವಚನ ಸಂದೇಶಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಜತೆಗೆ ಇತರೆ ಶರಣರ ವಚನಗಳನ್ನು ಹೇಳುತ್ತಾ ಪ್ರಭಾತಪೇರಿಯನ್ನು ನಡೆಸಬೇಕು ಎಂದರು. ಬಸವಣ್ಣನವರು ಹಾಕಿಕೊಟ್ಟ ತತ್ವಾದರ್ಶಗಳನ್ನ ಬಿತ್ತುವದರ ಮುಖಾಂತರ ಸಮಾಜದ ಒಳಿತಿಗಾಗಿ ಶ್ರಮಿಸಬೇಕಿದೆ. ಇಂತಹ ಬಸವ ಸಂದೇಶ ಜಾಗೃತಿ ಕಾರ್ಯಕ್ರಮಗಳಿಂದ ಬಸವಣ್ಣನವರ ಹಾಗೂ ಶರಣರ ವಿಚಾರ ಧಾರೆಗಳು ಜನರಿಗೆ ತಲುಪುತ್ತವೆ. ಇಂದಿನ ಆವಶ್ಯಕತೆಗಳಿಗೆ ಶರಣರ ವಚನಗಳು ದಾರಿ ದೀಪವಾಗಿವೆ. ಇಂದಿನ ಎಷ್ಟೋ ಸಮಸ್ಯೆಗಳಿಗೆ ಪರಿಹಾರದ ಮಾರ್ಗಗಳಾಗಿವೆ ಎಂದು ಹೇಳಿದರು.

ಈ ವೇಳೆ ಬಸವ ಬಳಗದ ಅಧ್ಯಕ್ಷ ವಿ.ಜಿ. ಯಳಗೇರಿ, ಮಹೇಶ ಚಿನ್ನಿಕಟ್ಟಿ, ನಿವೃತ್ತ ಮುಖ್ಯೋಪಾಧ್ಯಾಯ ಬಿ.ಬಸವರಾಜಪ್ಪ, ಸೋಮಣ್ಣ ಮುಷ್ಠಿ, ಮಹಾಂತಣ್ಣ ಹಲಗಣ್ಣನವರ, ಗಂಗಣ್ಣ ಮಾಸೂರ, ಮುರಿಗೆಪ್ಪ ಕಡೆಕೊಪ್ಪ, ಉಳಿವೆಪ್ಪ ಪಂಪಣ್ಣನವರ, ಕೆ.ಎಂ. ಬಿಜಾಪುರ, ಗಿರೀಶ್ ಶೆಟ್ಟರ್, ಸಿದ್ದಲಿಂಗಪ್ಪ ಮಹಾರಾಜಪೇಟೆ, ಶಿವಾನಂದ ಹೊಸಮನಿ, ಶಿವಾನಂದ ಅಂಗಡಿ ದಂಪತಿಗಳು, ಮಾಲತೇಶ ಕರೆಮಣ್ಣನವರ, ಹನುಮಂತಪ್ಪ ಮಡಿವಾಳರ, ಶಿವಯೋಗಿ ಬೆನ್ನೂರು, ಶಿವಯೋಗಿ ಮಾಮಲೇ ಪಟ್ಟಣಶೆಟ್ಟಿ, ವಿಜಯಕುಮಾರ ಕೂಡ್ಲಪ್ಪನವರ, ಶಿವರಾಜ ಕಾಯಕದ ಸೇರಿದಂತೆ ಅನೇಕರು ಹಾಜರಿದ್ದರು.



ಅಂಬೇಡ್ಕರರ ಚಿಂತನೆ ಸರ್ವಕಾಲಕ್ಕೂ ಪ್ರಸ್ತುತ

ಬ್ಯಾಡಗಿ : ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತದಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಮಾನವಘನತೆಮತ್ತುಹಕ್ಕುಗಳಿಗಾಗಿ ಸುಮಾರು ನಾಲ್ಕು ದಶಕಗಳ ಕಾಲ ಹೋರಾಡಿದ ಮಹಾನ್ ನಾಯಕ, ಅವರ ಚಿಂತನೆಗಳು ಜಗತ್ತಿನ ಮಾನವ ಕುಲಕ್ಕೆ ಸರ್ವಕಾಲಕ್ಕೂ ಪ್ರಸ್ತುತವಾದಂತಹವುಗಳಾಗಿವೆ ಎಂದು ಮಾಜಿ ಶಾಸಕ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ತಿಳಿಸಿದರು.

ಪಟ್ಟಣದ ಭಾರತೀಯ ಜನತಾ ಪಾರ್ಟಿಯ ಕಚೇರಿಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು 135ನೇ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಮಾತನಾಡಿದ ಅವರು, ಅಂಬೇಡ್ಕರ್ ರವರು ಜೀವನದಲ್ಲಿ ತಮ್ಮಗೆ ಆದ ಅವಮಾನ ಬೇರೆ ಯಾರಿಗೂ ಆಗಬಾರದೆಂದು ಸಂವಿಧಾನದಲ್ಲಿ ಎಲ್ಲರಿಗೂ ಸಹಾ ಸಮಾನವಾದ ಅವಕಾಶವನ್ನು ನೀಡಿದ್ದಾರೆ. ಇದರಿಂದಾಗಿ ಭಾರತದಲ್ಲಿಬಲಿಷ್ಠವಾದಸಂವಿಧಾನ ಇದೆ, ಇದರ ಮೂಲಕ ಎಲ್ಲರಿಗೂ ನ್ಯಾಯ ಸಿಗುವಂತ ವಾತಾವರಣ ಸೃಷ್ಟಿಯಾಗಿದೆ ಎಂದರು.

ಮಾಜಿ ಪುರಸಭೆ ಅಧ್ಯಕ್ಷ ಮುರಿಗೆಪ್ಪ ಶೆಟ್ಟರ ಮಾತನಾಡಿದರು. ತಾಲೂಕು ಅಧ್ಯಕ್ಷ ನಿಂಗಪ್ಪ ಬತ್ತಲಗಟ್ಟಿ ಮಾತನಾಡಿದರು.

ಶಿವಾನಂದ ಯಮುನಕ್ಕನವರ, ಸುಭಾಷ ಮಾಳಗಿ, ನಾಗರಾಜ ಹಾವನೂರ, ವಿನಯ ಹೀರೆಮಠ, ಸುರೇಶ ಉದ್ಯೋಗಣ್ಣನವರ, ವಿದ್ಯಾ ಶೆಟ್ಟಿ, ಕಲಾವತಿ ಬಡಿಗೇರ, ಗಾಯತ್ರಿ ರಾಯ್ಕರ ಹಾಗೂ ಪಕ್ಷದ ಅನೇಕ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.



ದೇಶ ಕಂಡ ಶ್ರೇಷ್ಠ ನಾಯಕ ಅಂಬೇಡ್ಕರ್

ರಾಣೇಬೆನ್ನೂರ: ದೇಶದ ಪ್ರತಿಯೊಬ್ಬರಿಗೂ ಸಂವಿಧಾನದ ಮೂಲಕ ಸಮಾನತೆ, ನ್ಯಾಯ ಮತ್ತು ಶಿಕ್ಷಣ ನೀಡಿದ ಡಾ.ಅಂಬೇಡ್ಕರ್‌ರವರ ಚಿಂತನೆಗಳನ್ನು ಎಲ್ಲರೂ ಪಾಲಿಸಬೇಕೆಂದು ಉಪನ್ಯಾಸಕ ಹೆಚ್.ಶಿವಾನಂದ ಹೇಳಿದರು.

ನಗರದ ಶ್ರೀ ಸಿದ್ದೇಶ್ವರ ಗ್ರಾಮಾಂತರ ವಸತಿ ಪ್ರೌಢಶಾಲೆಯಲ್ಲಿ ಮಂಗಳವಾರ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತೀಯರಿಗೆ ಶ್ರೇಷ್ಠ ಸಂವಿಧಾನ ನೀಡುವ ಮೂಲಕ ಪ್ರತಿಯೊಬ್ಬರಿಗೂ ಸಮಾನತೆ, ವಾಕ್ ಸ್ವಾತಂತ್ರ ಕಲ್ಪಿಸಿದ್ದಾರೆ. ಅಂಬೇಡ್ಕರ್ ಅವರ ದೀರ್ಘಕಾಲದ ಅಧ್ಯಯನ, ಅನೇಕ ವಿಚಾರಗಳು ಇಂದಿಗೂ ಜೀವಂತವಾಗಿದ್ದು, ಅವರ ಚಿಂತನೆಗಳು ವಿಚಾರಗಳನ್ನು ಪ್ರತಿಯೊಬ್ಬ ಭಾರತೀಯರು ಗೌರವಿಸಬೇಕು ಜೊತೆಗೆ ದೇಶ ಕಂಡ ಶ್ರೇಷ್ಠ ನಾಯಕರಲ್ಲಿ ಅಂಬೇಡ್ಕರ್ ಪ್ರಮುಖರು ಅವರ ತತ್ವ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ ಮುಖ್ಯೋಪಾಧ್ಯಾಯ ಪ್ರಶಾಂತ.ಎನ್. ಮಾಸಣಗಿ ಮಾತನಾಡಿ, ವಿವಿಧತೆಯಲ್ಲಿ ಏಕತೆಗೆ ಹೆಸರಾಗಿರುವ ಭಾರತಕ್ಕೆ ಡಾ. ಬಿ.ಆರ್. ಅಂಬೇಡ್ಕರ ಅವರು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಸಂವಿಧಾನ ನೀಡಿದ್ದಾರೆ ಹಾಗೂ ಸಮಾಜಿಕ ಅಸಮಾನತೆ ಜಾತಿ ಪದ್ಧತಿ ನಿರುದ್ಯೋಗ ಬಡತನ ಹೋಗಲಾಡಿಸಲು ಬಹಳಷ್ಟು ಶ್ರಮಿಸಿದ್ದಾರೆ. ಅವರ ಚಿಂತನೆ ಸಾಮಾಜಿಕ ಕಾಳಜಿ ಅಪಾರ ಇದ್ವತ್ ಜ್ಞಾನದಿಂದಾಗಿ ಅವರಿಗೆ ಸಂವಿಧಾನ ರಚನೆ ಮಾಡುವ ಸುವರ್ಣ ಅವಕಾಶ ಒದಗಿಬಂದಿತ್ತು ಅದನ್ನು ಸದುಪಯೋಗ ಮಾಡಿಕೊಂಡು ವಿಶ್ವ ಮೆಚ್ಚುವಂತಹ ಸಂವಿಧಾನವನ್ನು ನೀಡಿದ್ದಾರೆ ಎಂದರು.

ಶಿಕ್ಷಕರಾದ ಸ್ವಪ್ನ.ಯು, ಕವಿತಾ.ಎನ್.ಜಿ, ಶ್ವೇತ.ಪಿ, ಮಂಗಳಮ್ಮ.ಟಿ.ಎಸ್, ಶಾಲಿ ಸಂತೋಷ ಕುಮಾರ್, ಭಾಗ್ಯಶ್ರೀ ಹರೀಶ ಬ್ಯಾಡಗಿ, ಆನಂದ.ಕೆ.ಇ ಸೇರಿದಂತೆ ಮಕ್ಕಳು ಮತ್ತಿತರರು ಉಪಸ್ಥಿತರಿದ್ದರು.



ಶಿಕ್ಷಣದಿಂದ ಸಮಾಜದ ಬದಲಾವಣೆ ಸಾಧ್ಯ



ಹಾನಗಲ್ಲ: ಶಾಸಕ ಶ್ರೀನಿವಾಸ ಮಾನೆ ಅವರ ಇಲ್ಲಿನ ಜನಸಂಪರ್ಕ ಕಚೇರಿಯಲ್ಲಿ ಮಂಗಳವಾರ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ ಮಾತನಾಡಿ, ಅಂಬೇಡ್ಕರ್ ಅವರ ಸಮಾಜಮುಖಿ ಚಿಂತನೆಗಳು ಎಂದೆಂದಿಗೂ ಪ್ರಸ್ತುತವಾಗಿದೆ. ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವ ಎಂಬ ಮೌಲ್ಯಗಳು ಸಮಾಜದಲ್ಲಿ ರೂಢಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಿಕ್ಷಣದ ಮೂಲಕವೇ ಸಮಾಜದಲ್ಲಿ ಬದಲಾವಣೆ ಸಾಧ್ಯವೆಂದು ಅಂಬೇಡ್ಕರ್ ಅವರು ಸಾರಿದ ಸಂದೇಶವನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಮುಂದೆ ಸಾಗಬೇಕಿದೆ ಎಂದು ಹೇಳಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಮುಖಂಡರಾದ ರಾಜ ಕುಮಾರ ಶಿರಪಂಥಿ, ಸುರೇಶ ನಾಗಣ್ಣನವರ, ಶಿವು ತಳವಾರ, ಅರುಣ ಮಣ್ಣಮ್ಮನವರ, ಶಕೀಲ್ ಬಾಳೂರ ಸೇರಿದಂತೆ ಇನ್ನೂ ಹಲವರು ಇದ್ದರು.

ಸಂತ ಗುರು ರವಿದಾಸರ ಜಯಂತಿ ಆಚರಣೆ

ಹಾವೇರಿ: ಇಲ್ಲಿನ ಕಾಗಿನೆಲೆ ರಸ್ತೆಯ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಸಂತ ಗುರು ರವಿದಾಸರ ಜಯಂತಿ ಆಚರಿಸಲಾಯಿತು.

ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಸಂತ ಗುರು ರವಿದಾಸರು ಉತ್ತರ ಪ್ರದೇಶದ ವಾರಣಾಸಿಯ ಗೋವರ್ಧನಪುರದಲ್ಲಿ ಜನಿಸಿದರು, ಇವರು ಭಕ್ತಿ ಚಳುವಳಿಯ ಪ್ರಮುಖ ಕವಿಯಾಗಿದ್ದರು. ಕೆಳ ಜಾತಿಯ ಕುಟುಂಬದಲ್ಲಿ ಜನಿಸಿದ ರವಿದಾಸರು ಬಾಲ್ಯದಿಂದಲೇ ಭಕ್ತಿ ಮಾರ್ಗದತ್ತ ಆಕರ್ಷಿತರಾದರು. ಸಂತ ರವಿದಾಸರು. ಜಾತಿ, ವರ್ಗ ಮತ್ತು ಧರ್ಮದ ಗೋಡೆಗಳನ್ನು ಮೀರಿ ಮಾನವೀಯತೆ ಹಾಗೂ ಪ್ರೇಮವನ್ನು ಬೋಧಿಸಿದ ಶ್ರೇಷ್ಠ ಸಂತರಾಗಿದ್ದಾರೆ ಎಂದು ಹೇಳಿದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಪ್ಪ ಹರಿಜನ ಮಾತನಾಡಿ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಮಹಾತ್ಮರು ಜನಿಸಿದರು. ಅಂತಹ ಮಹಾತ್ಮರಲ್ಲಿ ಒಬ್ಬರಾದ 15ನೇ ಶತಮಾನದಲ್ಲಿ ಸಂತ ರವಿದಾಸರು ಜನಿಸಿದರು. ಅವರನ್ನು ರಯಿದಾಸರು ಎಂದು ಕರೆಯುತ್ತಾರೆ. 15–16ನೇ ಶತಮಾನದಲ್ಲಿ ಭಕ್ತಿ ಚಳುವಳಿಯ ಪ್ರಮುಖ ಕವಿ ಮತ್ತು ಸಮಾಜ ಸುಧಾರಕರಾಗಿದ್ದರು, ಜಾತಿ ವ್ಯವಸ್ಥೆ ಮತ್ತು ಲಿಂಗ ತಾರತಮ್ಯ ವಿರೋಧಿಸಿ ಮನುಷ್ಯರೆಲ್ಲರೆಲ್ಲರೂ ಸಮಾನರು ಎಂದು ಸಾರಿದರು ಎಂದು ತಿಳಿದರು.

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಕೇಂದ್ರ ಬಜೆಟ್ ಮಂಡಿಸುತ್ತಿರುವ ಕಾರ್ಯಕ್ರಮವನ್ನು ವೀಕ್ಷಿಸಲಾಯಿತು.

ಈ ವೇಳೆ ರಾಜ್ಯ ಪ್ರಕೋಷ್ಠಗಳ ಸಹ ಸಂಯೋಜಕ ಬೋಜರಾಜ ಕರೂದಿ, ಮುಖಂಡರಾದ ವಿಜಯಕುಮಾರ ಚಿನ್ನಿಕಟ್ಟಿ, ಕಿರಣ ಕೊಳ್ಳಿ, ಸುನೀಲ ಬೆಟಗೇರಿ, ಮಹಾಲಿಂಗಸ್ವಾಮಿ, ಗುಡ್ಡಪ್ಪ ಭರಡಿ, ವಿನಯ ತಹಶೀಲ್ದಾರ, ರೋಹಿಣಿ ಪಾಟೀಲ, ನಿರಂಜನ ಹೆರೂರ, ಮಧುಕೇಶ್ವರ ಹಂದ್ರಾಳ ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಅಂಬೇಡ್ಕರ್ ಸ್ಮರಣೆ

ಹಾವೇರಿ: ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್‌ರಾಂ ಅವರ ಸ್ಮರಣೆ ಮಾಡಲಾಯಿತು. ಕಾರ್ಯಕ್ರಮದ ಕುರಿತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಅಂಬೇಡ್ಕರ್ ಜೀವನ ಚರಿತ್ರೆ ನಮಗೆಲ್ಲಾ ಮಾದರಿ, ಅವರು ಸಂವಿಧಾನವನ್ನು ರಚಿಸಿದ್ದು ಮತ್ತು ಅದಕ್ಕೂ ಮುನ್ನ ವಿಶ್ವದ ವಿವಿಧ ಸಂವಿಧಾನಗಳ ಅಧ್ಯಯನ ನಡೆಸಿದ್ದು ಗಮನಾರ್ಹ ಎಂದು ಹೇಳಿದರು.

ಈ ವೇಳೆ ಮಾಜಿ ಶಾಸಕ ನೆಹರು ಓಲೇಕಾರ, ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಂ.ಎಂ. ಹಿರೇಮಠ, ಹುಡಾ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿ ಗೌಡ್ರ, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೆಗಣ್ಣಿ, ಮುಖಂಡರಾದ ಶಂಕರ ಮೆಹರವಾಡೆ, ಎಂ.ಎಂ. ಮೈದೂರ, ಪ್ರಭುಗೌಡ್ರ ಬಿಷ್ಟನಗೌಡ್ರ, ನಗರಸಭೆ ಮಾಜಿ ಸದಸ್ಯರು, ಪ್ರಾಧಿಕಾರದ ಸದಸ್ಯರು ಉಪಸ್ಥಿತರಿದ್ದರು.



ಅಂಬೇಡ್ಕರರ 135ನೇ ಜಯಂತ್ಯುತ್ಸವ



ಹಾವೇರಿ: ಇಲ್ಲಿನ ಕಾಗಿನೆಲೆ ರಸ್ತೆಯ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಮಂಗಳವಾರ ಡಾ.ಬಿ.ಆರ್. ಅಂಬೇಡ್ಕರರ 135ನೇ ಜಯಂತೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.ಜಿಲ್ಲಾ ಎಸ್.ಸಿ ಮೋರ್ಚಾ ಅಧ್ಯಕ್ಷರಾದ ಚಂದ್ರಣ್ಣ ಹರಿಜನ ಮಾತನಾಡಿ, ಒಬ್ಬ ಸಮಾಜ ಸುಧಾರಕ, ರಾಜಕೀಯ ಮುತ್ಸದ್ಧಿ ಹಾಗೂ ಸಮಾನತೆಗೆ ಹೋರಾಡಿದ ನಾಯಕ. ಭಾರತದ ಸಂವಿಧಾನ ರಚಿಸಿದ ಸಂವಿಧಾನ ಶಿಲ್ಪಿ, ಶಿಕ್ಷಿತರಾಗಿ, ಸಂಘಟಿತರಾಗಿ, ಹೋರಾಡಿ ಎಂಬ ಮಂತ್ರ ನೀಡಿದ ಅಂಬೇಡ್ಕರವರು ಶೋಷಿತರು ಮತ್ತು ಮಹಿಳೆಯರ ಹಕ್ಕುಗಳಿಗಾಗಿ ಸತತವಾಗಿ ಹೋರಾಟ ನಡೆಸಿದರು ಎಂದರು.ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಅಂಬೇಡ್ಕರರವರು ಬಾಲ್ಯ ಜೀವನದಲ್ಲಿ ಶಾಲೆಗೆ ಹೋಗುವ ಸಂದರ್ಭದಲ್ಲಿ ಮೇಲೆ ಜಾತಿಯವರ ಶೋಷಣೆಗೆ ಒಳಪಟ್ಟರು. ಮುಂದೆ ಸಂವಿಧಾನವನ್ನು ರಚಿಸಿ ಸಂವಿಧಾನ ಶಿಲ್ಪಿ ಎನಿಸಿಕೊಂಡರು. ಅಂಬೇಡ್ಕರವರು ದೂರದೃಷ್ಟಿವುಳ್ಳ ಒಬ್ಬ ಮಹಾನ್ ರಾಜಕೀಯ ಮುತ್ಸದ್ದಿ ಎಂದು ಶ್ಲಾಘಿಸಿದರು. ಹಾವೇರಿ ವಿಧಾನಸಭಾ ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಕಾರ್ಯದರ್ಶಿ ಅಲ್ಲಾಭಕ್ಷ ತಿಮ್ಮಾಪೂರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ಸಂತೋಷ ಆಲದಕಟ್ಟಿ, ವೆಂಕಟೇಶ ನಾರಾಯಣಿ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲತಾ ಬಡ್ಡಿಮಠ, ಕೃಷ್ಣಾ ಲಮಾಣಿ, ರುದ್ರೇಶ ಚಿನ್ನಣ್ಣನವರ, ಕಿರಣ ಕೊಳ್ಳಿ ಹಾಗೂ ಪಕ್ಷದ ಪದಾಧಿಕಾರಿಗಳು ಹಾಲಿ, ಮಾಜಿ ಚುನಾಯಿತ ಪ್ರತಿನಿಧಿಗಳು, ಮೋರ್ಚಾ ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ಅಂಬೇಡ್ಕರ್ ವರ್ತಮಾನದ ಬೆಳಕು



ಬೆಳಗಾವಿ : ದೇಶದ ದಲಿತರು, ಮಹಿಳೆಯರು ಮತ್ತು ಸಮಸ್ತ ಶೋಷಿತರಿಗೆ ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಹಕ್ಕು ಪಡೆಯಲು ಬಾಬಾ ಸಾಹೇಬ್ ಅಂಬೇಡ್ಕರ್ ವರ್ತಮಾನದ ಬೆಳಕಾಗಿದ್ದಾರೆ ಎಂದು ಬಂಡಾಯ ಸಾಹಿತಿ ಡಾ. ಯಲ್ಲಪ್ಪ ಹಿಮ್ಮಡಿ ಹೇಳಿದರು.

ಮಂಗಳವಾರ ನಗರದ ಕೊಲ್ಲಾಪುರ ವೃತ್ತದ ಸಮೀಪವಿರುವ ಮಾನವ ಬಂದುತ್ವ ವೇದಿಕೆಯ ಕೇಂದ್ರ ಕಛೇರಿಯ ಸಭಾಂಗಣದಲ್ಲಿ, ಮಾನವ ಬಂಧುತ್ವ ವೇದಿಕೆಯ ಪದಾಧಿಕಾರಿಗಳು ಏರ್ಪಡಿಸಿದ್ದ ಬಾಬಾಸಾಹೇಬ ಡಾ. ಬಿ. ಆರ್. ಅಂಬೇಡ್ಕರ್ ಅವರ 135 ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರವಿ ಕಾಂಬಳೆ, ಸನ್ನಿ ಬಾನ್ಸ್, ಸಂತೋಷ್ ಪಾಟೀಲ್, ಬಸವರಾಜ ಕೋರ್ಲ್ಕ, ಶುಭಂ ಮದಾಳೆ, ಪ್ರಕಾಶ ಬೊಮ್ಮನ್ನವರ ಸೇರಿದಂತೆ ಇತರರು ಇದ್ದರು.

ಅರ್ಥಪೂರ್ಣ ಆಚರಣೆಗೆ ಸೂಚನೆ

ಬೆಳಗಾವಿ : ಬಸವ ಜಯಂತಿ ಹಾಗೂ ಶಂಕರಾಚಾರ್ಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಬಸವ ಜಯಂತಿ ಹಾಗೂ ಶಂಕರಾಚಾರ್ಯರ ಜಯಂತಿ ಕುರಿತು ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಏ.20ರಂದು ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ಬಸವ ಜಯಂತಿ ಆಚರಿಸಲು ಹಾಗೂ ಏ.26ರಂದು ಬಸವ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಏ.21ರಂದು ಶಂಕರಾಚಾರ್ಯರ ಜಯಂತಿ ಗುರುಪ್ರಸಾದ ನಗರದ ದತ್ತ ಮಂದಿರದಲ್ಲಿ ಆಯೋಜಿಸಲು ತಿಳಿಸಿದರು. ಒಟ್ಟಾರೆಯಾಗಿ ಬಸವ ಜಯಂತಿ ಹಾಗೂ ಶಂಕರಾಚಾರ್ಯರ ಜಯಂತಿಯನ್ನು ವಿಜೃಂಭಣೆಯಿಂದ ಹಾಗೂ ಅರ್ಥಪೂರ್ಣ ಆಚರಣೆಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಉಪ ಪೊಲೀಸ್ ಆಯುಕ್ತ ನಾರಾಯಣ ಭರಮಣಿ ಸೇರಿದಂತೆ ಸಮುದಾಯದ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ತೋಟಗಾರಿಕೆ ತರಬೇತಿ: ಅರ್ಜಿ ವಿಸ್ತರಣೆ

ಬೆಳಗಾವಿ : ತೋಟಗಾರಿಕೆ ಇಲಾಖೆಯಿಂದ 2026-27ನೇ ಸಾಲಿನಲ್ಲಿ ಜಿಲ್ಲೆಯ ಪುರುಷ ಹಾಗೂ ಮಹಿಳಾ ರೈತ ಮಕ್ಕಳಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 10 ತಿಂಗಳ ತರಬೇತಿಗಾಗಿ ಅರ್ಜಿ ಸ್ವೀಕರಿಸುವ ದಿನಾಂಕವನ್ನು ಏ.20ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ನಮೂನೆಯನ್ನು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು, ಬೆಳಗಾವಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ) ರವರ ಕಚೇರಿಯಲ್ಲಿ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು ಏ.20ರ ಸಂಜೆ 5.30 ರೊಳಗಾಗಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಲ್ಲಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಏ.23ರಂದು ಬೆಳಗಾವಿ ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕರು(ರಾವ) ಕಛೇರಿಯಲ್ಲಿ ಬೆಳಗ್ಗೆ 11ಕ್ಕೆ ನೇರವಾಗಿ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕರು (ಜಿ.ಪಂ) ಕಚೇರಿಯಲ್ಲಿ ಮಾಹಿತಿ ಪಡೆಯಬಹುದು ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸವದತ್ತಿ: ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ, ಕಚೇರಿಯ ಪಂತ್ರಾಂಕಿತ ವ್ಯವಸ್ಥಾಪಕರಾದ ಐ.ಎಂ. ಮಕಾನದಾರ, ಅಧೀಕ್ಷಕರಾದ ಸುರೇಶ ಬೆಟಗೇರಿ ಹಾಗೂ ವಿಠ್ಠಲ ರಾವಳ ಉಪಸ್ಥಿತರಿದ್ದರು. ಪ್ರಭಾಕರ ಲಾಡ, ಬಾಬಾಜಾನ ಮಾಳಗಿ, ಅರ್ಜುನ್ ಕಾಮನ್ನವರ (ಶಿ.ಸಂ.), ವಿದ್ಯಾ ಗಾಣಿಗಿ, ಶ್ರೀರಾಮ ಪತ್ತಾರ, ಕುಶಾಲ್ ಮುದ್ದನ್ನವರ, ಕಿರಣ ಅಮ್ಮನ್ನವರ, ಆಯಿಶಾ ಜಹಗೀರದಾರ, ರಾಜು ಹನಸಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಾಬಾಸಾಹೇಬರ ಜೀವನವೇ ದೊಡ್ಡ ಸಂದೇಶ

ತೆಲಸಂಗ: ಇಂದು ಮಹಾನ್ ವಿಚಾರಧಾರೆಯನ್ನು ಸ್ಮರಿಸುವ ದಿನ, ಇಂದಿನ ಯುವಕರಿಗೆ ಮತ್ತು ಪ್ರಸ್ತುತ ಸಮಾಜಕ್ಕೆ ಬಾಬಾಸಾಹೇಬರ ಜೀವನವೇ ಒಂದು ದೊಡ್ಡ ಸಂದೇಶ ಎಂದು ಯುವ ಮುಖಂಡ ದರೆಪ್ಪಾ ಮಾಳಿ ಹೇಳಿದರು. ಗ್ರಾಮದ ಮಾರುತಿ ಖೊಬ್ರಿ ಸಹಕಾರಿ ಸಂಘದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಾಬಾಸಾಹೇಬರು ಹೇಳುತ್ತಿದ್ದರು, ಶಿಕ್ಷಣವು ಹುಲಿಯ ಹಾಲಿದ್ದಂತೆ, ಅದನ್ನು ಕುಡಿದವನು ಗರ್ಜಿಸಲೇಬೇಕು. ಇಂದು ನಾವು ಶಿಕ್ಷಣವನ್ನು ಕೇವಲ ಉದ್ಯೋಗಕ್ಕಾಗಿ ಬಳಸುತ್ತಿದ್ದೇವೆ. ಆದರೆ ಅಂಬೇಡ್ಕರ್ ಅವರ ಪ್ರಕಾರ ಶಿಕ್ಷಣವು ನಮ್ಮನ್ನು ವೈಚಾರಿಕವಾಗಿ ಸ್ವತಂತ್ರಗೊಳಿಸಬೇಕು. ಕೇವಲ ಪದವಿ ಪಡೆಯುವುದು ಮುಖ್ಯವಲ್ಲ, ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಜ್ಞಾನ ನಮಗಿರಬೇಕು. ಇಂದಿನ ಡಿಜಿಟಲ್ ಯುಗದಲ್ಲಿ ಯುವಕರು ಮೊಬೈಲ್ ಫೋನ್‌ಗಳಲ್ಲಿ ಒಂಟಿಯಾಗುತ್ತಿದ್ದಾರೆ. ಆದರೆ ಸಮಾಜದ ಬದಲಾವಣೆ ವೈಯಕ್ತಿಕವಾಗಿ ಸಾಧ್ಯವಿಲ್ಲ, ನಾವೆಲ್ಲರೂ ಜಾತಿ, ಧರ್ಮದ ಭೇದ ಮರೆತು ದೇಶದ ಅಭಿವೃದ್ಧಿಗಾಗಿ ಒಂದಾಗಬೇಕು. ಅನ್ಯಾಯ ಕಂಡಲ್ಲಿ ಪ್ರಶ್ನಿಸುವ ಧೈರ್ಯ ನಮ್ಮಲ್ಲಿರಬೇಕು. ನಮ್ಮ ಸಂವಿಧಾನ ನಮಗೆ ಹಕ್ಕುಗಳನ್ನು ನೀಡಿದೆ, ಅದರ ಜೊತೆಗೆ ಜವಾಬ್ದಾರಿಗಳನ್ನೂ ನೆನಪಿಸಿದೆ. ಬಾಬಾಸಾಹೇಬರು ಕಂಡ ಕನಸುಗಳನ್ನು ನನಸು ಮಾಡುವುದು ನಾವು ಅವರಿಗೆ ನೀಡುವ ನಿಜವಾದ ಗೌರವ. ನಾನು ಮೊದಲು ಭಾರತೀಯ ಎಂದು ಸಾರಿದ ಅವರ ಆಶಯದಂತೆ ನಾವೆಲ್ಲರೂ ಬದುಕೋಣ ಎಂದರು.



ತೆಲಸಂಗ ಗ್ರಾಮದ ಮಾರುತಿ ಖೊಬ್ರಿ ಸಹಕಾರಿ ಸಂಘದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ತಾಪಂ ಮಾಜಿ ಸದಸ್ಯ ಶ್ರೀಶೈಲ ತೆಲ್ಲೆಪ್ಪಗೋಳ, ಕಾರ್ಯದರ್ಶಿ ಬುರಾನ ಅರಟಾಳ, ವಿಠಲ ದಳವಾಯಿ, ಉಮೇಶ ಸೂರ್ಯವಂಶಿ ಉಪಸ್ಥಿತರಿದ್ದರು.

ರಾಷ್ಟ್ರಕ್ಕೆ ಅಂಬೇಡ್ಕರ್ ಕೊಡುಗೆ ಗಣನೀಯ

ಗೋಕಾಕ: ನಮ್ಮ ರಾಷ್ಟ್ರದ ಬೆಳವಣಿಗೆಯಲ್ಲಿ ಸಂವಿಧಾನ ಶಿಲ್ಪಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಪಾತ್ರ ಗಣನೀಯ ಎಂದು ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.



ಇಲ್ಲಿಯ ಎನ್‌ಎಸ್‌ಎಫ್ ಕಾರ್ಯಾಲಯದಲ್ಲಿ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 131 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಈ ರಾಷ್ಟ್ರದ ಧೀಮಂತ ವ್ಯಕ್ತಿಯಾಗಿದ್ದರು ಎಂದರು.

ಭಾರತವು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಲು ಅವರ ಕೊಡುಗೆ ಅಪಾರವಾಗಿದೆ. ಸಂವಿಧಾನವನ್ನು ರಚಿಸಿ, ನಮ್ಮ ಮೂಲಭೂತ ಹಕ್ಕುಗಳನ್ನು ಪಡೆಯಲು ಭದ್ರಬುನಾದಿ ಹಾಕಿದ್ದಾರೆ. ಅಂಬೇಡ್ಕರ್ ಅವರ ಆದರ್ಶ, ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ದಲಿತ ಸಮುದಾಯದವರಿಗೆ ಸಿಮೀತವಾಗದೇ ಎಲ್ಲ ವರ್ಗಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಭಾರತಕ್ಕೆ ಸಂವಿಧಾನದ ದೊಡ್ಡ ಕೊಡುಗೆ ನೀಡಿರುವ ಅಂಬೇಡ್ಕರ್ ಅವರನ್ನೇ ಆಗಿನ ಕಾಂಗ್ರೆಸ್ ಸರ್ಕಾರವು ಸೋಲಿಸಿತು. ಇದು ವಿಪರ್ಯಾಸದ ಸಂಗತಿ ಎಂದರು.

ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿದರು. ಅರಭಾವಿ ಮಂಡಲ ಬಿಜೆಪಿ ಅಧ್ಯಕ್ಷ ಮಹಾದೇವ ಶೆಕ್ಕಿ, ಪ್ರಭಾ ಶುಗರ್ಸ್ ಅಧ್ಯಕ್ಷ ಶಿದ್ದಲಿಂಗಪ್ಪ ಕಂಬಳಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಮೋದ ನುಗ್ಗಾನಟ್ಟಿ, ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಸಂಜಯ ಹೊಸಮನಿ, ತಾ.ಪಂ. ಮಾಜಿ ಸದಸ್ಯರಾದ ನಾಗಪ್ಪ ಮಂಗಿ, ಸುಭಾಸ ಕಮತಿ, ವಿಠ್ಠಲ ಆಡಿನ, ಸಿದ್ದು ಕಂಕಣವಾಡಿ, ಬಿಜೆಪಿ ಪದಾಧಿಕಾರಿಗಳು, ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಿಜೆಪಿ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಬೆಳಗಾವಿ: ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡಲಾಯಿತು.

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಜಗದೀಶ್ ಶೆಟ್ಟರ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಪುಷ್ಪ ನಮನ ಸಲ್ಲಿಸಿದರು.

ನಂತರ ನಗರದ ಬಾಬಾಸಾಹೇಬ ಅಂಬೇಡ್ಕರ್ ಗಾರ್ಡನ್ ನಲ್ಲಿರುವ ಪುತ್ಥಳಿಗೆ ಮುಖಂಡರು ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಮರ್ಪಿಸಿದರು

ನಂತರ ಮಾತನಾಡಿದ ಅವರು, ವಿಶ್ವದಲ್ಲಿ ಸದೃಢ ಪ್ರಜಾಪ್ರಭುತ್ವ ದೇಶವಾಗಿ ಭಾರತ ನಿಂತಿರುವುದಕ್ಕೆ ಸಂವಿಧಾನದ ಆಶಯಗಳೇ ಬಹುಮುಖ್ಯ ಕಾರಣ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷರಾದ ಯಲ್ಲೇಶ ಕೋಲಕಾರ, ಪ್ರಧಾನ ಕಾರ್ಯದರ್ಶಿಗಳಾದ ಧನಶ್ರೀ ದೇಸಾಯಿ, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಈರಣ್ಣ ಅಂಗಡಿ, ಸಾಮಾಜಿಕ ಜಾಲತಾಣ ರಾಜ್ಯ ಸಮಿತಿ ಸದಸ್ಯ ನೀತಿನ ಚೌಗಲೆ, ಮುರಘೇಂದ್ರಗೌಡ ಪಾಟೀಲ, ಸಾಮಾಜಿಕ ಜಾಲತಾಣ ಜಿಲ್ಲಾ ಸಂಚಾಲಕ ಸುಭಾಷ್ ಸಣ್ಣವೀರಪ್ಪನವರ, ಕಾರ್ಯದರ್ಶಿ ಮಂಜುನಾಥ ಪಮ್ಮಾರ, ಕೋಶಾಧ್ಯಕ್ಷ ಸಂತೋಷ ದೇಶನೂರ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹಾಂತೇಶ ಚಿನ್ನಪ್ಪಗೌಡ್ರ, ಆನಂದ ಅತ್ತುಗೋಳ,ಸಿದ್ದು ಪಾಟೀಲ,ಪ್ರವೀಣ ಮಾಳೇದವರ, ವೀರಭದ್ರ ಪೂಜಾರಿ ಸೇರಿದಂತೆ ಪ್ರಮುಖರು, ಪಕ್ಷದ ಕಾರ್ಯಕರ್ತರು, ನಾಗರಿಕ ಬಂಧುಗಳು ಉಪಸ್ಥಿತರಿದ್ದರು.



ಅಂಬೇಡ್ಕರ್ ತತ್ವ ಮಾನವ ಕುಲಕ್ಕೆ ದಾರಿದೀಪ

ಗೋಕಾಕ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ತತ್ವ ಮತ್ತು ಸಂದೇಶಗಳು ಒಂದು ವರ್ಗ, ಸಮುದಾಯಕ್ಕೆ ಸೀಮಿತವಾಗದೆ ಇಡೀ ಮಾನವ ಕುಲಕ್ಕೆ ದಾರಿದೀಪವಾಗಿವೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ನಗರದ ಅವರ ಗೃಹ ಕಛೇರಿಯಲ್ಲಿ ಹಮ್ಮಿಕೊಂಡ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವನ್ನು ರಚಿಸಿ ಹೊರ ರಾಷ್ಟ್ರಗಳಿಗೆ ನಮ್ಮ ಸಂವಿಧಾನ ಮಾದರಿಯಾಗುವಂತೆ ಮಾಡಿದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆ, ಆದರ್ಶ ನಡೆ ನಿತ್ಯ ಬದುಕಿನಲ್ಲಿ ಎಲ್ಲರೂ ಆಚರಣೆಗೆ ತರಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ನಗರ ಮಂಡಳ ಅಧ್ಯಕ್ಷ ಭೀಮಶಿ ಭರಮನ್ನವರ, ಮಾಜಿ ಜಿಪಂ ಸದಸ್ಯ ಟಿ ಆರ್ ಕಾಗಲ, ಶಾಸಕ ಆಪ್ತ ಸಹಾಯಕ ಲಕ್ಷ್ಮೀಕಾಂತ ಎತ್ತಿನಮನಿ, ಮಹಿಳಾ ಮೋರ್ಚಾ ಅಧ್ಯಕ್ಷೆ ರಾಜೇಶ್ವರಿ ಒಡೆಯರ, ಪ್ರಮೋದ ಜೋಶಿ, ಹರೀಶ್ ಬೂದಿಹಾಳ, ಲಕ್ಕಪ್ಪ ತಹಶೀಲ್ದಾರ್, ಲಕ್ಷ್ಮಣ ತಳ್ಳಿ, ಬಸವರಾಜ ಹಿರೇಮಠ, ಮಂಜುನಾಥ್ ಮಾವರಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಅಂಬೇಡ್ಕರ್ ಜಯಂತಿ ಆಚರಣೆ



ಚನ್ನಮ್ಮನ ಕಿತ್ತೂರು: ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರವರ 135 ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಸಮೀಪದ ಬಸಾಪೂರ ಗ್ರಾಮದ ಗಾಂವಟಣ್‌ನಲ್ಲಿರುವ ಯುವಕರಿಂದ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸುವ ಮೂಲಕ ಅತೀ ವಿಜೃಂಭನೆಯಿಂದ ಆಚರಿಸಲಾಯಿತು. ಬೀಮಪ್ಪ ಹಂಚಿನಮನಿ, ಸಾವಕ್ಕ ಕರಿಕಟ್ಟಿ, ಆನಂದ ಮಾದರ, ಯಲ್ಲಪ್ಪ ತಳವಾರ, ಪಕ್ಕೀರಪ್ಪ ಮಾದರ, ಪಕ್ಕೀರಪ್ಪ ಚುಂಚವಾಡ, ಬಸವರಾಜ ಮಾತನವರ, ರವಿ ಹಂಚಿನಮನಿ, ಮಂಜುನಾಥ ಹಂಚಿನಮನಿ, ರಾಜು ಕರಿಕಟ್ಟಿ, ಮಾರುತಿ ಹಂಚಿನಮನಿ, ಮಂಜುನಾಥ ಅನಿಗೋಳ, ಪ್ರದೀಪ ಕರಿಕಟ್ಟಿ, ವಿಜಯ ಹಂಚಿನಮನಿ, ನಾಗಪ್ಪ ಅಡಿಬಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ಹಾರೂಗೇರಿ: ಸ್ಥಳೀಯ ಪುರಸಭೆ ಆವರಣದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮೆರವಣಿಗೆ: ಕುಣಿದು ಕುಪ್ಪಳಿಸಿದ ಯುವಪಡೆ

ಯರಗಟ್ಟಿ : ತಾಲೂಕು ಆಡಳಿತದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರು 135ನೇ ಜಯಂತಿಯನ್ನು ಪಟ್ಟಣದ ಅಂಬೇಡ್ಕರ್ ಸಭಾಂಗಣದಲ್ಲಿ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ತಹಶೀಲ್ದಾರ ಎಮ್ ವ್ಹಿ ಗುಂಡಪ್ಪಗೋಳ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ತಹಶೀಲ್ದಾರ ಎಮ್ ವ್ಹಿ ಗುಂಡಪ್ಪಗೋಳ ಮಾತನಾಡಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತೋತ್ಸವಕ್ಕೆ ಉತ್ಸವಕ್ಕೆ ಪೂಜೆ ಸಲ್ಲಿಸಿ ಗ್ರಾಮಸ್ಥರ ಸಮ್ಮುಖದಲ್ಲಿ ಮೆರವಣಿಗೆ ಚಾಲನೆ ನೀಡಲಾಯಿತು.ನಂತರ ಸಿಪಿಐ ಐ. ಎಂ. ಮಠಪತಿ ಮಾತನಾಡಿದರು. ಈ ವೇಳೆ ಮೆರವಣಿಗೆಯಲ್ಲಿ ಯುವಕರು ಜೈ ಭೀಮ್ ಜೈ ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಕುಣಿದು ಕುಪ್ಪಳಿಸಿ ಆನಂದಿಸಿದ್ದಾರೆ.ಈ ಸಂದರ್ಭದಲ್ಲಿ ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಪ. ಪಂ. ಸದಸ್ಯರಾದ ಹನಮಂತ ಹಾರೂಗೊಪ್ಪ ಸಲಿಂಬೇಗ ಜಮಾದಾರ ನಿಖಿಲ ಪಾಟೀಲ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪಶು ವೈದ್ಯಾಧಿಕಾರಿ ಎಂ ವ್ಹಿ ಪಾಟೀಲ, ತಾಪಂ ಮಾಜಿ ಸದಸ್ಯ ವಿಠ್ಠಲಗೌಡ ದೇವರಡ್ಡಿ, ಮಾಜಿ ಸೈನಿಕ ಕುಮಾರ ಹಿರೇಮಠ, ಕಸಪಾ ತಾಲೂಕಾಧ್ಯಕ್ಷ ತಮ್ಮಣ್ಣ ಕಾಮಣ್ಣವರ, ನಿವೃತ್ತಿ ಪ್ರಧಾನ ಗುರುಗಳಾದ ಎಸ್ ಎಸ್ ಕುರುಬಗಟ್ಟಿಮಠ, ಹೆಸ್ಕಾಂ ಅಧಿಕಾರಿ ಮಹಾಂತೇಶ ಯರಗಟ್ಟಿ, ಮಾಜಿ ಸೈನಿಕ ಪುಂಡಲೀಕ ತಳವಾರ, ಭಾಸ್ಕರ ಹಿರೇಮೆತ್ರಿ, ಸಂತೋಷ ಚನ್ನಮೆತ್ರಿ, ಲಕ್ಕಪ್ಪ ಹುಣಶೀಕಟ್ಟಿ, ಸುರೇಶ ಭಜಂತ್ರಿ, ಲಕ್ಕಪ್ಪ ಜಗದಾರ ಸೇರಿದಂತೆ ಅನೇಕರು



ಅಂಬೇಡ್ಕರ್ ಜಯಂತಿ ಆಚರಣೆ



ಯಮಕನಮರಡಿ: ಯ.ವಿ. ಸಂಘದ ಸಂಯುಕ್ತ ಆಶ್ರಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು. ಜೆ. ಎನ್. ಅವಾಡೆ, ಪ್ರಧಾನ ಗುರುಗಳಾದ ಎಸ್. ಜಿ. ಹುನ್ನರಗಿ, ಯು.ಎಮ್. ಅಂಬಿ, ಎ. ಬಿ. ಅವಲಕ್ಕಿ, ಬಿ. ಆರ್. ಹಿರೇಮಠ್, ಬಿ. ಎಸ್. ಮಗದುಮ್, ಬಿ. ಜಿ. ಗೌಡನಾರ್ , ವಿಜಯ ಮೆದಾರ್,ಜಿ. ಬಿ. ಅಂಕಲಗಿ ಸೇರಿದಂತೆ ಮತ್ತಿತರರು ಇದ್ದರು.

ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ

ಕೊಕಟನೂರ: ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಪ್ರತಿಮೆಗೆ ಗುರುಮೂರ್ತಯ್ಯ ಕಾಡದೇವರಮಠ ಹೂವಿನ ಮಾಲೆ ಅರ್ಪಿಸಿ ಗೌರವ ಸಲ್ಲಿಸಿದರು. ಅರ್ಜುನ್ ಪೂಜಾರಿ, ಸಿದ್ದಪ್ಪ ಮುದಕನ್ನವರ್ ,ಅಪ್ಪಾಸಾಬ ಅವತಾಡೆ, ಕಲ್ಮೇಶ್ ಕಲಮಡಿ, ಅನಿಲ್ ಮೇಲಿನ್ಕೇರಿ, ಮಲ್ಲಿಕಾರ್ಜುನ್ ಪರಾಂಡೆ, ಅನಿಲ್ ಮುಳಿಕ , ಸತೀಶ್ ಪಾಠಣಕಾರ, ಭಾರತ ದಡ್ಡಿ, ಶ್ರೀಶೈಲ್ ದೊಡ್ಮನಿ, ಪ್ರಶಾಂತ ಕಾಂಬಳೆ, ರವಿ ದೊಡ್ಮನಿ, ಪರ್ಲಾದ ದಡ್ಡಿ, ಸತೀಶ್ ದೊಡ್ಡಮನಿ, ಸುಭಾಷ್ ಸೋಣಕರ್, ಜಾವೀದ್ ನದಾಫ್ ,ಜಾಂಬು ಮುಲ್ಲಾ, ಭೀಮಶಿ ಭಜಂತ್ರಿ, ಶಿವಗೌಡ್ ನ್ಯಾಮಗೌಡ, ಕುಮಾರ ವೀರಗೌಡ , ರಾಜು ಗಡಕರ ಸೇರಿದಂತೆ ಹಲವರು ಇತ್ತರು ಇದ್ದರು.



ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ

ಕಕಮರಿ : ಮಕ್ಕಳಿಗೆ ಆಸ್ತಿಗಿಂತ ಶಿಕ್ಷಣ ನೀಡಿ. ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶ ತತ್ವಗಳನ್ನು ತಿಳಿಸಿ ಹೇಳಿ ಎಂದು ಅಪ್ಪುಗೌಡ ಪಾಟೀಲ ಹೇಳಿದರು.

ಅವರು ಗ್ರಾಮದ ಅಂಬೇಡ್ಕರ್ ವೃತ್ತದಲ್ಲಿ 135ನೇ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದರು.

ಪಿಕೆಪಿಎಸ್ ಅಧ್ಯಕ್ಷ ಸಿದ್ರಾಮ ಬಿಳ್ಳೂರ ಮಾತನಾಡಿದರು.

ಮಾಜಿ ಜಿಪಂ ಸದಸ್ಯ ಗುರಪ್ಪ ದಾಶ್ಯಾಳ, ತಾಪಂ ಮಾಜಿ ಸದಸ್ಯರಾದ ಅಪ್ಪಾಸಾಬ ಈರಗೌಡ, ವೆಂಕನಗೌಡ ಪಾಟೀಲ, ಗಿರಮಲ್ಲ ಬಸರಗಿ, ಅಪ್ಪಾಸಾಬ ಪೂಜಾರಿ, ಶ್ರೀ ಅಮ್ಮಾಜೇಶ್ವರಿ ಪಿಕೆಪಿಎಸ್ ಮುಖ್ಯಕಾರ್ಯನಿರ್ವಾಹಕ ಮಲ್ಲಿಕಾರ್ಜುನ ಜನಗೌಡ, ಗ್ರಾಪಂ ಪಿಡಿಒ ಪುಷ್ಪಾ ಒಡೆಯರ, ದತ್ತು ಕಾಂಬಳೆ, ಶ್ಯಾಮರಾವ ಕಾಂಬಳೆ, ರಮೇಶ ಶಿವಪೂರ, ಅಶೋಕ ಕಾಂಬಳೆ ರಾಹುಲ ಕಾಂಬಳೆ, ಚಂದು ಕಾಂಬಳೆ, ಮುಂತಾದವರು ಭಾಗವಹಿಸಿದ್ದರು. ಎಮ್.ಬಿ.ಕರಡಿ ಸ್ವಾಗತಿಸಿ ನಿರೂಪಿಸಿದರು.





ಅಳಗವಾಡಿ: ಗ್ರಾಮದ ಶ್ರೀ ದತ್ತ ಮಂದಿರದ ಆವರಣದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡಲಾಯಿತು. ಗ್ರಾಪಂ ಮಾಜಿ ಅಧ್ಯಕ್ಷ ಶ್ರೀಕಾಂತ ವಡಗಾವೆ ಅವರು ಅಂಬೇಡ್ಕರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಭಾವ ಚಿತ್ರ ಮೆರವಣಿಗೆ ರೇವಣ್ಣ ಸರವ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜೊತೆಪ್ಪ ಪಾಟೀಲ್, ಗೋಪಾಲ ಬಿದರಿ, ಮಲಕಾರಿ ಸಪ್ತಸಾಗರೆ, ಮಾಹಾವೀರ ಹೆಗಡೆ, ಬಾಬು ಹೆಗಡೆ, ಆನಂದ ಹೆಗಡೆ, ಶ್ರೀಮಂತ ಹೆಗಡೆ, ಪುಂಡಲಿಕ ಹೆಗಡೆ, ಬಾಬುರಾವ್ ಪಾಟೀಲ್, ವಿಠ್ಠಲ ಪಡಚಿ, ದುಂಡಪ್ಪ ಹಾಲಾಣಿ, ವಸಂತ್ ಕಾಂಬಳೆ ಹಾಗೂ ವಿವಿಧ ಸಂಘಟನೆಗಳು ಮುಖಂಡರು ಹಿರಿಯರು ಉಪಸ್ಥಿತರಿದ್ದರು.

ಮಹಿಳಾ ಮೀಸಲಾತಿಗಾಗಿ ಶ್ರಮಿಸಿದ್ದ ಅಂಬೇಡ್ಕರ್

ರಾಯಬಾಗ: ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಹಿಳಾ ಮೀಸಲಾತಿಗಾಗಿ ಶ್ರಮಿಸಿದ್ದರು ಎಂದು ಮಾಜಿ ವಿಧಾನಪರಿಷತ್ ಸದಸ್ಯ ವಿವೇಕರಾವ ಪಾಟೀಲ ಹೇಳಿದರು.

ತಾಲೂಕಿನ ಬೆಕ್ಕೇರಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 1954 ರಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಮಹಿಳಾ ಮೀಸಲಾತಿ ನೀಡಲು ಹಿಂದೇಟು ಹಾಕಿದ ಸಂದರ್ಭದಲ್ಲಿ ಲೋಕಸಭೆಗೆ ರಾಜೀನಾಮೆ ನೀಡಿದ್ದರು ಎಂದರು. ಈ ಸಂದರ್ಭದಲ್ಲಿ ಡಾ.ಮಹದೇವ ಕಾನಡೆ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಡಾ. ರಮೇಶ್ ನನದಿ, ಮಹೇಶ್ ಗಂಟೆ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಯುವಕ ಮಂಡಳದ ಸದಸ್ಯರಾದ ಶೇಖರ್ ಕಾಂಬಳೆ, ದಯಾನಂದ ಕಾಂಬಳೆ, ಬಸವರಾಜ ಬಿದರೋಳಿ, ಸೂರತ್ ಸೊನ್ನಲಿಗಿ, ಯುವರಾಜ್ ಬಿದರೋಳ್ಳಿ,ಪಾಂಡು ಶಿಂಗೆ, ರಾಹುಲ್ ಕಾಂಬಳೆ ಹಾಗೂ ಸಮಸ್ತ ಗ್ರಾಮಸ್ಥರು ಉಪಸ್ಥಿತರಿದ್ದರು.





ನೇರಲಿ: ಪ್ರೌಢ ಶಾಲೆಯಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು.
ಶಿಕ್ಷಕ ಎಸ್. ಎಂ. ಮನಗುತ್ತಿ, ಮುಖ್ಯೋಪಾಧ್ಯಾಯ ಎಸ್. ಎಸ್. ಹಿರೇಮಠ, ಶಿಕ್ಷಕ ಆರ್. ಎಂ. ನಡುಮನಿ, ಜಯಶ್ರೀ ಕುಲಕರ್ಣಿ, ಗಂಗಾಧರ ವಣ್ಣೂರ, ಎಸ್ ಡಿ ಎಂ ಸಿ ಅಧ್ಯಕ್ಷ ಚಿದಾನಂದ ದೇಸಾಯಿ, ಶಿಕ್ಷಕರಾದ ರಾಜೇಶ್ರೀ ಬಿ.ಎಸ್, ಪ್ರೀತಮ ನಿಡಸೋಸಿ,
ಕೆ.ಎ. ಬಡಿಗೇರ,ಅಶ್ವಿನಿ ಪಾಟೀಲ, ಮಂಜುನಾಥ ಪಾಟೀಲ, ಎನ್ ಎಸ್ ಮಸ್ತಿ, ಸೇರಿದಂತೆ ಮತ್ತಿತರರು ಇದ್ದರು.

ಕಿರುಸುದ್ದಿ

ಏ.16ರಿಂದ ಪ್ರವಚನ

ಬಾವನಸೌಂದತ್ತಿ: ಶ್ರೀ ಬಸವ ಜಯಂತಿಯ ನಿಮಿತ್ತ ಗ್ರಾಮದ ಶ್ರೀ ಮಹಾದೇವ ಮಂದಿರದಲ್ಲಿ ಆಧ್ಯಾತ್ಮಿಕ ಪ್ರವಚನ ಹಮ್ಮಿಕೊಳ್ಳಲಾಗಿದೆ. ಏ.16 ರಂದು ಸಂಜೆ 7 ಗಂಟೆಗೆ ಅನ್ನಿಕೇರಿಯ ಅಪ್ಪ ಶಿವಯೋಗಿ ಆಶ್ರಮದ ಶರಣಶ್ರೀ ಬಸವರಾಜ ಶರಣರು ಪ್ರವಚನ ನಡೆಸಲಿದ್ದು ನಂದಿಕುರಳಿಯ ವೀರಭದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗ್ರಾಮದ ಮುಚ್ಚಂಡಿ ಬಂಧುಗಳಿಂದ ಪ್ರಸಾದ ವ್ಯವಸ್ಥೆ ಮಾಡಲಿದ್ದಾರೆ.ಏ. 17ರಿಂದ ರಂದು ಸಂಜೆ 7 ಗಂಟೆಗೆ ಸೇಂದ್ರಿ ಸಿದ್ದಾರೂಢ ಮಠದ ಮೃತ್ಯುಂಜಯ ಸ್ವಾಮೀಜಿ, ಏ. 18 ರಂದು ವಿಜಯಪುರದ ರಾಚಯ್ಯ ಆರ್. ಹಿರೇಮಠ, ಏ.19 ರಂದು ಡಾ. ಶ್ರೀ ಕಾಡಯ್ಯ ಸ್ವಾಮಿಜಿ ಹಿರೇಮಠ, ಬಸ್ತವಾಡದ ಶ್ರೀಗುರು ಕಾಡಸಿದ್ದೇಶ್ವರರಿಂದ ಪ್ರವಚನ ಏರ್ಪಡಿಸಲಾಗಿದೆ. ಏ.20 ರಂದು ಬೆಳಿಗ್ಗೆ 8 ಗಂಟೆಗೆ ವೀರಭದ್ರ ಮಹಾಸ್ವಾಮಿಗಳು ನಂದಿಕುರಳಿ ಇವರಿಂದ ಬಸವ ವೃತ್ತದಲ್ಲಿ ಬಸವ ಭಾವಚಿತ್ರ ಪೂಜೆ ಹಾಗೂ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಶ್ರೀ ಮಹಾದೇವ ಮಂದಿರದಲ್ಲಿ ಶ್ರೀ ಬಸವ ಭಾವಚಿತ್ರ ಪೂಜೆ ಹಾಗೂ ಭಜನಾ ಕಾರ್ಯಕ್ರಮ ನಡೆಯಲಿದೆ. ಸಂಜೆ 5 ಗಂಟೆಗೆ ವಾದ್ಯಮೇಳದೊಂದಿಗೆ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟ್ಪಾ:40 ಪ್ರಕರಣ ದಾಖಲು

ಬೆಳಗಾವಿ : ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ಪೊಲೀಸ ಇಲಾಖೆ ಯ ಸಹಯೋಗದೊಂದಿಗೆ ವೈದ್ಯಕೀಯ ಮಹಾವಿದ್ಯಾಲಯ ಬೆಳಗಾವಿಯಲ್ಲಿ ಕೋಟ್ಪಾ–2003 ಕಾಯ್ದೆಯಡಿಯಲ್ಲಿ ದಾಳಿಯನ್ನು ಹಮ್ಮಿಕೊಳ್ಳಲಾಯಿತು. ಜಿಲ್ಲಾ ಚಾರಿ,ತಂಬಾಕು ನಿಯಂತ್ರಣಾಧಿಕಾಗಳ ಮಾರ್ಗದರ್ಶನದಡಿಯಲ್ಲಿ ದಾಳಿಯಲ್ಲಿ ಸಾರ್ವಜನಿಕರಿಗೆ ಕೋಟ್ಪಾ–2003 ಕಾಯ್ದೆ ವಿರುದ್ದವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವ ಮತ್ತು ನೇರ ಪರೋಕ್ಷವಾಗಿ ತಂಬಾಕು ಜಾಹಿರಾತು ಪ್ರದರ್ಶನ, ವೈದ್ಯಕೀಯ ಮಹಾವಿದ್ಯಾಲಯ ಆವರಣದ 100 ಮೀಟರ ಅಂತರದೊಳಗೆ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿ ಮಾಲಿಕರಿಗೆ ಜಾಗೃತಿ ಮೂಡಿಸಿ ಹಾಗೂ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಲಾಯಿತು. ಕೋಟ್ಪಾ–2003 ಕಾಯ್ದೆ ಅಡಿಯಲ್ಲಿ ಒಟ್ಟು 40 ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಯಿತು ಹಾಗೂ ಸೆಕ್ಷನ್–4 ನಾಮಫಲಕವನ್ನು ವಿತರಿಸಲಾಯಿತು. ಸಾರ್ವಜನಿಕರಲ್ಲಿ ತಂಬಾಕು ಸೇವನೆಯ ದುಷ್ಪರಿಣಾಮದ ಕುರಿತು ಅರಿವು ಮೂಡಿಸಲಾಯಿತು ಸದರಿ ದಾಳಿಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಡಾ.ಶ್ವೇತಾ ಪಾಟೀಲ ಜಿಲ್ಲಾ ಸಲಹೆಗಾರರು ಹಾಗೂ ಕವಿತಾ ರಾಜನ್ನವರ ಸಮಾಜ ಕಾರ್ಯಕರ್ತರು, ಪೊಲೀಸ್ ಇಲಾಖೆಯ ಬಸವರಾಜ ಮಜಟ್ಟಿ ಸದರಿ ದಾಳಿಯಲ್ಲಿ ಉಪಸ್ಥಿತರಿದ್ದರು.

ಅಂಬೇಡ್ಕರ್ ಜಯಂತಿ ಆಚರಣೆ

ಬೆಳಗಾವಿ : ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕೋಶ ಇವರ ಸಹಯೋಗದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೇಸರ್ಗಿ ಇಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಪ್ರಯುಕ್ತ ಮನೆ ಮನೆಗೆ ಬಾಬಾ ಸಾಹೇಬರು ಅಭಿಯಾನ ಕಾರ್ಯಕ್ರಮವನ್ನು ಕಾಲೇಜಿನ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಫ್. ಡಿ. ಗಡ್ಡಿಗೌಡರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಐ.ಕ್ಯೂ.ಎ.ಸಿ ಸಂಚಾಲಕರಾದ ಡಾ. ಮೀನಾಕ್ಷಿ ಮಡಿವಾಳರ, ಹಿರಿಯ ಸಹಾಯಕ ಪ್ರಾಧ್ಯಾಪಕರಾದ ಎಂ ಎಸ್ ಅವಕ್ಕನವರ್ ವಹಿಸಿದ್ದರು. ಎನ್ ಎಸ್ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಸುಖದೇವಾನಂದ ಚವತ್ರಿ ಮಠ ಹಾಗೂ ರೆಡ್ ಕ್ರಾಸ್ ಸಂಚಾಲಕರಾದ ಶೋಭಾ ಸಿದ್ನಾಳ, ಸಹಾಯಕ ಪ್ರಾಧ್ಯಾಪಕರಗಳಾದ ವಿನಾಯಕ ಹೊನ್ನಪ್ಪನವರ, ಹರೀಶ್ ಹೆಚ್ಆರ್, ಡಾ.ಮಂಜು ಕೋಟಗಿ, ಡಾ. ವಿನಯ್ ನಂದಿಹಾಳ, ಸುಪ್ರೀತ ಸಕಟ, ಪದ್ಮಜಾ ಶಂಕರಗೌಡ, ಮಲ್ಲಿಕಾರ್ಜುನ ಕೊಡ್ಲಿ, ನಂದೀಶ್ ಕರಾಳೆ, ರಾಜೇಶ್ವರಿ ಗುರುನಗೌಡ್ರ, ಶಬಾನ ನದಾಫ ಉಪಸ್ಥಿತರಿದ್ದರು. ಬೋಧಕೇತರ ಸಿಬ್ಬಂದಿಯಾದ ಅಶೋಕ್ ಗುಡದವರ ಸುರೇಖಾ ಶೆಟ್ಟಿ, ಪ್ರತೀಕ್ ಕಾಮಾಣಿ, ಅಶೋಕ ಬಾಗಿ, ಮನೋಜ್ ಗಡದವರ್ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ನಿರ್ವಹಣೆಯನ್ನು ಎನ್ಎಸ್ಎಸ್ ಸಹ ಕಾರ್ಯಕ್ರಮ ಅಧಿಕಾರಿಗಳಾದ ಮಂಜುನಾಥ ಕಂಬಳಿ ನಿರ್ವಹಿಸಿದರು.



ಯಮಕನಮರಡಿ : ಸ್ಥಳೀಯ ಬಿಜೆಪಿ ಕಾರ್ಯಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು. ಚಿಕ್ಕೋಡಿ ಜಿಲ್ಲಾ ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷ ಬಸವರಾಜ್ ಹುಂದ್ರಿ, ಜಿಲ್ಲಾ ಕಾರ್ಯದರ್ಶಿ ರಾಜನ ಮಠಪತಿ, ಮಂಡಲ್ ಅಧ್ಯಕ್ಷ ಶ್ರೀಶೈಲ್ ಯಮಕನಮರಡಿ ಪ್ರಧಾನ ಕಾರ್ಯದರ್ಶಿ ಈರಣ್ಣ ಗೌರವ, ಎಸ್ ಸಿ ಮೋರ್ಚಾ ಸತ್ಯಜಿತ ಗೋರಿ, ಕಾರ್ಯಕರ್ತರಾದ ಮಲ್ಲಪ್ಪ ಗಡಕರಿ, ಪ್ರವೀಣ್ ಬಂಗಿ, ಚೇತನ್ ಇಸ ಇಸ್ಲಾಂಪೂರಿ ಮುಂತಾದವರು ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರವರ ಜ್ಞಾನ ಅಪಾರ

ರಾಯಬಾಗ: ಅಪಾರವಾದ ಜ್ಞಾನ, ಚಿಂತನೆ ಹೊಂದಿದ್ದ ಡಾ.ಬಿ.ಆರ್.ಅಂಬೇಡ್ಕರ ರವರ ಬಗ್ಗೆ ಉಪನ್ಯಾಸ ನೀಡುವವರು ಇನ್ನುವರೆಗೂ ಈ ವಿಶ್ವದಲ್ಲಿ ಹುಟ್ಟಿಲ್ಲ ಎಂದು ಚಿಕ್ಕೋಡಿ ಉಪವಿಭಾಗ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ನಾಮನಿರ್ದೇಶನ ಸದಸ್ಯ ಸಂಜಯ ತಳವಲಕರ ಹೇಳಿದರು.ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರವರ 135ನೇ ಜನ್ಮ ದಿನಾಚರಣೆ ಸಮಾರಂಭದ ವೇದಿಕೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ (ಗ್ರೇಡ–1) ವಿ.ಎಸ್.ಚಂದರಗಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ತಹಶೀಲ್ದಾರ ಮಹಾದೇವ ಸನಮುರಿ ಅಧ್ಯಕ್ಷತೆಯನ್ನು ವಹಿಸಿದ್ದರು. ಪಟ್ಟಣದ ಅಂಬೇಡ್ಕರ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ ರವರ ಪುತ್ಥಳಿಗೆ ಶಾಸಕ ಡಿ.ಎಮ್. ಐಹೊಳೆಯವರು ಪುಷ್ಪ ನಮನ ಸಲ್ಲಿಸಿದರು. ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಎಮ್.ಫಿಲ್ ದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು.ತಾ.ಪಂ.ಇಒ ಅರುಣ ಮಾಚಕನೂರ, ಸಿಪಿಐ ಎಮ್.ಎಮ್.ಡಪ್ಪಿನ, ಪ.ಪಂ.ಮುಖ್ಯಾಧಿಕಾರಿ ಎಸ್.ಆರ್.ಮಾಂಗ, ಬಿಇಒ ಬಸವರಾಜಪ್ಪ ಆರ್, ಡಾ.ಎಸ್.ಎಮ್.ಪಾಟೀಲ, ಪರಮಾನಂದ ಮಂಗಸೂಳಿ, ಎಚ್.ಎಲ್ .ಪೂಜಾರಿ, ಕಲ್ಪನಾ ಕಾಂಬಳೆ, ಭಾರತಿ ಕಾಂಬಳೆ, ನೇತ್ರಾಂಜಲಿ ಭೋಸಲೆ, ಎಸ್.ಎಸ್.ಕಾಂಬಳೆ, ರವೀಂದ್ರ ಪಾಟೀಲ, ಸೋಮಶೇಖರ ಜೋರೆ,ಗಣೇಶ ಕಾಂಬಳೆ,ಮಹಾವೀರ ಸಾನೆ,ಕಿರಣ ಕಾಂಬಳೆ, ದಿಲೀಪ ಪಾಯನ್ನವರ,ಮಹೇಶ ಕರಮಡಿ, ಸಾಗರ ಸಾಗರ ಚೇಂಡನ್ನವರ,ಅನೀಲ ಮೋಹಿತೆ, ಹಣಮಂತ ಭೀರಡೆ, ಶಶಿಕಾಂತ ಕಾಂಬಳೆ,ಇದ್ದರು.ಪಿಸಿ, ವಂದಿಸಿದರು.



ರಾಯಬಾಗ: ಪಟ್ಟಣದ ಅಂಬೇಡ್ಕರ ವೃತ್ತದಲ್ಲಿ ಡಾ.ಬಿ.ಆರ್. ಅಂಬೇಡ್ಕರ ರವರ ಪುತ್ಥಳಿಗೆ ಶಾಸಕ ಡಿ.ಎಮ್.ಐಹೊಳೆಯವರು ಪುಷ್ಪ ನಮನ ಸಲ್ಲಿಸಿದರು.

ಸಂವಿಧಾನದಿಂದ ಘನತೆಯ ಬದುಕು: ಸಚಿವ ಜಾರಕಿಹೊಳಿ

ಬೆಳಗಾವಿ : ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದಿಂದಲೇ ನಾವೆಲ್ಲರೂ ಘನತೆಯಿಂದ ಬದುಕುತ್ತಿದ್ದೇವೆ. ಅವರ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ 2ನೇ ಘಟಕದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 136ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಸಾರ್ವಜನಿಕ ಸೇವೆ ನೀಡುವಲ್ಲಿ ಎನ್ಡಬ್ಲ್ಯುಕೆಎಸ್ಆರ್‌ಟಿಸಿ ಸಿಬ್ಬಂದಿಯ ಶ್ರಮವನ್ನು ಇದೇ ವೇಳೆ ಶ್ಲಾಘಿಸಿದರು.

ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯೂ ಇಂದು ಸ್ವತಂತ್ರವಾಗಿ ಮತ್ತು ಗೌರವದಿಂದ ಬದುಕುತ್ತಿದ್ದರೆ ಅದಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ಕಾರಣ. ಸಂವಿಧಾನವು ನಮಗೆ ಹಕ್ಕುಗಳನ್ನು ಮಾತ್ರವಲ್ಲದೆ ಜವಾಬ್ದಾರಿಗಳನ್ನೂ ನೀಡಿದೆ ಎಂದು ತಿಳಿಸಿದ ಸಚಿವರು, ಕೇವಲ ಹಬ್ಬ ಅಥವಾ ಜಯಂತಿಗಳನ್ನು ಆಚರಿಸುವುದಕ್ಕಿಂತ ಹೆಚ್ಚಾಗಿ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಓದಬೇಕು ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಂಧಶ್ರದ್ಧೆ ಬಿಟ್ಟು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜನಸಾಮಾನ್ಯರಿಗೆ ಸೇವೆ ಸಲ್ಲಿಸುವಾಗ ಸಂವಿಧಾನದ



ಆಶಯದಂತೆ ಸಮಬಾಳು–ಸಮಪಾಲು ಎಂಬ ತತ್ವದಡಿ ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಸಮಾಜದ ಪ್ರಗತಿಗೆ ಶಿಕ್ಷಣವೇ ಮೂಲಾಧಾರ. ಹೀಗಾಗಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಸಲಹೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ 136ನೇ ಜಯಂತಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆ ಮಕ್ಕಳನ್ನು ಸಚಿವರು ಇದೇ ವೇಳೆ ಸತ್ಕರಿಸಿದರು.

ಈ ಸಂದರ್ಭದಲ್ಲಿ ಶಾಸಕ ಆಸಿಫ್ ಸೇಠ್, ವಾ.ಕ. ರ.ಸಾ. ಸಂಸ್ಥೆ ಉಪಾಧ್ಯಕ್ಷ ಸುನೀಲ್ ಹಣಮನ್ನರ್ವ, ಜಿಲ್ಲಾ ಪಂಚಾಯತ ಸಿಇಓ ರಾಹುಲ್ ಶಿಂಧೆ, ಪೊಲೀಸ್ ಆಯುಕ್ತ ಬೊರಸೆ ಭೂಷಣ ಗುಲಾಬರಾವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವಿಭಾಗೀಯ ನಿಯಂತ್ರಣಾಧಿಕಾರಿ ಕೆ.ಎಲ್. ಗುಡೆಣ್ಣರ್ವ, ವಿಭಾಗಿಯ ಯಾಂತ್ರಿಕ ಅಭಿಯಂತರು ನಿತಿನ್ ಗಡದೆ, ವಿಭಾಗೀಯ ಸಂಚಾರ ಅಧಿಕಾರಿ ದೇವಕ್ಕ ನಾಯಕ್, ವಿಭಾಗೀಯ ಆಡಳಿತ ಅಧಿಕಾರಿ ನಾಗಮಣಿ ಬೋವಿ, ಭದ್ರತಾ ಮತ್ತು ಜಾಗೃತ ಅಧಿಕಾರಿ ದಶರಥ ಕೆಳಗೇರಿ, ಬೆಳಗಾವಿ ಎರಡನೇ ಘಟಕ ಸ್ಥಾಪಕ ವಿಜಯಕುಮಾರ್ ಕುಮಟಳ್ಳಿ ಸೇರಿದಂತೆ ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಗಳು, ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳು ಮತ್ತು ಘಟಕದ ಸಿಬ್ಬಂದಿಗಳು ಉಪಸ್ಥಿತರಿದ್ದರು. ನಿಂಗಪ್ಪ ಚವಲಗಿ ನಿರೂಪಿಸಿ, ವಂದಿಸಿದರು.

ಅಂಬೇಡ್ಕರ್ ಜಯಂತಿ: ಸಂಭ್ರಮದ ಮೆರವಣಿಗೆ

ಚನ್ನಮ್ಮನ ಕಿತ್ತೂರು: ಕಿತ್ತೂರಿನ ತಾಲೂಕಾಡಳಿತ, ತಾಲೂಕ ಪಂಚಾಯತಿ, ಪಟ್ಟಣ ಪಂಚಾಯತ ಹಾಗೂ ಬೈಲಹೊಂಗಲ ಸಮಾಜಕಲ್ಯಾಣ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಸವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಮ್‌ರವರ ಜಯಂತಿ ಕಾರ್ಯಕ್ರಮದ ಅಂಗವಾಗಿ ಮಂಗಳವಾರ ರಾಷ್ಟ್ರೀಯ ಹೆದ್ದಾರಿ ಪಕ್ಕದ ಚನ್ನಮ್ಮಾಜಿ ವರ್ತುಳದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ ಹಾಗೂ ಡಾ.ಜಗಜೀವನರಾಮ್ ಅವರ ಭಾವ ಚಿತ್ರಗಳನ್ನು ಹೂವು ಮಾಲೆಗಳ ಮೂಲಕ ಅಲಂಕಾರಗೊಂಡ ಸಾರೋಟದಲ್ಲಿರಿಸಿ ಪೂಜೆ ಸಲ್ಲಿಸಿ ನಂತರ ಮರೆವಣಿಗೆಗೆ ಚಾಲನೆ ನೀಡಲಾಯಿತು.

ಮೆರವಣಿಗೆಯು ಪಟ್ಟಣದ ಪ್ರಮುಖ ರಸ್ತೆಯ ಮೂಲಕ ಸಾಗಿ ರಾಜಗುರು ಸಂಸ್ಥಾನ ಕಲ್ಮಠವನ್ನು ತಲುಪಿತು. ರಸ್ತೆಯುದ್ದಕ್ಕೂ ಜೈಕಾರ ಘೋಷಣೆಗಳನ್ನು ಕೂಗುತ್ತ ವಿವಿಧ ವಾದ್ಯ ಮೇಳಗಳ ಮೂಲಕ ಮರೆವಣಿಗೆಯು ಸಾಗಿತು ನಂತರ ರಾಜಗುರು ಸಂಸ್ಥಾನ ಕಲ್ಮಠದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ತಾಪಂ ಇಒ ನಿಂಗಪ್ಪ ಮಸಳಿ, ಮುಖ್ಯಾಧ್ಯಾಪಕ ಮಹೇಶ ಚನ್ನಂಗಿ ಮಾತನಾಡಿದರು.

ಸಿಪಿಐ ಶಿವಾನಂದ ಗುಡಗನಟ್ಟಿ ಇವರು ಡಾ. ಬಾಬಾಸಾಹೇಬ ಅಂಬೇಡ್ಕರ್ ಜೀವನ ಚರಿತ್ರೆ ಕುರಿತು ಹಾಡಿದರು, ಎಸ್ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ತಹಶೀಲ್ದಾರ್ ಕೆ. ಆರ್. ಪಾಟೀಲ, ಪಟ್ಟಣ ಪಂಚಾಯತಿ ಅಧ್ಯಕ್ಷ ಜೈಸಿದ್ದರಾಮ ಮಾರಿಹಾಳ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ .ವೈ.ತುಬಾಕಿ, ಪಿ ಎಸ್ಐಯ್ ಪ್ರವೀಣ ಗಂಗೋಳ, ಪಪಂ ಮುಖ್ಯಾಧಿಕಾರಿ ಮಲ್ಲಯ್ಯ ಹಿರೇಮಠ, ಎಇಇ ಸಂಜೀವ ಮಿರಜಕರ, ಕಸಾಪ ಅಧ್ಯಕ್ಷ ಡಾ ಎಸ್ ಬಿ ದಳವಾಯಿ, ಮುಖಂಡರಾದ ರಾಜುಜಾಂಗಟಿ, ಅಪ್ಪೇಶ ದಳವಾಯಿ, ವಿಜಯಕುಮಾರ ಶಿಂದೆ, ಫಕ್ಕೀರಪ್ಪ ಜಾಂಗಟಿ, ಸುರೇಶ ಜಾಂಗಟಿ, ಬಸವರಾಜ ಕೆಳಗಿನಮನಿ, ಸೇರಿದಂತೆ ಹಲವಾರು ಮುಖಂಡರು, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ಇತರೆ ಇಲಾಖೆಗಳ ಸಿಬ್ಬಂದಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಮಂಜುನಾಥ ನಿರೂಪಿಸಿದರು.



ಶೀಘ್ರದಲ್ಲೇ ಅಂಬೇಡ್ಕರ್ ವೃತ್ತ ನಿರ್ಮಾಣ



ಸವದತ್ತಿ: ಡಾ.ಬಿ. ಆರ್. ಅಂಬೇಡ್ಕರ್ ಅವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಾಕಷ್ಟು ಶ್ರಮಪಟ್ಟು ಕಾರ್ಯನಿರ್ವಹಿಸಿದವರು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಅವರು ತಾಲೂಕು ಆಡಳಿತ ಸಮಾಜ ಕಲ್ಯಾಣ ಇಲಾಖೆ ಪುರಸಭೆ ವತಿಯಿಂದ ಆಯೋಜಿಸಿದ್ದ ಡಾ.ಬಿ. ಆರ್. ಅಂಬೇಡ್ಕರ್ ಅವರ 135 ನೇಯ ಜಯಂತಿ ಉತ್ಸವ ಆಚರಣೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಗರದಲ್ಲಿ ಮಾದರಿಯಾದ ಅಂಬೇಡ್ಕರ್ ವೃತ್ತವನ್ನು ನಿರ್ಮಿಸಲಾಗುವುದು ಈಗಾಗಲೇ ಸರಕಾರಕ್ಕೆ ಅನುಮೋದನೆಯನ್ನು ಕಳಿಸಲಾಗಿದೆ ಜಿಲ್ಲೆಯಲ್ಲಿ ಮಾದರಿಯಾದ ಅಂಬೇಡ್ಕರ್ ವೃತ್ತವನ್ನು ನಿರ್ಮಿಸಲಾಗುವುದು ಎಂದರು

ಉಪನ್ಯಾಸಕರಾಗಿ ಆಗಮಿಸಿದ ಸವದತ್ತಿ ಆದರ್ಶ ವಿದ್ಯಾಲಯದ ಆಂಗ್ಲ ಭಾಷಾ ಶಿಕ್ಷಕರಾದ ಉಮೇಶ್ ನರಗುಂದ ಅವರು ಮಾತನಾಡಿದರು.

ಗುರುನಾಥ್ ಮೇಟಿ ಭಕ್ತಿಗೀತೆ ಹಾಡಿದರು. ನಂತರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆರ್. ಆರ್. ಕುಲಕರಣಿಯವರು ಸ್ವಾಗತಿಸಿದರು.

ಯರಗಟ್ಟಿಯ ವಸತಿ ನಿಲಯದ ನಿಲಯ ಪಾಲಕಿ ಆಶಾಪರಿಟ್ ಕಾರ್ಯಕ್ರಮ ನಿರೂಪಿಸಿದರು. ಚಿದಂಬರ್ ಚಿಂಚೋಳಿ ಅವರು ಸಂವಿಧಾನ ಪೀಠಿಕೆ ವಾಚನ ಮಾಡಿದರು. ಎಸ್ ಎಸ್ಎಲ್‌ಸಿ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಾಗೂ ಸಮಾಜದ ಮುಖಂಡರಿಗೆ ಮತ್ತು ಅಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ನಂತರ ಸಮಾಜದ ವತಿಯಿಂದ ಶಾಸಕ ವಿಶ್ವಾಸ ವೈದ್ಯರವರಿಗೆ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳಿಗೆ ಸಮಾಜದ ಮುಖಂಡರು ಸನ್ಮಾನಿಸಿ ಗೌರವಿಸಿದರು

ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ್, ಸವದತ್ತಿ ಪಿ ಐ ಸುರೇಶ ಬೆಂಡೆಗುಂಬಳ, ಅಭಿಯಂತರ ಎಚ್.ಎ. ಕದ್ರಾಪುರಕರ, ಶಿವಪ್ರಸಾದ್ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಎ. ಎ. ಖಾಜಿ , ಪೌರಾಯುಕ್ತ ಸಂಗನಬಸಯ್ಯ ಗದಗಿಮಠ ಸಮಾಜದ ಮುಖಂಡರಾದ ರುದ್ರಪ್ಪ ಚಲವಾದಿ ಎಲ್ಲಪ್ಪ ಗೊರವಣ ಕೊಳ್ಳ ರವಿ ದೊಡ್ಡಮನಿ ಬಾಬು ಕಾಳೆ ಎಲ್ಲಪ್ಪ ಕಲ್ಲಮ್ಮನವರ್ ಶಿವಾನಂದ ಅಮಾತೆನ್ನವರ್ ಎಂ ಮಲ್ಲಪ್ಪ ಸೇರಿದಂತೆ ಸಮಾಜದ ಎಲ್ಲ ಮುಖಂಡರು ಸೇರಿದಂತೆ ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಿ

ಅಥಣಿ: ಭಾರತ ರತ್ನ, ಸಂವಿಧಾನದ ಶಿಲ್ಪಿ, ಡಾ.ಬಿ. ಆರ್. ಅಂಬೇಡ್ಕರ್ ಅವರ ಇತಿಹಾಸವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಅವರ ವಿಚಾರಧಾರೆಗಳನ್ನು ಮತ್ತು ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರೂ ಅನುಸರಿಸುವ ಮೂಲಕ ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ತಾಲೂಕು ಆಡಳಿತ, ತಾಲೂಕ ಪಂಚಾಯತ, ಅಥಣಿ ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ ಅವರ 135ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಾತ್ಮರ ಜಯಂತಿಗಳನ್ನು ಆಚರಿಸುವ ಉದ್ದೇಶವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ದೇಶದ ಸ್ವಾತಂತ್ರ್ಯ ಹಾಗೂ ಸುಭದ್ರತೆಗಾಗಿ ಶ್ರಮಿಸಿದ ಅನೇಕ ಮಹಾತ್ಮರನ್ನು ಇತ್ತೀಚಿನ ದಿನಗಳಲ್ಲಿ ಆಯಾ ಸಮುದಾಯಕ್ಕೆ ಸೀಮಿತಗೊಳಿಸಿ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಜಾತ್ಯಾತೀತವಾಗಿ ಸಮಾಜ ಸುಧಾರಣೆಗೆ ಮತ್ತು ದೇಶದ ಪ್ರಗತಿಗಾಗಿ ಶ್ರಮಿಸಿದ ನಾಯಕರ ಜಯಂತಿಗಳನ್ನು ಎಲ್ಲ ಸಮುದಾಯದವರು ಕೂಡಿಕೊಂಡು ಆಚರಿಸಬೇಕು ಎಂದರು.

ಅತಿಥಿ ಉಪನ್ಯಾಸಕ ಸುಭಾಷ ನಾಟಿಕಾರ ಮಾತನಾಡಿದರು. ಪುರಸಭೆಯ ಅಧ್ಯಕ್ಷ ಶಿವಲೀಲಾ ಬುಟಾಳಿ, ಉಪಾಧ್ಯಕ್ಷ ಭುವನೇಶ್ವರಿ ಯಕ್ಕಂಚಿ, ಪಂಚ ಗ್ಯಾರಂಟಿ



ಸಮಿತಿ ಅಧ್ಯಕ್ಷ ಸಿದ್ಧಾರ್ಥ ಸಿಂಗೆ ಮಾತನಾಡಿದರು.

ಇದೇ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಮಾಜ ಕಲ್ಯಾಣ ಮತ್ತು ಮುರಾರ್ಜಿ ವಸತಿ ಶಾಲೆಯ ದಲಿತ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ತಹಸಿಲ್ದಾರ್ ಸಿದರಾಯ ಬೋಸಗಿ, ತಾ. ಪಂ ಅಧಿಕಾರಿ ಶಿವಾನಂದ ಕಲ್ಲಾಪುರ, ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ, ಪುರಸಭೆ ಮುಖ್ಯ ಅಧಿಕಾರಿ ಅಶೋಕ ಗುಡಿಮನಿ, ಸಮಾಜ ಕಲ್ಯಾಣ ಅಧಿಕಾರಿ ಪರಶುರಾಮ ಪತ್ತಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಅಧಿಕಾರಿ ಪರುಶುರಾಮ ಪತ್ತಾರ ಸ್ವಾಗತಿಸಿದರು. ಪುರಸಭೆ ಮುಖ್ಯ ಅಧಿಕಾರಿ ಅಶೋಕ ಗುಡಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಲಕ್ಷ್ಮಣ ಜಯಗೋಣಿ ವಂದಿಸಿದರು.

ಅಂಬೇಡ್ಕರ್ ಜಯಂತಿ ಆಚರಣೆ

ಬೆಳಗಾವಿ : ಭಾರತ ರತ್ನ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರ ಜನ್ಮ ಜಯಂತಿಯ ನಿಮಿತ್ತ ಮಂಗಳವಾರ ಭಾಜಪಾ ಬೆಳಗಾವಿ ಮಹಾನಗರ ಕಾರ್ಯಾಲಯದಲ್ಲಿ ಮಹಾ ಮಾನವತಾವಾದಿಯ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತು. ಜಿಲ್ಲಾಧ್ಯಕ್ಷರಾದ ಗೀತಾ ಸುತಾರ, ಮಾಜಿ ಮುಖ್ಯಮಂತ್ರಿ ಹಾಲಿ ಸಂಸದ ಜಗದೀಶ ಶೆಟ್ಟರ, ಶಾಸಕ ಅಭಯ ಪಾಟೀಲ, ಮಾಜಿ ಶಾಸಕರಾದ ಅನೀಲ ಬೆನಕೆ, ಜಿಲ್ಲಾ ಉಪಾಧ್ಯಕ್ಷರಾದ ಮಹಾಂತೇಶ ವಕ್ಕುಂದ, ಬೆಳಗಾವಿಯ ಮಹಾಪೌರರಾದ ಸಹೋದರಿ ಪ್ರೀತಿ ಕಾಮಕರ, ಉಪಮಹಾಪೌರ ಹಣಮಂತ ಕೊಂಗಾಲಿ, ಪ್ರಭು ರಾಠೋಡ ಸೇರಿದಂತೆ ಪ್ರಮುಖ ಕಾರ್ಯಕರತರು, ಪದಾಧಿಕಾರಿಗಳು ಉಪಸ್ಥಿತರಿದ್ದರು.



10 ಎಕರೆ ಜಾಗೆಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

ಚಿಕ್ಕೋಡಿ: ಪಟ್ಟಣದಲ್ಲಿ 10 ಎಕರೆ ಜಾಗೆಯಲ್ಲಿ ಅಂಬೇಡ್ಕರ್ ಸ್ಮಾರಕ ಭವನ ನಿರ್ಮಾಣ ಕಾಮಗಾರಿಯನ್ನು ಶೀಘ್ರದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು. ಪ್ರತಿಯೊಬ್ಬರೂ ಅಂಬೇಡ್ಕರ್ ಬರಹಗಳನ್ನು ಓದಿಕೊಳ್ಳಬೇಕು ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ಪಟ್ಟಣದಲ್ಲಿ ಸಮಾಜ ಕಲ್ಯಾಣ ಇಲಾಖೆ, ತಾಲೂಕು ಆಡಳಿತ, ಪುರಸಭೆ, ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ಡಾ. ಅಂಬೇಡ್ಕರ್ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಸೇರಿದಂತೆ ಮಹಾತ್ಮರ ಜಯಂತಿಯನ್ನು ಎಲ್ಲ ಸಮುದಾಯದ ಜನರು ಭಾಗಿಯಾಗಿ ಆಚರಣೆ ಮಾಡಬೇಕು. ಶೋಷಿತ ಸಮುದಾಯಕ್ಕೆ ನ್ಯಾಯ ಕಲ್ಪಿಸಿಕೊಡುವ ಜೊತೆಗೆ ಜಗತ್ತೇ ಮೆಚ್ಚುವ ಸಂವಿಧಾನ ನೀಡಿದ ಅಂಬೇಡ್ಕರ್ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಬುದ್ಧ ಬಸವ ಅವರ ತತ್ವಗಳನ್ನು ಅಳವಡಿಕೊಳ್ಳುವ ಮೂಲಕ ಜಗತ್ತಿಗೆ ಮಾದರಿಯಾಗಿದ್ದಾರೆ ಎಂದು



ಹೇಳಿದರು. ಉಪನ್ಯಾಸಕ ಹೊಂಬಯ್ಯ ಹೊನ್ನಲಗೆರೆ ಅವರು ಡಾ. ಅಂಬೇಡ್ಕರ್ ಅವರ ತತ್ವಗಳು ಕುರಿತು ಉಪನ್ಯಾಸ ನೀಡಿ,

ಡಾ. ಅಂಬೇಡ್ಕರ್ ಅವರ ತತ್ವ ಸ್ವಾಭಿಮಾನದ ಸಂಕೇತವಾಗಿದೆ. ಹಿಂದೂ ಧರ್ಮದ ಚತುವರ್ಣ ಪದ್ಧತಿ ವಿರೋಧಿಸಿ ಬೌದ್ಧ ಧರ್ಮ ಸ್ವೀಕರಿಸಿದರು. ಅಂಬೇಡ್ಕರ್ ಅವರ ಪುಸ್ತಕ ಪ್ರೇಮ ಅಗಾಧವಾಗಿತ್ತು ಎಂದರು.

ಈ ಸಂದರ್ಭದಲ್ಲಿ ಶತಾಯುಷಿ, ಅಂಬೇಡ್ಕರ್ ಒಡನಾಡಿ ರಾಮಚಂದ್ರ ಕಾಂಬಳೆ, ಪತ್ರಕರ್ತ ಸಂಜೀವ ಕಾಂಬಳೆ, ಪತ್ರಕರ್ತೆ ವಿಮಲಾ ಚಿನಕೇಕರ ಅವರನ್ನು ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ ರಾಜೇಶ ಬುರ್ಲಿ, ಸಮಾಜ ಕಲ್ಯಾಣ ಇಲಾಖೆಯ ಸಹ ನಿರ್ದೇಶಕಿ ಅರ್ಚನಾ ಸಾನೆ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ನರೇಂದ್ರ ನೇರ್ಲೇಕರ, ರಮೇಶ ಪಾಟೀಲ, ಅರವಿಂದ ಘಟ್ಟಿ, ರಾಮಾ ಮಾನೆ, ಅಶೋಕ ಭಂಡಾರಕರ, ರಾವಸಾಹೇಬ ಫಕೀರೆ, ಸುದರ್ಶನ ತಮ್ಮಣ್ಣವರ, ಅನಿಲ ಮಾನೆ, ಬಸವರಾಜ ಢಾಕೆ, ಪ್ರವೀಣ ಕಾಂಬಳೆ, ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ, ಡಿಡಿಪಿಐ ಆರ್ ಎಸ್ ಸೀತಾರಾಮು, ಆಶಾ ಯಂಕಪ್ಪಗೋಳ ಇತರರು ಇದ್ದರು.

ಡಾ. ಅಂಬೇಡ್ಕರ್ ವಿಚಾರಧಾರೆಗಳು ಮನೆ–ಮನ ಬೆಳಗಲಿ

ಮೂಡಲಗಿ: ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ಕೇವಲ ಗ್ರಂಥಾಲಯದ ಪುಸ್ತಕಗಳಿಗೆ ಸೀಮಿತವಾಗದೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಮನೆ ಮತ್ತು ಮನಗಳನ್ನು ತಲುಪಬೇಕಿದೆ,'' ಎಂದು ಎಂದು ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಎಂದರು.

ತಾಲೂಕಿನ ಕಲ್ಲೋಳಿ ಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕೋಶದ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಆಯೋಜಿಸಿದ್ದ ''ಮನೆ ಮನೆಗೆ, ಮನ ಮನಕೆ ಡಾ. ಬಾಬಾಸಾಹೇಬರು ಅಭಿಯಾನ–2026'' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಿ.ಎಸ್. ಹುಗ್ಗಿ ಮಾತನಾಡಿ, ಅಂಬೇಡ್ಕರ್ ಅವರು ನೀಡಿದ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ' ಎಂಬ ಮಂತ್ರ ಇಂದಿಗೂ ಪ್ರಸ್ತುತ. ಇಂತಹ ಅಭಿಯಾನಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.



- ಬಾಬಾಸಾಹೇಬರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಣೆ.
- ಸಮಾಜದ ಸರ್ವತೋಮುಖ ಅಭಿವೃದ್ಧಿಯಲ್ಲಿ ಸಂವಿಧಾನದ ಪಾತ್ರದ ಕುರಿತು ಚರ್ಚೆ.
- ಕಾಲೇಜಿನ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಂದ ಅಭಿಯಾನದ ಯಶಸ್ಸಿಗೆ ಸಂಕಲ್ಪ.

ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ''ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿರುವ ಈ ಅಭಿಯಾನವು ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಾಂವಿಧಾನಿಕ ಮೌಲ್ಯಗಳನ್ನು ಜಾಗೃತಗೊಳಿಸುವ ಉದ್ದೇಶ ಹೊಂದಿದೆ. ಯುವಶಕ್ತಿಯು ಮನೆ ಮನೆಗೆ ತೆರಳಿ ಈ ಮಹಾನ್ ಚೇತನದ ಸಂದೇಶ ಸಾರಲಿದೆ,'' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಐಕ್ಯುಎಸಿ ಸಂಯೋಜಕ ಡಾ. ಎಂ.ಬಿ. ಕುಲಮೂರ, ದೈಹಿಕ ನಿರ್ದೇಶಕ ಬಿ.ಕೆ. ಸೊಂಟನವರ, ಕ್ರೀಡಾ ಕಾರ್ಯದರ್ಶಿ ಬಿ.ಬಿ. ವಾಲಿ, ಸಾಂಸ್ಕೃತಿಕ ವಿಭಾಗದ ಸಂಯೋಜಕ ಡಾ. ಕೆ.ಎಸ್. ಪರವ್ವಗೋಳ, ಅಧ್ಯಾಪಕರಾದ ಆರ್.ಎಸ್. ಪಂಡಿತ, ವಿ.ವಾಯ್. ಕಾಳೆ, ಬಿ.ಸಿ. ಮಾಳಿ, ಎಸ್. ಎಚ್. ಅಂಕಲಗಿ, ಎಂ.ಬಿ. ಚಾಲಗಾರ, ಎ.ಎಸ್. ಮಿಶಿನಾಯಿಕ, ಎನ್.ಎಸ್.ಎಸ್ ಸ್ವಯಂಸೇವಕರು ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

ಕಿರುಸುದ್ದಿ



ಬಾಗಲಕೋಟೆ: ನಗರದ ಕಾಮಧೇನು ಸಂಸ್ಥೆ ವತಿಯಿಂದ ನವನಗರದ ಬಿಟಿಡಿಎ ಕಾಂಪ್ಲೆಕ್ಸ್ ಹತ್ತಿರ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿ ವ್ಯವಸ್ಥೆ ಮಾಡಲಾಯಿತು. ಕಾಮಧೇನು ಸಂಸ್ಥೆ ಅಧ್ಯಕ್ಷ ರವಿ ಕುಮಟಗಿ, ಕಾರ್ಯದರ್ಶಿ ವಿಜಯ ಸುಲಾಖೆ, ಮನೋಜ್ ಸಾಗರ, ಕಲ್ಲು ಬಜಂತ್ರಿ ಕೊಣ್ಣೂರ ಇದ್ದರು.

ಡಾ. ಅಂಬೇಡ್ಕರ್ ಜಯಂತಿ ಆಚರಣೆ



•**ಇಳಕಲ್:** ನಗರದ ಎಸ್.ಆರ್.ಕೆ. ನಿಲಯದಲ್ಲಿರುವ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಯಿತು.

ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ವಿಜಯಾನಂದ ಎಸ್. ಕಾಶಪ್ಪನವರ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಕೇವಲ ಒಂದು ವರ್ಗಕ್ಕೆ ಸೀಮಿತವಾದವರಲ್ಲ, ಅವರು ಇಡೀ ದೇಶದ ಅಸ್ಮಿತೆ. ಅವರ ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರೂ ಪಾಲಿಸುವುದು ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.

ಡಾ. ಬಾಬಾಸಾಹೇಬ ಅಂಬೇಡ್ಕರ್ ದಲಿತ ಹಿತ-ರಕ್ಷಣಾ ವೇದಿಕೆಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು. ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಸಂಗಣ್ಣ ಎಮ್ಮಿ(ಬೆಲ್ಲದ)ಗೆ ಗೌರವ ಡಾಕ್ಟರೇಟ್ ಪದವಿ

•**ಹುನಗುಂದ:** ಪಟ್ಟಣದ ವಿಜಯ ಮಹಾಂತೇಶ ಪ್ರೌಢಶಾಲೆಯ ವಿಶ್ರಾಂತ ವಿಜ್ಞಾನ ಶಿಕ್ಷಕ ಹಾಗೂ ರಾಷ್ಟ್ರ ಪ್ರಶಸ್ತಿ ವಿಭೂಷಿತ ಸಂಗಣ್ಣ ಎಮ್ಮಿ ಅವರಿಗೆ ವೈಜ್ಞಾನಿಕ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾಡಿದ ವಿಶೇಷ ಸಾಧನೆಗಳನ್ನು ಗುರುತಿಸಿ ಕೇಂದ್ರ ಸರ್ಕಾರದ ಮಾನ್ಯತೆಗೆ ಒಳಪಟ್ಟ ದೆಹಲಿಯ ಆನರೆಡ್ಜ್ ಎಕ್ಸಲೆನ್ಸ್ ಅವಾರ್ಡ್ ಶರ್ಮನಿ ಇವರು ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು.ಇದೇ ಏ. 25ರಂದು ದೆಹಲಿಯ ಸ್ಪೀಕರ್ ಕಾನ್ಸಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ಮಧ್ಯಾಹ್ನ 3 ಘಂಟೆಗೆ ಜರುಗುವ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಗಣ್ಣ ಎಮ್ಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಎಮ್ಮಿಯವರನ್ನು ಹುನಗುಂದ ತಾಲೂಕಿನ ಅನೇಕ ಸಂಘ,ಸಂಸ್ಥೆಗಳ ಅಧ್ಯಕ್ಷರು,ಗಣ್ಯರು ಅಭಿನಂದಿಸಿದ್ದಾರೆ.



ಏ. 23ರವರೆಗೆ ವಿದ್ಯುತ್ ವ್ಯತ್ಯಯ

•**ಹುನಗುಂದ:** ಹುನಗುಂದ ಉಪ ವಿಭಾಗದ ವ್ಯಾಪ್ತಿಯ ಎಫ್-10 ಅಮರಾವತಿ ಐ.ಪಿ ಮಾರ್ಗದ ರಿಕಂಡಕ್ಟರ ಕೆಲಸ ನಡೆದಿರುವುದರಿಂದ ಏ. 14ರಿಂದ ಏ. 23ರವರಗೆ ಸುಮಾರು 10 ದಿನಗಳ ಕಾಲ ಬೆಳಗ್ಗೆ 11 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಎಫ್-1 ಕಡಿವಾಳ ಎನ್.ಜೆ.ವಾಯ್ ಮಾರ್ಗದ ಮೇಲೆ ಬರುವ ಹಳ್ಳಿಗಳಾದ ಅಮರಾವತಿ, ಬಿಂಜವಾಡಗಿ, ಘಟ್ಟಿಗನೂರ, ರಾಮವಾಡಗಿ. ಹಗೇದಾಳ, ರೇವಡಿಹಾಳ, ಬೇಕಮಲದಿನ್ನಿ, ಕಡಿವಾಲ, ಚಿಂತಕಮಲದಿನ್ನಿ, ಚಾಲಕಮಲದಿನ್ನಿ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯ ಆಗಲಿದ್ದು.ಸಾರ್ವಜನಿಕರು ಸಹಕರಿಸಬೇಕೆಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾಗಲಕೋಟೆ: ನಗರದ ಪ್ರತಿಷ್ಠಿತ ಬಿವ್ಹಿವ್ಹಿ ಸಂಘದ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಪ್ರಾಚಾರ್ಯ ಡಾ.ಬಿ ಆರ್.ಹಿರೇಮಠ, ಡೀನ್ ಡಾ. ಪಿ.ಎನ್. ಕುಲಕರ್ಣಿ, ಡಾ.ಚಂದ್ರಶೇಖರ ಡಾ.ಎಸ್.ಜೆ.ಕಂಬಾಳಿಮಠ, ಡಾ .ಎಸ್. ಹೆಚ್. ಸನ್ನಿ, ಡಾ.ಆರ್ ಎಲ್.ನಾಯಕ, ಡಾ.ಲೋಕೇಶ ಭಜಂತ್ರಿ, ಡಾ.ವಿನಯ ಕುಪ್ಪಸ್ತ, ಡಾ.ಕಿರಣ್ ಕುಮಾರ್, ಡಾ.ಮಂಜುಳಾ, ಪ್ರೊ. ವಿಪಿ.ಗಿರಿಸಾಗರ, ಡಾ.ಪ್ರಕಾಶ ತಿಮ್ಮನಗೌಡರ, ಡಾ.ಶ್ರೀರಾಮ ಇದ್ದರು.

ಡಾ. ಅಂಬೇಡ್ಕರ್ ಜಯಂತಿ ಸರಳ ಆಚರಣೆ

•**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರವರ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮಂಗಳವಾರ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರವರ ಮತ್ಥಳಿಗೆ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶೀಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಹಾಗೂ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಸೇರಿದಂತೆ ಇತರೆ ಅಧಿಕಾರಿಗಳು ಹೂಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ನಂತರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಲಾಯಿತು.

ಉಪವಿಭಾಗಾಧಿಕಾರಿಸಂತೋಷಜಗಲಾಸರ,ಮುಖ್ಯ ಯೋಜನಾಧಿಕಾರಿಅಲ್ಲಮಪ್ರಭು, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, , ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಾಗಲಕೋಟೆ: ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರವರ ಪುತ್ಥಳಿಗೆ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶೀಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಹಾಗೂ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಸೇರಿದಂತೆ ಇತರೆ ಅಧಿಕಾರಿಗಳು ಹೂಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಡಾ.ಅಂಬೇಡ್ಕರ್ ವಿಚಾರಧಾರೆ ಅಳವಡಿಸಿಕೊಳ್ಳಿ

•**ಬಾಗಲಕೋಟೆ:** ಡಾ.ಅಂಬೇಡ್ಕರ ಅವರ ಸಾಧನೆ, ಹೋರಾಟ, ರಾಷ್ಟ್ರಪ್ರೇಮ ನಮಗೆ ಸದಾ ಪ್ರೇರಣೆಯಾಗಿದ್ದು, ಶಿಕ್ಷಣವೇ ಸಮಾನತೆಯ ಏಕೈಕ ಮಾರ್ಗ ಎಂದು ಡಾ.ಅಂಬೇಡ್ಕರ ಅವರು ಪ್ರತಿಪಾದಿಸಿದ್ದಾರೆ ಎಂದು ಸಂಸದ ಪಿ.ಸಿ.ಗದ್ದಿಗೌಡ ಹೇಳಿದರು.

ನಗರದ ಶಿವಾನಂದ ಜಿನ್‌ನಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದದಿಂದ ಹಮ್ಮಿಕೊಂಡ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಡಾ.ಅಂಬೇಡ್ಕರವರು ಬರೆದಿರುವ ಸಂವಿಧಾನದ ಆಧಾರದಲ್ಲಿ ಎಲ್ಲರೂ ನಡೆಯಬೇಕು. ಶಿಕ್ಷಣವೇ ಪ್ರತಿಯೊಬ್ಬರಿಗೆ ಏಕೈಕ ಮಾರ್ಗ ಎಂದು ಪ್ರತಿಪಾದಿಸಿದ್ದಾರೆ ಎಂದರು.

ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ, ಆರ್ಥಿಕ ಮತ್ತು ಕಾನೂನಿಗೆ ಸಂಬಂಧಿಸಿದ ದೃಷ್ಟಿಕೋನವು ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣ ಮತ್ತು ರಾಷ್ಟ್ರದ ಉತ್ತಮ ಆಡಳಿತದ ದಿಕ್ಕಿನೆಡೆಗೆ ನಮಗೆ ಯಾವಾಗಲೂ ಮಾರ್ಗದರ್ಶನ ನೀಡುತ್ತದೆ ಎಂದು ಹೇಳಿದರು.



ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಅಡಿಪಾಯದ ಮೇಲೆ ನವ ಭಾರತವನ್ನು ಕಟ್ಟಿದ ಮಹಾನ್ ಚೇತನ ಡಾ. ಬಿ.ಆರ್. ಅಂಬೇಡ್ಕರ್. ಅವರ ಸಾಮಾಜಿಕ ನ್ಯಾಯದ ಚಿಂತನೆಗಳು, ಆರ್ಥಿಕ ಸುಧಾರಣೆಯ ದೃಷ್ಟಿಕೋನ ಹಾಗೂ ಸರ್ವರಿಗೂ ಸಮಬಾಳು ನೀಡುವ ಕಾನೂನು ಚೌಕಟ್ಟು ಇಂದಿಗೂ ನಮಗೆ ದಾರಿದೀಪ ಎಂದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮುತ್ತಣ್ಣ ಬೇಣ್ಣೂರ, ರಾಜು ನಾಯ್ಕರ, ಯಲ್ಲಪ್ಪ ಬೇಂಡಿಗೇರಿ, ಬಸವರಾಜ ಕಟಗೇರಿ, ಅರುಣ ಲೋಕಾಪುರ, ದುಂಡಪ್ಪ ಏಳಮ್ಮಿ, ಶಿವಾನಂದ ಟವಳಿ, ಬಸವರಾಜ ಯಂಕಂಚಿ, ಬಸವರಾಜ ಹುನಗುಂದ, ಯಲ್ಲಪ್ಪ ನಾರಾಯಣಿ, ಸವಿತಾ ಲಂಕೆನ್ನವರ, ಶೋಭಾ ರಾವ್, ಪ್ರೇಮಾ ಅಂಬಿಗೇರ,ಶೀವಲಿಲಾ ಸಂಬಣ್ಣವರ, ಸ್ಮಿತಾ ಪವಾರ, ಗುಂಡುರಾವ ಶಿಂಧೆ, ಮಾನೇಶ ಅಂಬಿಗೇರ, ಗಿರೀಶ ಭಾಂಡಗೆ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.ಕಾರ್ಯಕ್ರಮಕ್ಕೂ ಮುಂಚೆ ನಗರದಲ್ಲಿರುವ ಬಾಬಾಸಾಹೇಬ ಡಾ. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ನಮನಗಳನ್ನು ಸಲ್ಲಿಸಲಾಯಿತು.



ಬೀಳಗಿ: ಬಾಗಲಕೋಟೆ ಜಿಲ್ಲೆಯ ಪ್ರವಾಸಿ ಸ್ಥಾನದಲ್ಲಿ ಅತ್ಯುತ್ತಮ ಪ್ರವಾಸಿ ಮಿತ್ರನಾಗಿ ಕರ್ತವ್ಯ ನಿರ್ವಹಿಸುವುದನ್ನು ಗಮನಿಸಿ ರಾಜ್ಯ ಪ್ರವಾಸಿ ಮಿತ್ರ, ಅಸೋಶಿಯೇಶನ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಲೇಮಹದೇಶ್ವರ ಬೆಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರವಾಸಿ ಮಿತ್ರ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಎಚ್. ಆರ್. ಕಂಬಳಿ, ಜಿಲ್ಲಾ ಪ್ರವಾಸೋದ್ಯಮ ಉಪ ನಿರ್ದೇಶಕ ಜಿ. ಎಸ್. ಹಿತ್ತಲಮನಿ, ಜಿಲ್ಲಾ ಬೋಧಕ ಎ. ಎಲ್. ಸಾಹುಕಾರ, ಪ್ರವಾಸಿ ಮಿತ್ರರು ಅಭಿನಂದಿಸಿದ್ದಾರೆ.

ಎನ್‌ಎಸ್‌ಎಸ್‌ನಿಂದ ವ್ಯಕ್ತಿತ್ವ ವಿಕಸನ ಸಾಧ್ಯ

•**ಬಾಗಲಕೋಟೆ:** ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ನಡೆಯುವ ಶಿಬಿರಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನ ನಿರ್ಮಾಣವಾಗುತ್ತದೆ ಎಂದು ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಹೇಳಿದರು.

ಬಾಗಲಕೋಟೆ ಸಮೀಪದ ಮುಚಖಂಡಿ ಗ್ರಾಮದ ವೀರಭದ್ರೇಶ್ವರ ಸಭಾ ಮಂಟಪದಲ್ಲಿ ಸೋಮವಾರ ಪ್ರಾರಂಭವಾದ ನವನಗರಸರ್ಕಾರಿಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2025-26ರ ವಾರ್ಷಿಕ ವಿಶೇಷ ಶಿಬಿರವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎನ್‌ಎಸ್‌ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಬೆಳೆಸುವ ಮೂಲಕ ಅವರಲ್ಲಿ ಸಮಯ ಪಾಲನೆ, ಶಿಸ್ತು, ಪ್ರಾಮಾಣಿಕತೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸುತ್ತವೆ ಎಂದು ಹೇಳಿದರು.

ಜಿಲ್ಲಾ ಪಿಡಿಓ ಸಂಘದ ಅಧ್ಯಕ್ಷ ಸಿದ್ಧಾರ್ಥ ಗೋಕೆ ಅವರು ಸಸಿಗೆ ನೀರುಣಿಸಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಗ್ರಾಮೀಣ ಪರಿಸರದ ದೇಶಿಯ ಸಾಂಸ್ಕೃತಿಕತೆಯನ್ನು ತಿಳಿದುಕೊಳ್ಳಬೇಕು ಏಳು ದಿನಗಳ ನಡೆಯುವ ಶಿಬಿರವು ಶಿಬಿರಾರ್ಥಿಗಳಲ್ಲಿರುವ ಪ್ರತಿಭೆಯ ಸಾಮಾರ್ಥ್ಯದ ಗುಣಮಟ್ಟ ಹೆಚ್ಚಿಸುತ್ತದೆ. ಶಿಬಿರದಿಂದ ತಮ್ಮ ಬದುಕಿನಲ್ಲಿ ಸೇವಾ ಭಾವನೆಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ಮುಖ್ಯ ಆತಿಥಿಗಳಾಗಿ ಜಿಲ್ಲಾ ಪಿಡಿಓ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ ನಾಯಕ ಮಾತನಾಡಿ, ಗ್ರಾಮೀಣ ಪರಿಸರದಲ್ಲಿ ಸೇವೆ ಮಾಡುವ ಮೂಲಕ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದರು.

ಎನ್‌ಎಸ್‌ಎಸ್ ಘಟಕದ ಕ್ರಾರ್ಯಕ್ರಮಾಧಿಕಾರಿ ಪ್ರೊ.ಸಂಪತ್ತ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ, ಡಾ.ಚಂದ್ರಶೇಖರ ಕಾಳನ್ನವರ, ನೀಲಪ್ಪ ಕುರಿ, ಲೇಪಾಕ್ಷಯ್ಯ, ಪರಸಪ್ಪ ತಳವಾರ, ಶಿವಶಂಕರ ಪ್ರಸಾದ, ಸುನಂದಾ ಬೂದಿಹಾಳ, ಶ್ರೀಶೈಲ ಶಿರೋಳ, ಚಂದ್ರಶೇಖರ ಕಾಳೆ, ಹುರಕಡ್ಲಿ, ಪ್ರೇಮಾ ಗೆಜ್ಜಿ ಅತಿಥಿಗಳಾಗಿ ವೇದಿಕೆ ಮೇಲೆ ಉಪಸ್ಥಿತರಿದ್ದರು. ಡಾ.ಬಸವರಾಜ ಬೀಳಗಿ ಸ್ವಾಗತಿಸಿದರು, ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು, ಪ್ರೊ.ಪರಸಪ್ಪ ತಳವಾರ ವಂದಿಸಿದರು.



ಅಂಬೇಡ್ಕರ್ ವಿಶ್ವ ಮಾನವರು: ತಹಶೀಲ್ದಾರ್

•**ದೇವರಹಿಪ್ಪರಗಿ:** ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರು ಜಗತ್ತು ಕಂಡ ಮಹಾನ್ ಮಾನವತಾವಾದಿ ಮತ್ತು ಮಾನವೀಯ ತತ್ವಗಳಡಿ ಸಮಾಜ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಿದ ಮಹಾನ್ ನಾಯಕರು ಎಂದು ತಹಶೀಲ್ದಾರ್ ನಿಂಗಪ್ಪ ಬಿರಾದಾರ ಹೇಳಿದರು.

ಪಟ್ಟಣದ ಪಪಂ ಸಭಾಭವನದಲ್ಲಿ ಮಂಗಳವಾರ ತಾಲೂಕಾಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪ.ಪಂ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಬಲೇಶ್ವರ ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕರು ಹಾಗೂ ಉಪನ್ಯಾಸಕರಾದ ನಟರಾಜ ಮಿಶಿ ಅವರು ಮಾತನಾಡಿ, ಶಿಕ್ಷಣದ ಜೊತೆಗೆ ಅಂಬೇಡ್ಕರರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದು ಅಂಬೇಡ್ಕರ್ ಅವರ ಬದುಕು ಬರಹ ಕುರಿತು ಉಪನ್ಯಾಸ ನೀಡಿದರು.

ಸಮುದಾಯದ ಮುಖಂಡರುಗಳಾದ ಕಾಶಿನಾಥ ತಳಕೇರಿ ಹಾಗೂ ಪ್ರಕಾಶ ಗುಡಿಮನಿ ಅವರು ಮಾತನಾಡಿದರು. ಕಾರ್ಯಕ್ರಮಕ್ಕೂ ಮುಂಚೆ ಮೊಹರೆ ವೃತ್ತದಿಂದ ಬಸ್ ನಿಲ್ದಾಣದ ಮಾರ್ಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೂರ್ತಿಗೆ ಹಾರವನ್ನು ಹಾಕಿ ಪಪಂ ಸಭಾಭವನದ ವರೆಗೆ ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಪ.ಪಂ ಅಧ್ಯಕ್ಷರಾದ ಜಯಶ್ರೀ ದೇವಣಗಾಂವ, ಉಪಾಧ್ಯಕ್ಷರಾದ ರಮೇಶ ಮಸಿಬಿನಾಳ, ತಾ.ಪಂ ಇಒ ಭಾರತಿ ಚೆಲುವಯ್ಯ, ಪ.ಪಂ ಮುಖ್ಯಾಧಿಕಾರಿ ಅಪ್ರೋಜ ಅಹ್ಮದ ಪಟೇಲ,ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ.ಬಿ.ಯಡ್ರಾಮಿ, ಪಿಎಸ್‌ಐ ಸಚಿನ್ ಆಲಮೇಲಕರ್, ಕ.ರಾ.ಸ.ನೌ ಸಂ. ಅಧ್ಯಕ್ಷರಾದ ಸಿ.ಬಿ.ಗಡಗಿ, ನಿವೃತ್ತ ನೌ.ಸಂ ಅಧ್ಯಕ್ಷರಾದ ಸಿ.ಕೆ.ಕುದರಿ, ನಿಕಟಪೂರ್ವ ಕಸಾಪ ಅಧ್ಯಕ್ಷರಾದ ಜೆ.ಪಿ.ಬಿರಾದಾರ, ಸಮುದಾಯದಮುಖಂಡರುಗಳಾದ ರಮೇಶ ಮ್ಯಾಕೇರಿ,ಭಾಸ್ಕರ ಗುಡಿಮನಿ, ಮಲಕಪ್ಪ ಬಾಗೇವಾಡಿ, ರಾಜಕುಮಾರ ಸಿಂದಗೇರಿ ಸೇರಿದಂತೆ ಪಟ್ಟಣದ ಪ್ರಮುಖರು, ಗಣ್ಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಇತರರು ಉಪಸ್ಥಿತರಿದ್ದರು. ಶಿಕ್ಷಕಿ ವಿಜಯಲಕ್ಷ್ಮಿ ನವಲಿ ನಿರೂಪಿಸಿ, ವಂದಿಸಿದರು, ಕಂದಾಯ ಶಿರಸ್ತೇದಾರ ಸುರೇಶ ಮ್ಯಾಗೇರಿ ಸ್ವಾಗತಿಸಿದರು, ಅಂಬೇಡ್ಕರ್ ಹಾಗೂ ನಾಡ ಗೀತೆ ಕಸಾಪ ಅಧ್ಯಕ್ಷ ಸಿದ್ದು ಮೇಲಿನಮನಿ ಹಾಡಿದರು.



ಇಂದಿನಿಂದ ಪ್ರವಚನ: ಏ.20ಕ್ಕೆ ರಥೋತ್ಸವ

•**ಜಮಖಂಡಿ:** ನಗರದ ಐತಿಹಾಸಿಕ ಓಲೇಮಠದಲ್ಲಿ ಬಸವ ಜಯಂತಿ ನಿಮಿತ್ತ ಏ.15ರಿಂದ 18ರವರೆಗೆ ಸಂಜೆ ಪ್ರವಚನ, ಏ.20ರಂದು ರಥೋತ್ಸವ ನಡೆಯಲಿದೆ ಎಂದು ಓಲೇಮಠದ ಆನಂದ ದೇವರು ಹೇಳಿದರು.



ನಗರದ ಓಲೇಮಠದ ಸಭಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದಅವರು,ಏ.15ರಂದು ಸಂಜೆ 6.30ಕ್ಕೆ ಮರೇಗುದ್ದಿ ಗುರುಮಹಾಂತ ಮಠದ ಮಹಾಂತ ಶ್ರೀಗಳಿಂದ ಷಟಸ್ಥಳ ಧ್ವಜಾರೋಹಣ ನಡೆಯಲಿದೆ. ಕಲ್ಯಾಣ ಮಠದ ಗೌರಿಶಂಕರ ಶ್ರೀಗಳು, ಮುತ್ತಿನ ಕಂಟೀ ಮಠದ ಶಿವಲಿಂಗ ಶ್ರೀಗಳು, ಹೊರಗಿನ ಕಲ್ಯಾಣ ಮಠದ ಡಾ. ವಿಶ್ವಪ್ರಭು ಶ್ರೀಗಳು, ಗುರುದೇವಾಶ್ರಮ ಹರ್ಷಾನಮದ ಶ್ರೀಗಳು, ಶಾಸಕ ಜಗದೀಶ ಗುಡಗುಂಟಿ, ಮಾಜಿ ಶಾಸಕರಾದ ಶ್ರೀಕಾಂತ ಕುಲಕರ್ಣಿ, ಜಿ.ಎಸ್.ನ್ಯಾಮಗೌಡ, ಆನಂದ ನ್ಯಾಮಗೌಡ, ನ್ಯಾಯವಾದಿ ತಾತಾಸಾಬೇಬ ಬಾಂಗಿ, ಸಂಗಮೇಶ ನಿರಾಣಿ ಇನ್ನಿತರರು ಆಗಮಿಸಲಿದ್ದಾರೆ.

ಏ. 16ರಂದು ಸಂಜೆ 6.30ಕ್ಕೆ ಮುಂಡರಗಿ ಅನ್ನದಾನೇಶ್ವರ ಮಠದ ಡಾ. ಮಲ್ಲಿಕಾರ್ಜುನ ಶ್ರೀಗಳು, ಮುತ್ತೂರಿನ ಗುರುಸಿದ್ಧ ಶ್ರೀಗಳು, ಹುನ್ನೂರಿನ ವಿಶ್ವನಾಥ ಶಾಸ್ತ್ರಿಗಳು, ಶಹಪೂರಿನ ವಿಶ್ವರಾಧ್ಯ ಸತ್ಯಂಪೇಟರಿಮದ ಉಪನ್ಯಾಸ.

ಏ.17ರಂದು ಸಂಜೆ 6.30ಕ್ಕೆ ಪ್ರೊ. ಜಿ.ಎಸ್. ಸಿದ್ದರಾಮಯ್ಯನವರಿಂದ ಉಪನ್ಯಾಸ.ಗದಗಡಂಬಳ ಡಾ ತೋಟದಾರ್ಯ ಸಿದ್ಧರಾಮ ಶ್ರೀಗಳು, ಹಿರೇಪಡಸಲಗಿಯ ಸಿದ್ಧಲಿಂಗ ಶ್ರೀಗಳು, ಸಚಿವ ಎಂ.ಬಿ.ಪಾಟೀಲ, ಮಾಜಿ ಸಚಿವ ಡಾ. ಮುರಗೇಶ ನಿರಾಣಿ, ಶಾಸಕರಾದ ಜಗದೀಶ ಗುಡಗುಂಟಿ, ಸಿದ್ದು ಸವದಿ, ಮಾಜಿ ಶಾಸಕ ಆನಂದ ನ್ಯಾಮಗೌಡ ಆಗಮಿಸಲಿದ್ದಾರೆ.

ಏ.18ರಂದು ಸಂಜೆ 6.30ಕ್ಕೆ ವಿಜಯಪುರದ ಡಾ ಜೆ.ಎಸ್ .ಪಾಟೀಲರಿಂದ ಉಪನ್ಯಾಸ, ಏ.19ರಂದು ಸಂಜೆ ಕಾರವಾರದ ಡಾ. ಎಚ್.ಎಸ್. ಅನುಪಮಾ ಅವರಿಂದ ಉಪನ್ಯಾಸ,

ಏ.20ರ ಬಸವ ಜಯಂತಿ ಯಂದು ಬೆಳಿಗ್ಗೆ ಪರಿಸರ ಸಂರಕ್ಷಣೆಗಾಗಿ ವಚನ ವೃಕ್ಷೋತ್ಸವ ಬಸವೇಶ್ವರ ವೃತ್ತದಿಂದ ಓಲೇಮಠದವರೆಗೆ ಶೋಭಾ ಯಾತ್ರೆ ನಡೆಲಿದೆ. ಸಂಜೆ ಭವ್ಯ ರಥೋತ್ಸವ ಮತ್ತು ಉಪನ್ಯಾಸ ಕಾರ್ಯಕ್ರಮ ನಡೆಯುವುದು ಎಂದು ಹೇಳಿದರು. ಬಸವರಾಜ ಬಳಿಗಾರ, ಸದಾಶಿವ ಬಾಗೇವಾಡಿ ಇದ್ದರು.

ಸಂಭ್ರಮದ ರೊಟ್ಟಿ ಬುತ್ತಿ ಮೆರವಣಿಗೆ



•**ಗುಳೇದಗುಡ್ಡ:** ಪಟ್ಟಣದ ಶ್ರೀ ಕಾಡಸಿದ್ಧೇಶ್ವರ ಮಠದಲ್ಲಿ ನಡೆಯುತ್ತಿರುವ ಜಾತ್ರಾಮಹೋತ್ಸವದ ಸಮಾರಂಭದ ಅಂಗವಾಗಿ ಸೋಮವಾರ ಸಂಜೆ ರೊಟ್ಟಿ ಬುತ್ತಿ ಮೆರವಣಿಗೆ ನಡೆಯಿತು.

ಶ್ರೀಮಠದ ಭಕ್ತಮಹಿಳೆಯರು ಪಟ್ಟಣದ ಸಾಲೇಶ್ವರ ತೇರಿನಮನೆಯಿಂದ ತಲೆಯಮೇಲೆ ರೊಟ್ಟಿ ಬುತ್ತಿಯನ್ನು ಇಟ್ಟುಕೊಂಡು ಮೆರವಣಿಗೆಯ ಮೂಲಕ ಶ್ರೀ ಕಾಡಸಿದ್ಧೇಶ್ವರ ಮರಡಿ ಮಠವನ್ನು ತಲುಪಿದರು. ರೊಟ್ಟಿ ಬುತ್ತಿ ಮೆರವಣಿಗೆಯಲ್ಲಿ ಶ್ರೀ ರುದ್ರಮುನಿ ದೇವರು, ಮಠದ ಭಕ್ತರಾದ ಭಾಗ್ಯಾ ಉದ್ನೂರ, ಚನ್ನಮ್ಮ ಜವಳಿ, ಶಶಿಕಲಾ ಭಾವಿ, ಗೀತಾ ಉದ್ನೂರ, ಮೇಘಾ ಪರಗಿ, ಶ್ವೇತಾ ಕಲ್ಬುರ್ಗಿ, ಚನ್ನಮ್ಮ ಚಿಂದಿ, ದಾನಮ್ಮ ಕಲ್ಯಾಣಿ, ಗೌರವ್ವ ಕಲ್ಬುರ್ಗಿ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದ್ದರು.



ಜಮಖಂಡಿ: ಮಹಾಮಾನವತಾವಾದಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರರ 135ನೇ ಜಯಂತಿ ನಿಮಿತ್ತ ಮಾಜಿ ಶಾಸಕ ಆನಂದ ನ್ಯಾಮಗೌಡ ಅವರು ಅಂಬೇಡ್ಕರ ವೃತ್ತದಲ್ಲಿ ಡಾ. ಅಂಬೇಡ್ಕರ್‌ರ ಪುತ್ಥಳಿಗೆ ಪುಷ್ಪ ಸಮರ್ಪಿಸಿ ವಂದನೆಗೈದರು.

ಸಾಧನೆಯೇ ಸದ್ದು ಮಾಡಲಿ: ಡಾ. ಚಂದಾವರಕರ

•**ಬಾಗಲಕೋಟೆ:** ವಿಜ್ಞಾನ ವಿಭಾಗಕ್ಕೆ ಹೋಲಿಸಿದರೆ ಕಲಾ ವಿಭಾಗದಲ್ಲಿ ಶೇ. 99ರಷ್ಟು ಅಂಕಗಳನ್ನು ಪಡೆಯುವುದು ಕಷ್ಟ ಸಾಧ್ಯ. ಆದನ್ನು ಕೆಲವೇ ಕೆಲವು ವಿದ್ಯಾರ್ಥಿಗಳು ಸಾಧಿಸಬಲ್ಲರು. ದೇವಮ್ಮ ಯಡಹಳ್ಳಿ ಈ ಅಪರೂಪದ ಸಾಧನೆಯನ್ನು ಮಾಡಿದ್ದಾಳೆ ಎಂದುರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಡಾ.ಮೀನಾ ಚಂದಾವರಕರ ಹೇಳಿದರು.

ಪಿಯುಸಿ ದ್ವಿತೀಯ ವರ್ಷದ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೂರನೇ ರ‍್ಯಾಂಕ್ ಪಡೆದಿರುವ ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಡಿ.ಹೆರಂಜಲ ಕಲಾ,ಶಂಕ್ರಪ್ಪ ಸಕ್ರಿ ವಾಣಿಜ್ಯ ಹಾಗೂ ಆರ್.ದೊಡ್ಡಿಹಾಳ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದೇವಮ್ಮ ಯಡಹಳ್ಳಿಗೆ ಸಂಸ್ಥೆ ವತಿಯಿಂದ ಶುಕ್ರವಾರ ಹಮ್ಮಿಕೊಂಡ ಸನ್ಮಾನಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸವಾಲುಗಳನ್ನು ಮೆಟ್ಟಿ ನಿಂತು ಶ್ರದ್ಧೆ ಹಾಗೂ ಪರಿಶ್ರಮದಿಂದ ಅಧ್ಯಯನ ಮಾಡಿ ಸದ್ದಿಲ್ಲದೆ ಸಾಧನೆ ಮಾಡಿದ್ದಾಳೆ. ಈಗ ಅವಳ ಈ ಸಾಧನೆ ಸದ್ದು ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಯಾಧ್ಯಕ್ಷೆ ಶ್ರೀಲತಾ ಹೆರಂಜಲ ಮಾತನಾಡಿ, ವಿದ್ಯಾರ್ಥಿಗಳ ಈ ಸಾಧನೆಯ ಪರಂಪರೆ ಮುಂದುವರೆಯಬೇಕು.ಆದಕ್ಕೆಸಂಸ್ಥೆ ಅವಶ್ಯಕ ನೆರವುನೀಡಲಿದೆ. ದೇವಮ್ಮಳ ಪದವಿ ಶಿಕ್ಷಣದ ವೆಚ್ಚವನ್ನು ವೈಯಕ್ತಿಕವಾಗಿ ತಾವು ಭರಿಸುವುದಾಗಿಅವರು ತಿಳಿಸಿದರು.

ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಮಾತನಾಡಿದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ದೇವಮ್ಮ ಯಡಹಳ್ಳಿ ಕಾಲೇಜಿನಲ್ಲಿ ನಡೆಸುತ್ತಿದ್ದ ವಿವಿಧ ಪರೀಕ್ಷೆಗಳು, ಮಾದರಿ ಪ್ರಶ್ನೆಪತ್ರಿಕೆಗಳು, ಅವುಗಳಿಗೆ ಶಿಕ್ಷಕರು ನೀಡುತ್ತಿದ್ದ ಪರಿಹಾರ ಇವೆಲ್ಲವೂ ತನ್ನ ಈ ಸಾಧನೆಗೆ ಸಹಕಾರಿಯಾಯಿತು. ಮೊಬೈಲ್ ಬಳಸದೇ ಕೇವಲ ಪಠ್ಯ ಪುಸ್ತಕಗಳನ್ನು ಓದಿ ಪರೀಕ್ಷೆಗೆ ತಯಾರಿ ಮಾಡಿಕೊಂಡಿದ್ದೆ. ಭವಿಷ್ಯದಲ್ಲಿ ಕೆಎಎಸ್, ಐಎಎಸ್ ಮಾಡುವ ಗುರಿ ತನ್ನದಾಗಿದೆ ಎಂದಳು.

ಲಕ್ಷ್ಮೀ ಚವ್ಹಾಣ ಪ್ರಾರ್ಥಿಸಿದರು. ಪ್ರಾಚಾರ್ಯ ಅಶೋಕ ಕಂದಗಲ್ ಸ್ವಾಗತಿಸಿದರು. ಉಪನ್ಯಾಸಕಆರ್.ಜೆ. ಬೊಮ್ಮಣಗಿ ನಿರೂಪಿಸಿದರು. ಉಪನ್ಯಾಸಕ ಜಿ.ಬಿ.ಕುಲಕರ್ಣಿ ವಂದಿಸಿದರು.

ಉಪಾಧ್ಯಕ್ಷ ಜಿ.ಎನ್.ಕುಲಕರ್ಣಿ, ಜಂಟಿ ಕಾರ್ಯದರ್ಶಿ ಡಾ.ಎಸ್.ಬಿ.ಪರ್ವತೀಕರ, ಸದಸ್ಯರಾದ ಡಾ.ಪಿ.ಆರ್.ಜೋಶಿ, ಡಾ.ಜೆ.ಎಸ್.ದೇಶಪಾಂಡೆ, ಪದವಿ ಕಾಲೇಜಿನ ಪ್ರಾಚಾರ್ಯ ಶ್ರೀನಿವಾಸ ನರಗುಂದ, ದೇವಮ್ಮಳ ತಂದೆ ಹಣಮಂತರಾಯ, ತಾಯಿ ನಾಗಮ್ಮ ಮತ್ತಿತರರು ಇದ್ದರು.



ಗಲಗಲಿ: ಶ್ರೀ ಬಸವೇಶ್ವರ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ನಿಂಗಣ್ಣ ಗೋಳಿಪಲ್ಲಿ, ಶಿವಬಸು ಮಲ್ಲನವರ್, ಮಹಾಂತೇಶ್ ಚಲವಾದಿ, ಪ್ರಕಾಶ ದೊಡ್ಡಮನಿ, ಆನಂದ ಪೂಜಾರಿ, ಮರುಗಯ್ಯ ಕಾಶಿ ಮುಂತಾದವರಿದ್ದರು.



ಗಲಗಲಿ: ಅರವಿಂದೋ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಸೌಮ್ಯ ಅವರಾದಿ, ರಂಜನಾ ಗೋಡಸೆ , ವರ್ಷಾ ನಡುವಿನಮನಿ, ಅರುಂಧತಿ ನರಗುಂದ, ಅಕ್ಷತಾ ಭೋವಿ, ಅರವಿಂದ್ ನರಗುಂದ ಇದ್ದರು.

ಡಾ.ಅಂಬೇಡ್ಕರ್ ತತ್ವಾದರ್ಶ ಅಳವಡಿಸಿಕೊಳ್ಳಿ: ಮಲಘಾಣ

•**ಮುಧೋಳ:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಹಾಕಿಕೊಟ್ಟ ತತ್ವಾದರ್ಶಗಳು ಕೇವಲ ಒಂದು ವರ್ಗಕ್ಕೆ ಸೀಮಿತವಲ್ಲ, ಅವು ಇಡೀ ಮಾನವಕುಲದ ಪ್ರಗತಿಯ ದಾರಿದೀಪಗಳಾಗಿವೆ. ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿ.ಪಂ ಮಾಜಿ ಅಧ್ಯಕ್ಷ ಶಿವಕುಮಾರ ಮಲಘಾಣ ಹೇಳಿದರು.

ನಗರದ ಶ್ರೀ ಸಂಗಮನಾಥ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣ, ಸಂಘಟನೆ ಮತ್ತು ಹೋರಾಟದಮೂಲಕಸಮಾನತೆಯ ಸಮಾಜ ನಿರ್ಮಿಸಲು ಅಂಬೇಡ್ಕರ್ ಶ್ರಮಿಸಿದ್ದಾರೆ. ಅವರ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ಡಾ. ವೆಂಕಟೇಶ ಗುಡೆಪ್ಪನವರ ಮಾತನಾಡಿ, ಅಂಬೇಡ್ಕರ್ ಅವರು ಜಗತ್ತಿನ ಶ್ರೇಷ್ಠ ಜ್ಞಾನಿಗಳಲ್ಲಿ ಒಬ್ಬರು. ವಿದ್ಯಾರ್ಥಿಗಳು ಅವರ ಜೀವನ ಚರಿತ್ರೆಯನ್ನು ಓದುವ ಮೂಲಕ ಶಿಸ್ತು ಮತ್ತು ಜ್ಞಾನಾರ್ಜನೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಅಂದಾಗ ಮಾತ್ರ ಇಂತಹ ಜಯಂತಿ ಆಚರಣೆಗಳಿಗೆ ಅರ್ಥ ಬರುತ್ತದೆ ಎಂದು ಹೇಳಿದರು.



ಆಡಳಿತಾಧಿಕಾರಿ ಮಲ್ಲು ಕಳ್ಳೆನವರ ಮಾತನಾಡಿ, ಶೋಷಿತರ ಧ್ವನಿಯಾಗಿ ಅಂಬೇಡ್ಕರ್ ಮಾಡಿದ ಹೋರಾಟ ಅವಿಸ್ಮರಣೀಯ. ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿರುವ ನಮ್ಮ ಸಂವಿಧಾನವು ಇಂದು ಎಲ್ಲರಿಗೂ ಸಮಾನ ಹಕ್ಕುಗಳನ್ನು ಒದಗಿಸಿದೆ. ಅಂಬೇಡ್ಕರ್ ಅವರ ವ್ಯಕ್ತಿತ್ವ ನಮಗೆ ಸದಾ ಸ್ಫೂರ್ತಿಯಾಗಿರಲಿ ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಪ್ರಾಚಾರ್ಯ ಸುರೇಶ ಭಜಂತ್ರಿ, ಪತ್ರಕರ್ತ ಮಹೇಶ ವ'ಂನ'ಯ್ಕ ನ'ವ'ರ'ವ'ಂಠ' ಮಾತನಾಡಿದರು. ವಿಜಯ ಹುಣಸಗಿ, ಯಮುನಾ ರಡ್ಡಿ, ಮೀನಾಕ್ಷಿ ಹುನ್ನೂರ, ಮಲ್ಲಮ್ಮ ಹಿರೇಮಠ ಹಾಗೂ ಕುಮಾರಿ ಮಧುರಾ ಮನ್ನಯ್ಯನವರಮಠ ಸೇರಿದಂತೆ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಡಾ. ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ

ನಾಲತವಾಡ: ಪಟ್ಟಣದಲ್ಲಿ ಸಂವಿಧಾನದ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಪಟ್ಟಣದಲ್ಲಿರುವ ಅಂಬೇಡ್ಕರ್ ವೃತ್ತಕ್ಕೆ ಪಟ್ಟಣದ ಗಣ್ಯ ಮಾನ್ಯರಿಂದ ಅಂಬೇಡ್ಕರ್ ಮೂರ್ತಿಗೆ ಹಾರ ಹಾಕಿ ಪುಷ್ಪಾರ್ಚಣೆ ಮಾಡಿ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಾಪುಗೌಡ.ಎಸ್.ಪಾಟೀಲ, ಶಶಿಧರ ಬಂಗಾರಿಗೌಡ್ರ , ಕೆ .ಆರ್ ಎತ್ತಿನಮನಿ. ಜಿ.ಮಾಂತಗೌಡ್ರು, ಗಿರೀಶಗೌಡ ಪಾಟೀಲ್ ,(ನಾಲತವಾಡ) ಸಂಗಣ್ಣ ಹಾವರಗಿ, ಸಂಗಮೇಶ ಮೇಟಿ, ಈರಣ್ಣ ಮುದ್ನೂರ, ಅಜೇಯ ಕೋಟಿಖಾನಿ, ಚೇತನ ಸಂಗಮ, ನಿಕೀಲಗೌಡ ಬಿರಾದಾರ, ಮುತ್ತು ಸ್ಥಾವರಮಠ, ಸಂಗಣ್ಣ ಕುಳಗೇರಿ, ಶಿವಯಗಯ ಮಲ್ಲಿಕಾರ್ಜುನ ಚಿನಿವಾಲರ, ಚನ್ನಪ್ಪಗೌಡ ಹಂಪನಗೌಡ್ರು, ಮಹಾಂತೇಶ್ ಚಳಗೇರಿ, ಅಮರೇಶ್ ಪೂಜಾರಿ, ಚಂದ್ರು ಹಂಪನಗೌಡ್ರು, ಮಹಾಂತೇಶ ಮೇದಿಕಿನಾಳ, ವೀರೇಶ್ ಚಲವಾದಿ, ಹಣಮಂತ ಛಲವಾದಿ, ರಾಜು ಮಶಿಬಿನಾಳ, ಸಿದ್ದಣ್ಣ ಕುರಿ, ಮಲ್ಲಿಕಾರ್ಜುನ ಚಾಲಹಳ್ಳಿ, ಭೀಮಣ್ಣ ಲೋಟಗೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ



ಬಸವನಬಾಗೇವಾಡಿ: ಪಟ್ಟಣದ ಬಸವ ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರವರ 135ನೇ ಜಯಂತಿಯನ್ನು ಆಚರಿಸಲಾಯಿತು. ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಡಿವೈಎಸ್ಪಿ ಬಲ್ಲಪ್ಪ ನಂದಗಾವಿ ಪುಷ್ಪಾರ್ಚನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶರಣಪ್ಪ ಬೆಲ್ಲದ, ಮಹೇಶ ಸಾಲೋಡಗಿ, ಸಂಜು ಕಾನಾಗಡ್ಡಿ, ಅಶ್ವಿನಕುಮಾರ ಪಟ್ಟಣಶೆಟ್ಟಿ, ಅಕ್ಷಯ ಹೊಸಮನಿ, ದಯಾನಂದ ಸಾರವಾಡ, ಆನಂದ ದಿಂಡವಾರ ಹಣಮಂತ ಪೂಜಾರಿ, ಆಕಾಶ ಮಡಿವಾಳರ, ದರ್ಶನ ಕೋಳೂರ, ಮಂಜುನಾಥ ಪೂಜಾರಿ, ಬಸು ಛಲವಾದಿ, ಚೇತನ ಸೇರಿ ಇತರರು ಉಪಸ್ಥಿತರಿದ್ದರು.

ಬಾಲ್ಯ ವಿವಾಹ ನಿಷೇಧ: ಸಾರ್ವಜನಿಕರಿಗೆ ಎಚ್ಚರಿಕೆ

ವಿಜಯಪುರ : ಅಕ್ಷಯ ತೃತೀಯ ಪ್ರಯುಕ್ತ ಏ.20 ರಂದು ಜಿಲ್ಲೆಯಲ್ಲಿ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಹಾಗೂ ವೈಯಕ್ತಿಕ ವಿವಾಹಗಳಲ್ಲಿ ಬಾಲ್ಯ ವಿವಾಹ ಜರುಗಿಸಿದಲ್ಲಿ, ಅದು ಬಾಲ್ಯವಿವಾಹ ನಿಷೇಧ ಕಾಯ್ದೆ-2006ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಜಿಲ್ಲಾಡಳಿತ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

ಜಿಲ್ಲೆಯ ದೇವಸ್ಥಾನಗಳು, ಕಲ್ಯಾಣ ಮಂಟಪಗಳು ಹಾಗೂ ಇತರ ಧಾರ್ಮಿಕ ಸ್ಥಳಗಳಲ್ಲಿ ಬಾಲ್ಯವಿವಾಹ ನಿಷೇಧ ಎಂಬ ಫಲಕವನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಬಾಲ್ಯ ವಿವಾಹವನ್ನು ನಡೆಸುವ, ನಿರ್ದೇಶಿಸುವ ಅಥವಾ ಪ್ರಚೋದಿಸುವ ಯಾವುದೇ ವ್ಯಕ್ತಿ ಕಾನೂನು ಪ್ರಕಾರ ಸಮಾನವಾಗಿ ಹೊಣೆಗಾರರಾಗುತ್ತಾರೆ. ವಿವಾಹ ಸಮಾರಂಭವನ್ನು ನಡೆಸುವ ಪುರೋಹಿತರು, ಅದನ್ನು ಏರ್ಪಡಿಸುವ ಸಂಬಂಧಿಕರು, ಸುಗಮಗೊಳಿಸುವ ಆಯೋಜಕರು ಸೇರಿದಂತೆ ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲರೂ ಬಾಲ್ಯವಿವಾಹ ನಿಷೇಧ ಕಾಯ್ದೆಯ ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಗಾಗುತ್ತಾರೆ.

ಈ ಸಂಬಂಧ ಕ್ರಿಮಿನಲ್ ಪಿಟಿಷನ್ ಸಂಖ್ಯೆ 1605/2026ರಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ಸ್ಪಷ್ಟ ಆದೇಶ ಹೊರಡಿಸಿದೆ.

ಜಿಲ್ಲೆಯಾದ್ಯಂತ ವಿವಿಧ ಇಲಾಖೆಗಳಲ್ಲಿನ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ತೀವ್ರ ನಿಗಾ ವಹಿಸಿ ಪರಿಶೀಲನೆ ನಡೆಸುತ್ತಿದ್ದಾರೆ. ಬಾಲ್ಯ ವಿವಾಹ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ದೊರೆತಲ್ಲಿ, ತಕ್ಷಣವೇ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅಥವಾ ತುರ್ತು ಸೇವೆ 112, ಹತ್ತಿರದ ಪೊಲೀಸ್ ಠಾಣೆ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ತಿಳಿಸುವಂತೆ ಮನವಿ ಮಾಡಲಾಗಿದೆ. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಾಲತವಾಡ: ಪಟ್ಟಣದಲ್ಲಿ ಸಂವಿಧಾನದ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಪಟ್ಟಣದಲ್ಲಿರುವ ಅಂಬೇಡ್ಕರ್ ವೃತ್ತಕ್ಕೆ ಪಟ್ಟಣದ ಗಣ್ಯ ಮಾನ್ಯರಿಂದ ಅಂಬೇಡ್ಕರ್ ಮೂರ್ತಿಗೆ ಹಾರ ಹಾಕಿ ಪುಷ್ಪಾರ್ಚಣೆ ಮಾಡಿ ನಮನ ಸಲ್ಲಿಸಲಾಯಿತು.

ಸಮಾಜದ ಪ್ರಗತಿಗೆ ಶ್ರಮಿಸಿದ ಡಾ.ಅಂಬೇಡ್ಕರ್

ವಿಜಯಪುರ: ಅಂಬೇಡ್ಕರ್ ಒಬ್ಬ ವ್ಯಕ್ತಿ ಮಾತ್ರವಲ್ಲದೆ ಶಕ್ತಿಯಾಗಿದ್ದರು, ಅಂತೆಯೇ ಒಬ್ಬ ಸಮಾಜ ಸುಧಾರಕರಾಗಿ ಭಾರತದ ಹಿಂದುಳಿದ ಜನಸಮೂಹದ ಪ್ರಗತಿಗೆ ಅವಿರತವಾಗಿ ಶ್ರಮಿಸಿದವರು ಅಂಬೇಡ್ಕರ್ ಎಂದು ದರಬಾರ ಪದವಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಸುಭಾಸ ಪಾಟೀಲ ಹೇಳಿದರು.

ನಗರದ ವಿದ್ಯಾವರ್ಧಕ ಸಂಘದ, ಬನ್ಸಿಲಾಲ್ ವಿಠ್ಠಲದಾಸ್ ದರಬಾರ ಪದವಿ ಮಹಾವಿದ್ಯಾಲಯದ ಸಭಾ ಭವನದಲ್ಲಿ ಇಂದು, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನಪೀಠ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕೋಶ ಇವರ ಸಹಯೋಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನದ ಪ್ರಯುಕ್ತ 'ಮನೆ ಮನೆಗೆ, ಮನ ಮನಕೆ ಡಾ.ಬಾಬಾಸಾಹೇಬರ ಅಭಿಯಾನ ' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷ ತೆ ಸ್ಥಾನವಹಿಸಿದ ಭೂಗೋಳ ಶಾಸ್ತ್ರದ ಉಪನ್ಯಾಸಕ ಎಂ.ಹೆಚ್. ಕೋಟ್ಯಾಳ ಮಾತನಾಡಿದರು. ಪ್ರಾಸ್ತಾವಿಕವಾಗಿ ರಾಷ್ಟ್ರೀಯ ಸೇವಾ ಯೋಜನೆಯ ತಾಲೂಕು ಸಂಯೋಜನಾಧಿಕಾರಿ, ರಾಜು ಕಪಾಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಂಪ್ಯೂಟರ್ ವಿಭಾಗದ ಸೀಮಾ ಪಾಟೀಲ, ಸಾಂಸ್ಕೃತಿಕ ಕಾರ್ಯದರ್ಶಿ ಎಸ್.ಬಿ. ಕುಂಬಾರ್, ಸೇರಿದಂತೆ ಕಾಲೇಜಿನ ಎಲ್ಲ ಉಪನ್ಯಾಸಕ ಹಾಗೂ ಸಿಬ್ಬಂದಿ ವರ್ಗದವರು ಇದ್ದರು. ಕಾರ್ಯಕ್ರಮವನ್ನು ಕನ್ನಡ ವಿಭಾಗದ ಕಾಶಿನಾಥ್ ಕೋಣನವರ್ ನಿರೂಪಿಸಿದರು, ಆನಂದ್ ಕುಲಕರ್ಣಿ ವಂದಿಸಿದರು.



ವಿಜಯಪುರ: ನಗರದ ವಿದ್ಯಾವರ್ಧಕ ಸಂಘದ, ಬನ್ಸಿಲಾಲ್ ವಿಠ್ಠಲದಾಸ್ ದರಬಾರ ಪದವಿ ಮಹಾವಿದ್ಯಾಲಯದ ಸಭಾ ಭವನದಲ್ಲಿ ಇಂದು, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನಪೀಠ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕೋಶ ಇವರ ಸಹಯೋಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನದ ಪ್ರಯುಕ್ತ 'ಮನೆ ಮನೆಗೆ, ಮನ ಮನಕೆ ಡಾ.ಬಾಬಾಸಾಹೇಬರ ಅಭಿಯಾನ ' ಕಾರ್ಯಕ್ರಮ ನಡೆಯಿತು. ದರಬಾರ ಪದವಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಸುಭಾಸ ಪಾಟೀಲ ಇತರರು ಇದ್ದರು.

ಜಗತ್ತಿಗೆ ಬುದ್ಧ, ಬಸವ, ಅಂಬೇಡ್ಕರರು ಮಾದರಿ



ಜಿಲ್ಲಾಡಳಿತದಿಂದ ವಿಜೃಂಭಣೆಯ ಅಂಬೇಡ್ಕರ ಜಯಂತ್ಯುತ್ಸವ

ವಿಜಯಪುರ: ಬುದ್ಧ, ಬಸವ, ಅಂಬೇಡ್ಕರ್ ಅವರ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತವಾಗಿದ್ದು, ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಬುದ್ಧ, ಬಸವ ಸೇರಿದಂತೆ ಮಹಾನ್ ಪುರುಷರನ್ನು ಅವರವರ ಜಾತಿ, ಸಮುದಾಯಕ್ಕೆ ಸೀಮಿತಗೊಳಿಸುವುದು ಸರಿಯಲ್ಲ, ಆ ದಾರ್ಶನಿಕರೆಲ್ಲ ಜಾತಿ, ಮತ ಪಂಥಗಳಿಗೆ ಮೀರಿದ ಮಹಾ ಮೇಧಾವಿಗಳು. ಹಾಗಾಗಿ ಪ್ರತಿಯೊಬ್ಬರು ದಾರ್ಶನಿಕರನ್ನು ಆರಾಧಿಸುವುದರ ಜೊತೆಗೆ ಸಂವಿಧಾನದ ಆಶಯಗಳಂತೆ ನಡೆದುಕೊಳ್ಳಬೇಕು ಎಂದರು.

ಪ್ರತಿಯೊಬ್ಬ ಮಹಾಪುರು?ರು ಮೂಢನಂಬಿಕೆಯಂತಹ ಅನಿ?ª ಪದ್ಧತಿಗಳ ವಿರುದ್ಧ ತಮ್ಮ ಚಿಂತನೆಗಳನ್ನು ಅರುಹಿದವರು. ಘನತೆಯಿಂದ ಬದುಕುವ ಚಿಂತನೆಗಳನ್ನು ಜಗತ್ತಿಗೆ ಸಾರಿದ್ದಾರೆ. ಹಾಗಾಗಿ ಮಹಾನ್ ಪುರು?ರ ಚಿಂತನೆಗಳು ಎಲ್ಲ ಕಾಲಕ್ಕೂ ಪ್ರಸ್ತುತ ಎಂದರು. ಸಮಾನತೆ,ಸ್ವಾತಂತ್ರ್ಯ, ಅಭಿವ್ಯಕ್ತಿ, ಗೌರವಯುತ ಹಾಗೂ ಘನತೆ ಜೀವನ ನಡೆಸಲು ಸಂವಿಧಾನ ಅವಕಾಶ ಕಲ್ಪಿಸಿದೆ. ಹಾಗಾಗಿ ಸಂವಿಧಾನದ ಆಶಯದಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.

ಬಸವಣ್ಣನವರಿಗೆ ಜನ್ಮನೀಡಿದ ವಿಜಯಪುರ ಜಿಲ್ಲೆಯಿಂದ ಆರಂಭವಾದ ಸಾಮಾಜಿಕ ಕ್ರಾಂತಿ ಜಗತ್ತಿಗೆ ಸರ್ವ ಶ್ರೇಷ್ಠ ಪಾರ್ಲಿಮೆಂಟ್ ಪರಿಕಲ್ಪನೆ ನೀಡಿದ್ದು ಬಸವಾದಿ ಶರಣರನ್ನು ಯಾರೂ ಮರೆಯಬಾರದು ಎಂದರು. ಬಸವಾದಿ ಶರಣರು ಜಾತಿರಹಿತ ಸಮ ಸಮಾಜಕ್ಕೆ, ಮಹಿಳಾ ಸಮಾನತೆ, ಅಸ್ಪೃಶ್ಯತೆ ಕುರಿತು ಮಹಿಳೆಯರಿಗೆ ಅಂದು ಕ್ಲಿಷ್ಟಕರ ಸಂದರ್ಭದಲ್ಲಿ ಸಾಮಾಜಿಕ ಸುಧಾರಣೆಯನ್ನು ಬಸವಾದಿ ಶರಣು ತರಲು ಶ್ರಮಿಸಿದ್ದನ್ನು ಸಚಿವರು ಮೆಲಕು ಹಾಕಿದರು.

ಬಸವಾದಿ ಶರಣರು ಜಾತಿ ರಹಿತವಾದ ಕಾಯಕ ತತ್ವವನ್ನು ಸಾರಿದವರು. ಬಸವಾದಿ ಶರಣರ ಚಿಂತನೆಗಳಾದ ಕಾಯಕ ಮತ್ತು ದಾಸೋಹದ ಪರಿಕಲ್ಪನೆಯ ತಳಹದಿ ಸಂವಿಧಾನದಲ್ಲಿ ಅಡಕವಾಗಿದೆ ಎಂದ ಅವರು, ಶೋಷಿತ, ಬಡವ, ಶ್ರಮಿಕ, ಮಹಿಳೆಯರೂ ಸೇರಿದಂತೆ ಎಲ್ಲರಿಗೂ ಸಮಾನತೆಯ ಹಕ್ಕನ್ನು ನಮ್ಮ ಸಂವಿಧಾನ ಒದಗಿಸಿದೆ. ಬಸವಾದಿ ಶರಣರ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆಯಬೇಕು ಎಂದರು.

ಡಾ.ಎಚ್.ಎಸ್ ಅನುಪಮಾ ಅವರು ಉಪನ್ಯಾಸ ನೀಡಿ, ವರ್ತಮಾನ ಅಸಮಾನತೆ, ಬಡತನ ನಮ್ಮ ಕಣ್ಮುಂದೆ ಇದೆ. ಅನ್ನ, ನೀರು, ಗಾಳಿ ಪ್ರತಿಯೊಂದರಲ್ಲೂ ವಿಷವೇ ತುಂಬಿದೆ. ನಾವು ಯುದ್ಧ ಬೇಡ. ಬುದ್ಧ ಬೇಕು ಎಂದು ಸ್ಪಷ್ಟವಾಗಿ ಹೇಳುವ ಕಾಲ ಬಂದಿದೆ.ಎಲ್ಲೆಡೆ ಕತ್ತಲು ತುಂಬಿದ ಸಂದರ್ಭದಲ್ಲಿ ಪೂರ್ವಜರ ಜಾಡು ಕಂಡುಕೊಂಡಾಗ ಬುದ್ಧ, ಜ್ಞಾನ ಜ್ಯೋತಿ ಬಸವಣ್ಣ, ಅಹಿಂಸಾತ್ಮಕ ಹೋರಾಟ ಅಂಬೇಡ್ಕರ್ ಅವರ ತತ್ವಗಳು ಇಂದು ಅತ್ಯಂತ ಪ್ರಸ್ತುತವಾಗುತ್ತಿವೆ ಎಂದರು.

ಡಾ.ಜಗದೇವಿ ಗಾಯಕವಾಡ, ಡಾ.ವಿಠ್ಠಲ ವಗ್ಯಾನವರ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಗಂಗಾಧರ ಸಂಬಣ್ಣಿ, ಮಾಜಿ ಶಾಸಕರಾದ ರಾಜು ಆಲಗೂರ, ಪರಿಶಿಷ್ಟ ಜಾತಿ ಆಯೋಗದ ಸದಸ್ಯರಾದ ಸುನೀಲ ಉಕ್ಕಲಿ, ಜಿಲ್ಲಾಧಿಕಾರಿ ಡಾ. ಆನಂದ.ಕೆ, ಜಿಪಂನ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಇದ್ದರು.

ದೇಶದ ಮಹಾನ್ ಚೇತನ ಡಾ. ಅಂಬೇಡ್ಕರ್

ಕೊಲ್ಹಾರ: ನವ ಭಾರತದ ನಿರ್ಮಾಣಕ್ಕೆ ಸುಭದ್ರ ಅಡಿಪಾಯ ಹಾಕಿದಶ್ರೇಷ್ಠ ದಾರ್ಶನಿಕ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚನೆ ಮಾಡಿ ಪ್ರಜಾಪ್ರಭುತ್ವದ ಮಹತ್ವ ಸಾರುವುದರ ಮೂಲಕ ಸಮಾನತೆಯ ಸಂದೇಶವನ್ನು ಸಾರಿದ ನಮ್ಮ ದೇಶದ ಮಹಾನ್ ಚೇತನ ಎಂದು ತಹಶೀಲ್ದಾರ್ ಎಸ್. ಎಸ್. ಮ್ಯಾಗೇರಿ ಹೇಳಿದರು.

ತಾಲೂಕಾ ಆಡಳಿತ, ತಾಲೂಕ ಪಂಚಾಯತ, ಪಟ್ಟಣ ಪಂಚಾಯತ ಮತ್ತು ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಪಟ್ಟಣದ 12ನೇ ವಾರ್ಡಿನಲ್ಲಿರುವ ಸಮುಧಾಯ ಭವನದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ 135ನೇ ಹಾಗೂ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾಮ ಅವರ 119ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ತಾಲೂಕಾ ಅಧ್ಯಕ್ಷ ಸಂತೋಷ ಗಣಾಚಾರಿ ಮಾತನಾಡಿ, ಶಿಕ್ಷಣ ಪಡೆಯುವದೆಂದರೆ ಹುಲಿಯ ಹಾಲನ್ನು ಕುಡಿದಂತೆ ಅದನ್ನು ಪಡೆದುಕೊಂಡವರು ಸಮಾಜದಲ್ಲಿ ಘರ್ಜಿಸಲೇಬೇಕು ಆದ್ದರಿಂದ ಪ್ರತಿಯೊಬ್ಬರು ಶಿಕ್ಷಣ ಕಲಿಯಲೇಬೇಕು ಎಂಬ ಸಿದ್ಧಾಂತವನ್ನು ಕಲಿಸಿಕೊಟ್ಟ ಅಂಬೇಡ್ಕರವರು ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿದ್ದರು. ದೀನದಲಿತರ ಹಕ್ಕುಗಳ ಧ್ವನಿಯಾಗಿ ಅಸ್ಪಶ್ರತೆ ನಿವಾರಣೆಗಾಗಿ ಮಹಿಳಾ ಹಕ್ಕುಗಳಿಗಾಗಿ ಕಾರ್ಮಿಕರಸುಧಾರಣೆಯ ಸಲುವಾಗಿ ಅವಿರತವಾಗಿ ಶ್ರಮಿಸಿದವರು ಎಂದರು.

ಶಿಕ್ಷಕರಾದ ಜಗದೀಶ ಕಾಂಬಳೆ ಮತ್ತು ಸಂಗಮೇಶ ಧಶವಂತ ಉಪನ್ಯಾಸ ನೀಡಿದರು.ಕಬಡ್ಡಿ ಪಟು ಪ್ರಜ್ವಲ ಚಂದ್ರಶೇಖರ ಈಟಿ ಅವರನ್ನು ಗೌರವಿಸಲಾಯಿತು. ಪಟ್ಟಣದಲ್ಲಿ ಅಂಬೇಡ್ಕರ ಹಾಗೂ ಬಾಬು ಜಗಜೀವನರಾಮ ಅವರ ಭಾವಚಿತ್ರದ ಮೆರವಣಿಗೆಯು ಬಹು ವಿಜೃಂಭಣೆಯಿಂದ ಜರುಗಿತು.

ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು, ಪಟ್ಟಣ ಪಂಚಾಯತ ಅಧ್ಯಕ್ಷ ಚನಮಲ್ಲಪ್ಪ ಗಿಡ್ಡಪ್ಪಗೋಳ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸುನೀಲ ಮದ್ದಿನ, ಮುಖ್ಯಾಧಿಕಾರಿ ವಿರೇಶ ಹಟ್ಟಿ, ಪಿ ಎಸ್ ಐ ಅಶೋಕ ನಾಯಕ, ಪಟ್ಟಣ ಪಂಚಾಯತ ಉಪಾಧ್ಯಕ್ಷೆ ರಾಜಮಾ ನದಾಫ್, ಮನು ಪತ್ತಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಪ್ರೇಮ ಪ್ರವಾಹಿನಿ ರಥ ಮೆರವಣಿಗೆ

ಬಸವನಬಾಗೇವಾಡಿ: ಶ್ರೀಸತ್ಯ ಸಾಯಿ ಬಾಬಾ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಪ್ರಶಾಂತಿ ನಿಲಯದಿಂದ ಆಗಮಿಸಿದ ಪ್ರೇಮ ಪ್ರವಾಹಿನಿ ರಥವು ಶನಿವಾರ ಬೆಳಗ್ಗೆ ತಾಲೂಕಿನ ಮನಗೂಳಿ ಪಟ್ಟಣಕ್ಕೆ ಆಗಮಿಸಿತು.

ಪಟ್ಟಣದ ಗಜಾನನ ದೇವಸ್ಥಾನದ ಸಮೀಪ ರಥಕ್ಕೆ ಪಟ್ಟಿಕಂಥಿ ಹಿರೇಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು ಹಾಗೂ ಸಂಸ್ಥಾನ ಹಿರೇಮಠದ ಅಭಿನವ ಸಂಗನಬಸವ ಮಹಾಸ್ವಾಮೀಜಿ ಪ್ರಶಾಂತಿ ಧ್ವಜ ಬೀಸಿ ಮೆರವಣಿಗೆಗೆ ಚಾಲನೆ ನೀಡಿದರು.

ಈ ವೇಳೆ ಜೆಡಿಎಸ್ ರಾಜ್ಯಾ ಉಪಾಧ್ಯಕ್ಷ ಸೋಮನಗೌಡ(ಅಪ್ಪುಗೌಡ) ಪಾಟೀಲ, ಡಿಸಿಸಿ ಬ್ಯಾಂಕ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ, ವಿನಾಯಕ ವಿವಿಧೋದ್ದೇಶ ಸಂಘದ ಅಧ್ಯಕ್ಷ ವಿಶ್ವನಾಥಗೌಡ ಪಾಟೀಲ ಅವರು ಸಾಯಿ ಬಾಬಾರವರ ಭಾವಚಿತ್ರಕ್ಕೆ ಮಂಗಳಾರತಿ ನೆರವೇರಿಸಿ ರಥಯಾತ್ರೆಗೆ ಚಾಲನೆ ನೀಡಿದರು.

ಪ್ರೇಮ ಪ್ರವಾಹಿನಿ ರಥವು ಮನಗೂಳಿಯ ಪ್ರಮುಖ ಬೀದಿಗಳಲ್ಲಿ ಭಕ್ತಿಭಾವದ ವಾತಾವರಣದಲ್ಲಿ ಸಂಚರಿಸಿ, ಬಸವೇಶ್ವರ ದೇವಸ್ಥಾನ ತಲುಪಿದ ನಂತರ ರಥಯಾತ್ರೆಯು ಸಂಪನ್ನಗೊಂಡಿತು.

ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಕರಡಿ ಮಜಲು, ಪಟ್ಟಣದ ಯುವ ರೈತ ಮಿತ್ರರಿಂದ ಕೋಲಾಟ, ವಿಠ್ಠಲ ಭಜನಾ ಮಂಡಳಿ ಮತ್ತು ಶ್ರೀಹರಿ ಭಜನಾ ಮಂಡಳಿಯವರಿಂದ ವಾರ್ಕರಿ ಭಜನೆ, ಅರ್ಚಕರಿಂದ ವೇದಘೋಷ ಹಾಗೂ ಸಾಯಿ ಭಕ್ತರಿಂದ ಪ್ರಶಾಂತಿ ಭಜನೆಗಳು ವಿಶೇಷ ಆಕರ್ಷಣೆಯಾದವು. ಸು.350ಕ್ಕೂ ಹೆಚ್ಚು ಮಹಿಳೆಯರು ಪೂರ್ಣಕುಂಭ ಮತ್ತು ಆರತಿಯೊಂದಿಗೆ ಭಾಗವಹಿಸಿ ಮೆರವಣಿಗೆಯ ವೈಭವ ಹೆಚ್ಚಿಸಿದರು.ನಂತರ ಶ್ರೀಬಸವೇಶ್ವರ ದೇವಸ್ಥಾನದಲ್ಲಿಮುದುಕಪ್ಪಶಿರೋಳಅವರಿಂದ ಮಹಾಪ್ರಸಾದ ವಿತರಣೆಯಾಯಿತು.

ಈ ಸಂದರ್ಭದಲ್ಲಿ ಸತ್ಯ ಸಾಯಿ ಸೇವಾ ಸಂಘಟನೆಯ ಜಿಲ್ಲಾಧ್ಯಕ್ಷರಾದ ಕಿರಣ ಶೇಖದಾರ, ಉಪಾಧ್ಯಕ್ಷರಾದ ಶಶಿಧರ ಹಾರಿವಾಳ, ಸತ್ಯ ಸಾಯಿ ಸೇವಾ ಸಮಿತಿಯ ಸಂಚಾಲಕರಾದ ಸಂಗಮೇಶ ತಪಶೆಟ್ಟಿ, ಪದಾಧಿಕಾರಿಗಳಾದ ಸಿದ್ದಯ್ಯ ಮಠ, ಪ್ರಶಾಂತ ಭೋಸಲೆ, ಪ್ರಶಾಂತ ತೇಲಿ ಸತ್ಯ ಸಾಯಿ ಸೇವಾ ಸಮಿತಿಯ ಹಿರಿಯ ಮಹಿಳಾ ಸಾಯಿಭಕ್ತರಾದ ವಿಜಯಲಕ್ಷ್ಮಿ ಪಾಟೀಲ, ನಾಗುಬಾಯಿ ಹಾರಿವಾಳ, ಜಯಶ್ರೀ ತಪಶೆಟ್ಟಿ , ಶ್ರೇಯಾ ಹಾರಿವಾಳ, ಕು.ಪ್ರೀತಿ ಹಾರಿವಾಳ, ಸೇರಿದಂತೆ ಶ್ರೀಸತ್ಯ ಸಾಯಿ ಸೇವಾ ಸಮಿತಿ ಭಕ್ತ ಮಂಡಳಿಯವರು ಇದ್ದರು.



ದೇಶಕ್ಕೆ ಡಾ.ಅಂಬೇಡ್ಕರ್ ಕೊಡುಗೆ ಅಪಾರ



ಮುದ್ದೇಬಿಹಾಳ: ಡಾ. ಅಂಬೇಡ್ಕರ್ ತಮ್ಮ ಪರಿಶ್ರಮ ದಿಂದ ಸಂವಿಧಾನವನ್ನು ಜಗತ್ತಿನ ಸರ್ವಶ್ರೇಷ್ಠ ಕರಡು ಆಗಿ ರೂಪಿಸಿದ್ದಾರೆ. ಸೂರ್ಯ-ಚಂದ್ರ ಇರುವವರೆಗೂ ಅದರ ಮೂಲ ಆಶಯವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಸಾಹಿತಿ ಶಿವಪುತ್ರ ಅಜಮನಿ ಹೇಳಿದರು.

ಸರಕಾರಿ ಪದವಿ ಕಾಲೇಜಿನಲ್ಲಿ ಆಯೋಜಿಸಲಾದ ಮನೆ ಮನೆಗೆ, ಮನ ಮನಕೆ ಡಾ.ಅಂಬೇಡ್ಕರ್ ಹಬ್ಬದ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು. ಓದು, ಅಧ್ಯಯನವನ್ನು ತಮ್ಮ ಜೀವನದ ದಾರಿ ಮಾಡಿಕೊಂಡಿದ್ದ ಡಾ.ಅಂಬೇಡ್ಕರರು 32 ಪದವಿಗಳನ್ನು ಪಡೆದು ಸಂಸಾರ, ವೈಯಕ್ತಿಕ ಸುಖಿಕ್ಕಿಂತ ತುಳಿತಕ್ಕೆ ಒಳಗಾದವರ ಸೇವೆ ಹೆಚ್ಚು ಎಂದುಕೊಂಡಿದ್ದರು. ಹಿಂದುಳಿದ, ದಲಿತ, ಮಹಿಳೆ ಹಾಗೂ ಶೋಷಿತರ ಏಳಿಗೆಗಾಗಿ ಪರಿಶ್ರಮ ಪಟ್ಟರು. ನಾಡಿನ ಬಹುಜನ ಸಮಾಜ ಒಪ್ಪಿತವಾದ ಸಂವಿಧಾನ ಇದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎಚ್.ಎ. ಕಟಗೂರ ಮಾತನಾಡಿ. ಎಲ್ಲಾ ಸಮುದಾಯ, ವರ್ಗಗಳ ಸಮಾಜದ ಅಭಿವೃದ್ಧಿಗೆ ಬೇಕು. ಕೆಲವರು ಅಭಿವೃದ್ಧಿಯನ್ನು ತಡೆಯುವ ಉದ್ದೇಶ ಹೊಂದಿರುತ್ತಾರೆ ಅವರ ಆಶಯ ಈಡೇರಲು ಸಾಧ್ಯವಿಲ್ಲ, ಭಾರತ ಕಲ್ಯಾಣ ರಾಷ್ಟ್ರವಾಗಿ ನಿರ್ಮಾಣ ಆಗಲು ಅಂಬೇಡ್ಕರ್ ವಿಚಾರಗಳು, ಬರಹಗಳು ನಿರ್ಣಾಯಕ ಎಂದು ಹೇಳಿದರು.

ಸಮಾರಂಬದಲ್ಲಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಮಾಡಲಾಯಿತು. ಉಪನ್ಯಾಸಕರಾದ ಮುತ್ತಣ್ಣ ಗೌಡರ್, ಎನ್ಎಸ್ಎಸ್ ಅಧಿಕಾರಿ ಪರಶುರಾಮ್ ದೇವಿ, ಧನಶ್ರೀ, ಜ್ಯೋತಿ, ರಾಜೇಶ್ವರಿ, ಅನಿತಾ, ಶಾಂತ ಬಂದಾಳ, ಹಂಪಣ್ಣ, ಗಿರೀಶ್ ವಾಗಣಗೇರಿ, ಡಾ ವಾಯ್ ಎಸ್ ಗುಂಡಕರ್ಜಿಗಿ ಸೇರಿದಂತೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಮಾಜ ಕಂಡ ಮಹಾನ್ ವ್ಯಕ್ತಿ ಡಾ.ಅಂಬೇಡ್ಕರ್

ಸಿಂದಗಿ: ಡಾ.ಅಂಬೇಡ್ಕರ್ ಅವರು ಸಮಾಜದ ವಂಚಿತ ಮತ್ತು ದುರ್ಬಲ ವರ್ಗಗಳ ಒಳಿತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರು. ಅವರು ಹಾಕಿಕೊಟ್ಟ ಸಂವಿಧಾನದಿಂದ ನಾವು ಮಾನವರಾಗಿ ಬಾಳುತ್ತಿದ್ದೇವೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಇವರುಗಳ ಸಹಯೋಗದಲ್ಲಿ ಹಮ್ಮಿಕೊಂಡ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೆಯ ಜಯಂತ್ಯುತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರು ಅಸಮಾನತೆಯನ್ನು ತೊಡೆದು ಹಾಕುವ ಮಾರ್ಗವನ್ನು ತೋರಿಸಿದ್ದಲ್ಲದೆ ಭಾರತದ ಪ್ರಜಾಪ್ರಭುತ್ವ ಮೌಲ್ಯಗಳು ಹಾಗೂ ಸಂವಿಧಾನಿಕ ಹಕ್ಕುಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಅವರ ವಿಚಾರಗಳನ್ನು ಪೂಜಿಸಿ, ಅನುಸರಿಸಿ ಅವರ ತತ್ವಾದಾರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಈ ವೇಳೆ ಮಹಾಗಂವ ಸರಕಾರಿ ಪ್ರಥಮದರ್ಜೆಕಾಲೇಜಿನಪ್ರಾಧ್ಯಾಪಕ ಹಾಗೂ ಸಂಶೋಧನಾ ಮಾರ್ಗದರ್ಶಕ ಡಾ.ಕರಿಗೋಳೇಶ್ವರ ಪರತಾಬಾದ ಉಪನ್ಯಾಸ ನೀಡಿದರು. ಈ ವೇಳೆ ಕಾರ್ಯಕ್ರಮವನ್ನು ಉದ್ದೇಶಿಸಿ ರಾಜಶೇಖರ ಕೂಚಬಾಳ, ಸಾಯಬಣ್ಣ ಪುರದಾಳ ಮಾತನಾಡಿದರು. ತಹಶೀಲ್ದಾರ್ ಕರೆಪ್ಪ ಬೆಳ್ಳಿ ಸಂವಿಧಾನ ಪೀಠಿಕೆ ಬೋಧಿಸಿದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಭವಾನಿ ಪಾಟೀಲ ಸ್ವಾಗತಿಸಿದರು. ರಾಗರಂಜಿನಿ ಡಾ.ಪ್ರಕಾಶ ಮೂಡಗಲಿ ಪ್ರಾರ್ಥಿಸಿದರು. ಶಿಕ್ಷಕ ಎಂ.ಆರ್. ಡೋಣಿ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ತಾಪಂ ಇಒ ರಾಮು ಅಗ್ನಿ, ಉಪನೋಂದಣಿ ಅಧಿಕಾರಿ ಕಿರಣ ಹಂಪಿಹೊಳಿ, ಪೌರಾಯುಕ್ತ ಎಸ್.ರಾಜಶೇಖರ, ಪಶುವೈದ್ಯಾಧಿಕಾರಿ ಡಾ.ಶಿವಶರಣಪ್ಪ ಯಲಗೋಡ, ಎಡಿಎಲ್ಆರ್ ಶಾಂತಕುಮಾರ ಅಗಸಬಾಳ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಪುರಸಭೆ ಮಾಜಿ ಅಧ್ಯಕ್ಷ ಶಾಂತವೀರ ಬಿರಾದಾರ, ನೌಕರರ ಸಂಘದ ಅಧ್ಯಕ್ಷ ಅಶೋಕ ತೆಲ್ಲೂರ, ಸಿಡಿಪಿಒ ಅನಿಲ ಹಳ್ಳಿ, ರವಿರಾಜ ದೇವರಮನಿ, ಸುನಂದಾ ಯಂಪುರೆ, ಸೇರಿದಂತೆ ಅಂಬೇಡ್ಕರ್ ಅವರ ಅನುಯಾಯಿಗಳು ಮತ್ತು ಅಭಿಮಾನಿಗಳು ಇದ್ದರು.



ಭಾರತ ಕಂಡ ಶ್ರೇಷ್ಠ ವ್ಯಕ್ತಿ ಡಾ. ಬಿ.ಆರ್.ಅಂಬೇಡ್ಕರ್: ಗುರುಸ್ವಾಮಿ



ಇಂಡಿ: ಭಾರತ ಕಂಡ ಶ್ರೇಷ್ಟ ವ್ಯಕ್ತಿಯಾದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್‌ರನ್ನು ದೇಶ ವಿದೇಶಗಳಲಿ ಕೂಡಾ ಶ್ರೇಷ್ಟ ವ್ಯಕ್ತಿ ಎಂದು ಒಪ್ಪಿಕೊಳ್ಳುತ್ತಿದ್ದಾರೆ ಎಂದು ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಹೇಳಿದರು.

ಅವರು ನಗರದ ಮಿನಿ ವಿಧಾನಸೌಧದ ಆವರಣದಲ್ಲಿ ತಾಲೂಕು ಆಡಳಿತ ಮತ್ತು ತಾಪಂ, ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರದಲ್ಲಿ ಹಮ್ಮಿಕೊಂಡ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನ್ಯಾಯವಾದಿ ಪ್ರತಿಭಾ ಹೊಸಮನಿ ಉಪನ್ಯಾಸ ನೀಡಿ ತಹಶೀಲ್ದಾರ್ ಬಿ.ಎಸ್.ಕಡಕಬಾವಿ ಸಂವಿಧಾನ ಪೀಠಿಕೆಯನ್ನು ವಾಚನಮಾಡಿ ಮಾತನಾಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಇಲಿಯಾಸ ಬೋರಾಮಣಿ, ತಾಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಶಾಂತ ಕಾಳೆ, ಭೀಮಾಶಂಕರ ಸಹಕಾರಿ ಸಕ್ಕರೆ ಕಾರಖಾನೆ ನಿರ್ದೇಶಕ ಜಟ್ಟೆಪ್ಪ ರವಳಿ, ಸುರೇಶ ನಡಗಡ್ಡಿ ಮಾತನಾಡಿದರು.

ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ ಅವರು ಡಾ.ಬಿ.ಆರ್.ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ವಿದ್ಯುಕ್ತವಾಗಿ ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಮಾಜ ಕಲ್ಯಾಣಾಧಿಕಾರಿ ಉಮೇಶ ಲಮಾಣಿ ಸ್ವಾಗತಿಸಿದರು.

ಕಾರ್ಯಕ್ರಮಕ್ಕೂ ಮುಂಚೆ ನಗರದ ಪ್ರವಾಸಿ ಮಂದಿರದಿಂದ ಡಾ.ಬಿ.ಆರ್.ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ ಗೊಂಬೆ ಕುಣಿತ, ವಿವಿಧ ಕಲಾತಂಡಗಳಿಂದ ಭವ್ಯವಾಗಿ ಮೇರವಣಿಗೆ ಹೊರಟು ಪ್ರಮುಖ ವೃತ್ತಗಳ ಮೂಲಕ ಹಾದು ಕಾರ್ಯಕ್ರಮ ಸ್ಥಳವಾದ ಮಿನಿ ವಿಧಾನಸೌಧಕ್ಕೆ ತಲುಪಿ ನಂತರ ಸಮಾರಂಭ ಜರುಗಿತು.

ವೇದಿಕೆ ಮೇಲೆ ಡಿವೈಎಸ್‌ಪಿ ಸದಾಶಿವ ಕಟ್ಟಿಮನಿ, ತಾಪಂ ಇಒ ಭಿಮಾಶಂಕರ ಕನ್ನೂರ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಸ್.ಮುಜಾವರ, ನಗರಸಭೆ ಪೌರಾಯುಕ್ತ ಶಿವಾನಂದ ಪೂಜಾರಿ, ನಗರ ಠಾಣೆ ಸಿಪಿಐ ಬೀಸೆ, ಗ್ರಾಮೀಣ ಸಿಪಿಐ ಸನೀಲ ಪಾಟೀಲ, ಸದಾಶಿವ ಪ್ಯಾಟಿ, ಧರ್ಮರಾಜ ವಾಲಿಕಾರ, ರಮೇಶ ನಿಂಬಾಳಕರ, ಸಂಜು ನಾಯ್ಕೋಡಿ, ಸಂಜು ಚವ್ಹಾಣ, ಬಾಬು ಗುಡಮಿ, ಧರ್ಮರಾಜ ಸಾಲೋಟಗಿ, ಪರಸು ಕಟ್ಟಿಮನಿ, ಯಲ್ಲಪ್ಪ ಬಂಡೆನವರ ಇತರರು ಇದ್ದರು.

ಮೇರವಣಿಗೆಯಲ್ಲಿ ಪಿಡಬ್ಲುಡಿ ಅಧಿಕಾರಿ ದಯಾನಂದ ಮಠ, ತೋಟಗಾರಿಕೆ ಅಧಿಕಾರಿ ಎಚ್.ಎಸ್.ಪಾಟೀಲ, ಕೃಷಿ ಅಧಿಕಾರಿ ಮಹಾದೇವಪ್ಪ ಏವೂರ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್ .ನಡುಗಡ್ಡಿ, ಅರಣ್ಯಾಧಿಕಾರಿಗಳಾದ ಮಂಜುನಾಥ ಧೂಳೆ, ಸಂಗಾಲಕ, ಸರ್ವೆ ಅಧಿಕಾರಿ ಕಾಂಬಳೆ, ಸಿಡಿಪಿಒ ಗೀತಾ ಗುತ್ತರಗಿಮಠ ಸೇರಿದಂತೆ ವಿವಿಧ ಸಂಘಟನೆಯ ಪದಾಧಿಕಾರಿಗಳು ಹಾಗೂ ತಾಲೂಕಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಡಾ. ಅಂಬೇಡ್ಕರರ ಸಂವಿಧಾನ ದೇಶಕ್ಕೆ ಅಮೂಲ್ಯ ಕೊಡುಗೆ



ಆಲಮೇಲ: ಪಟ್ಟಣದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಊರಿನ ಪ್ರಮುಖ ಬೀದಿಗಳ ಮುಖಾಂತರ ಮೆರವಣಿಗೆ ಮಾಡಲಾಯಿತು.

ಬಳಗಾನೂರ ಜಿಪಂಸದಸ್ಯರಾದ ಬಿ.ಆರ್. ಯಂಟಮಾನ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತ ದೇಶಕ್ಕೆ ಒಂದು ಅಮೂಲ್ಯವಾದ ಕೊಡುಗೆ ನೀಡಿದ್ದು ನಮ್ಮ ಸಂವಿಧಾನ. ಸಂವಿಧಾನವನ್ನು ಬರೆಯದೆ ಹೋದರೆ, ಕೆಳಜಾತಿಯವರು ಇಂದಿನ ಕಾಲದಲ್ಲಿ ನಾವುಗಳು ವೇದಿಕೆ ಹತ್ತುವುದು ಅಸಾಧ್ಯವಾದ ಮಾತು. ನಾವೆಲ್ಲಾ ಅಸ್ಪೃಶ್ಯರು ಅತಿ ಹೆಚ್ಚು ಶಿಕ್ಷಣವಂತರು ಆಗಬೇಕು ಅಂದರೆ ಮಾತ್ರ ಅಂಬೇಡ್ಕರರು ಸಂವಿಧಾನ ಬರೆದಿದ್ದಕ್ಕೆ ಒಂದು ಅರ್ಥ ವೆಂದು ತಿಳಿಸಿದರು.

ಕಾರ್ಯಕ್ರಮದ ಉಪನ್ಯಾಸಕ ನೀಡಿದ ಮಾಡ್ಯಾಳ ಅಂಬೇಡ್ಕರ್ ಅವರಿಗೆ ಶಾಲೆಯಲ್ಲಿ ನೀರು ಕುಡಿಯಲು ಹೋದರೆ ಅವಮಾನ ಮಾಡಿದ್ದು, ಶಾಲೆಗಳಲ್ಲಿ ಸಮಾಜದಲ್ಲಿ ಜಾತಿ ನಿಂದನೆ ಮಾಡಿದ ಅನೇಕ ಅವಮಾನಗಳನ್ನು ಎದುರಿಸಿ. ಬಂರೋಡಕ್ಕೆ ಬಂದು ರೈಲ್ವೆ ನಿಲ್ದಾಣದಲ್ಲಿ ನಿಂತು ಪಾರಶಿಯ ಹೋಟೆಲಗಳಿಗೆ ಹೋಗಿ ಅವಮಾನವಾಗಿದ್ದು ನಾವು ಇತಿಹಾಸ ಪುಟದಲ್ಲಿ ಕಂಡಿದ್ದೇವೆ. ಬಂರೋಡ ದಿಂದ ಮುಂಬೈಗೆ ಮುಂಬೈನಿಂದ ಇಂಗ್ಲೆಂಡಗೇ ಇಂಗ್ಲೆಂಡನಲ್ಲಿ ವಿದ್ಯಾಭ್ಯಾಸ ಮುಗಿಸಿ ಭಾರತ ದೇಶಕ್ಕೆ ಬಂದು ಜಲ ಸಂಪನ್ಮೂಲ ಸಚಿವರಾದರು . ಅಂಬೇಡ್ಕರ್ ಅವರು 'ಹಿಂದೂ ಕೋಡ್ ಬಿಲ್ 'ಸಂಸತ್ತಿನಲ್ಲಿ ಜಾರಿಗೆ ತರದೆ ಇದ್ದ ಕಾರಣ 1951 ರಲ್ಲಿ ರಾಜೀನಾಮೆ ನೀಡಿದ್ದಾರೆ. ನಾವು ನೀವುಗಳಾದರೆ? ನಾವೆಲ್ಲಾ ಕೆಳ ಜಾತಿಯವರು ನಮ್ಮ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಡುವುದರ ಜೊತೆಗೆ ಸಂಸ್ಕಾರವನ್ನು ನೀಡಿ ಬೆಳೆಸಬೇಕು ಎಂದು ಹೇಳಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಸಾಧಿಕ್ ಸುಂಬಡ್ ಕೂಡ ಮಾತನಾಡಿದರು.

ಆಲಮೇಲ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಅಶೋಕ್ ಕೊಳರಿ, ಆಲಮೇಲ ತಾಲೂಕ ದಂಡಾಧಿಕಾರಿ ಅರಕೇರಿ ಸ್ವಾಗತಿಸಿದರು. ಎಪಿಎಂಸಿ ಅಧ್ಯಕ್ಷರಾದ ಬಸವರಾಜ ಬಾಗೇವಾಡಿ, ಮಾಜಿ ತಾಪಂ ಸದಸ್ಯರಾದ ಗುಂಡು ಮೇಲಿನಮನಿ, ಪಪಂ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ನಾಯಕ್, ಆಲಮೇಲ ಪಿಎಸ್ಐ ಅರವಿಂದ್ ಅಂಗಡಿ, ಪ್ರದೀಪ್ ಗೌರ, ಹರೀಶ್ ಯಂಟಮನ, ಶಿವಕುಮಾರ ಮೇಲಿನಮನಿ ಡಿಎಸ್ಎಸ್ ಸಂಚಾಲಕರು ವಿಜಯಪುರ. ಅನೇಕ ರಾಜಕೀಯ ಮುಖಂಡರು ಯುವಕರು ಮಹಿಳೆಯರು. ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮದ ನಿರೂಪಣೆ ಅಪ್ಪು ಶೆಟ್ಟಿ ಹೊಸಮನಿ ಶಿಕ್ಷಕರು ಅಚ್ಚುಕಟ್ಟಾಗಿ ನೆರವೇರಿಸಿದರು.

ಕಿರುಸುದ್ದಿ

ಅಂಬೇಡ್ಕರ್ ಬದುಕು ಮಾದರಿ: ಬಸವರಾಜ್

ಶ್ರೀರಾಮನಗರ: ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತಕ್ಕೆ ನೀಡಿದ ಸಂವಿಧಾನ ಒಂದು ಮಹಾನ್ ಗ್ರಂಥವಾಗಿದೆ. ಸಂವಿಧಾನದಲ್ಲಿನ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತುಕೊಂಡು ಎಲ್ಲರೂ ಸಂವಿಧಾನಕ್ಕೆ ಬದ್ಧರಾಗಿ ನಡೆಯಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೊಪ್ಪಳ ಜಿಲ್ಲಾ ಸಂಘಟನಾ ಸಂಚಾಲಕರಾದ ಬಸವರಾಜ್ ನಾಗೋಲಿ ಹೇಳಿದರು.

ಮಂಗಳವಾರದಂದು ಗ್ರಾಮದ ಅಂಬೇಡ್ಕರ್ ವೃತ್ತದ ಬಳಿ ಸಂವಿಧಾನ ಶಿಲ್ಪಿ, ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಪ್ರಯುಕ್ತ ನಾಮ ಫಲಕಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಮಾತನಾಡಿದರು. ಗ್ರಾಮಸ್ಥರಾದ ಕೆ.ವಿ.ಬಾಸ್ಕರ್ ರೆಡ್ಡಿ, ಕರುಣಾ ಸಿಮೆಂಟ್ ಬ್ರಿಕ್ಸ್ ನೀಲಂ ಶ್ರೀನಿವಾಸ್, ಟಿ.ವೆಂಕಟೇಶ, ಲಕ್ಷ್ಮೀಕಾಂತ ಹೂಗಾರ, ವೆಂಕಟೇಶುಲು. ಕೆ, ಲಕ್ಷ್ಮಣ ರೆಡ್ಡಿ ಫೋಟೋಗ್ರಾಫರ್, ಹರಿಬಾಬು ಉಪ್ಪಾರ, ನಾಗರಾಜ್ ನಾಯಕ, ಆರಗಿದ್ದ ಶಿವಪ್ಪ, ದುರ್ಗೇಶ ಮೇಸ್ತ್ರಿ, ವೆಲ್ಡಿಂಗ್ ಶಾಪ್ ಖಾನ್, ಮುನ್ನ, ಆಟೋ ರಮೇಶ್, ಹರಿಚಂದ್ರ ಪ್ರಸಾದ್, ಗಣೇಶ ಬಿ.ಇತರರಿದ್ದರು.

ಅಂಬೇಡ್ಕರ್ ಜಯಂತಿ ಆಚರಣೆ



ಹನುಮಸಾಗರ: ಪಟ್ಟಣದಲ್ಲಿನ ಜ್ಞಾನೋದಯ ಶಿಕ್ಷಣ ಸಂಸ್ಥೆಯಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಮಂಗಳವಾರ ವಿಜೃಂಭಣೆಯಿಂದ ಆಚರಿಸಲಾಯಿತು. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ವಿಷ್ಣು ರಜಪೂತ್ ಮಾತನಾಡಿ, ಡಾ.ಅಂಬೇಡ್ಕರ್ ಅವರು ವಿಶ್ವಕಂಡ ಧೀಮಂತ ವ್ಯಕ್ತಿಗಳಲ್ಲಿ ಅಗ್ರಗಣ್ಯರಾಗಿದ್ದಾರೆ, ಇವರ ವಿಚಾರಧಾರೆಗಳ ಜ್ಞಾನ ಭಂಡಾರಕ್ಕೆ ವಿಶ್ವದಾದ್ಯಂತ ಅನುಯಾಯಿಗಳನ್ನು ಹೊಂದಿದ್ದಾರೆ. ಇವರು ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಾನತೆಯನ್ನು ಗಮನದಲ್ಲಿ ಇಟ್ಟುಕೊಂಡು ಪ್ರತಿಯೊಬ್ಬರಿಗೂ ಸ್ವತಂತ್ರ್ಯ ಜೀವನ ರೂಪಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. 'ಶಿಕ್ಷಣವೇ ನಿಮ್ಮ ಶಕ್ತಿ' ಹಾಗೂ 'ಸಮಾನತೆ ಇಲ್ಲದೆ ಸ್ವಾತಂತ್ರ್ಯ ಅಪೂರ್ಣ' ಎಂಬ ಅವರ ಸಂದೇಶಗಳನ್ನು ನೀಡಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು ಹಾಗೇ ಅವರ ಸಂದೇಶ ಗಳನ್ನು ವಿದ್ಯಾರ್ಥಿಗಳು ಮತ್ತು ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಮಾಂತೇಶ್ ಸರ್, ಮಲ್ಲಿಕಾರ್ಜುನ ಚಿನಿವಾಲರ, ಮಹೇಶ್ ರಜಪೂತ್, ಗುರು, ಮಹಿಂದ್ರ, ಸಂಸ್ಥೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ

ಕಲಬುರಗಿ: ಸಂವಿಧಾನ ಶಿಲ್ಪಿ ಭಾರತರತ್ನ, ಡಾ.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ನಿಮಿತ್ಯವಾಗಿ ಕಲಬುರ್ಗಿ ನಗರದ ಜಗತ್ ವೃತ್ತದ ಬಳಿಯಿರುವ ಬಾಬಾಸಾಹೇಬ್ ರವರ ಪ್ರತಿಮೆಗೆ ಯುವ ಮುಖಂಡರಾದ ಶಿವ ಅಷ್ಟಗಿ, ಸಂದೇಶ ಕಮಕನೂರ್, ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ಮಹೇಶ್ ಚವ್ಹಾಣ, ಗೋಪಾಲಕೃಷ್ಣ ಕುಲಕರ್ಣಿ, ಅಮಿತ್ ಕುಲಕರ್ಣಿ, ಪ್ರೀತಂ ಪಾಟೀಲ್ ನಿಜಗುಣಗೌಡ ಯಲಗೋಡ, ಸಮೀರ್ ಶಿಂದೆ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿಗೆ ಗೌರವ ನಮನಗಳನ್ನು ಸಲ್ಲಿಸಿದರು.





ಶ್ರೀರಾಮನಗರ: ಗ್ರಾಮದ ಅಂಬೇಡ್ಕರ್ ವೃತ್ತದ ಬಳಿ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಪ್ರಯುಕ್ತ ನಾಮ ಫಲಕಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೊಪ್ಪಳ ಜಿಲ್ಲಾ ಸಂಘಟನಾ ಸಂಚಾಲಕಬಸವರಾಜ್ ನಾಗೋಲಿ ಪುಷ್ಪಾರ್ಚನೆ ಮಾಡಿದರು.

ಅಂಬೇಡ್ಕರ್ ಆದರ್ಶ ಅಳವಡಿಸಿಕೊಳ್ಳಿ

ರಾಯಚೂರು: ವಿಶ್ವದ ಶ್ರೇಷ್ಠ ಜ್ಞಾನಿಗಳಲ್ಲಿ ಒಬ್ಬರಾಗಿದ್ದ ಅಂಬೇಡ್ಕರ್ ತಮ್ಮ ಪ್ರತಿಭೆಯನ್ನು ಮನುಕುಲದ ಏಳಿಗೆಗಾಗಿ ಬಳಕೆ ಮಾಡಿದರು. ಅವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕೆಂದು ನಗರ ಕ್ಷೇತ್ರದ ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು. ಮಂಗಳವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ 135ನೇ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಎಡಿಸಿ ಜಿಪಂ ಸಿಇಒ ಈಶ್ವರ ಕಾಂದೂ ಮಾತನಾಡಿದರು. ಉಪನ್ಯಾಸ ನೀಡಿದ ಕುವೆಂಪು ಕನ್ನಡ ಅಧ್ಯಯನ ಕುಪ್ಪಳ್ಳಿ ಮತ್ತು ಹಿರಿಯ ವಿದ್ವಾಂಸ ಡಾ.ಬಿ.ಎಂ.ಪುಟ್ಟಯ್ಯ ಮಾತನಾಡಿದರು. ದ್ವಿತೀಯ ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಸ್ನೇಹ, ಸಂಗೀತಾ ಹಾಗೂ ಗೀತಾ ಅವರಿಗೆ ಡಾ.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಅಂಗವಾಗಿ ವಿವಿಧ ಗಣ್ಯರಿಂದ ಸನ್ಮಾನಿಸಿ, ಗೌರವಿಸಲಾಯಿತು. ಬೀದರ್ ಬುದ್ಧ ವಿಹಾರನ ಬಂತೇಜಿ ಯಾಕತ್ನೂರ್, ಎಸ್ಪಿ ಅರುಣಾಂಗ್ಶು ಗಿರಿ, ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ, ಎಡಿಸಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್ ಸೇರಿದಂತೆ ಇತರರಿದ್ದರು.



ರಾಯಚೂರು: ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ 135ನೇ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಶಾಸಕ ಡಾ.ಶಿವರಾಜ ಪಾಟೀಲ ಚಾಲನೆ ನೀಡಿದರು.

ಅಂಬೇಡ್ಕರ್ ಜಯಂತಿ | ಶಾಸಕ ಅಲ್ಲಮಪ್ರಭು ಪಾಟೀಲ ಅಭಿಮತ

ಸಮಾನತೆಯ ಬದುಕು ನೀಡಿದ ಅಂಬೇಡ್ಕರ್

ಕಲಬುರಗಿ: ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಮನುಷ್ಯರನ್ನು ಮನುಷ್ಯರನ್ನಾಗಿ ನೋಡದೆ ಜಾತಿಯತೆ, ಅಸ್ಪೃಶ್ಯತೆ, ಮೂಢನಂಬಿಕೆ ಬೇರೂರಿತ್ತು. ಇಡೀ ದೇಶ ಒಪ್ಪುವಂತಹ ಸಂವಿಧಾನ ಬರೆದು ಸರ್ವರಿಗೂ ಸಮಾನತೆಯ ಬದುಕು ನೀಡಿದ ಮಹಾನ್ ಮಾನವತಾವಾದಿ ಅಂಬೇಡ್ಕರ್ ಅವರಾಗಿದ್ದಾರೆ ಎಂದು ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.

ಮಂಗಳವಾರ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ 135ನೇ ಜಯಂತ್ಯೋತ್ಸವ ಅಂಗವಾಗಿ ನಗರದ ಜಗತ್ ಸರ್ಕಲ್ ಹತ್ತಿರದ ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿಯೇ ಅಣ್ಣ ಬಸವಣ್ಣನವರುಅಲ್ಲಮಪ್ರಭುರವರಮುಂದಾಳತ್ವದಲ್ಲಿ ಸಮಾಜದಲ್ಲಿನ ಜಾತೀಯತೆ, ಅಸಾಮಾನತೆ, ಲಿಂಗ ತಾರತಮ್ಯ ಹೋಗಲಾಡಿಸಲು ಶ್ರಮಿಸಿದರಾದರು ಅದೂ ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಸಾಧ್ಯವಾಗಿರಲಿಲ್ಲ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಇದನ್ನೆಲ್ಲವನ್ನು ಹೋಗಲಾಡಿಸಲು ಪ್ರಯತ್ನ ಪಟ್ಟವರು. ದೇಶದ ಪ್ರತಿ ಪ್ರಜೆ ಗೌರವ ಮತ್ತು ಸ್ವಾಭಿಮಾನದಿಂದ ಬದುಕಬೇಕು ಎಂದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಅಂಬೇಡ್ಕರ್ ಅವರು ಸುಮಾರು 60 ವಿಷಯಗಳ ಮೇಲೆ ಪಾಂಡಿತ್ಯ ಪಡೆದ ಮಹಾನ್ ಜ್ಞಾನಿಯಾಗಿದ್ದರು. ಆರ್.ಬಿ.ಐ ಸ್ಥಾಪನೆಗೆ ಕಾರಣೀಕರ್ತರು ಆಗಿರುವ ಅಂಬೇಡ್ಕರ್ ಮಹಿಳಾ ಸಬಲೀಕರಣಕ್ಕೆ ದುಡಿದಿದ್ದಾರೆ. ಶಿಕ್ಷಣ,ಸಂವಿಧಾನ ಪರಿಣಾಮ ನಾನು ನಿಮ್ಮುಂದೆ ಡಿ.ಸಿ.ಯಾಗಿ ಮಾತನಾಡುತ್ತಿರುವೆ ಎಂದರು.



ಕಾಳಗಿ ತಾಲೂಕಿನ ಕೋಡ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಚಾರ್ಯರಾದ ಡಾ. ರಾಜಶೇಖರ ಮಾಂಗ್ ಅವರು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿ.ಯು.ಸಿ ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಭಂತೆ ವರಜ್ಯೋತಿ ಅವರ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ಮೇಯರ್ ವರ್ಷಾ ಜಾನೆ ಮಾತನಾಡಿದರು.ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ,ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಸಿ.ಇ.ಓ ಭಂವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ,ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅಧಿಕಾರಿಗಳಾದ ಪ್ರೀತಿ ದೊಡ್ಡನಿ, ಡಾ.ಶರಣಬಸಪ್ಪ ಕ್ಯಾತನಾಳ, ಆನಂದಶೀಲ, ಸಮಿತಿ ಅಧ್ಯಕ್ಷ ಅಶೋಕ ವೀರನಾಯಕ, ಮಹೇಶ ಹುಬ್ಳಿ, ಬಸವರಾಜ ಬಳೂಂಡಗಿ,ಮುಖಂಡರಾದ ಪ್ರಕಾಶ ಮೂಲಭಾರತಿ, ಸುರೇಶ ಹಾದಿಮನಿ ಸೇರಿದಂತೆ ಸಾರ್ವಜನಿಕರು,ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.ಮಾರುತಿ ಬೇಂದ್ರ ಸ್ವಾಗತಿಸಿದರು. ಸಹ ಶಿಕ್ಷಕ ಸಂತೋಷ್ ಕಲಕೇರಾ ಸಂವಿಧಾನ ವಾಚಿಸಿದರು.

ಅಂಬೇಡ್ಕರ್‌ಗೆ ಗೌರವ ನಮನ ಸಲ್ಲಿಕೆ

ವೇದಿಕೆ ಕಾರ್ಯಕ್ರಮದ ಮುನ್ನ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ಶಾಸಕ ಅಲ್ಲಮಪ್ರಭು ಪಾಟೀಲ, ಬಸವರಾಜ ಮತ್ತಿಮೂಡ, ಜಗದೇವ ಗುತ್ತೇದಾರ ಅದಿಯಾಗಿ ಎಲ್ಲಾ ಅಧಿಕಾರಿ-ಗಣ್ಯರು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಭಂತೆ ವರಜ್ಯೋತಿ ಬುದ್ಧ ವಂದನೆ ಸಲ್ಲಿಸಿದರು. ವೈದ್ಯಕೀಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಂಬೇಡ್ಕರ್ ಭಾರತೀಯ ಆತ್ಮದ ಅಸ್ಮಿತೆ: ಸಿವಿಸಿ

ಕೊಪ್ಪಳ: ಡಾ.ಅಂಬೇಡ್ಕರ್ ಅವರು ಭಾರತೀಯ ಆತ್ಮದ ಅಸ್ಮಿತೆಯಾಗಿದ್ದು ಅವರು ಸೃಷ್ಟಿಸಿದ ಸಂವಿಧಾನವನ್ನು ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಜೆಡಿಎಸ್ ರಾಜ್ಯ ಅವರು ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್ ಹೇಳಿದರು.

ಪಕ್ಷದ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ನಡೆದ ಡಾ.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದುರ್ಬಲರ, ಅಸಹಾಯಕರ ಹಾಗೂ ತುಳಿತಕ್ಕೊಳಗಾದವರ ಬದುಕಿಗೆ ಬೆಳಕಾಗಿ ಸಹ ಬಾಳ್ವೆಯ ಭಾರತೀಯ ತತ್ವವನ್ನು ಎತ್ತಿ ಹಿಡಿದವರು ಅಂಬೇಡ್ಕರ್. ಅವರು ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಎರಡನ್ನೂ ಒಳಗೊಂಡಿದ್ದರು. ಅವರು ಭಾರತಕ್ಕೆ ಸಮಾನತೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಟ್ಟವರು. ಅಂಬೇಡ್ಕರ್ ಸಂವಿಧಾನದ ಸಮಿತಿಯಲ್ಲಿ ಇಲ್ಲದಿದ್ದರೆ ಸರ್ವ ಸ್ಪರ್ಶಿ, ಸರ್ವ ವ್ಯಾಪಿ ಸಂವಿಧಾನ ಆಗುತ್ತಿರಲಿಲ್ಲ ಎಲ್ಲರ ಒಪ್ಪಿಗೆ ಸಿಗುತ್ತಿರಲಿಲ್ಲ ಎಂದರು.

ಅಂಬೇಡ್ಕರ್ ಅವರು ಜಗತ್ತಿನ ಮಹಾ ಚಿಂತಕ ಪ್ಲೇಟೊ ಹಾಗೂ ಕಾರ್ಲ್ ಮಾರ್ಕ್ಸ್ ಅವರ ಸ್ಥಾನದಲ್ಲಿ ನಿಲ್ಲುತ್ತಾರೆ. ಪ್ಲೇಟೊ ಅತ್ಯಂತ ಶ್ರೇಷ್ಠ ಚಿಂತಕ. ಕಾರ್ಲ್ ಮಾರ್ಕ್ಸ್ ಮಾನವನ ಗೌರವ, ಹಕ್ಕುಗಳು, ಶ್ರಮ ಎಲ್ಲ ವಿಚಾರಗಳಲ್ಲಿ ಅದ್ಭುತ ಕಲ್ಪನೆ ಕೊಟ್ಟಿದ್ದಾನೆ. ಅಂಬೇಡ್ಕರ. ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಎರಡನ್ನೂ ಒಳಗೊಂಡಿರುವ ವ್ಯಕ್ತಿ. ಹೀಗಾಗಿ ಅವರ ಜನ್ಮ ದಿನಾಚರಣೆಯ ದಿನ ಅವರ ತತ್ವಗಳನ್ನು ಅನುಸರಿಸುವ ಶಪಥ ಮಾಡಬೇಕು ಎಂದರು.

ಪಕ್ಷದ ಜಿಲ್ಲಾ ಓಬಿಸಿ ಘಟಕದ ಅಧ್ಯಕ್ಷ ಕರಿಯಪ್ಪ ಹಾಲವರ್ತಿ, ತಾಲೂಕು ಎಸ್ಸಿ ಘಟಕದ ಅಧ್ಯಕ್ಷ ಸುರೇಶ್ ದದೆಗಲ್,

ನಗರಘಟಕದಅಧ್ಯಕ್ಷಸೋಮನಗೌಡ ನಗರ, ಘಟಕದ ಮಹಿಳಾ ಅಧ್ಯಕ್ಷೆ ನಿರ್ಮಲ ಮೇದಾರ, ಮಹಿಳಾ ಘಟಕದ ಗೌರವ ಅಧ್ಯಕ್ಷೆ ರತ್ನಮ್ಮ ಹಿರೇಮಠ, ಜಿಲ್ಲಾ ಕ್ರೀಡಾ ವಿಭಾಗದ ಅಧ್ಯಕ್ಷ ಸೈಯದ್ ಮಹೇಮೂದ್ ಹುಸೇನಿ ಬಲ್ಲೆ, ಜಿಲ್ಲಾ ಕೈಗಾರಿಕಾ ಅಧ್ಯಕ್ಷ ಮಾರುತಿಗೌಡ ಪೊಲೀಸ್‌ಪಾಟೀಲ, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಏಣಿಗಿ, ರತ್ನಮ್ಮ ಹಿರೇಮಠ, ನಗರ ಘಟಕದ ಕೋಶಾಧ್ಯಕ್ಷ ಶಿವರಾಜ್ ಮಠಪತಿ, ಉಪಾಧ್ಯಕ್ಷಗಂಗಾಧರ ವಸ್ತ್ರದ್, ಮಹಿಳಾ ಉಪಾಧ್ಯಕ್ಷೆ ಶರಣಮ್ಮ ಸಂಗನಾಳ್, ನಗರ ಮಹಿಳಾ ಘಟಕದ ಓಬಿಸಿ ಅಧ್ಯಕ್ಷೆ ಭಾಗ್ಯ ಐವಳಿಯವರು, ಮಹಿಳಾ ವಿದ್ಯಾರ್ಥಿ ಘಟಕದ ಅಧ್ಯಕ್ಷೆ ಜಯಶ್ರೀ ಬಸವರಾಜ್, ಮುಖಂಡರಾದ ಶಂಕ್ರಪ್ಪ ಚಂದ್ರು, ದೇವರಾಜ್ ಅಗಳಕೇರಿ, ಜಿಲ್ಲಾ ಖಜಾಂಚಿ ಮೌನೇಶ್ ಕಿನ್ನಾಳ್, ರವಿಕುಮಾರ ಮೇದಾರ ಇದ್ದರು.



ವಿಶ್ವಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಮಾದರಿ



ಕುಷ್ಟಗಿ: ಸಂವಿಧಾನದ ಮಹಾನ್ ಚೇತನ ಡಾ.ಬಿ.ಆರ್.ಅಂಬೇಡ್ಕರ್ ರಾಷ್ಟ್ರಕ್ಕೆ ಉತ್ತಮ ಸಂವಿಧಾನ ನೀಡುವ ಮೂಲಕ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಇವರು ವ್ಯಕ್ತಿಯಲ್ಲ, ದೇಶದ ಶಕ್ತಿಯಾಗಿ ಹೊರಹೊಮ್ಮಿದ್ದಾರೆ ಎಂದು ವಿಧಾನಸಭೆ ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕಾಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಮಹಾನ್ ಮಾನವತಾವದಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ 135ನೇ ಜನ್ಮದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಂಗಳವಾರ ಮಾತನಾಡಿದರು.

ಅಂಬೇಡ್ಕರ್ ಜಯಂತಿ ಬರೀ ಡಿಜೆ ಮೆರವಣಿಗೆ ಸೀಮಿತವಾಗದೇ. ಬದುಕು ಬರಹ ಎಲ್ಲರಿಗೂ ಸ್ಫೂರ್ತಿದಾಯಕವಾಗಲಿ. ಉತ್ತಮವಾದ ಸಂವಿಧಾನ ನೀಡಿದ್ದು ಪ್ರತಿಯೊಬ್ಬರೂ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ. ಮತದಾನದ ಹಕ್ಕು ನೀಡಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಅಂಬೇಡ್ಕರ್ ಗ್ರಂಥಾಲಯದಲ್ಲಿ ಸುಮಾರು 50 ಸಾವಿರಕ್ಕೂ ಪುಸ್ತಕಗಳು ಸಂಗ್ರಹಿಸಿದ್ದರು. ಮೊಟ್ಟ ಮೊದಲಿಗೆ ಕಾನೂನು ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇನ್ನೇನು ಕೆಲ ದಿನದಲ್ಲಿ ಶೇ.33ರಷ್ಟು ಮಹಿಳೆಯರಿಗೆ ಸ್ಥಾನಮಾನ ದೊರೆಯುವ ಅವಕಾಶ ಲಭಿಸಲಿದೆ. ತಾಲೂಕಿನಲ್ಲಿ 14 ಕಡೆಗಳಲ್ಲಿ ಸಮುದಾಯ ಭವನ ನಿರ್ಮಿಸಲಾಗುವುದು ಎಂದು ತಿಳಿಸಿದರು.

ತಹಶೀಲ್ದಾರ್ ಅಶೋಕ ಶಿಗ್ಗಾವಿ ಮಾತನಾಡಿ, ಮಹಾನ್ ಚೇತನ ಅಂಬೇಡ್ಕರ್ ಸಮಾನತೆಗೆ ಹಿಂದೂ ಬಿಲ್ ಪಾಸ್ ಮೂಲಕ ಶ್ರಮಿಸಿದ್ದು, ಇಂದಿನ ದಿನಗಳಲ್ಲಿ ಸಮಾಜದಲ್ಲಿ ಪರಿವರ್ತನೆಗೊಳ್ಳಬೇಕಿದೆ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಮಹೇಶ್ ಮಾತನಾಡಿದರು.

ಪುರಸಭೆ ಮಾಜಿ ಸದಸ್ಯ ವಸಂತಕುಮಾರ ಮೇಲಿನಮನಿ ಮಾತನಾಡಿದರು.

ಶಿಕ್ಷಕ ಶರಣಪ್ಪ ತೆಮ್ಮಿನಾಳ ಉಪನ್ಯಾಸ ನೀಡಿದರು. ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ತುಗ್ಗಲೆಪ್ಪ ದೇಸಾಯಿ, ಪುರಸಭೆ ಮುಖ್ಯಾಧಿಕಾರಿ ವಿ.ಐ.ಬೀಳಗಿ, ತಾಪಂ ಇಒ ಪಂಪಾಪತಿ ಹಿರೇಮಠ, ಸಿಪಿಐ ವಿಶ್ವನಾಥ ಹಿರೇಗೌಡ್ರ, ಪಿಎಸ್ಐ ಹನುಮಂತಪ್ಪ ತಳವಾರ, ಬಿಇಒ ಉಮಾದೇವಿ ಬಸಾಪೂರ, ಡಿಎಸ್ಎಸ್ ಮುಖಂಡ ಶುಖರಾಜ ತಾಳಕೇರಿ, ನಾಗರಾಜ ಮೇಲಿನಮನಿ, ರಮೇಶ ಮೇಲಿನಮನಿ, ಕಲ್ಲೇಶ ತಾಳದ, ಅಶೋಕ ಬಳೂಟಗಿ ಇತರರಿದ್ದರು.

ಡಾ.ಅಂಬೇಡ್ಕರ್ ಮನುಕುಲಕ್ಕೆ ಆಸ್ತಿ: ಶಾಸಕ ರಾಯರೆಡ್ಡಿ

ಕುಕನೂರು: ಅಂಬೇಡ್ಕರ್ ದೇಶದ ಆಸ್ತಿ. ಅವರ ಮಾದರಿ ಬದುಕು, ತತ್ವ, ಚಿಂತನೆಗಳು ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಪಟ್ಟಣದ ಗವಿಸಿದ್ದೇಶ್ವರ ಪ್ರೌಢ ಶಾಲೆಯಲ್ಲಿ ತಾಲೂಕಾ ಆಡಳಿತ, ತಾಪಂ, ಪಪಂ ಹಾಗೂ ಸಮಾಜ ಕಲ್ಯಾಣ ಇಲಾಖ ಸಂಯುಕ್ತ ಆಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆ ಹಾಗೂ ಹಸಿರು ಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಂ ರವರ 119ನೇ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರು ಕೇವಲ ಒಂದು ಸಮುದಾಯದ ನಾಯಕರಲ್ಲ, ಅವರು ಇಡೀ ಮನುಕುಲಕ್ಕೆ ಆಸ್ತಿ. ದೇಶಕ್ಕೆ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಭದ್ರ ಬುನಾದಿ ಹಾಕಿಕೊಟ್ಟ ಸಂವಿಧಾನ ಶಿಲ್ಪಿ ಅವರು. ಅವರ ತತ್ವಗಳು ಇಂದಿಗೂ ನಮಗೆ ದಾರಿದೀಪ ಮುಂದುವರಿದು, ''ಬಾಬು ಜಗಜೀವನ ರಾಮ್ ಅವರು ಕೃಷಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ ಎಂದರು.

ತಹಶೀಲ್ದಾರ್ ಬಸವರಾಜ ಬೆಣ್ಣೆಶಿರೂರು, ತಾಪಂ ಇಒ ಸಂತೋಷ ಜರಾದಾರ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶಶಿಧರ ಸಕ್ರಿ, ಸಿಡಿಪಿಒ ಬೆಟ್ಟದಪ್ಪ ಮಾಳೆಕೊಪ್ಪ, ಹಾಗೂ ಪಪಂ ಅಧ್ಯಕ್ಷ ಲೀಲಾವತಿ ಮುಧೋಳ್, ಉಪನ್ಯಾಸವನ್ನು ಧಾರವಾಡ ನಿವೃತ್ತ ಉಪನ್ಯಾಸಕ ಕೆ.ಆರ್ .ದುರ್ಗಾದಾಸ ನೀಡಿದರು.



ಲಕ್ಷ್ಮಣ್ಣ ಕಾಳಿ, ಯಮನೂರಪ್ಪ ಗೊರಲೆಕೊಪ್ಪ ನಿರೂಪಣೆಯನ್ನು ಪೀರಸಾಬ ದಫೇದಾರ ಸಿಆರ್‌ಪಿ ಶರಣಪ್ಪ ವೀರಾಪುರ ದೈಹಿಕ ಶಿಕ್ಷಕ, ಶಾರದಾಂಬ ನಾಟ್ಯಾಲಯ, ಬೆಳಗಾವಿ ಅವರಿಂದ ಡಾ.ಅಂಬೇಡ್ಕರ್ ರವರ ಬಾಲ್ಯ ಜೀವನದ ಕುರಿತು ನೃತ್ಯರೂಪಕ ಪ್ರದರ್ಶನ ಮಾಡಿದರು. ನಿಲಯ ಪಾಲಕರಾದ ರಾಮಚಂದ್ರಪ್ಪ, ಪರಶುರಾಮ್, ಮಾರುತಿ, ಅಡಿವೆಪ್ಪ, ಪರಶುರಾಮ್ ಭೋಗಟಿ, ಸಂತೋಷ ಅಡವಳ್ಳಿ, ರಾಚಣ್ಣ ಗಡಗಿನ ಇತರರಿದ್ದರು.

ಮಾಲವಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಮಾದಿಗ ಸಮುದಾಯದಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಆಚರಿಸಲಾಯಿತು.

ಜಯಂತಿ ನಿಮಿತ್ತ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮಾದಿಗ ಸಮುದಾಯದ ಭೀಮಪ್ಪ , ಕೊಟ್ರೇಶ್ ದುರ್ಗವ್ವ, ಯಮನೂರಪ್ಪ, ನಾಗಪ್ಪ ಹನುಮಂತಪ್ಪ ಹೋಲೆಪ್ಪ, ರಮೇಶ್, ಪ್ರಕಾಶ್, ಬಾಲಪ್ಪ ಇತರರು ಇದ್ದರು.



ಜಿಲ್ಲೆಯ ಟಾಫರ್‌ಗಳಿಗೆ ವಸತಿ ಸಹಿತ ಉಚಿತ ಶಿಕ್ಷಣ

ಗಂಗಾವತಿ: ಕೊಪ್ಪಳ ಜಿಲ್ಲೆಯ ಸರ್ಕಾರಿ ಶಾಲೆ, ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಟಾಫರ್ ಆಗಿ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾನಿಕೇತನ ಕಾಲೇಜಿನಲ್ಲಿ ಉಚಿತವಾಗಿ ವಸತಿ, ಶಿಕ್ಷಣವನ್ನು ಸಂಸ್ಥೆ ನೀಡಲಿದೆ ಎಂದು ವಿದ್ಯಾನಿಕೇತನ ವಿದ್ಯಾಸಂಸ್ಥೆ ಸಮೂಹ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎನ್.ಸೂರಿಬಾಬು ಹೇಳಿದರು.

ಅವರು ಮಂಗಳವಾರ ಕಾಲೇಜಿನ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, 2026-27ಸಾಲಿನಲ್ಲಿ ಸುಮಾರು 27 ವಿದ್ಯಾರ್ಥಿಗಳನ್ನು ಪ್ರತಿ ತಾಲೂಕಿನ ಸರ್ಕಾರಿ ಶಾಲೆ, ಅನುದಾನಿತ ಶಾಲೆ, ಮೊರಾರ್ಜಿ, ನವೋದಯ, ಸಿಬಿಎಸ್ ಶಿಕ್ಷಣ ಹೊಂದಿರುವ ಶಾಲೆಯ ತಲಾ ಒಂದು ಟಾಫರ್ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಉಚಿತವಾಗಿ ಶಿಕ್ಷಣ, ಟ್ಯೂಷನ್, ವಸತಿಯನ್ನು ಎರಡು ವರ್ಷಗಳ ಕಾಲ ನೀಡಲಾಗುವುದು. ಈ ವರ್ಷದಲ್ಲಿ ವಡ್ಡರಹಟ್ಟಿ, ಗಂಗಾವತಿ ಹಾಗೂ ಶ್ರೀರಾಮನಗರ ಕಾಲೇಜಿನ 1662 ವಿದ್ಯಾರ್ಥಿಗಳು ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗಳನ್ನು ಬರೆದಿದ್ದು, ಇದರಲ್ಲಿ 1391 ಡಿಸ್ಟಿಂಗ್‌ಷನ್, 261 ಪ್ರಥಮ ಸ್ಥಾನ, 5 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದು ತೇರ್ಗಡೆ ಆಗಿದ್ದಾರೆ. ವಂದನಾ ಜೈನ 594, ದೀಪಿಕಾ ಐಲಿ 593, ರೋಹಿತ್‌ಕುಮಾರ್ ಮಜ್ಜಿಗಿ 591. ವಾಣಿಜ್ಯ ವಿಭಾಗದಲ್ಲಿ ಅರ್ಜುನ ಜಿ. 597 ಅಂಕಗಳನ್ನು ಪಡೆದುಕೊಂಡಿದ್ದು, ಇನ್ನೂ 590 ಅಂಕಗಳನ್ನು ಕಾಲೇಜಿನ 36 ವಿದ್ಯಾರ್ಥಿಗಳು ಪಡೆದು ಕೀರ್ತಿ ತಂದಿದ್ದಾರೆ.



1 ಲಕ್ಷ ರೂ. ಬಹುಮಾನ

ಈಗಾಗಲೇ ನಮ್ಮ ಕಾಲೇಜಿನಲ್ಲಿ ಪಿಯುಸಿ ವಿದ್ಯಾಭ್ಯಾಸ ಮಾಡಿದ 36 ವಿದ್ಯಾರ್ಥಿಗಳಿಗೆ 1 ಲಕ್ಷ ರೂ. ಗಳ ಬಹುಮಾನ ನೀಡುವ ಮೂಲಕ ಸನ್ಮಾನಿಸಿ ಗೌರವಿಸಲಾಗುವುದು. ಜೊತೆಗೆ ಇದೇ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಓದಲು ಆಸಕ್ತಿ ವಹಿಸಿದರೆ ಉಚಿತ ಶಿಕ್ಷಣ ನೀಡಲಾಗುವುದು.

ಕ್ಲಾರಿಕಲ್ ಹೊರೆ ತಪ್ಪಿಸಲು ಎಐ ತಂತ್ರಜ್ಞಾನ ಬಳಸಿ ಆ್ಯಪ್ ಬಳಕೆ ಮಾಡಿದ್ದು, ಪ್ರತಿಯೊಬ್ಬರೂ ಮಕ್ಕಳ ಕಲಿಕಾ ಗುಣಮಟ್ಟ ಮತ್ತು ಹೆಚ್ಚಿನ ಶ್ರಮ ಹೊರೆ ತಪ್ಪಿಸಲು ಸಹಕಾರಿಯಾಗಲಿದೆ. ಆಗಾಗಿ ವಿಶೇಷವಾಗಿ ಮಕ್ಕಳ ಕಲಿಕೆಗೆ ಶಿಕ್ಷಕರ ಆಸಕ್ತಿ ಅತಿವಶ್ಯವಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಿ.ಎಂ.ಅಭಿಷೇಕ, ಕೆ.ಎಚ್.ಮಲ್ಲಿಕಾರ್ಜುನ, ಜಗನ್ನಾಥರಾವ್, ಉಮಾಶಂಕರ್, ಆದರ್ಶ ನೆಕ್ಕಂಟಿ, ಸಿಇಒ ಶಾಂತಿ, ಶೈಕ್ಷಣಿಕ ಮಂಡಳಿ ನಿರ್ದೇಶಕರಾದ ನಳಿನಿ ಸೇರಿದಂತೆ ಇತರರಿದ್ದರು.

ಅಂಬೇಡ್ಕರ್ ಜಯಂತ್ಯುತ್ಸವ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತ್ಯುತ್ಸವ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿನ ಡಾ.ಬಿ.ಆರ್.ಅಂಬೇಡ್ಕರರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ನೆರವೇರಿಸಿ, ಮಾಲಾರ್ಪಣೆ ಮಾಡಿ, ಮೆರವಣಿಗೆಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಬೀದರ್ ಬುದ್ಧ ವಿಹಾರನ ಬಂತೇಜಿ ಯಾಕತ್ನೂರ್, ನಗರ ಕ್ಷೇತ್ರದ ಶಾಸಕ ಡಾ.ಶಿವರಾಜ ಪಾಟೀಲ, ಪ್ರಭಾರಿ ಜಿಲ್ಲಾಧಿಕಾರಿ, ಜಿ.ಪಂ ಇಇಓ ಈಶ್ವರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ, ರವಿ ಬೋಸರಾಜು ಸೇರಿದಂತೆ ಇತರರಿದ್ದರು.



ಭಾರತದ ಸಂವಿಧಾನ ಅತ್ಯಂತ ಶ್ರೇಷ್ಠ: ಶ್ರೀದೇವಿ ಮುಕಿಹಾಳ

ಯಲಬುರ್ಗಾ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನ ಅತ್ಯಂತ ಶ್ರೇಷ್ಠವಾಗಿದೆ ಇಡೀ ವಿಶ್ವಕ್ಕೆ ಮಾದರಿ ಸಂವಿಧಾನವಾಗಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಪಟ್ಟಣದಲ್ಲಿ ಬಯಲು ರಂಗಮಂದಿರದಲ್ಲಿ ಮಂಗಳವಾರ ತಾಲೂಕಾಡಳಿತ, ಸಮಾಜಕಲ್ಯಾಣ ಇಲಾಖೆ ಹಾಗೂ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ನಡೆದ ಭಾರತರತ್ನ ಡಾ.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಹಾಗೂ ಹಸಿರು ಕ್ರಾಂತಿ ಹರಿಕಾರ ಭಾರತದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಮ್ ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಡಾ.ಅಂಬೇಡ್ಕರ್‌ರವರ ನಿಜವಾದ ಗ್ರಂಥವೆಂದರೆ ಅದು ಸಂವಿಧಾನ ಎನ್ನುವುದು ಪ್ರತಿಯೊಬ್ಬರ ಪಾಲಿಗೆ ಮಹಾ ಗ್ರಂಥವಾಗಿದೆ ಎಂದರು.

ಇದಕ್ಕೂ ಪೂರ್ವದಲ್ಲಿ ಡಾ.ಅಂಬೇಡ್ಕರವರ ಮೆರವಣಿಗೆ ಸಂದರ್ಭದಲ್ಲಿ ಸಿಎಂ ಆರ್ಥಿಕ ಸಲಹೆಗಾರ,ಶಾಸಕ ಬಸವರಾಜ ರಾಯರಡ್ಡಿ ಅವರು ಪಾಲ್ಗೊಂಡು ಪಟ್ಟಣದ ಹೃದಯ ಭಾಗದಲ್ಲಿರುವ ಡಾ.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಕೇವಲ ಒಂದೇ ಜನಾಂಗಕ್ಕೆ ಸಿಮೀತವಾಗಿಲ್ಲ,ಭಾರತ ಸಂವಿಧಾನ ರಚಿಸುವ ಮೂಲಕ ವಿಶ್ವಮಾನರಾಗಿದ್ದಾರೆ. ಅಂಥವರ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ವರ್ಗರಹಿತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದು ಹೇಳಿದರು.



ಶಿಕ್ಷಕ ನಾಗರಾಜ ನಡುವಲಕೇರಿ ಮಾತನಾಡಿ, ಡಾ.ಜಗಜೀವನರಾಂ ಅವರು ದೀನದಲಿತರ ಹಿತರಕ್ಷಣೆಗಾಗಿ ಸಾಕಷ್ಟು ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿ ದಲಿತರ ಬಾಳಿಗೆ ಒಳಿತನ್ನು ಕಲ್ಪಿಸಿಕೊಡುವಲ್ಲಿ ಇವರ ಕಠಿಣ ಪರಿಶ್ರಮ ಎಂದೂ ಮರೆಯಲೂ ಸಾಧ್ಯವಿಲ್ಲ ಎಂದರು. ತಹಶೀಲ್ದಾರ್ ಪ್ರಕಾಶ ನಾಶಿ ಉದ್ಘಾಟಿಸಿ ಮಾತನಾಡಿ ಡಾ.ಅಂಬೇಡ್ಕರ್‌ರವರು ಶಿಕ್ಷಣದಿಂದ ಮೇಲೆ ಬಂದವರು.ಇದರಿಂದಾಗಿ ಅವರು ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿದ್ದಾರೆ ಎಂದು ಹೇಳಿದರು. ಸಮಾಜ ಕಲ್ಯಾಣಾಧಿಕಾರಿ ಶಶಿಧರ ಸಕ್ರಿ, ಬಿಇಒ ಅಶೋಕ ಗೌಡ್ರ, ಲೋಕೋಪಯೋಗಿ ಇಲಾಖೆ ಎಇಇ ಮಲ್ಲಿಕಾರ್ಜುನ, ದಲಿತ ಮುಖಂಡ ಯಮನೂರಪ್ಪ ನಡುವಲಮನಿ,ಛಲವಾದಿ ಮಹಾಸಭಾದ ತಾಲೂಕಾಧ್ಯಕ್ಷ ಅಂದಪ್ಪ ಹಾಳಕೇರಿ ಮತ್ತಿತರರು ಇದ್ದರು. ದಲಿತ ಮುಖಂಡರಾದ ಶರಣಪ್ಪ ಚಲವಾದಿ, ಪುಟ್ಟರಾಜ ಗುತ್ತೂರ, ಸುರೇಶ ನಡುವಲಮನಿ, ಭೀಮಣ್ಣ ಹವಳಿ, ಶಿವಾನಂದ ಬಣಕಾರ,ಗದ್ದೆಪ್ಪ ಚಲವಾದಿ ಡಾ.ಅಂಬೇಡ್ಕರವರ ಕುರಿತು ಕ್ರಾಂತಿ ಗೀತೆ ಹಾಡಿದರು. ಶಿಕ್ಷಕ ಮೆಹಬೂಬ ಬಾದಶಾಹ ನಿರೂಪಿಸಿದರು, ಶಿಕ್ಷಕ ಬಸವರಾಜ ಕೊಂಡಗುರಿ ಸ್ವಾಗತಿಸಿ, ವಂದಿಸಿದರು.

ಕಿರುಸುದ್ದಿ



ಕರೂರ: ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆ ಮತ್ತು ಉತ್ತನೂರು ಗ್ರಾಮದಲ್ಲಿ ಅಂಬೇಡ್ಕರ್ ಅವರ ಪುತ್ಥಳಿ ಅನಾವರಣ ಮಾಡಲಾಯಿತು. ಪಿಡಿಒ ಶಿವಕುಮಾರ, ಕಾರ್ಯದರ್ಶಿ ಕೆ.ಶಿವಮೂರ್ತಿ, ಮಲ್ಲಿಕಾರ್ಜುನ, ಗಂಗಾಧರ, ಗಂಗಪ್ಪ, ಚಂದ್ರಶೇಖರ, ಚನ್ನಬಸವನಗೌಡ, ನಾಗಮಲ್ಲಪ್ಪ ಮತ್ತಿತರರಿದ್ದರು.

ವಿಶಿಷ್ಟ ಸಂವಿಧಾನ ರಚಿಸಿದ ಅಂಬೇಡ್ಕರ್



ಹಗರಿಬೊಮ್ಮನಹಳ್ಳಿ: ದೇಶ ಸ್ವತಂತ್ರದ ಬಳಿಕ ವಿಶ್ವದಲ್ಲಿಯೇ ವಿಶಿಷ್ಟ ಮಾದರಿ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ನೀಡಿದ್ದಾರೆ ಎಂದು ಪುರಸಭೆಯ ನಿಕಟ ಪೂರ್ವ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು. ಪಟ್ಟಣದ ಮಾಜಿ ಶಾಸಕರ ಕಛೇರಿಯಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಅಂಗವಾಗಿ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿ ಮಾತನಾಡಿದರು. ಅಂಬೇಡ್ಕರ್ ರಚಿಸಿದ ಸಂವಿಧಾನ ದೇಶದ ಆಡಳಿತದ ಮಾರ್ಗಸೂಚಿಯಾಗಿದೆ. ದೇಶದ ನಾಗರಿಕರಿಗೆ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಿದ್ದಾರೆ. ತುಳಿತಕ್ಕೊಳಗಾದ ಸಮುದಾಯಗಳಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದ್ದಾರೆ. ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ಅಳವಡಿಸಿಕೊಂಡು ಮುನ್ನಡೆಯೋಣ ಎಂದರು. ಪುರಸಭೆ ಅಧ್ಯಕ್ಷೆ ಸೆರೆಗಾರಾ ನೇತ್ರಾವತಿ ಹುಚ್ಚಪ್ಪ,ಪುರಸಭೆ ಸದಸ್ಯರಾದ ಮಂಜುಳಾ ಕೃಷ್ಣ ನಾಯ್ಕ್, ಅಂಬಿಕಾ ದೇವೇಂದ್ರಪ್ಪ ನಾ.ನಿ.ಸದಸ್ಯ ಬಾಳಪ್ಪ ಮುಖಂಡರಾದ ಗುಂಡರು ಹನುಮಂತಪ್ಪ ಆನಂದ ದೇವನಹಳ್ಳಿ ಪ್ರಭಾಕರ್ ಪರುಶುರಾಮ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸೊನ್ನದ ಗುರು ಬಸವರಾಜ, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಗೋಣಿ ಬಸಪ್ಪ ಇತರರಿದ್ದರು.

ಅಂಬೇಡ್ಕರ್ ಕೊಡುಗೆ ಅಪಾರ



ಹುಣಸಗಿ: ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಡಾ.ಅಂಬೇಡ್ಕರ್ ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಮುಖ್ಯ ಅತಿಥಿ ವಿಜಯಕುಮಾರ ಸಾಲಿಮನಿ ಮಾತನಾಡಿ, ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸಲು ಅಂಬೇಡ್ಕರರು ಸಲ್ಲಿಸಿದ ಕೊಡುಗೆ ಅಪಾರವಾಗಿದ್ದು, ಅವರು ಸಂವಿಧಾನ ಬರೆಯುವುದಕ್ಕಿಂತ ಮೊದಲು ಈ ದೇಶ ಚತುರ್ವರ್ಣದ ವ್ಯವಸ್ಥೆಯಲ್ಲಿ ಇತ್ತು. ಮನುಷ್ಯನಿಗೆ ಅವಕಾಶ ಸಿಕ್ಕಾಗ ಏನಾದರು ಸಾಧಿಸಿಬೇಕು ಎಂಬ ಛಲವನ್ನು ಹೊಂದಿದ್ದ ಬಾಬಾ ಸಾಹೇಬರು ತಮ್ಮ ಜೀವನದಲ್ಲಿ ಅನುಭವಿಸಿದ ನೋವನ್ನು ಕೆಳವರ್ಗದ ಜನರು ಅನುಭವಿಸಬಾರದು ಎಂದು ಸಂವಿಧಾನವನ್ನು ರಚಿಸಿದರು ಎಂದು ಹೇಳಿದರು. ತಹಶೀಲ್ದಾರ್ ಎಂ.ಬಸವರಾಜ ಹಾಗೂ ತಾಪಂ ಇಒ ಬಸಣ್ಣ ನಾಯಕ ಕಾರ್ಯಕ್ರಮದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ತಹಶೀಲ್ದಾರ್ ಎಂ.ಬಸವರಾಜ, ತಾಪಂ ಇಒ ಬಸಣ್ಣ ನಾಯಕ, ಕ್ರೈಂ ಪಿಎಸ್ಐ ಭಾಗಣ್ಣ, ನಂದಪ್ಪ ಪೀರಾಪುರ, ಡಾ.ವಿಜಯಕುಮಾರ್ ಸಾಲಿಮನಿ, ಮಹ್ಮದಸಲೀಮ್, ಮೈಬೂಬ ಖಾಜಿ, ಸಿದ್ದಾರ್ಥ್ ಪಾಟೀಲ, ಮಲ್ಲಪ್ಪ ಕಟ್ಟಿಮನಿ, ಯಂಕಪ್ಪ ಠಣಕೇದಾರ, ಹಣಮಂತ್ರಾಯ ಕೊಡೇಕಲ್, ಸುರೇಶ ಹಾದಿಮನಿ, ಗುರುದೇವಿ ಹಿರೇಮಠ ವೇದಿಕೆಯಲ್ಲಿದ್ದರು. ಗುರುನಾಥ ಹುಲಕಲ್, ನಾಗನಗೌಡ ಪಾಟೀಲ, ಕರವೇ ಅಧ್ಯಕ್ಷ ಬಸವರಾಜ ಚನ್ನೂರು, ಜುಮ್ಮಣ್ಣ ಗುಡಿಮನಿ, ವಿರೇಶ್ ಗುಳಬಾಳ, ಬಸವರಾಜ್ ಕಟ್ಟಿಮನಿ ಕಾಮನಟಗಿ, ಬಸವರಾಜ್ ದೊಡ್ಡಮನಿ, ಕಾಶಿನಾಥ ಹಾದಿಮನಿ ಸೇರಿದಂತೆ ವಿವಿಧ ಸಮಾಜದ ಹಿರಿಯರು, ವಿವಿಧ ಸಂಘಟನೆಗಳ ಸದಸ್ಯರು, ಮಹಿಳೆಯರು, ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು. ಜುಮ್ಮಣ್ಣ ಗುಡಿಮನಿ ಸ್ವಾಗತಿಸಿದರು. ಶಿಕ್ಷಕ ಪರಶುರಾಮ ಚಲವಾದಿ ನಿರೂಪಿಸಿದರು. ಗುರಣ್ಣ ದೊಡ್ಡಮನಿ ವಂದಿಸಿದರು.



ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ನಗರ ಕಚೇರಿಯಲ್ಲಿ, ಸಾಮಾಜಿಕ ಸುಧಾರಕ ಮತ್ತು ಭಾರತೀಯ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 136ನೇ ಜಯಂತ್ಯುತ್ಸವವನ್ನು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಅದ್ದೂರಿಯಾಗಿ ಆಚರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ

ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ನಗರ ಕಚೇರಿಯಲ್ಲಿ, ಸಾಮಾಜಿಕ ಸುಧಾರಕ ಮತ್ತು ಭಾರತೀಯ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 136ನೇ ಜಯಂತ್ಯುತ್ಸವನ್ನು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಅದ್ದೂರಿಯಾಗಿ ಆಚರಿಸಲಾಯಿತು. ಗಣ್ಯರು ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಗಳನ್ನು ಸಮರ್ಪಿಸುವ ಮೂಲಕ ಗೌರವ ಸಲ್ಲಿಸಿದರು. ಬಳ್ಳಾರಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆಯಾಗಿ ಮರು ನೇಮಕಗೊಂಡಿರುವ ಎಂ.ಎಸ್.ಮಂಜುಳ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪಕ್ಷದ ಹಿರಿಯ ನಾಯಕ ಕಲಕಂಬ ಪಂಪಾಪತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುಮಯೂನ್ ಖಾನ್, ಪಾಲಿಕೆ ಮೇಯರ್ ಪಿ.ಗಾದೆಪ್ಪ, ಕ್ರೈಸ್ತ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕ ಜೆ.ಜೆ.ರವಿಕುಮಾರ್, ಡಿಸಿಸಿ ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣು, ನಗರ ಪ್ರಚಾರ ಸಮಿತಿಯ ಅಧ್ಯಕ್ಷ ಈರನ್ನ ಗೌಡ, ಡಿಸಿಸಿ ಕಾರ್ಯದರ್ಶಿ ವೈ.ಶ್ರೀನಿವಾಸಲು, ಡಿಸಿಸಿ ಕಾರ್ಯಕಾರಿಣಿ ಸಮಿತಿಯ ಸದಸ್ಯೆ ವೆಂಕಟ ಲಕ್ಷ್ಮೀ ನಾರಾಯಣ, ಮಹಾನಗರ ಪಾಲಿಕೆ ಸದಸ್ಯರಾದ ಜಾನಕಮ್ಮ, ಮಿಂಚು ಶ್ರೀನಿವಾಸುಲು, ಸಮೀರ್, ಮುಂಚೂಣಿ ಘಟಗಳ ಅಧ್ಯಕ್ಷರಾದ ಅಲಿವೇಲು ಸುರೇಶ್, ಕನೇಕಲ್ ಮಾಬುಸಾಬ್, ಅಖಿಲ ಅಹಮ್ಮದ್, ಅತ್ತವುಲ್ಲ, ಮುಖಂಡರಾದ ಗೌಸ್, ಸತೀಶ್ ಚಕ್ರವರ್ತಿ, ಮಲ್ಲಮ್ಮ, ಸುನೀತಾ, ವಿಜಯಲಕ್ಷ್ಮೀ, ಶ್ರೀಲತಾ, ಮಲ್ಲೇಶ್ವರಿ, ಗೌಸಿಯ, ಸಣ್ಣಹೊನ್ನೂರಪ್ಪ, ಲಿಂಗರಾಜು, ಬಲ್ಲಿ ಮೋಹನ್, ರಾಮ ಮೂರ್ತಿ ಇತರರು ಉಪಸ್ಥಿತರಿದ್ದರು.



ಬಳ್ಳಾರಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನಾಚರಣೆಯನ್ನು ನಗರದ ಮಹಾನಗರ ಪಾಲಿಕೆಯ ಕಚೇರಿಯಲ್ಲಿ ಮಂಗಳವಾರ ಅದ್ದೂರಿಯಾಗಿ ಆಚರಿಸಲಾಯಿತು. ಪಾಲಿಕೆ ಮೇಯರ್ ಪಿ.ಗಾದೆಪ್ಪ, ಆಯುಕ್ತ ಮಂಜುನಾಥ್, ಸದಸ್ಯರಾದ ಕೆ.ಹನುಮಂತಪ್ಪ, ಹನುಮಂತ ಗುಡಿಗಂಟೆ, ಸುರೇಖಾ ಮಲ್ಲನಗೌಡ, ಚೇತನ ವೇಮಣ್ಣ, ಉಮಾದೇವಿ ಶಿವರಾಜ್ ಸೇರಿದಂತೆ ಮುಖಂಡ ವಿಷ್ಣುವರ್ಧನ್ ಇತರರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ | ಸಚಿವ ದರ್ಶನಾಪುರ ಸಲಹೆ

ಬಲಿಷ್ಠ ರಾಷ್ಟ್ರ ನಿರ್ಮಿಸಲು ಮುಂದಾಗಿ

ಯಾದಗಿರಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕಂಡಿದ್ದ ಸಮಾನತೆಯ ಕನಸನ್ನು ನನಸಾಗಿಸುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಎಲ್ಲರೂ ಬದ್ಧರಾಗಿರುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಕರೆ ನೀಡಿದರು.

ಮಂಗಳವಾರ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಡಾ.ಅಂಬೇಡ್ಕರ್ ಅವರು 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ, ಗೌರವ ಅರ್ಪಿಸಿ ಅವರು ಮಾತನಾಡಿ, ಬುದ್ಧ, ಬಸವ, ಡಾ.ಅಂಬೇಡ್ಕರ್ ಅವರು ಸಮಾನತೆಯ ಕನಸನ್ನು ಕಂಡಿದ್ದರು ಎಂದರು.

ಭಾರತ, ಭಾರತದ ರಾಜ್ಯಗಳು ವಿವಿಧತೆ, ವಿವಿಧ ಆಚಾರ ವಿಚಾರ ಹಾಗೂ ಸಮಸ್ಯೆಗಳಿಂದ ಕೂಡಿವೆ. ಇದಕ್ಕೆ ಪರಿಹಾರವಾಗಿ ಉತ್ಕೃಷ್ಟ ಸಂವಿಧಾನ ರಚಿಸುವ ಮೂಲಕ ಅವರು ಎಲ್ಲ ಸಮಾಜಗಳಿಗೆ ನೆರವಾಗಿದ್ದಾರೆ ಎಂದು ಹೇಳಿದರು.

ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ್ ಖರ್ಗೆ ಅವರ ನಿರಂತರ ಪರಿಶ್ರಮದ ಫಲವಾಗಿ ಸಂವಿಧಾನ ತಿದ್ದುಪಡಿ ಕಾಯ್ದೆ, 371(ಜೆ) ರನ್ವಯ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ, ಉದ್ಯೋಗದಲ್ಲಿ ಯುವಜನಾಂಗಕ್ಕೆ ಇಂದು ಅವಕಾಶ ದೊರೆಯಲು ಸಾಧ್ಯವಾಗಿದೆ ಎಂದ ಅವರು ಬಾ.ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಮೈಗೂಡಿಸಿಕೊಳ್ಳುವಂತೆ ಸಲಹೆ ಮಾಡಿದರು.



> ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ಬಾಲ್ಯ , ವಿದ್ಯಾರ್ಥಿ ಜೀವನದ ಸಂದರ್ಭದಲ್ಲಿ ಸಮಾಜದಲ್ಲಿದ್ದ ತಾರತಮ್ಯವನ್ನು ಸ್ವತಃ ಅನುಭವಿಸಿದ್ದರು. ಬಡ, ಶೋಷಿತ ವರ್ಗಗಳ ಕಷ್ಟಗಳ ನಿವಾರಣೆಗೆ ಹೋರಾಡಲು ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಶಿಕ್ಷಣ, ಸಂಘಟನೆ ಹಾಗೂ ಹೋರಾಟಗಳ ಮೂಲಕ ಸಮಾಜದಲ್ಲಿ ಸಮಾನತೆ ತರುವ ಅವರ ಕೊಡುಗೆ ಅವಿಸ್ಮರಣೀಯವಾಗಿದೆ.
> ■ **ಶರಣಬಸಪ್ಪ ದರ್ಶನಾಪುರ**, ಜಿಲ್ಲಾ ಉಸ್ತುವಾರಿ ಸಚಿವ

ಡಿಸಿ ಹರ್ಷಲ್ ಭೋಯರ್, ಶಾಸಕ ಚನ್ನಾರಡ್ಡಿ ಪಾಟೀಲ, ಚಂದ್ರಶೇಖರ ಕಟ್ಟಿಮನಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಎಸ್ಪಿ ಪೃಥ್ವಿಕ್ ಶಂಕರ್, ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತ ಶ್ರೀಧರ್ ಗೋಟೂರ್, ಜಿಪಂ ಉಪಕಾರ್ಯದರ್ಶಿ ವಿಜಯಕುಮಾರಮಡ್ಡೆ, ಮುಖ್ಯ ಯೋಜನಾಧಿಕಾರಿ ಕುಮುಲಯ್ಯ, ಡಾ.ಅಂಬೇಡ್ಕರ್ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಪರಶುರಾಮ ಒಡೆಯರ್ ಇದ್ದರು.



ಬಳ್ಳಾರಿ: ನಗರದ ಪೊಲೀಸ್ ಇಲಾಖೆಯ ಬಳ್ಳಾರಿ ವಲಯದ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವನ್ನು ಅದ್ದೂರಿ, ಅರ್ಥಪೂರ್ಣವಾಗಿ ಮಂಗಳವಾರ ಆಚರಿಸಲಾಯಿತು. ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಅವರು ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನೂ ಸಮರ್ಪಿಸಿ ಗೌರವ ಸಲ್ಲಿಸಿದರು. ಕಚೇರಿಯ ಸಿಬ್ಬಂದಿ ಇತರರಿದ್ದರು.

ಶಿಕ್ಷಣವೇ ಸ್ವಾತಂತ್ರ್ಯದ ಕೀಲಿ ಕೈ: ಡಿಸಿ ಕವಿತಾ

ವಿಜಯನಗರ: ಬದುಕಿನ ಹಾದಿಯಲ್ಲಿ ಎಷ್ಟೇ ಕಷ್ಟಗಳು ಎದುರಾದರೂ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ನಿರಂತರ ಪರಿಶ್ರಮವಿದಿಂದ ಯಶಸ್ಸು ಪಡೆಯಬಹುದು. ಇದಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನವೇ ನಮಗೆ ಬಹುದೊಡ್ಡ ಸ್ಫೂರ್ತಿ ಎಂದು ಡಿಸಿ ಕವಿತಾ ಎಸ್.ಮನ್ನಿಕೇರಿ ಅಭಿಪ್ರಾಯಪಟ್ಟರು.

ಹೊಸಪೇಟೆಯ ಅಂಬೇಡ್ಕರ್ ವೃತ್ತದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಹಾಗೂ ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಜೀವನ ಬಾಲ್ಯದ ಕಷ್ಟಗಳನ್ನು ಸ್ಮರಿಸಿದ ಜಿಲ್ಲಾಧಿಕಾರಿಗಳು ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿ ಇಂದು ದೇಶದ ಪ್ರತಿಯೊಬ್ಬ ಪ್ರಜೆಯೂ ಘನತೆಯಿಂದ ಬದುಕಲು ಸಾಧ್ಯವಾಗಿದೆ. ಬಾಬು ಜಗಜೀವನ ರಾಮ್ ಅವರು ದೇಶದ ಉಪಪ್ರಧಾನಿಯಾಗಿ ಹಾಗೂ ಕೃಷಿ ಸಚಿವರಾಗಿ ಮಾಡಿದ ಸುಧಾರಣೆಗಳು ಭಾರತದ ಆಹಾರ ಭದ್ರತೆಗೆ ಭದ್ರ ಬುನಾದಿಯಾಗಿವೆ ಎಂದರು.

ವಕೀಲ ಸುಧೀರ್ ಕುಮಾರ್ ಮುರಳಿ ಮಾತನಾಡಿ, ಭಾರತದ ಶೋಷಿತ ವರ್ಗಗಳಿಗೆ ಶಿಕ್ಷಣ, ಅಧಿಕಾರ ಮತ್ತು ಸಮಾನತೆಯ ಹಕ್ಕನ್ನು ತಂದುಕೊಡುವಲ್ಲಿ ಡಾ.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಅವರ ಪಾತ್ರ ಅನನ್ಯವಾದುದು ಎಂದರು.

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಗೌರವ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಬಳ್ಳಾರಿ ರಸ್ತೆಯಲ್ಲಿರುವ ಅಂಬೇಡ್ಕರ್ ಸರ್ಕಲ್‌ನಿಂದ ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಕಲಾತಂಡಗಳೊಂದಿಗೆ ಭವ್ಯ ಮೆರವಣಿಗೆ ನಡೆಯಿತು.

ಜಿಪಂ ಸಿಇಒ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಎಸ್ಪಿ ಜಾಹ್ನವಿ, ಹೂಡಾ ಅಧ್ಯಕ್ಷ ಎಚ್.ಎನ್.ಎಫ್ ಇಮಾಮ್ ನಿಯಾಜಿ, ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಅಂಬೇಡ್ಕರ್ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ಉಮಾಪತಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.



ಎಲ್ಲ ಸಮಾಜಕ್ಕೂ ಡಾ.ಅಂಬೇಡ್ಕರ್ ಮಾದರಿ

ಹೂವಿನಹಡಗಲಿ: ಡಾ.ಬಿ.ಆರ್.ಅಂಬೇಡ್ಕರ್ ಅವರು ಕೇವಲ ದಲಿತರಿಗೆ, ಅಸ್ಪೃಶ್ಯರಿಗೆ ಸೀಮಿತವಾಗಿಲ್ಲ, ಪ್ರತಿಯೊಂದು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಶಾಸಕ ಕೃಷ್ಣನಾಯಕ ಹೇಳಿದರು.

ಪಟ್ಟಣದ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಹೂವಿನಹಡಗಲಿ ಸಂಯುಕ್ತಾಶ್ರಯದಲ್ಲಿ ಶ್ರೀಸೇವಾಲಾಲ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ 135ನೇ ಜನ್ಮದಿನೋತ್ಸವ ಹಾಗೂ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಅಂಬೇಡ್ಕರ್ ಅವರ ಮುಂದಿನ ಜಯಂತ್ಯುತ್ಸವಕ್ಕೆ ಅವರನೂತನಮೂರ್ತಿಯ ಪ್ರತಿಷ್ಠಾಪನೆ ನೆರವೇರಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ತಹಶೀಲ್ದಾರ್ ಕೆ.ಎಂ.ಗುರುಬಸವರಾಜ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಆನಂದ ವೈ.ಡೊಳ್ಳಿನ ಮಾತನಾಡಿದರು.

ನಿವೃತ್ತ ಪ್ರಾಧ್ಯಾಪಕ ಎಚ್.ಎಂ. ಗುರು ಬಸವರಾಜ ಉಪನ್ಯಾಸ ನೀಡಿದರು.

ಪತ್ರಕರ್ತರಾದ ಡಿ.ಪರಶುರಾಮಪ್ಪ, ಬಸಾಪುರ ಎಚ್.ಚಂದ್ರಪ್ಪ ಅವರಿಗೆ ಸನ್ಮಾನಿಸಲಾಯಿತು.

ಸಂಗೀತ ಕಾರ್ಯಕ್ರಮವನ್ನು ಜಾನಪದ ಕಲಾವಿದರಾದ ಅಂಗೂರು ಕೆ.ಸಿ.ಪರಶುರಾಮ ಸಂಗಡಿಗರು ಹಾಗೂ ಪಾರಿ ಕಾವ್ಯ ಅವರು ನೆರವೇರಿಸಿಕೊಟ್ಟರು.

ಸಾಧಕರಿಗೆ ಸನ್ಮಾನಿಸಲಾಯಿತು. ತಾಲೂಕು ದೈಹಿಕ ಅಧೀಕ್ಷಕ ರಫಿ ಅಹಮದ್ ಖಿವಾಸ್ ಸ್ವಾಗತಿಸಿದರೆ, ನಿಲಯ ಪಾಲಕ ಪರಶುರಾಮ ಡಿ.ಕುರಿಯವರ ನಿರ್ವಹಿಸಿದರು.

ಕ.ರಾ.ಸ ನೌಕರರ ಸಂಘದ ಅಧ್ಯಕ್ಷ ಎ.ಕೊಟ್ರಗೌಡ, ತಾಪಂ ಇಒ ಜಿ.ಪರಮೇಶ್ವರ, ಪುರಸಭೆ ಮುಖ್ಯಾಧಿಕಾರಿ ಹನುಮಂತಪ್ಪ ಜಿ., ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ, ಬಿಜೆಪಿ ಮಂಡಲದ ಅಧ್ಯಕ್ಷ ಪೂಜಾರ ಮಲ್ಲಿಕಾರ್ಜುನ, ಪೊಲೀಸ್ ವೃತ ನಿರೀಕ್ಷಕ ಮಲ್ಲಪ್ಪ ಎಸ್.ಹೂಗಾರ, ಪಿಎಸ್ಐ ಮಣಿಕಂಠ, ಪ.ವಿ.ನಿರ್ದೇಶಕ ಗೋಣೆಪ್ಪ, ಎಲ್.ಜಿ.ಹೊನ್ನಪ್ಪ, ಹನುಮಂತಪ್ಪ, ದಲಿತ ಮುಖಂಡರುಗಳಾದ ಎಚ್.ಪೂಜಪ್ಪ, ಉಚ್ಚೆಂಗಪ್ಪ, ಪಿ.ನಿಂಗಪ್ಪ, ಆನಂದ ಪಿ.ನವಲಿ ಗುಡದಪ್ಪ, ಜೆ.ಶಿವರಾಜ, ವಿಲ್ಸನ್ ಸ್ವಾಮಿ, ಹೊಳಗುಂದಿ ಸ್ವಾಮಿ, ದುರಗೇಶ, ಎಲ್.ಶ್ರೀಧರನಾಯ್ಕ್, ಎ.ಭರ್ಮಪ್ಪ, ಇಟಗಿ ನಿಂಗಪ್ಪ, ಪಿ.ರಮೇಶ ಇತರರಿದ್ದರು.



ಕಟ್ಟಕಡೆ ವ್ಯಕ್ತಿಯ ಮನೆ ಬಾಗಿಲಿಗೆ ಸೌಲಭ್ಯ ಸಿಗಲಿ

ಕೂಡ್ಲಿಗಿ: ಆಡಳಿತ ವ್ಯವಸ್ಥೆಯು ಕೇವಲ ಕಾಗದದ ಮೇಲೆ ಸೀಮಿತವಾಗದೆ. ಕಟ್ಟಕಡೆಯ ವ್ಯಕ್ತಿಯ ಮನೆ ಬಾಗಿಲಿಗೆ ಸೌಲಭ್ಯ ತಲುಪಿಸಿ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಚಂದ್ರಶೇಖರ್ ಆಜಾದ್ ರಂಗ ಮಂದಿರದಲ್ಲಿತಾಲೂಕು ಆಡಳಿತದಿಂದಮಂಗಳವಾರ ಆಯೋಜಿಸಿದ್ದ ಡಾ.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಜಯಂತ್ಯುತ್ಸವದಲ್ಲಿ ಮಾತನಾಡಿದರು.

ತಹಶೀಲ್ದಾರ್ ವಿ.ಕೆ.ನೇತ್ರಾವತಿ ಪ್ರಾಸ್ತಾವಿಕ ನುಡಿದರು. ಬಿಇಒ ಮೈಲೇಶ್ ಬೇವೂರು ಅವರು ಸಂವಿಧಾನ ಪೀಠಿಕೆ ಬೋಧಿಸಿದರು. ಡಾ.ಅಂಬೇಡ್ಕರ್ ಸಂಘದ ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ, ತಾಪಂ ಮಾಜಿ ಉಪಾಧ್ಯಕ್ಷೆ ಗುಡೆಕೋಟೆ ವಿಶಾಲಾಕ್ಷಿ ರಾಜಣ್ಣ, ಒನಕೆ ಓಬವ್ವ ಸಂಘದ ರಾಜ್ಯಾಧ್ಯಕ್ಷ ಹಿರೇಕುಂಬಳಗುಂಟೆ ಉಮೇಶ್, ಡಾ.ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಾಸಲವಾಡ ಶಿವಣ್ಣ ಮಾತನಾಡಿದರು.



ತಾಪಂ ಇಒ ನರಸಪ್ಪ, ಪಪಂ ಮುಖ್ಯಾಧಿಕಾರಿ ಎಚ್.ದಾದಾಪೀರ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮಹಮ್ಮದ್ ಜಿಲಾನ್, ಸಮಾಜ ಕಲ್ಯಾಣ ಇಲಾಖೆ ಅಧೀಕ್ಷಕ ಫಕ್ಕೀರಪ್ಪ, ಪಪಂ ಮಾಜಿ ಅಧ್ಯಕ್ಷ ಕಾವಲ್ಲಿ ಶಿವಪ್ಪನಾಯಕ, ಮುಖಂಡರಾದ ಕಲ್ಲಹಳ್ಳಿ ಬಸಪ್ಪ, ಚಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಮರಬನಹಳ್ಳಿ ಸಿ.ಮಾರಪ್ಪ, ಕರವೇ ಅಧ್ಯಕ್ಷ ಕಾಟೇರ್ ಹಾಲೇಶ್, ವಾಲ್ಮೀಕಿ ಮಹಾಸಭಾ ಅಧ್ಯಕ್ಷ ಎಸ್.ಸುರೇಶ್, ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಸುನಿಲ್ ಗೌಡ, ಯಾದವ ಸಂಘದ ಚಿತ್ತಪ್ಪ, ರೈತ ಸಂಘದ ಮುಖಂಡ ದೇವರಮನಿ ಮಹೇಶ್, ಎಇಇಗಳಾದ ಮಲ್ಲಿಕಾರ್ಜುನ, ಕೆ.ನಾಗನಗೌಡ, ಬಿಸಿಎಂ ತಾಲೂಕು ಕಲ್ಯಾಣಾಧಿಕಾರಿ ಶ್ಯಾಮಪ್ಪ, ಸಿಪಿಐ ಪ್ರಲ್ಹಾದ್ ಆರ್.ಚನ್ನಗಿರಿ, ಪಿಎಸ್ಐ ಸಿ.ಪ್ರಕಾಶ್ ಇತರರಿದ್ದರು.

ಅಂಬೇಡ್ಕರ್ ಆದರ್ಶ ಅಳವಡಿಸಿಕೊಳ್ಳಿ: ಕೆ.ನೇಮಿರಾಜ್ ನಾಯ್ಕ್

ಹಗರಿಬೊಮ್ಮನಹಳ್ಳಿ: ಶಿಕ್ಷಣ ಸಂಘಟನೆ ಸಮಾನತೆ, ಹೋರಾಟ ಬಾತೃತ್ವ ಸಂದೇಶ ಸಾರಿದ ಅಂಬೇಡ್ಕರ್ ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಜೀವನದ ಗುರಿ ಮುಟ್ಟಲು ಸಾಧ್ಯ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ತಾಲೂಕ ಆಡಳಿತ ಆಯೋಜಿಸಿದ್ದ ಡಾ.ಅಂಬೇಡ್ಕರ್ ಮತ್ತು ಡಾ.ಬಾಬೂ ಜಿ ಜಯಂತಿಯಲ್ಲಿ ಮಾತನಾಡಿದರು.

ಎಸ್ಸಿ ಎಸ್ಟಿ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಬೇರೆ ಬೇರೆ ಇಲಾಖೆಗಳಿಗೆ ನೀಡಲಾಗಿದೆ. ಈ ಅನ್ಯಾಯವನ್ನು ಪಕ್ಷಾತೀತವಾಗಿ ಖಂಡಿಸಬೇಕಿದೆ ಎಂದರು.

ತಹಶೀಲ್ದಾರ್ ಆರ್.ಕವಿತಾ, ತಾಪ ಇಒ ವಿಶ್ವನಾಥ ಪಾಲ್ಲಯನಕೋಟೆ, ಪುರಸಭೆ ಅಧ್ಯಕ್ಷೆ ಸೇರೆಗಾರ ನೇತ್ರಾವತಿ ಹುಚ್ಚಪ್ಪ, ಅಂಬೇಡ್ಕರ್ ಸಂಘದ ಅಧ್ಯಕ್ಷ ಗದ್ದಿಕೇರಿ ದೊಡ್ಡ ಬಸಪ್ಪ ಮಾತನಾಡಿದರು.



ಸಮಾಜಕಲ್ಯಾಣ ಇಲಾಖೆಯ ಅಧಿಕಾರಿ ಜಗದೀಶ್ ದಿಗಡೂರು ಸಂವಿಧಾನ ಪೂರ್ವ ಪೀಠಿಕೆ ಬೋಧಿಸಿದರು. ಇದೇವೇಳೆ ಸಾಧಕರನ್ನು ಸನ್ಮಾನಿಸಲಾಯಿತು. ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸೊನ್ನದ ಗುರು ಬಸವರಾಜ, ಮುಖಂಡರಾದ ಹೆಗ್ಡಾಳು ರಾಮಣ್ಣ, ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಆನಂದ್ ದೇವನಹಳ್ಳಿ ಪ್ರಭಾಕರ, ಚಲವಾದಿ ಮಹಾಸಭಾ ಅಧ್ಯಕ್ಷ ಕಾಳಿ ಬಸವರಾಜ, ಕಾರ್ಯದರ್ಶಿ ಚಲವಾದಿ ಪ್ರಕಾಶ್ ಮಾಲವಿ, ಪೌರ ಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಪ್ರಭಾಕರ್ ಬಾಚಿಗೊಂಡನಹಳ್ಳಿ ಮಹೇಶ್, ಪೊಲೀಸ್ ಇಲಾಖೆಯ ವೃತ್ತ ನಿರೀಕ್ಷಕ ವಿಕಾಸ್ ಲಮಾಣಿ, ಪುರಸಭೆ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ವಿವಿಧ ಸಮಾಜದ ವಿವಿಧ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತಿತರರಿದ್ದರು.

ಶಾರದಮ್ಮ ಮಂಜುನಾಥ ಹಾಗೂ ಸೋಮನಾಥ ಮಹಾಂತೇಶ ಸಂಗಡಿಗರು ಪ್ರಾರ್ಥಿಸಿದರು. ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕಿ ಶೋಭಾ ಸ್ವಾಗತಿಸಿದರು. ಅಧಿಕಾರಿ ನಾಗರಾಜ ನಿರ್ವಹಿಸಿದರು.

ಪ್ರಜಾಪ್ರಭುತ್ವದಲ್ಲಿ ಸಮಾನತೆ ಸಾರಿದ ಡಾ.ಅಂಬೇಡ್ಕರ್

ಕೊಟ್ಟೂರು: ಸ್ವಾತಂತ್ರ್ಯ ನಂತರದಲ್ಲಿ ದೇಶದ ಆಡಳಿತ ನಡೆಸಲು ಅವಶ್ಯವಿರುವ ಸಂವಿಧಾನವನ್ನು ರಚಿಸುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲ ಜನತೆಗೆ ಸಮಾನತೆ ಹಕ್ಕು ನೀಡಿದ್ದಾರೆಂದು ಗುಲಬರ್ಗಾ ವಿವಿ ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಡಾ.ಬಿ.ಸಿ.ಮಹಾಬಲೇಶ್ವರಪ್ಪ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆದ ಡಾ.ಬಿಆರ್ ಅಂಬೇಡ್ಕರರ 135ನೇ ಮತ್ತು ಡಾ.ಬಾಬು ಜಗಜೀವನ್‌ರಾಮ್ ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಅವರು ಮಂಗಳವಾರ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಜಿ.ಕೆ.ಅಮರೇಶ ಮಾತನಾಡಿ, ಡಾ.ಅಂಬೇಡ್ಕರ್ ರಚಿಸಿರುವ ಸಂವಿಧಾನವು ನಮ್ಮ ದೇಶದ ಆಡಳಿತದ ಶಕ್ತಿಯಾಗಿದೆ. ಸಮಾಜದಲ್ಲಿರುವ ಉನ್ನತ ವ್ಯಕ್ತಿಯಿಂದ ಹಿಡಿದು ಕೊನೆ ಹಂತದಲ್ಲಿನ ವ್ಯಕ್ತಿಗೂ ಸಮಾನತೆ ಹಕ್ಕು ನೀಡಿದವರು ಡಾ.ಬಿ.ಆರ್.ಅಂಬೇಡ್ಕರ್ ರವರು ಎಂದರು.

ಡಿಎಸ್ಎಸ್ ಜಿಲ್ಲಾ ಸಂಚಾಲಕ ಬದ್ದಿ ಮರಿಸ್ವಾಮಿ ಮಾತನಾಡಿದರು. ಡಿ.ಎಸ್.ಎಸ್ಸ್.ಖಂಡ ತಗ್ಗಿನಕೇರಿ ಕೊಟ್ರೇಶ ಪ್ರಾಸ್ತಾವಿಕ ಮಾತನಾಡಿದರು. ಗ್ಯಾರಂಟಿ ಯೋಜನೆಗಳ ತಾಲೂಕು ಸಮಿತಿ ಅಧ್ಯಕ್ಷ ಅನಿಲ್ ಹೊಸಮನಿ ಉದ್ಘಾಟಿಸಿದರು. ತಾಪಂಇಒ ಡಾ.ಆನಂದಕುಮಾರ್, ಸಿಪಿಐ ದುರುಗಪ್ಪ, ಪಿಎಸ್ಐ ಗೀತಾಂಜಲಿ ಶಿಂಧೆ, ಕಸಾಪ ತಾಲೂಕು ಅಧ್ಯಕ್ಷ ದೇವರಮನಿ ಕೊಟ್ರೇಶ್, ಪಶುವೈದ್ಯಾಧಿಕಾರಿ ಡಾ.ಚಂದ್ರನಾಯ್ಕ, ಎಪಿಎಂಸಿ ಕಾರ್ಯದರ್ಶಿ ಎ.ಕೆ.ವೀರಣ್ಣ, ನರೇಗಾ ಎಡಿ ವಿಜಯಕುಮಾರ್, ಪಂಚಮಸಾಲಿ ಸಂಘದ ತಾಲೂಕು ಅಧ್ಯಕ ಚಾಪಿ ಚಂದ್ರಪ್ಪ, ತಾಲೂಕು ನೌಕರರ ಸಂಘದ ಅಧ್ಯಕ್ಷ ಯೋಗೀಶ್ವರ ದಿನ್ನೆ, ಬಾಬು ಜಗಜೀವನರಾಮ್ ಸಂಘದ ತಾಲೂಕು ಅಧ್ಯಕ್ಷ ಟಿ.ಹನುಮಂತಪ್ಪ, ಮುಖಂಡರಾದ ಬಿ.ದುರುಗೇಶ್, ಕಂದಗಲ್ ಪರುಶರಾಮ, ಕೆಂಗರಾಜ, ಹೊಟ್ಟೇರ ಅಜ್ಜಯ್ಯ, ಗುಡಿಯಾರ ಮಲ್ಲಿಕಾರ್ಜುನ, ಬಿ.ಶಿವರಾಜ, ಅಮರೇಶ್, ಪರುಶರಾಮ, ಹುಲುಗೇಶ, ಮಂಜುನಾಥ, ಮಿಲ್ಕಿ ಅಜ್ಜಪ್ಪ, ಸಮಾಜ ಕಲ್ಯಾಣ ಇಲಾಖೆಯ ಸದಾನಂದ, ತುಪ್ಪದ ವೀರೇಶ್ ಇತರರು ಇದ್ದರು. ಪಿಯು ರ್‍ಯಾಂಕ್ ಪಡೆದ ಅರ್ಚನಾ, ಯೋಗಪಟು ಬಂಜಾರ ನಾಗರಾಜ, ಪತ್ರಿಕಾ ವಿತರಕ ಉತ್ತಂಗಿ ಕೊಟ್ರೇಶ್, ನಿವೃತ್ತ ಮುಖ್ಯಗುರು ಸಿ.ಚೌಡಪ್ಪ, ಶಿಕ್ಷಕ ಮುತ್ತೇಶ್, ವಕೀಲ ಡಿ.ನಿಂಗರಾಜ, ಡಿಎಸ್ಎಸ್ ಮುಖಂಡ ಬಿ.ಪರುಶರಾಮ, ವಾದ್ಯ ಕಲಾವಿದ ಸಿ.ಕೆ.ಪ್ರಕಾಶರನ್ನು ಸನ್ಮಾನಿಸಲಾಯಿತು. ಕಂದಾಯ ಇಲಾಖೆಯ ಸಿ.ಮ.ಗುರುಬಸವರಾಜ, ಶಿಕ್ಷಕ ವೀರಭದ್ರಪ್ಪ ನಿರ್ವಹಿಸಿದರು.



ಡಾ.ಅಂಬೇಡ್ಕರ್ ಜಯಂತ್ಯುತ್ಸವ

ಸಿರುಗುಪ್ಪ: ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವನ್ನು ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ, ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಅವರ ನೇತೃತ್ವದಲ್ಲಿ, ಸಿರುಗುಪ್ಪ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರು ಪುಷ್ಪಾರ್ಚನೆ ಸಲ್ಲಿಸಿ ಗೌರವ ಸಲ್ಲಿಸಿದರು. ನಂತರ ನಗರದ ಬಸ್ ನಿಲ್ದಾಣ ಮುಂಭಾಗದಲ್ಲಿ ಜೀವನಿಧಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಅನಾವರಣಗೊಳಿಸಿ ಪುಷ್ಪ ನಮನಗಳನ್ನು ಸಲ್ಲಿಸಿದರು. ನಂತರ ಸಾರ್ವಜನಿಕರಿಗೆ ತಂಪು ಮಜ್ಜಿಗೆಯನ್ನು ವಿತರಿಸಲಾಯಿತು. ನಂತರ ನಗರದ ಸರ್ಕಾರಿ ಪ್ರಾಥಮಿಕ ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳಿಗೆ ಹಣ್ಣು ಹಾಲು ವಿತರಿಸಿದರು. ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ, ನಗರಸಭೆ ಸದಸ್ಯರಾದ ಮೇಕಲ್ ವೀರೇಶ್, ಮಹದೇವ್, ಮೋಹನ್ ರೆಡ್ಡಿ, ರಾಮಕೃಷ್ಣ, ಬಿಜೆಪಿ ಎಸ್ಸಿ ಮೋರ್ಚಾ ತಾಲೂಕ ಅಧ್ಯಕ್ಷ ವೈ.ಶಂಕರಪ್ಪ, ಎಸ್ಟಿ ಮೋರ್ಚಾ ತಾಲೂಕ್ ಅಧ್ಯಕ್ಷ ಶಿವಪ್ಪ, ಹಿರಿಯ ಮುಖಂಡರಾದ ಉಡೆಗೋಳ ಖಾಜಾಸಾಬ್, ಎಚ್.ಶೇಖಪ್ಪ, ಶಿವಕುಮಾರ್, ರಾಮನಾಯಕ್, ಅಲಿಷೀರ್, ಲೋಕೇಶ್, ಮಹಾಲಕ್ಷ್ಮಿ, ಜೆಬಿವುಲ್ಲಾ, ಶ್ರೀನಿವಾಸ್ ಇತರರಿದ್ದರು.



ಸಿರುಗುಪ್ಪದಲ್ಲಿ ಅಂಬೇಡ್ಕರ್ ಜಯಂತಿ ಅದ್ದೂರಿ

ಸಿರುಗುಪ್ಪ: ನಗರದ ವಿವಿಧ ದಲಿತ ಹಾಗೂ ಇತರೆ ಸಮುದಾಯದ ಸಂಘಟನೆಯ ಕಾರ್ಯಕರ್ತರು ಪಕ್ಷಾತೀತವಾಗಿ ಒಗ್ಗೂಡಿ ವಿಭಿನ್ನವಾಗಿ ತಾಲೂಕು ಕ್ರೀಡಾಂಗಣದಲ್ಲಿ ಮಂಗಳವಾರ ಅಂಬೇಡ್ಕರ್ ಅವರ 135ನೇ ಮತ್ತು ಬಾಬು ಜಗಜೀವನ ರಾಂ 119ನೇ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಶಾಸಕ ಬಿ.ಎಂ.ನಾಗರಾಜ, ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ತಹಶೀಲ್ದಾರ್ ಗೌಸಿಯಬೇಗಂ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಡ್ಡೇರು ಸಿದ್ದಯ್ಯ, ಪೌರಾಯುಕ್ತ ಗಂಗಾಧರ, ವಾಲ್ಮೀಕಿ ವಿದ್ಯಾ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಸತೀಶ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಪಿಸಿ ಗೌರವಸಲ್ಲಿಸಿದರು.

ಅಂಬೇಡ್ಕರ ವೃತ್ತದಿಂದ ವೇದಿಕೆ ಕಾರ್ಯಕ್ರಮದವರೆಗೆ ತಾಲೂಕಿನ ಮುದೇನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ಡೊಳ್ಳು ಕುಣಿತ ವಿಶೇಷ ಆಕರ್ಷಿಸಿತು. ಶಿಲಾ ಬೃಂದಾ ಕಲಾ ಟ್ರಸ್ಟ್ ನ ಕಲಾವಿಧರಾದ ದೊಡ್ಡ ಹುಸೇನಪ್ಪ, ಚಂದ್ರಶೇಖರ ಗವಾಯಿ, ಹಚ್ಚೊಳ್ಳಿ ಹುಸೇನಪ್ಪ, ತಿಮ್ಮಪ್ಪ, ಲೋಕೇಶ ರೆಡ್ಡಿ, ಶರಣಪ್ಪ, ನಾಗರಾಜ ಚೌಡಪ್ಪ ಸಂಗೀತ ನೀಡಿದರು.

ತೆಕ್ಕಲಕೋಟೆ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಎಚ್.ದೊಡ್ಡಬಸಪ್ಪ ಅವರು ಅಂಬೇಡ್ಕರ್ ಮತ್ತು ಬಾಬೂಜಿ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದರು.



ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 26 ಸಾಧಕರಿಗೆ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಡಿ.ವೈ.ಎಸ್.ಮಾಲತೇಶ ಕೂನಬೇವ, ತಾಪಂ ಇಒ ಪವನ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಪ್ರದೀಪ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಗುರಪ್ಪ, ಪರಿಶಿಷ್ಟ ಪಂಗಡ ಇಲಾಖೆಯ ಸಹಾಯಕ ನಿರ್ದೇಶಕ ರಾಘವೇಂದ್ರ ವರ್ಮಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಟಿ.ಹುಚ್ಚೀರಪ್ಪ, ಕಾರ್ಯದರ್ಶಿ ಡಾ.ಕೆ.ಎಂ.ಚಂದ್ರಕಾಂತ, ದಲಿತ ಸಂಘರ್ಷ ಜಿಲ್ಲಾ ಸಂಚಾಲಕ ಎಚ್.ಬಿ.ಗಂಗಪ್ಪ, ಸರ್ವಧರ್ಮೀಯ ಡಾ.ಬಿ.ಆರ್.ಅಂಬೇಡ್ಕರ ಸಂಘದ ತಾಲೂಕು ಅಧ್ಯಕ್ಷ ಕೊಡ್ಲೆ ಮಲ್ಲಿಕಾರ್ಜುನ, ಬಾಬು ಜಗಜೀವನ ರಾಮ್ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ದೊಡ್ಡವೀರೇಶ, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಬಳ್ಳಾರಿ ನಾಗಪ್ಪ ಭಾಗವಹಿಸಿದ್ದರು.